
# ತಂಬಾಕು ಮತ್ತು ದಾರಿದ್ರ್ಯ

ಭಾರತ ಹಾಗೂ ಬಾಂಗ್ಲಾದೇಶದಲ್ಲಿ ಗಮನಿಸಿದ ಅಂಶಗಳು



**PATH** Canada

Tobacco study - Shimoga
For CHC lib
24/3/03

# ಕಾರ್ಯಕಾರಿಣಿ ಆಶಯ - ಸಾರಾಂಶ

ತಂಬಾಕು ಕೈಗಾರಿಕೆಯು ಉದ್ಯೋಗ ಸೃಷ್ಟಿಯ ಮಹತ್ವದ ಉಗಮವಾಗಿದ್ದು, ನಿರ್ದಿಷ್ಟವಾಗಿ ಕಡಿಮೆ ಆದಾಯ ದೇಶಗಳ ಆರ್ಥಿಕ ಚೈತನ್ಯವಾಗಿದೆ. ಬಿಗಿಯಾದ ತಂಬಾಕು ನಿಯಂತ್ರಣ ಶಾಸನವನ್ನು ಜಾರಿಗೆ ತಂದರೆ ಇಂಥ ದೇಶಗಳು ತೀವ್ರ ಆರ್ಥಿಕ ಸಂಕಷ್ಟವನ್ನು ಅನುಭವಿಸಬೇಕಾಗುತ್ತದೆಂದು ತಂಬಾಕು ಕೈಗಾರಿಕೆಯು ತನ್ನ ವಾದವನ್ನು ಮಂಡಿಸುತ್ತಲೇ ಬಂದಿದೆ. ಜಾಗತಿಕ ತಂಬಾಕಿನ ಬಳಕೆಯು ಈಗಲೂ ಏರು ಸ್ಥಿತಿಯಲ್ಲಿರುವ ಸಂಗತಿಯು ಈ ವಾದವನ್ನು ಗಮನಾರ್ಹವಾಗಿ ಪುಷ್ಟೀಕರಿಸುತ್ತದೆ. ಜನಸಂಖ್ಯೆಯ ಉಗ್ರಾಂತ ತೀವ್ರ ಹೆಚ್ಚಳದಿಂದಾಗಿ ತಂಬಾಕು ಸೇವನೆಯು ಅನೇಕ ದಶಕಗಳವರೆಗೆ ಉಳಿಯುವ ಸಾಧ್ಯತೆ ಕಂಡುಬರುತ್ತದೆ. ಉದ್ಯೋಗ ಒದಗಿಸುವ ಅನೇಕ ಮೂಲಗಳಲ್ಲಿ ತಂಬಾಕು ಕೈಗಾರಿಕೆಯು, ತಂಬಾಕು ಉದ್ಯಮದಲ್ಲಿ ತೊಡಗಿರುವವರ ಸಂಖ್ಯೆಯನ್ನು ಅತಿಶಯೋಕ್ತಿಯಾಗಿ ವರ್ಣಿಸುತ್ತದೆ. ತಂಬಾಕು ನಿಯಂತ್ರಣವು ಆರ್ಥಿಕತೆ ಅಥವಾ ಉದ್ಯೋಗವನ್ನು ಬಲಿ ತೆಗೆದುಕೊಳ್ಳುವುದಕ್ಕಿಂತ ಇವೆರಡಕ್ಕೂ ನೈಜವಾಗಿ ಲಾಭದಾಯಕವಾಗುತ್ತದೆ ಎಂಬುದು ಸಂಶೋಧನೆಯಿಂದ ತಿಳಿದುಬರುವ ಸಂಗತಿ.

ತಂಬಾಕು ಉತ್ಪನ್ನಗಳ ಮಾರಾಟದಿಂದ ಬಂದ ಲಾಭಾಂಶವು ಈ ಉದ್ಯೋಗದಲ್ಲಿ ತೊಡಗಿದ ಎಲ್ಲರಿಗೂ ಸಮನಾಗಿ ಹಂಚಿಕೆಯಾಗುವುದಿಲ್ಲ. ಈ ವರದಿಯು ತಿಳಿಸಿದಂತೆ ತಂಬಾಕಿನಿಂದ ಬಂದ ಬಹಳಷ್ಟು ಲಾಭಾಂಶವು ಕೆಲವೇ ಪ್ರಭಾವಶಾಲಿಗಳ ಪಾಲಾಗಿ ಅತಿ ಹೆಚ್ಚಿನ ಸಂಖ್ಯೆಯ ಕಾರ್ಮಿಕರು ನಿರಾಶದಾಯಕ ಬಡವರಾಗಿಯೇ ಉಳಿಯುತ್ತಾರೆ.

ಈ ವರದಿಯು ಬಾಂಗ್ಲ ಮತ್ತು ಭಾರತದಲ್ಲಿನ ತಂಬಾಕು ಕೃಷಿಕರ, ಎಲೆ ಆರಿಸುವವರ ಮತ್ತು ಬೀಡಿ ಕಟ್ಟುವವರ ಸ್ಥಿತಿಗತಿಗಳನ್ನು ರುಜುವಾತು ಪಡಿಸುತ್ತದೆ. ಕೆಲವರಿಗೆ ಈ ಉದ್ಯೋಗದಿಂದ ಬಂದ ಆದಾಯ ಅವರನ್ನು ಪೋಷಿಸುವಷ್ಟು ಇಲ್ಲದೆ ಅವರ ಮೂಲಸೌಕರ್ಯಗಳನ್ನು ಪೂರೈಸುವಷ್ಟಾಗುತ್ತದೆ. ಕೆಲವರು ತಮ್ಮ ಆರೋಗ್ಯವನ್ನು ಹಾಳು ಮಾಡಿಕೊಂಡಿದ್ದಾರೆ. ಕೆಲವರು ತಂಬಾಕು ಉದ್ಯೋಗವನ್ನು ದಾಸ್ಯದ ಪ್ರತಿರೂಪವೆಂಬಂತೆ ಪರಿಗಣಿಸುತ್ತಾರೆ. ತಮ್ಮ ಬದುಕಿನ ಬವಣೆಯನ್ನು ಬದಲಿಸಲು ಸಾಕಷ್ಟು ಆರ್ಥಿಕಾಭಿವೃದ್ಧಿ ಹೊಂದಿದ ಬೇರ್‍ಯಾವುದೇ ದುಡಿಮೆ ಕ್ಷೇತ್ರವಿದ್ದರೂ ಸಂತೋಷವಾಗಿ ಅಲ್ಲಿಗೆ ಹೋಗಲು ಬಯಸುತ್ತಾರೆ. ತಂಬಾಕು ಕೈಗಾರಿಕೆಯಲ್ಲಿ ಪರಿಸ್ಥಿತಿಯ ದಾರುಣತೆಗೆ ಸಿಲುಕಿ ಮಧ್ಯವರ್ತಿಗಳಿಂದ ಶೋಷಿತರಾದ ಹೆಂಗಸರು, ಮಕ್ಕಳು ಹಾಗೂ ಬುಡಕಟ್ಟು ಜನಾಂಗದವರು ಅನುಭವಿಸಿದ ನರಕಯಾತನೆಯನ್ನು ಈ ವರದಿಯು ಪ್ರಮಾಣೀಕರಿಸುತ್ತದೆ. ದೇಶಕ್ಕೆ ಸಂಪೂರ್ಣವಾಗಿ ಒಳ್ಳೆಯ ಪರಿಣಾಮಕಾರಿ ಆರ್ಥಿಕ ಪ್ರಯೋಜನಗಳನ್ನುಂಟು ಮಾಡುವಾಗ, ನಮ್ಮ ಮಕ್ಕಳಿಗಾಗಿ ಶಿಕ್ಷಣ ಕ್ಷೇತ್ರದಲ್ಲಿ ಬಂಡವಾಳ ತೊಡಗಿಸುವುದು, ಬುಡಕಟ್ಟು ಜನಾಂಗದ ಮತ್ತು ಮಹಿಳೆಯರ ಸಮಾನತೆಗಾಗಿ ಮುಂತೊಡಗುವುದು. ಬಡವರನ್ನು ತಂಬಾಕು ಉದ್ಯೋಗದಲ್ಲಿನ ಶೋಚನೀಯ ಸ್ಥಿತಿಗಳಿಂದ ಮೇಲೆತ್ತಲು ಸಹಕಾರಿಯಾಗುತ್ತದೆ.

ತಂಬಾಕು ಕೈಗಾರಿಕೆಯಲ್ಲಿ ತೊಡಗಿರುವವರ ಅವಲೋಕನದ ಜೊತೆಗೆ, ತಂಬಾಕು ಸೇವನೆಗೆ ಹೆಚ್ಚು ತುತ್ತಾದ ಕೆಲವು ಜನಗಣ (ಜನರ ಗುಂಪು) ಪರಿಶೀಲನೆ ಮಾಡಿದ್ದೇವೆ. ಅವುಗಳಲ್ಲಿ ವಿಶೇಷವಾಗಿ ಭಾರತದ ಮುಂಬೈ ನಗರದ ಡೇರೆಗಳಲ್ಲಿ ವಾಸಿಸುವ ಕುಟುಂಬಗಳು ಮತ್ತು ಅನಾಥ ಬೀದಿ ಮಕ್ಕಳು ಸೇರಿದೆ. ಅತಿ ಸಂಭಾವನೀಯವಾಗಿ ತಂಬಾಕು ಸೇವಿಸುವ ಬಡವರಲ್ಲಿಯೇ ಅತ್ಯಂತ ಬಡವರ ತಂಬಾಕು ಉತ್ಪನ್ನಗಳ ಮೇಲೆ ದಿನ ನಿತ್ಯದ ಖರ್ಚು ದಿನದ ಗಳಿಕೆಯ ಹೆಚ್ಚು ಭಾಗವನ್ನು ಸೂಚಿಸುತ್ತದೆ. ಅಲ್ಲದೇ ಅವರನ್ನು ಬಡತನದ ವಿಷ ವರ್ತುಲದಿಂದ ಮೇಲೆತ್ತಲು ಸಹಾಯಕವಾಗುವ ಅವಶ್ಯ ಬಂಡವಾಳಕ್ಕೂ ಅಡ್ಡಿಯುಂಟು ಮಾಡುತ್ತದೆ.

ಇತರ ಸಂಶೋಧನೆಗಳೊಂದಿಗೆ ಈ ವರದಿಯಲ್ಲಿ ಮಂಡಿಸಿದ ಅಧ್ಯಯನವು ಆರ್ಥಿಕ ವಲಯ ಇನ್ನಿತರ ಉದ್ಯಮಗಳಲ್ಲಿ ತೊಡಗಿಸುವ ಬಂಡವಾಳವು ಅಭಿವೃದ್ಧಿ ಪ್ರಯತ್ನಗಳನ್ನು ವರ್ಧಿಸುತ್ತದೆ ಎಂಬುದನ್ನು ಸೂಚಿಸುತ್ತದೆ. ಏತನ್ಮಧ್ಯೆ, ತಂಬಾಕು ಕೈಗಾರಿಕೆಯಲ್ಲಿ ತೊಡಗಿಸುವ ಬಂಡವಾಳವು, ಈ ಉದ್ಯಮದಲ್ಲಿ ತೊಡಗಿದ ಬಹಳಷ್ಟು ಮಂದಿಗೆ ಬಡತನದ, ದುರ್ಭಿಕ್ಷೆಯ ಚಕ್ರವನ್ನೇ ಪೋಷಿಸಿಕೊಂಡು ಬರುತ್ತದೆ. ಈ ವರದಿಯು ಭಾರತ ಮತ್ತು ಬಾಂಗ್ಲಾದೇಶಗಳ ಮೇಲೆ ಕೇಂದ್ರಿಕೃತವಾದ ಇತರ ಫಲಿತಾಂಶವು ಇದೇ ತರನಾದ ಸ್ಥಿತಿಗಳಿರುವ ಅಪರಿಹಾರ್ಯ ಬಡತನ , ಅನಾರೋಗ್ಯ ಪೀಡಿತ, ಸಾಲದ ವರ್ತುಗಳನ್ನು ಅರ್ಥೈಸಿಸುವ ತಂಬಾಕು ಕೃಷಿ ಇರುವ ಪ್ರಪಂಚದ ಇತರ ಭಾಗಗಳಿಗೂ ಅನ್ವಯಿಸುತ್ತದೆ.

## ಭಾರತದಲ್ಲಿ ತಂಬಾಕು ಕೃಷಿ

ಬೆಳೆಗಾರರಿಗೆ ಮತ್ತು ಕಾರ್ಮಿಕರಿಗೆ ಭರವಸೆಯಿಲ್ಲದ ಆಯ್ಕೆ, ರೈತರಿಗೆ ದುಭಾರಿ ವೆಚ್ಚದ ಕಾರ್ಯ, ಅರಣ್ಯಗಳಿಗೆ ಪಾಶಿಹುಕುಮ ಅಥವಾ ಮೃತ್ಯು ಸ್ವರೂಪ ಅಥವಾ ಮಾರಕ.

**ಸಂಪಾದಕೀಯ**

ತಂಬಾಕು ಕೃಷಿಯಿಂದ ಹೊರಬಂದು ಇತರೆ ಬೆಳೆಗಳನ್ನು ಬೆಳೆಯುತ್ತಿರುವವರು ತಮ್ಮ ಬದಲಾದ ಸ್ಥಿತಿಗೆ ಹಾಗೂ ಕರ್ನಾಟಕ ರಾಜ್ಯದಲ್ಲಿ ತಂಬಾಕು ದುಬಾರಿ ವೆಚ್ಚದ ಬಂಡವಾಳ, ಬೆಳೆಗಳ ಬಗ್ಗೆ ಕಾರ್ಮಿಕರ ತೀವ್ರ ಗಮನ ಮತ್ತು ತಂಬಾಕು ಸಂಸ್ಕರಣೆಗೆ ಬೇಕಾದ ಕಟ್ಟಿಗೆ ಸಮಸ್ಯೆಗಳು ಅವರ ಕಾರಣಗಳಾಗಿವೆ. ತಂಬಾಕನ್ನು ಸಂಸ್ಕರಿಸುವ ಸಲುವಾಗಿ ಮರಗಳನ್ನು ಕಡಿಯುವುದರಿಂದ ಅರಣ್ಯಗಳನ್ನು ಉಳಿಸಲು ಭಾರತ ಸರ್ಕಾರ ಕೈಗೊಂಡ ಪ್ರಯತ್ನಗಳು ಯಾವ ರೀತಿಯಾಗಿ ಅಪಾಯಕ್ಕೊಳಗಾಗಿವೆ ಮತ್ತು ಇತರ ಉದ್ಯಮ ಕ್ಷೇತ್ರದಲ್ಲಿ ಹಣ ತೊಡಗಿಸುವುದರಿಂದ ಹೇಗೆ ಅರಣ್ಯಗಳನ್ನು ರಕ್ಷಿಸಬಹುದು ಎಂಬುದನ್ನು ಈ ಅಧ್ಯಯನಗಳು ಸಾದರಪಡಿಸುತ್ತವೆ. ಇದರ ಮಹತ್ತರವಾದ ಪರಿಣಾಮವಾಗಿ, ಕೃಷಿಕರಣ ತಂಬಾಕು ಬೆಳೆಯನ್ನು ತ್ಯಜಿಸಿ ಇತರೆ ಬೆಳೆಗಳನ್ನು ಅವಲಂಬಿಸುವುದರಿಂದ ಅವರ ಆರ್ಥಿಕ ಮತ್ತು ಆರೋಗ್ಯ ಸ್ಥಿತಿಗತಿಗಳು ಉತ್ತಮ ಲಾಭದಾಯಕವಾಗುತ್ತವೆ.

ಈ ಅಧ್ಯಯನವನ್ನು ದಕ್ಷಿಣ ಭಾರತ ಪ್ರಮುಖ ತಂಬಾಕು ಬೆಳೆಯುವ ರಾಜ್ಯಗಳಲ್ಲಿ ಒಂದಾದ ಕರ್ನಾಟಕದ ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಕೈಗೊಳ್ಳಲಾಗಿದೆ. ಈ ಪ್ರದೇಶಗಳು ಈ ಹಿಂದೆ ಹೆಸರಾಂತ ಶ್ರೀಮಂತ ಅರಣ್ಯ ಪ್ರದೇಶವನ್ನು ಹೊಂದಿದ್ದವು. ತಂಬಾಕು ಕೃಷಿಯ ವಿವಿಧ ವಲಯಗಳಲ್ಲಿ ತೊಡಗಿರುವವರನ್ನು, ತಂಬಾಕು ಸಸಿ ಬೆಳೆಗಾರರನ್ನು, ಕಾರ್ಮಿಕರನ್ನು, ಕೃಷಿಕರನ್ನು ಮತ್ತು ಈ ಉದ್ಯೋಗವನ್ನು ತ್ಯಜಿಸಿ ಪರ್ಯಾಯ ಉದ್ಯೋಗದ ಚಟುವಟಿಕೆಗಳಲ್ಲಿ ತೊಡಗಿರುವವರನ್ನು ಸಂದರ್ಶಿಸಲಾಗಿದೆ. ಬೀಡಿ ಕಟ್ಟುವವರ ಮತ್ತು ಸ್ಥಳೀಯ ತಂಬಾಕು ಮಂಡಳಿಯ ಅಧಿಕಾರಿಗಳನ್ನು ಸಹ ಸಂದರ್ಶಿಸಿದ್ದೇವೆ. ಈ ಸಂಶೋಧನೆಯನ್ನು ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ ಎನ್.ಜಿ.ಓ ದ ಘಟಕವಾದ "ಪ್ರಯೋಗ ಸ್ಪಂದನದ" ಸಹಯೋಗದೊಂದಿಗೆ ಕೈಗೊಳ್ಳಲಾಗಿದೆ.

**ಸಾರಾಂಶ**

ತಂಬಾಕು ಕೃಷಿಯು ಲಾಭದಾಯಕವೇ? ಬಹಷ್ಟು ಕೆಲಸವನ್ನು ನಿರ್ವಹಿಸುವ ಜನರು ತಂಬಾಕು ಸಾಗುವಳಿಂದ ಬಹಳಷ್ಟು ಪ್ರಯೋಜನವನ್ನು ಪಡೆಯುತ್ತಾರೆಯೇ? ಅಥವಾ ಮಾಲೀಕರು ಮತ್ತು ಅಧಿ ಕಾರಿಗಳ, ಲಾಭಾಂಶದ ಸಿಂಹಪಾಲನ್ನು ಪಡೆಯುತ್ತಿರುವಾಗ, ಅನಾರೋಗ್ಯ ಪೀಡಿತರಾಗಿ ಬಹು ಸಂಖ್ಯೆಯಲ್ಲಿರುವ ಜನರು ಪಡೆಯುತ್ತಿರುವ ಲಾಭಾಂಶ ಅತಿ ಕಡಿಮೆಯಿರುವ ಕ್ಷೇತ್ರವೇ? ಸಂದರ್ಶನ ಮಾಡಿದ ಕೆಲವರು ಒಂದರ್ಥದಲ್ಲಿ ಸುಖವಾಗಿದ್ದರೆ, ಮತ್ತೊಂದು ಸ್ಪಷ್ಟವಾದ ಸಂಗತಿಯೇನೆಂದರೆ ಹೆಚ್ಚು ಪರಿಸರ ಸ್ನೇಹ ಉದ್ಯೋಗವು, ಕಡಿಮೆ ದೇಹದ ಶ್ರಮವನ್ನುಂಟು ಮಾಡುವ ಕಡಿಮೆ ಸಮಯವನ್ನು ತೆಗೆದು ಕೊಳ್ಳುವ ಮತ್ತು ಹೆಚ್ಚು ಲಾಭದಾಯಕ ಇತರೆ ಆರ್ಥಿಕ ವಲಯಗಳು ಇದ್ದರೆ ತಂಬಾಕು ಕೈಗಾರಿಕೆಯಿಂದ ಹೊರಹೋಗಲು ಸಹಕಾರಿ ಅಂಶಗಳಾಗಿವೆ.

ತಂಬಾಕು ಕೃಷಿಯು ಮೂಲಭೂತ ಅಸ್ತಿತ್ವಕ್ಕೆ ಬೇಕಾದ ಹಣಕಾಸನ್ನು ಒದಗಿಸಬಹುದಾದರೂ, ಅದು ಬಡವರನ್ನು ಬಡತನದ ವಿಷವರ್ತುಲದಲ್ಲೇ ಪೋಷಿಸಿಕೊಂಡು ಹೋಗುತ್ತದೆ. ಅನಕ್ಷರಸ್ಥ ಕಾರ್ಮಿಕರ ಮಕ್ಕಳು ತಮ್ಮಂತೆ ನಿರಕ್ಷರ ಕುಕ್ಷಿಗಳಾಗಿರುವ ಪ್ರಕರಣಗಳಿಂದ ಈ ವಿಷಯ ಮನನವಾಗುತ್ತದೆ. ಉತ್ತಮ ಉದರ ಪೋಷಣೆಯ ಆಧಾರವಿಲ್ಲದ, ಅವಿಚ್ಛಿನ್ನ ಗುಂಪುಗಳಾದ ಜಿಗುಪ್ಸೆಗೊಂಡ ಜನರಿಂದ ಮಾಲೀಕರು ಪ್ರಯೋಜನ ಪಡೆಯುತ್ತಿದ್ದರೂ, ತಂಬಾಕು ಸಾಗುವಳಿಯು ದೇಶದ ಆರ್ಥಿಕಾಭಿವೃದ್ಧಿಗೆ ಪ್ರಯೋಜನ ಕಾರಿಯಲ್ಲ ಎಂಬುದು ದಿಟವಾದ ವಿಚಾರವಾಗಿದೆ. ತೀಕ್ಷ್ಣವಾದ, ಬಿಗಿಯಾದ, ಆರೋಗ್ಯಕ್ಕೆ ಹಾನಿಕಾರಕ ಸ್ವಭಾವವುಳ್ಳ ಉದ್ಯೋಗವಾದ್ದರಿಂದ ಜನರು ಸಂತೋಷವಾಗಿ ತಂಬಾಕು ಕೃಷಿಯಿಂದ ಬೇರ್ಯಾವುದೇ ಹೆಚ್ಚು ಲಾಭದಾಯಕವಾದ ಉದ್ಯೋಗವನ್ನು ಮಾಡಲು ಸಿದ್ಧರಿದ್ದಾರೆ.

ಒಂದು ಲಾಭದಾಯಕವಾದ ಉದ್ಯೋಗವನ್ನು ಮಾಡಲು ಕೊನೆಪಕ್ಷ ನಾಲ್ಕು ಎಕರೆ ತಂಬಾಕು ಸಾಗುವಳಿ ಬೇಕಾಗುತ್ತದೆ ಎಂದು ರೈತರು ಹೇಳುತ್ತಾರೆ. ನಾಲ್ಕು ಎಕರೆಯು ಸುಮಾರು 30-40 ಕ್ವಿಂಟಾಲ್ ಇಳುವರಿ ನೀಡುತ್ತದೆ. ಆದ್ದರಿಂದ ಒಂದು ಋತುಮಾನದಲ್ಲಿ ಸುಮಾರು 10 ಬಾರಿಯಾದರೂ (ಕುತ್ತಟ್ಟವನ್ನು) ಕಾರ್ಯಕ್ಷಮತೆಗೆ ಒಳಪಡಿಸಬಹುದು. ಪ್ರತಿಬಾರಿಯ ತಂಬಾಕು ಸಂಸ್ಕರಣೆಗೆ ಎರಡರಿಂದ ಮೂರು ಎತ್ತಿನ ಗಾಡಿ ಕಟ್ಟಿಗೆ ಬಳಸಲಾಗುತ್ತದೆ. ಒಂದು ವಾರ್ಷಿಕ ಸುಗ್ಗಿಯ ಕಾಲದಲ್ಲಿ ಒಬ್ಬ ರೈತನು ಸುಮಾರು 25 ಗಾಡಿ ಸೌದೆಯನ್ನು ಉಪಯೋಗಿಸುತ್ತಾನೆ. ಸರ್ಕಾರಿ ಡಿಪೋದಲ್ಲಿ ಒಂದು ಟನ್ ಸೌದೆಗೆ ಸುಮಾರು 1,200 ರೂಗಳ ಬೆಲೆಯಾಗುತ್ತದೆ. ಅಂದರೆ ರೈತರಿಗೆ ಕೇವಲ ಕಟ್ಟಿಗೆಗೋಸ್ಕರ ಸುಮಾರು 30,000 ರೂಗಳು ಖರ್ಚಾಗುತ್ತದೆ. ಇದೊಂದು ಲಾಭದಾಯಕವಲ್ಲದ ಕಾರ್ಯವೆಂಬುದು ನಿಜ. ಅದಕ್ಕೆ ಬದಲಾಗಿ ರೈತರು ಅರಣ್ಯಪಾಲಕರಿಗೆ ಲಂಚ ನೀಡಿ ಒಂದು ಗಾಡಿ ಕಟ್ಟಿಗೆಗೆ ಸರಾಸರಿ 150 ರೂಗಳಂತೆ ಪಡೆಯುತ್ತಾರೆ. ಇದರಿಂದ 25 ಟನ್‌ಗಳಿಗೆ ಸುಮಾರು 4,000 ರೂಗಳು ಉಳಿತಾಯವಾಗುತ್ತದೆ.

ಹೀಗೆ 4 ಎಕರೆ ತಂಬಾಕು ಸಾಗುವಳಿದಾರನಿಂದ ಸರ್ಕಾರದ ಖಜಾನೆಗೆ ಸುಮಾರು 25,000 ರೂಗಳ ನಷ್ಟವಾಗುತ್ತದೆ. ಪ್ರತಿ ವರ್ಷ ಸುಮಾರು 50,000 ಕಿ.ಗ್ರಾಂ ತೂಕದ ತಂಬಾಕು ಉತ್ಪಾದಿಸುವ 16, 000ಕ್ಕಿಂತ ಹೆಚ್ಚು ದಾಖಲಾಗದ ಮತ್ತು ಸುಮಾರು 18,400 ದಾಖಲಾದ ತಂಬಾಕು ಸಾಗುವಳಿದಾರರನ್ನು ಕರ್ನಾಟಕ ರಾಜ್ಯವು ಹೊಂದಿದೆ. ತಂಬಾಕು ಸಂಸ್ಕರಣೆಗೆಂದು ಕಳ್ಳತನದಿಂದ ಕಟ್ಟಿಗೆಯನ್ನು ಸಾಗಿಸುವುದರಿಂದ ಸರ್ಕಾರಕ್ಕಾಗುವ ದೊಡ್ಡಪ್ರಮಾಣದ ಆದಾಯದ ನಷ್ಟವನ್ನು ಸುಲಭವಾಗಿ ಅಂದಾಜಿಸಬಹುದು. ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಅಭಿವೃದ್ಧಿಯ ಪ್ರಕಾರ ಕರ್ನಾಟಕ ಒಂದರಲ್ಲೇ ತಂಬಾಕು ಎಲೆಗಳನ್ನು ಬೇಯಿಸಲು ಪ್ರತಿ ವರ್ಷ 1,20,000 ಟನ್ ಪ್ರಮಾಣದ ಸೌದೆ ಬೇಕಾಗುತ್ತದೆ. ಅದೇನೆ ಇರಲಿ, ಇವೆಲ್ಲ ರೂಢಿಮೂಲವಾದ ಅಂದಾಜು ಪಟ್ಟಿಗಳಾಗಿದ್ದು ಅದರ ನೈಜ ಬಳಕೆಯು ಸುಮಾರು 3,00,000 ದಿಂದ 35,00,000ದವರೆಗಿನ ಟನ್ಸ್ ಪ್ರಮಾಣದ್ದಾಗಿದೆ. (ಪ್ರಸ್ತುತ ಅಧ್ಯಯನದ ಸಮಯದಲ್ಲಿ ಪಡೆದಂತೆ).

ಕಟ್ಟಿಗೆಯ ಅಭಾವದ ಪ್ರಭಾವದಿಂದಾಗಿ ರೈತರು ತಂಬಾಕು ಕೃಷಿಯಿಂದ ಹೊರ ನಡೆಯಲು ಉತ್ಸಾಹಕರಾಗಿದ್ದಾರೆಂದು ಸ್ಥಳೀಯ ತಂಬಾಕು ಮಂಡಲಿಯ ಸಿಬ್ಬಂದಿ ವರ್ಗದವರು ಹೇಳುತ್ತಾರೆ. ಅವರು ದೃಢ ಪಡಿಸುವುದೇನೆಂದರೆ ಒಂದು ಸಮಯದಲ್ಲಿ 1,200 ರೈತರು ಶಿವಮೊಗ್ಗದಲ್ಲಿನ ತಂಬಾಕು ಮಂಡಳಿಯಲ್ಲಿ ತಮ್ಮ ಹೆಸರನ್ನು ದಾಖಲಿಸಿದ್ದರು ಎಂದು ಸಿಬ್ಬಂದಿ ವರ್ಗದವರು ಹೇಳುತ್ತಾರೆ. ಈಗ ಅವರ ಸಂಖ್ಯೆ ಅರ್ಧಕ್ಕೆ ಕುಸಿದಿದೆ (635). ಅವರಲ್ಲಿಕೆಲವರು ಸುಲಭವಾದ, ಹೆಚ್ಚು ಲಾಭದಾಯಕವಾದ ಬೆಳೆಗಳೆಡೆಗೆ ದಾಪುಗಾಲು ಹಾಕುತ್ತಿದ್ದಾರೆ.

## ಪ್ರಕರಣಗಳು

### *1. ತೀವ್ರವಾದ, ಅಪಾಯಕಾರಿ ಕೆಲಸ – ಸಸಿ ಬೆಳೆಸುವುದು*

ಚೆನ್ನಮ್ಮ ಸುಮಾರು 45 ವರ್ಷ ಹರೆಯದ ಮಹಿಳೆ. ಆಕೆಗೆ ಒಂದು ಸಣ್ಣ ತುಂಡು ಭೂಮಿಯನ್ನು ಬಿಟ್ಟರೆ ಯಾವುದೇ ಜಮೀನಿಲ್ಲ. ಆ ತುಂಡು ಭೂಮಿಯಲ್ಲೇ ಮನೆಯನ್ನು ನಿರ್ಮಿಸಿದ್ದು ಸ್ವಲ್ಪ ಹಿತ್ತಲನ್ನು ಹೊಂದಿದ್ದಾರೆ. ಅವರ ಕುಟುಂಬದಲ್ಲಿ ಜನರಿದ್ದಾರೆ. ಅವರ ಗಂಡ ನಿರುಪಯುಕ್ತನಾಗಿದ್ದು ಅವನಿಂದ ಮನೆ ವಾರ್ತೆಗೆ ಎಳ್ಳಷ್ಟು ಕೊಡುಗೆಯಿಲ್ಲ. ಉಳಿದ ಸದಸ್ಯರು ತಂಬಾಕಿನ ಕೃಷಿಯೊಂದಿಗೆ ಇತರೆ ಕಸುಬುಗಳನ್ನು ನಿರ್ವಹಿಸುತ್ತಾರೆ. ಚನ್ನಮ್ಮನ ಕುಟುಂಬವು ತಂಬಾಕು ಸಸಿಗಳ ಪೋಷಣೆಗೆಂದು ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಉಳುಮೆ ಮಾಡುತ್ತಿದ್ದಾಗ ಕಳೆದ ವರ್ಷ ಬೇರು ಕೊಳಕ ರೋಗಕ್ಕೆ ತುತ್ತಾಗಿ ಪೋಷಣಾ ವನದಲ್ಲಿರುವ ಸಸಿತಾಣ (ನರ್ಸರಿ) ಎಲ್ಲ ಸಸಿಗಳು ನಾಶವಾದವು. ಇದರ ಪರಿಣಾಮವಾಗಿ, ಈ ವರ್ಷ ತಮ್ಮ ಮನೆಯ ಹಿಂಭಾಗದಲ್ಲಿರುವ ತುಂಡು ಭೂಮಿಭಾಗದಲ್ಲಿರುವ ತುಂಡು ಭೂಮಿಯಲ್ಲೇ ಸಸಿಗಳನ್ನು ಸಾಕಿದರು.

ಚನ್ನಮ್ಮ ಹೇಳುತ್ತಾರೆ ತಂಬಾಕು ಸಸಿ ಬೆಳೆಸುವುದು ತೀವ್ರವಾಗಿ ಇರಬೇಕಾದ ಪ್ರಕ್ರಿಯೆ. ಮಡಿಗಳು ನಾವು ಮಲಗುವ ಹಾಸಿಗೆಯಷ್ಟೇ ಸ್ವಚ್ಛವಾಗಿರಬೇಕು. ಪ್ಲಾಸ್ಟಿಕ್ ಬಳಕೆ - ದಕ್ಷಿಣ ಏಷ್ಯಾದಲ್ಲಿ ಇದೊಂದು ಸಾಮಾನ್ಯ ಸಮಸ್ಯೆ. ಎಲ್ಲೆಡೆ ಬಳಸುವ ತೆಳುವಾದ ಪ್ರಾಸ್ಟಿಕ್ ಚೀಲಗಳನ್ನು ಮಣ್ಣಿನ ಮಾಲಿನ್ಯವನ್ನುಂಟುಮಾಡಿವೆ. ಇವು ತಂಬಾಕು ನರ್ಸರಿಗಳ ಶತ್ರುವಾಗಿದೆ, ಮಣ್ಣಿನಲ್ಲಿ ಪ್ಲಾಸ್ಟಿಕ್ ಇದ್ದರೆ ಬೀಜಗಳು ಮೊಳಕೆಯೊಡೆಯುವುದಿಲ್ಲ. ಎಲೆ ಗಿಡಗಳನ್ನು ಸಾಕುವುದರಲ್ಲಿ ಚನ್ನಮ್ಮ ತನ್ನ ಕುಟುಂಬದಲ್ಲೇ ದೊಡ್ಡ ಪಾತ್ರ ವಹಿಸುತ್ತಾಳೆ. ಅವಳ ಎರಡು ಮಕ್ಕಳು ಗುಂಡಿಯನ್ನು ತೆಗೆಯುವುದರಲ್ಲಿ ಮತ್ತು ಮಣ್ಣನ್ನು ಸಡಿಲಿಸುವುದರಲ್ಲಿ ಅವಳಿಗೆ ಸಾಹಯ ಮಾಡುತ್ತಾರೆ, ಆದರೆ ಸ್ವಚ್ಛ ಮಾಡಿ ಮಡಿಗಳನ್ನು ನಿರ್ಮಿಸುವುದು, ನೀರುಣಿಸುವುದು ಮುಂತಾದ ಸಂಪೂರ್ಣ ಜವಾಬ್ದಾರಿ ಅವಳ ಪಾಲಿನದು. ಇದೆಲ್ಲ ತೀವ್ರ ಗಮನ ಹರಿಸಬೇಕಾದ ಕೆಲಸವಾಗಿದೆ. ಉದಾಹರಣೆಗೆ ಮಡಿಗಳಿಗೆ ನೀರುಣಿಸುವುದನ್ನು ಸಣ್ಣ ಕೈ ಕ್ಯಾನ್‌ಗಳ ಸಹಾಯದಿಂದ ಅತಿ ಜಾಗರೂಕತೆಯಿಂದ ಮಾಡಬೇಕು.

ಮಡಿಗಳು ಸಿದ್ಧವಾದ ನಂತರ, ಒಂದು ಬೆಂಕಿ ಪೊಟ್ಟಣದಷ್ಟು ಬೀಜಗಳನ್ನು 10-12 ಲೀ ನೀರಿನ ಕ್ಯಾನಿನೊಂದಿಗೆ ಬೆರೆಸಿ ಮಡಿಗಳ ಮೇಲೆ ಮೃದುವಾಗಿ ಚೆಲ್ಲಬೇಕು. ಬೀಜಗಳನ್ನು ತಿನ್ನುವ ಇರುವೆ ಮತ್ತು ಇತರೆ ಕೀಟಗಳನ್ನು ನಿಯಂತ್ರಿಸಲು ಕೂಡಲೇ ಕೀಟನಾಶಕ ಔಷಧಿಯನ್ನು ಮಡಿಯ ಸುತ್ತಲು ಸಿಂಪಡಿಸಬೇಕು. ಸೂರ್ಯನಿಂದ ಮತ್ತು ಮಳೆಯಿಂದ ರಕ್ಷಿಸಲು ಪ್ರತಿ ಮಡಿಯ ಮೇಲೆ ಒಣಗಿದ ಭತ್ತದ ಶಿವುಡಿನಿಂದ ಮುಚ್ಚಬೇಕು. ಬೆಳವಣಿಗೆಯನ್ನು ತ್ವರಿತಗೊಳಿಸಲು ಎರಡು ಕಿ.ಗ್ರಾಂ ರಸಗೊಬ್ಬರವನ್ನು ಹತ್ತರ ಪ್ರತಿಯೊಂದು ಮಡಿಗೂ ಬಳಸಬೇಕು. ರಸಗೊಬ್ಬರವನ್ನು ಹಾಕಿದ ತಕ್ಷಣವೇ ಎಲೆಗಳನ್ನು ತೊಳೆಯಬೇಕು. ಇಲ್ಲದಿದ್ದರೆ ಅವುಗಳು ಒಣಗಿ ಹೋಗುತ್ತವೆ.

ಚನ್ನಮ್ಮ ವಿವರಿಸುವುದೇನೆಂದರೆ ಕೆಲಸ ಕಷ್ಟ ಆದರೆ ಅಷ್ಟು ಲಾಭವಿದೆ. ಕಾಲಕಾಲಕ್ಕೆ ಸರಿಯಾಗಿ ಮಳೆ ಬಿದ್ದರೆ ವಾಯುಗುಣವು ಸಮರ್ಥವಾಗಿದ್ದರೆ ನಾವು ಒಳ್ಳೆಯ ಪ್ರಯೋಜನವನ್ನು ಪಡೆಯುತ್ತೇವೆ. ಗಿಡಗಳಿಗೂ ಸಹ ರೋಗ ತಗಲಬಾರದು. ಬೇರಿನ ಹತ್ತಿರವಿರುವ ಕಾಂಡವು ಕೊಳೆಯಲು ಪ್ರಾರಂಭಿಸಿದರೆ ಬೇರು ಕೊಳಕ ರೋಗ ತಗುಲಿದೆ ಎಂಬುದು ನಮಗೆ ತಿಳಿಯುತ್ತದೆ. ಒಂದೇ ರಾತ್ರಿಯಲ್ಲೇ ನಮ್ಮೆಲ್ಲ ಲಾಭಾಂಶವು ಮಂಗಮಾಯವಾಗುತ್ತದೆ. ತಮ್ಮ ಮನೆಯವರೆ ಎಲ್ಲ ಕೆಲಸಗಳನ್ನು ಮಾಡುವುದರಿಂದ ಕಾರ್ಮಿಕರ ಬೆಲೆಗಳ ಬಗ್ಗೆ ಆಕೆ ಯೋಚಿಸುವುದಿಲ್ಲ, ಪರಿಗಣಿಸುವುದಿಲ್ಲ. ಶುಭಕರವಾದ ಋತುವಿನಲ್ಲಿ ಒಂದು ಋತುವಿಗೆ

1500-2000 ರೂಗಳ ಲಾಭವನ್ನು ಗಳಿಸುತ್ತಾರೆ. ಇನ್ನಿತರೆ ಋತುಗಳಲ್ಲಿ ತಮ್ಮ ಮನೆಯ ಹಿತ್ತಲಲ್ಲಿ ಮೆಣಸಿನ ಕಾಯಿ, ಬದನೆಕಾಯಿ, ಟಮೋಟಾ, ಸೊಪ್ಪು, ಇತರೆ ಕಾಯಿಪಲ್ಯಗಳನ್ನು ಬೆಳೆಯುತ್ತಾರೆ.

*2. ತಂಬಾಕು ಸಸಿ (ನರ್ಸರಿ) ಅಪಾಯಕಾರಿ ರಾಸಾಯನಿಕಗಳು*

48 ವರ್ಷ ಹರೆಯದ ರುಕ್ಕಮ್ಮನಿಗೆ ತಂಬಾಕು ಸಸಿಗಳನ್ನು ಬೆಳೆಸುವುದು ಪ್ರಮುಖ ಜವಾಬ್ದಾರಿಯಾಗಿದೆ. ಇತರೆ ಋತುಮಾನಗಳ ವರ್ಷದಲ್ಲಿ ಸುಮಾರು 3 ತಿಂಗಳು ಬೇರೆಯವರ ಹೊಲಗದ್ದೆಗಳಲ್ಲಿ ದಿನಕ್ಕೆ 30 ರೂ ನಂತೆ ಕೂಲಿಕೆಲಸ ಮಾಡುತ್ತಾಳೆ. ಅವರ ಮನೆಯ ಹತ್ತಿರವಿರುವ ಚೂರುಪಾರು ಜಾಗವನ್ನು ಬಿಟ್ಟರೆ ಅವಳದು ಜಮೀನು ರಹಿತ ಕುಟುಂಬ. ಅವಳ ಕುಟುಂಬದಲ್ಲಿ ನಾಲ್ಕು ಜನರಿದ್ದಾರೆ. ಅವಳ ಅವಿದ್ಯಾವಂತ ಪತಿ ದಿನಗೂಲಿ ಕಾರ್ಮಿಕ, ದಿನಕ್ಕೆ 40 - 50 ರೂಗಳನ್ನು ಗಳಿಸುತ್ತಾರೆ. ತನ್ನ ಹೆಂಡತಿಗೆ ನರ್ಸರಿ ಕೆಲಸದಲ್ಲಿ ಸಹಾಯ ಮಾಡುತ್ತಾನೆ. ಅವಳ ಎರಡು ಮಕ್ಕಳು ಕೆಲವು ವರ್ಷಗಳ ನಂತರ ಶಾಲೆಯನ್ನು ಬಿಟ್ಟರೆ, ಮಗ ಅವಳ ಹಸುಗಳನ್ನು ನೋಡಿಕೊಳ್ಳುತ್ತಾನೆ. ಮಗಳು ಮನೆ ಕೆಲಸವನ್ನು ಮಾಡುತ್ತಾಳೆ. ವರ್ಷದ 3-4 ತಿಂಗಳುಗಳಲ್ಲಿ ದಿನಕ್ಕೆ 30 ರೂನಂತೆ ದಿನಗೂಲಿ ಕಾರ್ಮಿಕಳಾಗಿ ದುಡಿಯುತ್ತಾಳೆ.

ರುಕ್ಕಮ್ಮ ತಂಬಾಕು ನರ್ಸರಿಗಳಲ್ಲಿ 12 ವರ್ಷಗಳ ಕಾಲ ಕೆಲಸ ಮಾಡಿದ್ದಾಳೆ. ಕೆಲವು ವರ್ಷ ಲಾಭವಾದರೆ, ಕಳೆದ ವರ್ಷ ಗಿಡಗಳಿಗೆ ರೋಗ ತಗುಲಿ, ಬರಗಾಲದ ನಿಮಿತ್ತ ಸಸಿಗಳು ನಾಶವಾದವು. ಆದ್ದರಿಂದ ಹೂಡಿದ ಬಂಡವಾಳ - ಜಮೀನಿನ ಬಾಡಿಗೆ, ಬೀಜಗಳ ಖರೀದಿ ರಾಸಾಯನಿಕ ಸಿಂಪಡಣೆ - ಎಲ್ಲವೂ ನಷ್ಟವಾಯಿತು. ಏಪ್ರಿಲ್‌ನಿಂದ ಜೂನ್‌ವರೆಗೆ ಲಭ್ಯವಿರಬಹುದಾದ ಏಕಮೇವ ವೃತ್ತಿಯಾಗಿರುವುದರಿಂದ ಅನೇಕ ಜನರು ಸಸಿಗಳನ್ನು ಬೆಳೆಸುತ್ತಾರೆ. ತತ್ಪರಿಣಾಮವಾಗಿ ಸಸಿಗಳ ಪೂರೈಕೆ ಹೆಚ್ಚಾಗುತ್ತದೆ. ಬೆಲೆಗಳು ಇಳಿಮುಖವಾಗುತ್ತದೆ. ಅನೇಕ ಜನರು ತಮ್ಮ ಬಂಡವಾಳವನ್ನು ಕಳೆದು ಕೊಂಡಿದ್ದರಿಂದ , ಕಳೆದ ಬಾರಿಯ ವಿಪತ್ತಿನ ವರ್ಷದಿಂದಾಗಿ ನರ್ಸರಿಗಳ ಸಂಖ್ಯೆ ಇಳಿಮುಖವಾಗಿತ್ತು , ಕ್ಷೀಣಿಸಿತು. ಗೇಣಿ ಹಣವನ್ನು ಕೊಡಲು ಅಸಮರ್ಥವಾದ್ದರಿಂದ ಗಿರಿಜಮ್ಮ ಈ ಬಾರಿ ತಮ್ಮ ಮನೆಯ ಹಿಂಭಾಗದಲ್ಲಿದ್ದ ಸ್ವಲ್ಪ ಜಾಗದಲ್ಲೇ ಪುನಃ ತಂಬಾಕು ಸಸಿಗಳನ್ನು ಬೆಳೆಸುತ್ತಿದ್ದಾರೆ.

ಗಂಡಸರು ನೆಲವನ್ನು ಅಗಿದ ನಂತರ ಗಿರಿಜಮ್ಮ ತಮ್ಮ ಮಗಳೊಂದಿಗೆ ಮಡಿಗಳನ್ನು ಸ್ವಚ್ಛ ಮಾಡುತ್ತಾರೆ. ಗಿರಿಜಮ್ಮ ವಿವರಣೆ ಕೊಡುವುದೇನೆಂದರೆ ಮಣ್ಣನ್ನು ಚೆನ್ನಾಗಿ ಪುಡಿ ಮಾಡುವುದು, ಮಡಿಗಳನ್ನು ಮಾಡುವುದು, ಕಲ್ಲು ಪ್ಲಾಸ್ಟಿಕ್, ಕಾಗದ ಮುಂತಾದ ಅನುಪಯುಕ್ತ ವಸ್ತುಗಳನ್ನು ಎಚ್ಚರಿಕೆಯಿಂದ ತೆಗೆಯುವುದು ಮಹಿಳೆಯರ ಕೆಲಸಗಳಾಗಿವೆ. ಅವರ ಮನೆಯ ಹತ್ತಿರ ಬಾವಿ ಇಲ್ಲದಿರುವುದರಿಂದ ತಾನು ತನ್ನ ಮಗಳು ಮಡಿಗಳಿಗೆ ನೀರುಣಿಸುವ ಸಲುವಾಗಿ ಸುಮಾರು ಕಾಲು ಕಿ.ಮೀ ದೂರ ನೀರಿಗಾಗಿ ಪದೇ ಪದೇ ನಡೆದು ಹೋಗಲೇ ಬೇಕು. ಪ್ರತಿಬಾರಿಯು ಗಿಡಗಳಿಗೆ ನೀರುಣಿಸುವಾಗ 10 ಲೀ. ಸಾಮರ್ಥ್ಯದ 4 ಕ್ಯಾನ್‌ಗಳನ್ನು ನರ್ಸರಿಗೆ ಬಳಸಲಾಗುತ್ತದೆ. (ಮಳೆ ಬರುವ ತನಕ ದಿನಕ್ಕೆ 3 ಬಾರಿ) ಭಾರಿ ಮಳೆ ಮತ್ತು ಆಲಿಕಲ್ಲುಗಳು ಸಸಿಗಳನ್ನು ನಾಶಪಡಿಸಬಲ್ಲವು.

ಮಡಿಗಳ ಮೇಲಿಟ್ಟ ಒಣ ಭತ್ತದ ಹುಲ್ಲಿನ ಪೆಂಡಿಯನ್ನು ಪ್ರತಿ ದಿನಗಳಲ್ಲಿ ಒಮ್ಮೆ ತಿರುಗಿಸಲಾಗುತ್ತದೆ. ಸಮಾರು 15 ದಿನಗಳ ನಂತರ ಪೆಂಡಿಗಳನ್ನು (ಕಟ್ಟು) ತೆಗೆಯಲಾಗುತ್ತದೆ. ನಂತರ ಉಳಿದವುಗಳನ್ನು ತೆಗೆಯುತ್ತಾರೆ. ಇವುಗಳೂ ಸಹ ಮಹಿಳೆಯರ ಕೆಲಸಗಳೆ. ರಸಗೊಬ್ಬರವನ್ನು ಪ್ರಾರಭದಲ್ಲೇ ಕೊಡುತ್ತಾರೆ

ಪುನಃ ಬಿತ್ತನೆಯಾದ ಒಂದು ತಿಂಗಳ ನಂತರ ಕೊಡುತ್ತಾರೆ. ಮಹಿಳೆಯರು ನಿಯಮಿತವಾಗಿ ಮಡಿಗಳಲ್ಲಿನ ಹುಲ್ಲು, ಕಳೆಗಳನ್ನು ತೆಗೆಯುತ್ತಾರೆ. ಎರಡು ತಿಂಗಳ ತೀವ್ರನಿಗದಿ ಕೆಲಸದ ನಂತರ ಸಸಿಗಳ, ಪಟ್ಟಣ ಮಾಡಿ ಮಾರಾಟ ಮಾಡಲು ಸಿದ್ಧವಾಗುತ್ತವೆ. ಗಿರಿಜಮ್ಮ ಹೇಳುತ್ತಾರೆ - ಸಸಿಗಳ ಬೆಲೆ ಅವುಗಳ ಲಭ್ಯತೆ ಮತ್ತು ಗುಣಧರ್ಮಗಳನ್ನು ಮತ್ತು ಆ ವರ್ಷದ ಮಳೆ ಮತ್ತು ವಾಯುಗುಣವನ್ನು ಅವಲಂಬಿಸಿರುತ್ತದೆ. ಅವುಗಳ ಬೆಲೆಗಳ ಮಿತಿಯು ತುಂಬಾ ಏರುಪೇರಾಗಿದ್ದು, ಒಂದು ಸಾವಿರ ಸಸಿಗಳ ಬೆಲೆ 20-2000 ರೂಗಳವರೆಗೆ ವ್ಯತ್ಯಾಸವಿರುತ್ತದೆ.

ಇಷ್ಟೆಲ್ಲಾ ಕಷ್ಟಗಳ ಮಧ್ಯೆ ತಾನೇಕೆ ಈ ಕೆಲಸ ಮಾಡುತ್ತೇನೆಂದು ವಿವರಿಸುತ್ತಾ ಆಕೆ ಉತ್ತರಿಸುತ್ತಾಳೆ. ಕೆಲಸ ತುಂಬಾ ಕಷ್ಟ, ಅಪಾಯಕಾರಿ ಮತ್ತು ಮುನ್ನೂಡಿಯಲಾಗದಂತದ್ದು. ವರ್ಷದ ಈ ಸಮಯದಲ್ಲಿ ಬೇರೆ ಯಾವ ಕೆಲಸವು ಲಭ್ಯವಿಲ್ಲದ ಕಾರಣ ನಾವು ಈ ಕೆಲಸದಲ್ಲಿ ತೊಡಗುತ್ತೇವೆ. ನಾವು ಔಷಧವನ್ನು ಸಿಂಪಡಿಸವಾಗ ನಮ್ಮ ಕೈಕಾಲುಗಳು ಉರಿಯುತ್ತವೆ. ಒಮ್ಮೆ ರಾಸಾಯನವನ್ನು ಸಿಂಪಡಿಸಿದ ಮೇಲೆ ಗಿಡಗಳ ಬಳಿ ದನಕರುಗಳನ್ನು ಬಿಡುವುದಿಲ್ಲ. ತನ್ನ ಹನ್ನೆರಡು ವರ್ಷದ ನರ್ಸರಿ ಬೆಳೆಗಳ (ಸಸಿತಾಣ ನರ್ಸರಿ) ಅನುಭವವನ್ನು ಕ್ರೋಢಿಕರಿಸುತ್ತಾ, ಆಕೆ ಕೇವಲ ಏಳು ವರ್ಷಗಳಲ್ಲಿ ಮಾತ್ರ ಲಾಭಂಶವನ್ನು ಕಂಡಿದ್ದವೆಂದು ಹೇಳುತ್ತಾಳೆ. ಒಂದು ವಿಸ್ಮಯಕಾರಿ ವರ್ಷದಲ್ಲಿ, ಸುಮಾರು ಆರು ವರ್ಷಗಳ ಹಿಂದೆ, 1000 ಸಸಿಗಳಿಗೆ 2000 ರೂಗಳನ್ನು ಪಡೆದಳು, ಏಕೆಂದರೆ ಆ ವರ್ಷ ಬದುಕುಳಿದ ಕೆಲವೇ ಸಸಿತಾಣ (ನರ್ಸರಿ) ಗಳಲ್ಲಿ ಇವಳದೂ ಸಹ ಸೇರಿತ್ತು. ಇನ್ನುಳಿದ ಐದು ವರ್ಷಗಳಲ್ಲಿ ತನ್ನ ಹಣ ಕಳೆದುಕೊಂಡಳು, ಅವಳ ತೀವ್ರ ಪ್ರಯತ್ನಗಳು, ಅಪಾಯಕಾರಿ ರಾಸಾಯನದೊಂದಿಗಿನ ಒಡನಾಟ ಎಲ್ಲವೂ ಶೂನ್ಯವಾಯಿತು.

## 3. ಮಾಜಿ ತಂಬಾಕು ಕಾರ್ಮಿಕರ ಮರು ಜೀವನ

ಮಂಗಳ 32 ವರ್ಷದ ವಯಸ್ಸಿನ ಮಹಿಳಾ ಕೂಲಿಗಾರ್ತಿ, ತನಗೆ ದೊರಕುವ ಕೆಲಸ ಮತ್ತು ಋತುಮಾನಗಳಿಗೆ ಅನುಗುಣವಾಗಿ ದಿನಕ್ಕೆ 30-40 ರೂಗಳನ್ನು ಸಂಪಾದಿಸುತ್ತಾಳೆ. ತನ್ನ ತಾಯಿ ಮತ್ತು ಸೋದರಿಯ ಮಗಳೊಂದಿಗೆ ಬದುಕುತ್ತಿದ್ದಾಳೆ. ಅವಳಿಗೆ ಎರಡು ಎಕರೆ ಜಮೀನಿದ್ದು ಅದನ್ನು ಗುತ್ತಿಗೆಗೆ ಕೊಟ್ಟಿರುತ್ತಾಳೆ. 15 ವರ್ಷಗಳಿಂದ ಮಂಗಳ ತಂಬಾಕು ಸಾಗುವಳಿ ಮತ್ತು ಸಂಸ್ಕರಣೆಗೆ ಸಂಬಂಧಿಸಿದ ಎಲ್ಲ ಬಗೆಯ ಕೆಲಸಗಳನ್ನು ನಿರ್ವಹಿಸುತ್ತಿದ್ದಳು. ತಂಬಾಕಿನ ಪೂರ್ಣ ಶ್ರೇಣಿಯ ಕೆಲಸಗಳಾದ ಗಿಡ ನೆಡುವುದು ಕಳೆಕೀಳುವುದು, ಮಡಿಗಳನ್ನು ಮಾಡುವುದು, ನಿರ್ವಹಿಸುವುದು, ತಂಬಾಕು ಎಲೆಗಳನ್ನು ಕೀಳುವುದು, ಎಲೆ ಕಟ್ಟುವುದು, ಎಲೆಗಳ, ಒಣಗಿ ಹದವಾದ ಬಳ್ಳಿ ಅವುಗಳನ್ನು ಬಿಚ್ಚುವುದು, ಮುಂತಾದ ಎಲ್ಲ ಕೆಲಸಗಳನ್ನು ಮಂಗಳ ಬಲ್ಲಳು. ಪ್ರತಿ ತಂಬಾಕು ಋತುಮಾನದಲ್ಲಿ ತಂಬಾಕು ಸಾಗುವಳಿ ಹೊಲಗಳಲ್ಲಿ ಹಾಗೂ ಕುತ್ತಟ್ಟಿ ಕೆಲಸ ಮಾಡುತ್ತಿದ್ದಳು. ಆದರೆ ಇತ್ತೀಚಿಗೆ ನಿಲ್ಲಿಸಿದ್ದಾಳೆ. ಕೆಲಸದ ಅವಧಿ ಮತ್ತು ಸಂಭಾವನೆಯ ಬಗ್ಗೆ ಮಾತನಾಡುತ್ತಾ ಅವಳು ಅನ್ನುತ್ತಾಳೆ. ನಾನು ತಂಬಾಕು ಸುಗ್ಗಿಯ ಕಾಲದಲ್ಲಿ ಜನರ ಮನೆಯಲ್ಲೇ ಉಳಿದುಕೊಂಡು ರಾತ್ರಿ ಇಡೀ ಕೆಲಸ ಮಾಡುತ್ತಿದ್ದೆ. ಒಂದು ಋತುಮಾನದಲ್ಲಿ ತಿಂಗಳೊಂದಕ್ಕೆ ಸುಮಾರು 2,000 ರೂಗಳನ್ನು ಗಳಿಸುತ್ತಿದ್ದೆ.

ತಂಬಾಕು ಸಂಬಂಧಿ ಕೆಲಸವನ್ನು ಕೈ ಬಿಡಲು ಕಾರಣವೇನು ಎಂದು ಕೇಳಿದ ಪ್ರಶ್ನೆಗೆ, ಋತುಮಾನ ಮುಗಿದ ಮೇಲೆ ನಾನು ಅನಾರೋಗ್ಯದಿಂದ ನರಳುತ್ತಿದ್ದೆ. ಎದೆ ಸೆಳೆತ, ಕಾಲುನೋವು, ಹೊಟ್ಟೆ ನೋವು ಮತ್ತು ಆಯಾಸದಿಂದ ನರಳುತ್ತಿದ್ದೆ. ಸ್ಥಳೀಯ ವೈದ್ಯರಾದ ಸುಧಾರವರು ನನಗೆ ಔಷಧಿ ಮತ್ತು ಶಕ್ತಿ

ವರ್ಧಕಗಳನ್ನು ನೀಡಿದರು. 1999ರಲ್ಲಿ ತಂಬಾಕು ಕೆಲಸದ ಕಾಲ ಮುಗಿದ ನಂತರ ನನ್ನ ಆರೋಗ್ಯ ಸ್ಥಿತಿಯು ತುಂಬಾ ಕ್ಷೀಣಿಸಿತು. ಡಾ. ಸುಧಾರವರು ನನಗೆ ಆಸ್ಪತ್ರೆಗೆ ಸೇರಲು ಸೂಚಿಸಿದರು. ಅವರು ಅನೇಕ ಪರೀಕ್ಷೆಗಳನ್ನು ಮಾಡಿದರು ಮತ್ತು ಹೃದಯದ ಕ್ಷ ಕಿರಣವನ್ನು ತೆಗೆಲಾಯಿತು. ಆ ವೈದ್ಯರು ನನಗೆ ಮೊದಲು ಕೇಳಿದ ಪ್ರಶ್ನೆ ನೀವು ಏನಾದರೂ ಹೊಗೆ ಬತ್ತಿ ಅಥವಾ ಬೀಡಿ ಸೇವನೆ ಮಾಡುತ್ತಿದ್ದರ ಅಥವಾ ತಂಬಾಕಿನ ಉತ್ಪನ್ನಗಳನ್ನು ಉಪಯೋಗಿಸಿದ್ದರ ಎಂಬುದಾಗಿತ್ತು. ನಾನು ಸಿಟ್ಟಿನಲ್ಲೇ ಅವರಿಗೆ ಕೇಳಿಬಿಟ್ಟೆ ಅಂಥವೆಲ್ಲ ಮಾಡುವುದಕ್ಕೆ ನಾನೇನು ಮುಂಬಯಿ ಹುಡುಗೀನಾ?

ತಂಬಾಕಿನ ಧೂಳಿನಿಂದ ನನ್ನ ದೇಹದ ಒಳಭಾಗಗಳು ಕೊಳೆತು ಹೋಗಿವೆ, ಅಂದರೆ ಹಾಳಾಗಿ ಹೋಗಿವೆ ಎಂದು ಡಾಕ್ಟರ್ ತಿಳಿಸಿದರು. ತಂಬಾಕು ಸಂಬಂಧಿ ಕೆಲಸವನ್ನು ನಿಲ್ಲಿಸಬೇಕೆಂದು ವೈದ್ಯರು ನನಗೆ ಸಲಹೆ ನೀಡಿದರು. ಮೂರು ದಿನಗಳವರೆಗೆ ನನಗೆ 3 ಚುಚ್ಚುಮದ್ದುಗಳನ್ನು ಕೊಟ್ಟರು. ಪ್ರತಿದೊಂದರ ಬೆಲೆ ಸುಮಾರು 300ರೂಗಳು. ಅವರು ಆಸ್ಪತ್ರೆಗೆ ದಾಖಲಾಗಲು ತಿಳಿಸಿದರು. ಆದರೆ ನಾನು ನಿರಾಕರಿಸಿದೆ. ಇದಾದ ಬಳಿಕ ನಾನು ಬಹುತೇಕ 3 ತಿಂಗಳವರೆಗೆ ಹಾಸಿಗೆ ಹಿಡಿದೆ. ನಾನು ತುಂಬಾ ಬಿಳಿಚಿಕೊಂಡು ಸಪೂರಳಾದೆ. ನಾನು ಆ ವರ್ಷ ವೈದ್ಯಕೀಯ ಚಿಕಿತ್ಸೆಗಾಗಿ ಸುಮಾರು 15,000ರೂಗಳನ್ನು ಖರ್ಚ ಮಾಡಿದೆ. ಅನಂತರ ತಂಬಾಕು ಹೊಲಗಳಲ್ಲಿ ಸಂಸ್ಕರಣ ಘಟಕಗಳಲ್ಲಿ ಕೆಲಸ ಮಾಡುವುದನ್ನು ನಿಲ್ಲಿಸಿದೆ. ಈಗ ನಾನು ಚೆನ್ನಾಗಿದ್ದೇನೆ. ನೀವು ಒಂದು ವೇಳೆ ಮತ್ತೆ ತಂಬಾಕು ಹೊಲಗಳಲ್ಲಿ ಕೆಲಸ ಮಾಡಲು ಹೋಗುವಿರಾ ಎಂದು ಕೇಳಿದ್ದಕ್ಕೆ ಅವಳು ಪ್ರತಿಕ್ರಿಯಿಸುತ್ತಾಳೆ. ಒಂದು ವೇಳೆ ಅವರು ದಿನ ಒಂದಕ್ಕೆ 100ರೂಗಳನ್ನು ಕೊಡತ್ತೇನೆಂದರು ನಾನು ಮತ್ತೆ ತಂಬಾಕಿನ ಕೆಲಸಗಳನ್ನು ಮಾಡುವುದಿಲ್ಲ, ನಾನು ಹೆಚ್ಚು ಕಮ್ಮಿ ಸತ್ತಿದ್ದೆ. ಈಗ ನನಗೆ ಮರು ಹುಟ್ಟು ಸಿಕ್ಕಿದೆ, ಮತ್ತೆ ನಾನು ಅದನ್ನು ಹಾಳು ಮಾಡಿಕೊಳ್ಳಲು ಬಯಸುವುದಿಲ್ಲ.

ತಂಬಾಕು ಹೊಲಗಳಲ್ಲಿ ತಾನು ಕೆಲಸ ಮಾಡುತ್ತಿದ್ದ ವೇಳೆಯ ಬಗ್ಗೆ ಮಾತನಾಡುತ್ತಾ ತನ್ನ ಕುಟುಂಬದ ಸಂಬಂಧಗಳ ಹೊಸ ಆಯಾಮವನ್ನೇ ಸೃಷ್ಟಿಸುತ್ತಾರೆ. ನಾನು ಆ ಸಮಯದಲ್ಲಿ ಅವೇಳೆಯಲ್ಲಿ ಕೆಲಸ ಮಾಡುತ್ತಿದ್ದರಿಂದ ನನ್ನ ಕುಟುಂಬದೊಂದಗಿನ ನನ್ನ ಸಂಬಂಧಕ್ಕೆ ಹುಳಿ ಹಿಂಡಿದಂತಾಯಿತು. ಈ ಕೆಲಸದಿಂದ ದೊರೆಯುವ ಆದಾಯದ ಆಕರ್ಷಣೆಯಿಂದ ನನ್ನ ಕುಟುಂಬದವರು ನನ್ನ ಕೆಲಸಕ್ಕೆ ಚಾಲನೆ ನೀಡಿದ್ದಾರೆಂದು ಭಾವಿಸಿದೆ. ರಾತ್ರಿ ಸಮಯದಲ್ಲಿ ನಾನು ಮನೆಯಿಂದ ಬಹುದೂರ ಉಳಿಯುತ್ತಿದ್ದೆ. ಆದರೆ ನನ್ನ ಕುಟುಂಬದವರು ಇದನ್ನೆಲ್ಲ ಇಷ್ಟಪಡುತ್ತಿರಲಿಲ್ಲ. ಮನೆಯಲ್ಲಿ ಪ್ರತಿನಿತ್ಯ ಘರ್ಷಣೆಗಳು, ನಡೆಯುತ್ತಿದ್ದವು. ಆದರೆ ಈಗ ನಮ್ಮ ಸಂಬಂಧಗಳು ಉತ್ತಮವಾಗಿವೆ. ನಾವು ಈಗ ಸಾಮಾನ್ಯ ಸ್ಥಿತಿಗೆ ಮರಳಿದ್ದೇವೆ. ಈಗ ಅವಳು ಶೇಂಗಾ, ಜೋಳ, (ಮೆಕ್ಕೆ ಜೋಳ) ಅಥವಾ ಭತ್ತದ ಹೊಲಗದ್ದೆಗಳಲ್ಲಿ ಕೆಲಸ ಮಾಡುತ್ತಾಳೆ. ಈಗ ಮಾಡುತ್ತಿರುವ ಕೆಲಸ ಮತ್ತು ತಂಬಾಕಿನ ಕೆಲಸಗಳ ನಡುವಿನ ವ್ಯತ್ಯಾಸದ ಬಗ್ಗೆ ಮಾತನಾಡುತ್ತಾ ಮಂಗಳ ಅವರು ಹೇಳುತ್ತಾರೆ "ಈಗ ನನಗೆ ಆಯಾಸ, ದಣಿವು ಎನಿಸುವುದಿಲ್ಲ, ತೌಲನಿಕವಾಗಿ, ನಾನು ತಂಬಾಕು ಹೊಲಗಳಲ್ಲಿ ಕೆಲಸ ಮಾಡುತ್ತಿದ್ದಾಗ ಗಳಿಸುವ ಹಣಕ್ಕಿಂತಲೂ ಕಾಡಿಯಾದರೂ ಸುಮಾರು 3,000ರೂಗಳನ್ನು ಸಂಪಾದಿಸುತ್ತೇನೆ. ಆದರೆ ತಂಬಾಕು ಕೆಲಸವನ್ನು ಮಾಡುವಾಗ ನಾನು ಅನುಭವಿಸಿದ ದೈಹಿಕ ಮತ್ತು ಮಾನಸಿಕ ಯಾತನೆಗೆ ಹೋಲಿಸಿದಾಗ, ಈಗ ನಡೆಸುತ್ತಿರುವ ಜೀವನವು ಹೆಚ್ಚು ಉತ್ತಮವಾದದ್ದು.

## 4. ತಂಬಾಕಿಗಿಂತ ಹಸು ಸಾಗಾಣಿಕೆಯು ಸ್ಥಿರ, ಹಾಗೂ ಹೆಚ್ಚು ಸುಭದ್ರ ಲಾಭದಾಯಕ ಉದ್ಯೋಗ

39 ವರ್ಷ ಹರೆಯದ ದೇವಮ್ಮ ಎರಡು ಮಕ್ಕಳ ತಾಯಿ. ತನ್ನ ಗಂಡನೊಂದಿಗೆ ಅವಳು ತಂಬಾಕು ನರ್ಸರಿ (ಸಸಿತಾಣ) ಯನ್ನು 2 ವರ್ಷಗಳವರೆಗೆ ಬೆಳೆಸಿದಳು. ಅದು ಉತ್ತಮ ಲಾಭವನ್ನು ತಂದುಕೊಟ್ಟಿತು. ಎರಡನೆ ವರ್ಷದಲ್ಲಿ ಅವರು ತಮ್ಮ ಬಂಡವಾಳವನ್ನು ಮತ್ತು ಸಸಿಗಳ ಸಾಲುಗಳನ್ನು ಹೆಚ್ಚಿಸಿದರು. ಆದರೆ ಸಸಿಗಳು ಬೇರು ಕೊಳಕ ರೋಗಕ್ಕೆ ತುತ್ತಾದವು. ಇಷ್ಟು ಸಾಲದು ಎಂಬಂತೆ ಆ ವರ್ಷ ಮಳೆ ಕೈಕೊಟ್ಟು ರೋಗ ಮುಕ್ತವಾದ ಸಸಿಗಳು ಸಹ ಮಾರಾಟವಾಗಲಿಲ್ಲ. ಅವರು ಆ ವರ್ಷ 2000 ರೂಗಳ ನಷ್ಟವನ್ನು ಅನುಭವಿಸ ಬೇಕಾಯಿತು. ನರ್ಸರಿ ಬೆಳೆಸಲೆಂದು ತೆಗೆದುಕೊಂಡ ಸಾಲವನ್ನು ಅವರು ಪಾವತಿಸದಾದರು.

ನರ್ಸರಿ ಸಾಕಾಣಿಕೆಯಲ್ಲಿನ ಗಂಡಾಂತರ ಮತ್ತು ಅನಿಶ್ಚಿತತೆಗಳ ಬಗ್ಗೆ ಮಾತನಾಡುತ್ತಾ ದೀಪಮ್ಮ ಅಂದರು ನರ್ಸರಿ ಕೆಲಸಗಳು ಬೇಸಿಗೆಯಲ್ಲಿ ಪ್ರಾರಂಭವಾಗುವುದರಿಂದ ಅನಿಮಿಯತವಾದ ವಿದ್ಯುತ್ ಪೂರೈಕೆಯ ಸಮಸ್ಯೆಯುಂಟಾಗುತ್ತದೆ. ಇದರಿಂದ ಸಸಿಗಳಿಗೆ ನೀರುಣಿಸುವುದು ತುಂಬಾ ತೊಂದರೆಗೊಳಗಾಗುತ್ತದೆ. (ಸಸಿಗಳಿಗೆ ನೀರುಣಿಸಲು ಕೊಳವೆ ಬಾವಿಗಳಿಂದ ಅಂತರ್ಜಲವನ್ನು ಮೇಲೆತ್ತಲು ಪಂಪ್ ಸೆಟ್‌ಗಳನ್ನು ಬಳಸಲಾಗುತ್ತದೆ) ಸಸಿಗಳು ಎಷ್ಟೊಂದು ಸೂಕ್ಷ್ಮ ಎಂದರೆ ಸಾಯಂಕಾಲದಲ್ಲಿ ತುಂಬಾ ಸೊಗಸಾಗಿ, ನವಿರಾಗಿ ಕಂಡುಬಂದರೂ ಮರುದಿನ ಬೆಳಿಗ್ಗೆ ರೋಗಕ್ಕೆ ತುತ್ತಾಗುವ ಸಾಧ್ಯತೆ ಇರುತದೆ.

ಈ ಕೆಲಸವು ಕಠಿಣವಾದ ಶ್ರಮವನ್ನು ನಿರೀಕ್ಷಿಸುತ್ತದೆ. ನರ್ಸರಿ ನಿರ್ಮಾಣದ ಸಮಯದಲ್ಲಿ ಅದು ಕಾವೇರಿ ಒಣಗುವ ಮೊದಲು ಬೆಳಗಿನ ಜಾವದಲ್ಲೆ ಎದ್ದು ಹೋಗಿ ಕೆಲಸ ಪೂರ್ಣ ಮಾಡಬೇಕು. ಪ್ರತಿವಾದಿ ಹೇಳುತ್ತಾರೆ - ಆ ಅವಧಿಯಲ್ಲಿ ಮನೆ ಕೆಲಸ ಮತ್ತು ಮಕ್ಕಳನ್ನು ಸಹ ಉಪೇಕ್ಷಿಸಲಾಗುತ್ತದೆ. ನಷ್ಟ ಸಂಭವಿಸಿದ್ದರಿಂದ ಅವರು ನರ್ಸರಿ ಬೆಳೆಸುವುದನ್ನು ನಿಲ್ಲಿಸಿದ್ದಾರೆ.

ಪ್ರತಿವಾದಿಯು (ದೀಪಮ್ಮ) ಮಹಿಳಾ ಸ್ವಸಾಹಯ ಗುಂಪು - ಇಲ್ಲಿ ಬಡ್ಡಿ ರಹಿತ 20,000 ರೂಗಳ ಸಾಲವನ್ನು ಪಡೆದು ಎರಡು ಹಸುಗಳನ್ನು ಕೊಂಡುಕೊಂಡರು. ಪ್ರಸ್ತುತ ಅವಳು ತಿಂಗಳಿಗೆ 400ರೂ ನಂತೆ ಸಾಲವನ್ನು ಮರು ಪಾವತಿ ಮಾಡುತ್ತಿದ್ದಾಳೆ. ಇದರ ಜೊತೆಗೆ ಹಾಲು ಮಾರಾಟದಿಂದ ಗಳಿಸಿದ ಹಣದಿಂದ ತನ್ನ ಮನೆಯ ಇತರೆ ಖರ್ಚು ವೆಚ್ಚಗಳನ್ನು ಭರಿಸಲು ಸಹ ಸಮರ್ಥಳಾಗಿದ್ದಾಳೆ. ಅವರು ಮತ್ತೆ ಹೇಳುತ್ತಾರೆ "ಇವೆರಡು ಹಸುಗಳು ಇಲ್ಲದಿದ್ದರೆ, ಈ ವರ್ಷ ನಾವು ಉಪವಾಸ ಇರಬೇಕಿತ್ತು, ಮಳೆ ಕೈಕೊಟ್ಟದ್ದರಿಂದ ನಾವು ಒಂದು ವೇಳೆ ತಂಬಾಕು ಕೃಷಿಯನ್ನು ಮುಂದುವರೆಸಿಕೊಂಡು ಹೋಗಿದ್ದರೂ ಯಾರೊಬ್ಬರು ನಮ್ಮ ಸಸಿಗಳನ್ನು ಕೊಳ್ಳುತ್ತಿರಲಿಲ್ಲ". ಈಗ ಅವಳು 800 ರೂಗಳ ವರಮಾನವನ್ನು ಪಡೆಯುತ್ತಾಳೆ. ಹೆಚ್ಚುವರಿಯಾಗಿ ತಮ್ಮ ಎರಡು ಎಕರೆ ಜಮೀನಿನಲ್ಲಿ ಬೆಳೆಯುವ ಮೆಕ್ಕೆಜೋಳಕ್ಕೆ ಗೊಬ್ಬರವನ್ನು ಪಡೆಯುತ್ತಾರೆ.

## 5. ಅಸ್ಥಿರವಾದ ವರಮಾನ, ಶಾಲೆಗೆ ಸಮಯವಿಲ್ಲ

ರೂಪ್ಲಾನಾಯ್ಕ 45 ವರ್ಷ ಹರೆಯದ ಪುರುಷ .ಹತ್ತನೆ ತರಗತಿವರೆಗೆ ಓದಿದ್ದಾನೆ. ತನ್ನ ಹೆಂಡತಿ ಮತ್ತು ನಾಲ್ಕು ಜನ ಹೆಣ್ಣು ಮಕ್ಕಳು ಬಹುತೇಕ ಎಲ್ಲ ಜವಾಬ್ದಾರಿಗಳನ್ನು ವಹಿಸಿಕೊಂಡರೂ ಕೂಡ, ಈತ ತಂಬಾಕು ಸಾಗುವಳಿಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಾನೆ. ಅವನ ತಾಯಿ, ಬಹುತೇಕ ಅವನ ತದ್ರೂಪಿಗಳು, ಮತ್ತು ಅವನ ಸಹೋದರನ ಮಗ ಎಲ್ಲರೂ ಅವಿದ್ಯಾವಂತರೇ , ಅನಕ್ಷರಸ್ಥರೇ. ತಂಬಾಕಿನ ಕೆಲಸಗಳನ್ನು ಮಾಡಲು ಶಾಲೆಯನ್ನು ಬಿಡಿಸಿದರು, (ಅವನ ಹಿರಿ ಮಗಳಂತೆ). ಅವರು ಹತ್ತು ಎಕರೆ ಜಮೀನನ್ನು ಹೊಂದಿದ್ದು ಅದರಲ್ಲಿ 4 ಎಕರೆ ತಂಬಾಕಿನ ಕೃಷಿಗೂ, ಪ್ರತಿ ಎರಡು ಎಕರೆಯನ್ನು ಕ್ರಮವಾಗಿ ಹತ್ತಿ, ಮೆಕ್ಕೆ ಜೋಳ, ಮತ್ತು ಭತ್ತ ಬೆಳೆಯಲು ಉಪಯೋಗಿಸುತ್ತಾರೆ. ಸಂಸ್ಕರಿಸುವ ಮತ್ತು ಸಾಗುವಳಿ ಮಾಡುವ ಸಂಪೂರ್ಣ ಪ್ರಕ್ರಿಯೆ ಬಗ್ಗೆ ಮಾತನಾಡುತ್ತಾ ಅವರು ಹೇಳುತ್ತಾರೆ.

"ಬ್ಯಾರನ್ ಬೆಂಕಿಯನ್ನು ಹತ್ತಿಸಿ ಮೊದಲ 24 ಗಂಟೆಗಳವರೆಗೆ 90 ಉಷ್ಣಾಂಶವನ್ನು ಕಾಪಾಡಿಕೊಂಡು ಬರಬೇಕು. ಮುಂದಿನ 24 ಗಂಟೆಗಳಲ್ಲಿ ಕ್ರಮೇಣವಾಗಿ ಉಷ್ಣಾಂಶ ತಾಪಮಾನವನ್ನು 200 ಡಿಗ್ರಿಗೆ ಹೆಚ್ಚಿಸಬೇಕು, ಏರಿಸಬೇಕು. ಮುಂದಿನ 24 ಗಂಟೆಗಳಲ್ಲಿ ಕ್ರಮೇಣವಾಗಿ ತಾಪಮಾನವನ್ನು ಕಡಿಮೆ ಮಾಡಲಾಗುತ್ತದೆ. ನಾಲ್ಕನೇ ದಿನ ದಿನ ತಂಬಾಕು ಯೋಗ್ಯಸ್ಥಿತಿಗೆ ಬರುವಂತಾಗಲು ಬೇಕಿಯನ್ನು ಆರಿಸಿ ಕುತ್ತಟ್ಟದಲ್ಲಿ ಬಿಡಲಾಗಿ, ನಂತರ 5ನೇ ಅಥವಾ 6 ನೇ ದಿನದಲ್ಲಿ ತೆಗೆಯುತ್ತಾರೆ ಒಂದು ಗಾಡಿ ಸೌದೆಯನ್ನು ತರಲು ವನ ಪಾಲಕರಿಗೆ ಕಟ್ಟಿಗೆಯ ಯೋಗ್ಯತೆಗೆ ತಕ್ಕಂತೆ 100-200 ರೂಗಳನ್ನು ಲಂಚವಾಗಿ ನೀಡುತ್ತಾರೆ".

ಕಳೆದ ಬಾರಿ ಬೆಲೆಗಳು ಇಳಿಮುಖವಾಗಿದ್ದರಿಂದ ಅವರು ಹೆಚ್ಚು ಲಾಭವನ್ನು ಪಡೆಯಲಿಲ್ಲ. ವಾಸ್ತವವಾಗಿ ಸ್ಥಳೀಯ ಲೇವಾದೇವಿಗಾರರಿಂದ ಪಡೆದ ಸಾಲವನ್ನು ತೀರಿಸಲಿಲ್ಲ. ಆದರೆ ಉತ್ತಮ ಬೆಲೆಗಳು ದೊರೆತರೆ, ಅವರು ಒಂದು ಎಕರೆಗೆ 6,000 ದಿಂದ 8,000 ರೂಗಳವರೆಗೆ ಲಾಭಂಶವನ್ನು ಗಳಿಸುತ್ತಾರೆ. ಅರಣ್ಯ ನಾಶದ ಬಗ್ಗೆ ಅವರಿಗೆ ಕಾಳಜಿಯಿಲ್ಲ. ಸ್ಥಿರವಾದ ವರಮಾನವನ್ನು ನೀಡಬಹುದಾದ ಇತರೆ ಧಾನ್ಯ ಬೆಳೆಗಳನ್ನು ವಿಸ್ತರಿಸುವ ಸಾಧ್ಯತೆಯು ಅವರ ಅನುಭವಕ್ಕೆ ಬಂದಂತೆ / ಸಂಭವಿಸಿದಂತೆ ಕಂಡುಬರುವುದಿಲ್ಲ.

## 6. ತಂಬಾಕು ಸಸಿಗಳನ್ನು ಜೋಪಾನ ಮಾಡುವುದು – ಅತಿಯಾದ ಒಂದು ಹೊರೆ

ಮುರುಗೇಶಪ್ಪ, ತನ್ನ ಎಪ್ಪತ್ತರಲ್ಲಿ, ಸಾಪೇಕ್ಷವಾಗಿ ವಿಸ್ತಾರವಾದ 22 ಎಕರೆ ಜಮೀನನ್ನು ಹೊಂದಿದನು. ಗೋಲ್ಡನ್ ಟುಬ್ಯಾಕೋ ಕಂಪನಿ (GBC) ಸಹಾಯದೊಂದಿಗೆ 1979 ರಲ್ಲಿ ಆತ ತಂಬಾಕು ಕೃಷಿಯನ್ನು ಪ್ರಾರಂಭಿಸಿದ. ತನ್ನ ಹಳ್ಳಿ ಸೌಳಂಗದಲ್ಲಿ ಆರು ತಂಬಾಕು ಕಂಪನಿಗಳ ಕಛೇರಿಗಳಿದ್ದವು. ಈ ಕಂಪನಿಗಳು ತಂಬಾಕು ಕೃಷಿಯನ್ನು ಕೈಗೊಳ್ಳುವಂತೆ ಪ್ರೇರೇಪಣೆ ಮಾಡಲು ದೊಡ್ಡ ದೊಡ್ಡ ಹಿಡುವಳಿದಾರರನ್ನು ಭೇಟಿ ಮಾಡುತ್ತಿದ್ದವು. ಅವರು ತಂಬಾಕು ಸಂಸ್ಕರಿಸಲು ಬೇಕಾದ ಕುತ್ತಟ್ಟವನ್ನು ನಿರ್ಮಿಸಲು ಬ್ಯಾಂಕ್ ಸಾಲಗಳ ವ್ಯವಸ್ಥೆ ಮಾಡುತ್ತಿದ್ದರು. ಹಾಗೂ ತಂಬಾಕು ಬೆಳೆಗಾರರಿಗೆ ಬೇಕಾದ ತಾಂತ್ರಿಕ ತಿಳುವಳಿಕೆ, ಮತ್ತು ತಂಬಾಕು ಸಂಸ್ಕರಣೆಗೆ ಬೇಕಾದ ಕಚ್ಚಾ ಉರುವಲು ಸಾಮಗ್ರಿಗಳನ್ನು ಸಹ ಒದಗಿಸುತ್ತಿದ್ದರು.

ಪ್ರತಿವಾದಿ ಮುರುಗೇಶಪ್ಪ ಹೇಳುತ್ತಾರೆ "ಭಾರತೀಯ ತಂಬಾಕು ಮಂಡಳಿ ಈ ಪ್ರದೇಶದಲ್ಲಿ ತಂಬಾಕು ವ್ಯಾಪಾರ ಮತ್ತು ಹರಾಜಿನ ಪ್ರಭುತ್ವವನ್ನು ಸಾಧಿಸುತ್ತದೆ. ಐಟಿಸಿಯು ಸಣ್ಣ ತಂಬಾಕು ಕಂಪನಿಗಳಾದ ಮಲ್ನಾಡ್ ತಂಬಾಕು ಕಂಪನಿ ಮತ್ತು ಅನೇಕ ಸ್ಥಳೀಯ ಕಂಪನಿಗಳನ್ನು ಮುಚ್ಚಿಸಿದೆ " ಎಂದು ಅವರು

ಆಪಾದಿಸುತ್ತಾರೆ. ಐಟಿಸಿಯು ಮಲ್ನಾಡ್ ಕಂಪನಿಗೆ ರೈತರನ್ನು ಭೇಟಿಯಾಗಿ ದೊಡ್ಡ ಪ್ರಮಾಣದ ತಂಬಾಕು ಕೃಷಿಯನ್ನು ಮಾಡುವಂತೆ ಪ್ರೋತ್ಸಾಹಿಸಿ ಮತ್ತು ಐಟಿಸಿಯು ಎಲ್ಲ ಉತ್ಪಾದನೆಗಳನ್ನು ಕೊಳ್ಳುತ್ತದೆ ಎಂಬ ಭರವಸೆ ನೀಡಿ ಎಂದು ಸಲಹೆ ಮಾಡಿದೆ. ಮಲ್ನಾಡ್ ಕಂಪನಿಯು ರೈತರಿಗೆ ಬೇಕಾದ ಮೂಲಭೂತ ಆವಶ್ಯಕತೆಗಳನ್ನು ಒದಗಿಸಲು ದೊಡ್ಡ ಮೊತ್ತದ ಬಂಡವಾಳವನ್ನು ತೊಡಗಿಸಿದೆ. ಆದೇನೆಯಾದರೂ ಐಟಿಸಿ ಮಾತ್ರ ತಂಬಾಕು ಉತ್ಪನ್ನಗಳನ್ನು ಖರೀದಿಸುವ ತನ್ನ ಕಟ್ಟು ಪಾಡನ್ನು ಗೌರವಿಸಲಿಲ್ಲ. ಇದರಿಂದ ಮಲ್ನಾಡ್ ಕಂಪನಿ ದಿವಾಳಿಯಾಗಿ ಅಂತಿಮವಾಗಿ ಮುಚ್ಚಿ ಹೋಯಿತು. ಇದರಿಂದ ರೈತರು ಹಾಳಾದರು. ತಮಗೆ ನೀಡಿದ ಚಿಕ್ಕುಗಳು ನಿಷ್ಪ್ರಯೋಜನವಾದ್ದರಿಂದ ಅನೇಕ ರೈತರು ಸಾಲದ ಶೂಲದಲ್ಲಿ ಸಿಕ್ಕಿ ಹಾಕಿಕೊಂಡರು.

ಮುರುಗೇಶಪ್ಪ ನಾಲ್ಕು ಎಕರೆ ಜಮೀನಿನಲ್ಲಿ ತಂಬಾಕು ಉಳುಮೆ ಮಾಡುತ್ತಿದ್ದರು. ಆದರೆ 1997ರಲ್ಲಿ ಅದನ್ನು ನಿಲ್ಲಿಸಿದರು. ಸಸಿಗಳನ್ನು ಪೋಷಿಸುವ ಮತ್ತು ಎಲೆಗಳನ್ನು ಬೇಯಿಸುವ ಮಹತ್ತರವಾದ ಜವಾಬ್ದಾರಿಯನ್ನು ಹೊರುವವರು ತನ್ನ ಕುಟುಂಬದಲ್ಲಿ ಇಲ್ಲವಾದರು. ಅವರು ಹೇಳುತ್ತಾರೆ, ತಂಬಾಕು ಸಂಸ್ಕರಣೆಯ ಸಮಯದಲ್ಲಿ ತೆಗೆದುಕೊಳ್ಳುವ ಕಾಳಜಿಯು ತೀವ್ರ ನಿಗಾ ಘಟದಲ್ಲಿರಿಸಿದ ರೋಗಿಯನ್ನು ಉಪಚರಿಸಲು ತೆಗೆದುಕೊಂಡ ಕಾಳಜಿಯಂತಿರುತ್ತದೆ.

ತಂಬಾಕು ಕೃಷಿಯಲ್ಲಿ ಆತನಂತ ದೊಡ್ಡ ಹಿಡುವಳಿದಾರರು ಸುಮಾರು ಶೇ 25-30ರಷ್ಟು ಅಂಚಿನ ಆದಾಯವನ್ನು ಪಡೆಯುತ್ತಾರೆ. ಮೂರು ತಿಂಗಳ ನಿರಂತರವಾದ ಕೆಲಸದಿಂದ ಕಾರ್ಮಿಕರೂ ಪ್ರಯೋಜನ ಪಡೆಯುತ್ತಾರೆ. ಆದರೆ ದೀರ್ಘಕಾಲದ ಶ್ರಮದಿಂದ ಉಂಟಾದ ದಣಿವು ಮತ್ತು ಕಾಯಿಲೆಯು ಅವರ ಸಂಪಾದನೆಯನ್ನು ಬಸಿದು ಹಾಕುತ್ತದೆ.

## 7. ಕುತ್ತಟ್ಟ ಸಂಸ್ಕರಣೆ – ದುಬಾರಿ ಮತ್ತು ಅತಿ ದಹನಶೀಲವಾದದ್ದು

ಶಂಕರಪ್ಪ 1978ರಲ್ಲಿ ತಂಬಾಕು ಕೃಷಿ ಪ್ರಾರಂಭಿಸಿದರು. ಕುತ್ತಟ್ಟವನ್ನು ನಿರ್ಮಿಸಲು ಮಲ್ನಾಡ್ ಕಂಪನಿಯು ಅವರಿಗೆ 25,000 ರೂಗಳ ಬ್ಯಾಂಕ್ ಸಾಲ ಪಡೆಯಲು ಸಹಾಯಮಾಡಿತು. ಶಂಕರಪ್ಪ 20 ಎಕರೆ ಜಮೀನನ್ನು ಹೊಂದಿದ್ದು ಆದರಲ್ಲಿ 4-5 ಎಕರೆ ಜಮೀನನ್ನು ತಂಬಾಕು ಕೃಷಿಗೆ ಬಳಸಲಾಯಿತು. ಕೆಲವು ಸಾರಿ 6-7 ಎಕರೆಯ ಜಮೀನಲ್ಲಿ ಈ ಕೃಷಿ ಮಾಡಲು ಪ್ರಯತ್ನಿಸಿದರು. ಆದರೆ ಒಂದೇ ಕುತ್ತಟ್ಟ ಇಷ್ಟೆಲ್ಲ ತಂಬಾಕು ಉತ್ಪನ್ನಗಳನ್ನು ಸಂಸ್ಕರಿಸಲು ಆಗದ್ದರಿಂದ ಅದು ಸಮಸ್ಯೆಯನ್ನುಟುಮಾಡಿತು. ಗರಿಷ್ಟ ಮಟ್ಟದ ತಂಬಾಕು ಕೃಷಿಯು 4 ಎಕರೆಗೆ ಸೀಮಿತವಾಗಿರಬೇಕು. ಹಾಗಾದರೆ ಬೆಳೆದ ಎಲ್ಲ ತಂಬಾಕು ಉತ್ಪನ್ನಗಳನ್ನು ಒಂದೇ ಕುತ್ತಟ್ಟದಲ್ಲಿ ಸಂಸ್ಕರಿಸಬಹುದು. ಏಕೆಂದರೆ ನಾಲ್ಕು ಎಕರೆಯಿಂದ ಉತ್ಪಾದಿಸಿದ ತಂಬಾಕನ್ನು ಸುಮಾರು 30-40 ಕ್ವಿಂಟಾಲ್ 10 ಬಾರಿ ಕುತ್ತಟ್ಟದಲ್ಲಿ ಸಂಸ್ಕರಿಸಬೇಕಾಗುತ್ತದೆ. ಕೃಷಿ ಪ್ರದೇಶವನ್ನು ವಿಸ್ತರಿಸುವುದರಿಂದ ಹೆಚ್ಚು ಕುತ್ತಟ್ಟಗಳನ್ನು ನಿರ್ಮಿಸಲು ಹೆಚ್ಚು ಹಣವನ್ನು ಹೂಡಬೇಕಾಗುತ್ತದೆ.

ಬೀಜವನ್ನು ಬಿತ್ತುವ ಮೊದಲು ಅವರು ಭೂಮಿಯನ್ನು ಸುಮಾರು 8 ಬಾರಿ ನೇಗಿಲ ಉಳುಮೆ ಮಾಡಬೇಕು. ತಂಬಾಕು ಸಾಗುವಳಿ ಪ್ರಕ್ರಿಯೆಯು, ಈ ಪ್ರದೇಶದಲ್ಲಿ ಮಳೆಯನ್ನೇ ಅವಲಂಬಿಸಿದೆ. ಬಿತ್ತುವ ಮೊದಲು ಮಣ್ಣನ್ನು ಸಡಿಲಗೊಳಿಸಿ ಸಾಲುಗಳನ್ನು ಹೊಡೆಯಲಾಗುತ್ತದೆ. ಎಲ್ಲ ಮಣ್ಣಿನ ಹೆಂಟೆಗಳನ್ನು ಚನ್ನಾಗಿ ಸಣ್ಣಗೆ ಪುಡಿ ಮಾಡುತ್ತಾರೆ. ಈ ಕೆಲಸಕ್ಕಾಗಿ ಸುಮಾರು 25-30 ಕಾರ್ಮಿಕರು ಬೇಕಾಗುತ್ತಾರೆ. ಒಳ್ಳೆಯ ಇಳುವರಿಗಾಗಿ ತಂಬಾಕು ಕೃಷಿಗಾಗಿ ಬಳಸಿದ ಭೂಮಿಯನ್ನು ಪ್ರತಿವರ್ಷ ಬದಲಾಯಿಸುತ್ತಾರೆ. ಇನ್ನೂ ಹೆಚ್ಚಿನ ಲಾಭಾಂಶಕ್ಕಾಗಿ ಹೆಚ್ಚು ಹಿಡುವಳಿಗಳ ಅವಶ್ಯಕತೆಗಳನ್ನೂ ಮಾಡಿಕೊಳ್ಳುತ್ತಾರೆ. ಒಂದು ಸುತ್ತು ಬ್ಯಾರ್‌ನಲ್ಲಿ

ತಂಬಾಕು ಸಂಸ್ಕರಣೆ ಮಾಡಲು ಸುಮಾರು ಒಂದು ಟ್ರಾಕ್ಟರ್‌ಗಳ ನಷ್ಟು ಸೌದೆ ಬೇಕಾಗುತ್ತದೆ. 4-5 ಎಕರೆಯಲ್ಲಿ ಬೆಳೆದ ಎಲೆಗಳನ್ನು ಕಟ್ಟಲು ಸುಮಾರು 700 ಮರದ ಕೋಲುಗಳು ಬೇಕಾಗುತ್ತವೆ. ತಂಬಾಕು ಎಲೆಗಳನ್ನು ಕೂಲಿಗೆ ಕಟ್ಟಿ ಬ್ಯಾನರ್‌ನಲ್ಲಿ ನೇತು ಹಾಕುತ್ತಾರೆ. ಕೆಳಗೆ ಮರದ ದಿಮ್ಮಿಗಳು ಉರಿದು ತಂಬಾಕು ಸಂಸ್ಕರಣೆಗೆ ಬೇಕಾದ ತಾಪವನ್ನು ಒದಗಿಸುತ್ತದೆ. ರೈತರು ಮೊದಲು ಕಟ್ಟಿಗೆ ಮತ್ತು ಮರದ ಕೋಲುಗಳನ್ನು ಹೊಸ ಜೋಗದ ಅರಣ್ಯದಿಂದ ತರುತ್ತಿದ್ದರು. ಅರಣ್ಯಗಳನ್ನು ಅತಿಯಾಗಿ ಕೊಳ್ಳೆ ಹೊಡೆದಿದ್ದರಿಂದ ಸೌದೆಗಳು ದೊರೆಯುವುದು ತುಂಬ ವಿರಳವಾಗಿದೆ ಎನ್ನುತ್ತಾರೆ. ರಂಗಪ್ಪ, ಶಂಕರಪ್ಪ ಹೇಳುತ್ತಾರೆ - ಕಳೆದ ಮೂರು ನಾಲ್ಕು ವರ್ಷಗಳಲ್ಲಿ ಸೌದೆ ಲಭ್ಯವಿದ್ದರೂ, ಅವುಗಳನ್ನು ಕಾಡಿನಿಂದ ಸಾಗಿಸುವುದು ತುಂಬಾ ಕಷ್ಟ. ಏಕೆಂದರೆ ಹಳ್ಳಿ ಅರಣ್ಯ ಸಮಿತಿಗಳು ಈ ಅರಣ್ಯಗಳನ್ನು ಕಾವಲು ಕಾಯುತ್ತಿವೆ. ಮೊದಲು ಅರಣ್ಯ ಪಾಲಕರಿಗೆ ಲಂಚ ನೀಡಬೇಕಿತ್ತು. ಈಗ ಅವರಿಗೆ ದಾಟಬೇಕಾದ ಹೆಚ್ಚುವರಿ ಅಡೆತಡೆಗಳಿವೆ.

1997ರಲ್ಲಿ ತನ್ನ ಕುತ್ತಟ್ಟ ಸುಟ್ಟಾಗ ಶಂಕರಪ್ಪ ತಂಬಾಕು ಕೃಷಿಯನ್ನು ನಿಲ್ಲಿಸಿದರು. ಅವರು ಪ್ರತಿವಾದಿಸುವುದನೆಂದರೆ - ತಂಬಾಕು ಕೃಷಿ ಒಂದು ಲಾಭದಾಯಕ ಉದ್ಯಮ ಅದನ್ನು ಪುನಃ ಪ್ರಾರಂಭಿಸಬೇಕು. 30,000 ರಿಂದ 40,000 ರೂಗಳ ವೆಚ್ಚದಲ್ಲಿ ಪುನಃ ನಿರ್ಮಿಸಬಹುದಾದ ಕುತ್ತಟ್ಟಕ್ಕೆ ಸಾಕಾಗುವಷ್ಟು ವರಮಾನವನ್ನು ಅವರು ಗಳಿಸಿಲ್ಲವೆಂಬಂತೆ ಕಾಣುತ್ತದೆ.

ಪ್ರಸ್ತುತ ಆತನ ಕುಟುಂಬವು 9 ಎಕರೆಯಲ್ಲಿ ಮೆಕ್ಕೆ ಜೋಳವನ್ನು ಎರಡು ಎಕರೆಯಲ್ಲಿ ಸೇಂಗಾವನ್ನು ಮತ್ತು ಎರಡು ಎಕರೆಗೆ ಅಡಿಕೆ ಕಟ್ಟಿದ್ದಾರೆ. ಕಳೆದ ಬಾರಿ ಅವರು 9 ಕ್ವಿಂಟಾಲ್ ರಾಗಿ ಇಳುವರಿ ಪಡೆದರು ಪ್ರತಿ ಕ್ವಿಂಟಾಲ್‌ಗೆ 250 ರೂಗಳು 1 ಕ್ವಿಂಟಾಲ್‌ಗೆ 1250 ರೂ ನಂತೆ 16 ಕ್ವಿಂಟಾಲ್ ಸೇಂಗಾವನ್ನು, 1 ಕ್ವಿಂಟಾಲ್‌ಗೆ 400 ರೂನಂತೆ 82 ಕ್ವಿಂಟಾಲ್ ಮೆಕ್ಕ ಜೋಳವನ್ನು ಬೆಳೆದರು. ಅವರು ಕಳೆದ ಬಾರಿ (ವರ್ಷ)15,000 ರೂಗಳ ಲಾಭಾಂಶವನ್ನು ಪಡೆದರಂತೆ.

## 8. ತಂಬಾಕಿನಿಂದ ಕಬ್ಬಿನೆಡೆಗೆ

ಶಂಕರಪ್ಪ 55 ವರ್ಷ ವಯಸ್ಸಿನ ಅನಕ್ಷರಸ್ಥ. ಆತನ ಎರಡು ಮಕ್ಕಳು ಕೆಲವು ವರ್ಷಗಳ ಹಿಂದೆ ಶಾಲೆ ಬಿಟ್ಟರು. ಆದರೆ ತಮ್ಮ ಮೊಮ್ಮಕ್ಕಳು ಮಾತ್ರ ಶಾಲೆಗೆ ಹೋಗುವುದನ್ನು ಮುಂದುವರೆಸಿದವು. ಅಡಿಕೆ ಮತ್ತು ಭತ್ತದೊಂದಿಗೆ ತಂಬಾಕನ್ನು ಬೆಳೆಯುತ್ತಿದ್ದ ಶಂಕರಪ್ಪ, ಈಗ ತಂಬಾಕಿನಿಂದ ಕಬ್ಬಿನೆಡೆಗೆ ಹೋಗುತ್ತಿದ್ದಾರೆ / ಸಾಗುತ್ತಿದ್ದಾರೆ.

ತಾನು ತಂಬಾಕು ಬೆಳೆಯನ್ನು ಕೈಬಿಟ್ಟ ಕಾರಣವೇನೆಂದು ಕೇಳಿದ ಪ್ರಶ್ನೆಗೆ ಶಂಕರಪ್ಪ ಉತ್ತರಿಸುತ್ತಾರೆ "ನಮ್ಮ ಮನೆಯಲ್ಲಿ ಜವಾಬ್ದಾರಿ ತೆಗೆದುಕೊಂಡು ತಂಬಾಕು ಕೃಷಿ ಮಾಡುವವರು ಯಾರು ಇಲ್ಲ. ಅದಕ್ಕೆ ತೀವ್ರ ನಿಗಾ ಹೆಚ್ಚು ಬಂಡವಾಳ ಹಾಗೂ ಹೆಚ್ಚು ಜವಾಬ್ದಾರಿ ಬೇಕಾಗುತ್ತದೆ. ತಂಬಾಕು ಬೇಯಿಸಲು ಮೊದಲಿನಂತೆ ಅನಾಯಸವಾಗಿ ಕಟ್ಟಿಗೆ ದೊರೆಯುತ್ತಿಲ್ಲ. ಮೊದಲು ನಾವು ಹತ್ತಿರದ ಅರಣ್ಯದಿಂದ ಸೌದೆಯನ್ನು ತರುತ್ತಿದ್ದವು. ಆದರೆ ಈಗ VFC ಯವರು ತಮ್ಮ ಕಾವಲು ಇರುವ ಅರಣ್ಯ ಪ್ರದೇಶದಲ್ಲಿ ಮರ ಕಡಿಯಲು ಅವಕಾಶ ಕೊಡುವುದಿಲ್ಲ".

## 9. ಮೆಕ್ಕೆ ಜೋಳ - ತಂಬಾಕಿನಷ್ಟೆ ಲಾಭದಾಯಕ ಮತ್ತು ಅರಣ್ಯಗಳಿಗೆ ಉತ್ತಮ

ವೆಂಕಟಪ್ಪ 40 ವರ್ಷ ವಯಸ್ಸಿನ ಪುರುಷ . ತನ್ನ ಹೆಂಡತಿ, ಮೂರು ಹೆಣ್ಣು, ಒಂದು ಗಂಡು ಮಕ್ಕಳೊಂದಿಗೆ ಜೀವಿಸುತ್ತಾನೆ. ತನ್ನೆಲ್ಲ ಮಕ್ಕಳು ಓದುತ್ತಿದ್ದಾರೆ. ತನ್ನ 17 ವರ್ಷದ ಮಗಳು ಸಹ. ಗಮನೀಯವಾದ ಒಂದು ವಿಷಯವೆಂದರೆ ಆತನ ಹೆಂಡತಿ ಅನಕ್ಷರಸ್ಥೆ. ವೆಂಕಟಪ್ಪ 8.5 ಎಕರೆ ಜಮೀನನ್ನು ಹೊಂದಿದ್ದು ಅದರಲ್ಲಿ ಭತ್ತ, ಹತ್ತಿ, ಮೆಕ್ಕೆ ಜೋಳ ಬೆಳೆಯುತ್ತಾನೆ. ವೆಂಕಟಪ್ಪ 1978ರಲ್ಲಿ ತಂಬಾಕು ಕೃಷಿಯನ್ನು ಪ್ರಾರಂಭಿಸಿದರು. 3-5 ಎಕರೆ ಪ್ರದೇಶದಲ್ಲಿ ಬೆಳೆದ ಎಲೆಗಳನ್ನು ಬೇಯಿಸಲು ಅರಣ್ಯದಿಂದ ಸುಮಾರು 30 ಗಾಡಿ ಸೌದೆಯನ್ನು ತರುತ್ತಿದ್ದರಂತೆ.

ತನ್ನ ತಂಬಾಕು ಬೆಳೆಯುವ ದಿನಗಳನ್ನು ನೆನಪಿಸುತ್ತಾ ವೆಂಕಟಪ್ಪ ನಮಗೆ ಹೇಳಿದರು - "ತಂಬಾಕು ಬೇಯಿಸಲು ನಾನು ಮತ್ತು ನಾಲ್ಕು ಜನ ಕಾರ್ಮಿಕರು ಪ್ರತಿವರ್ಷ 30 ಟನ್‌ಗಳಷ್ಟು ಸೌದೆಯನ್ನು ತರುತ್ತಿದ್ದೆವು. ಈಗ ವನಪಾಲಕರು ಮರಗಳನ್ನು ಕಡಿಯಲು ನಮ್ಮೊಂದಿಗೆ ಸಹಕರಿಸುವುದಿಲ್ಲ. ಮೊದಲು 2 ಕಿ.ಮೀ. ದೂರದಲ್ಲಿರುವ ಅರಣ್ಯದಿಂದ ಗಾಡಿಗೆ 100-150 ರೂ ಲಂಚಕೊಟ್ಟು ತರುತ್ತಿದ್ದೆವು. ಇವತ್ತಿನ ದಿನ 10 ಕಿ.ಮೀ ದೂರದವರೆಗೆ ಹೋದರೂ ನಮಗೆ ಸಾಕಷ್ಟು ಸೌದೆ ದೊರೆಯುವುದಿಲ್ಲ. ತಂಬಾಕು ಬೆಳೆಯಿಂದ ನಮ್ಮ ಕಾಡುಗಳು ನಾಶವಾಗಿದೆ. ತಂಬಾಕು ಮಂಡಳಿಗಳು ಬರುವುದಕ್ಕಿಂತ ಮುಂಚೆ ಕಂಪನಿಗಳು ನಮಗೆ ತಂಬಾ ಸಹಾಕಾರಿಯಾಗಿದ್ದವು. ಹಾಗೂ ನಮಗೆ ತಂಬಾಕು ಬೇಯಿಸಲು ಇದ್ದಿಲನ್ನು ಒದಗಿಸುತ್ತಿದ್ದರು. ಆದರೆ ಇವತ್ತು ಸೌದೆಗಾಗಿ ನಾವು ಸಂಪೂರ್ಣ ಕಾಡನ್ನೇ ಅವಲಂಬಿಸಬೇಕಾಗಿದೆ".

ಸುಮಾರು ನಾಲ್ಕು ವರ್ಷದ ಹಿಂದೆ ವೆಂಕಟಪ್ಪನ ಕುಟುಂಬದವರು ತಂಬಾಕು ನಿಲ್ಲಿಸಿದರು. ತಂಬಾಕು ಕೃಷಿಯನ್ನು ನಿಲ್ಲಿಸಿದಕ್ಕೆ ಕಾರಣಗಳನ್ನು ನೀಡುತ್ತಾ ಹೇಳುತ್ತಾರೆ - ಐದು ವರ್ಷದ ಹಿಂದೆ ಅವರು ತಂಬಾಕು ಕೃಷಿಗೆ ಸುಮಾರು 20,000ರೂಗಳನ್ನು ಖರ್ಚು ಮಾಡಿದರು . ಆದರೆ, ಕೇವಲ 12,000ರೂಗಳ ಪ್ರತಿಫಲವನ್ನು ಪಡೆದು ಸಾಲಗಾರರಾದರು. ಅವರು ನಾಲ್ಕು ಎಕರೆ ತಂಬಾಕಿನಿಂದ 14,000ರೂ ಲಾಭಾಂಶವನ್ನು ಪಡೆಯುತ್ತಿದ್ದರೆ, ಈ ವರ್ಷ ಅದೇ ನಾಲ್ಕು ಎಕರೆಯಲ್ಲಿ ಬೆಳೆದ ಮೆಕ್ಕೆ ಜೋಳದಿಂದ 12,000 ರೂ ಲಾಭವನ್ನು ಮಾಡಿಕೊಂಡರು.

## 10. ಅಪರಾಧಿ ಮನೋಭಾವದಿಂದ ಸ್ವತಂತ್ರ

ನಿತೀಶ್ ಎಂಬುವರು 33 ವರ್ಷ ಹರೆಯದ ಆರು ಎಕರೆ ಜಮೀನನ್ನು ಹೊಂದಿರುವ ರೈತ. ತನ್ನ ಆರು ಎಕರೆಯನ್ನು ಗೇಣಿಗೆ ನೀಡಿರುತ್ತಾನೆ. ಪ್ರಾರಂಭದಲ್ಲಿ ಈತ ನಾಲ್ಕು ಎಕರೆಯಲ್ಲಿ ತಂಬಾಕು ಬೆಳೆದನು, ನಂತರ ತಂಬಾಕು ಕೃಷಿಯನ್ನು ಆರು ಎಕರೆ ಪ್ರದೇಶಕ್ಕೆ ವಿಸ್ತರಿಸಿದ, ಆದರೆ ಆತನ ವರಮಾನವು ಕಳೆದ ವರ್ಷದ ಲಾಭಾಂಶಕ್ಕಿಂತ ಕಡಿಮೆಯಾಗಿತ್ತು. ಆದ್ದರಿಂದ ಆತನು ಕಳೆದ ವರ್ಷ ನಾಲ್ಕು ಎಕರೆ ತಂಬಾಕು, ಉಳಿದ ಹೊಲದಲ್ಲಿ ರಾಗಿ ಮತ್ತು ಮೆಕ್ಕೆ ಜೋಳ ಬೆಳೆದನು. ತಂಬಾಕು ಕೃಷಿಯಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತದೆ ಎಂಬುದನ್ನು ನಿತೀಶ್ ಮನಗಂಡಿದ್ದಾರೆ.

ಎರಡು ವರ್ಷದ ತಂಬಾಕು ಕೃಷಿಯ ನಂತರ ಅನೇಕ ಕಾರಣಗಳಿಂದಾಗಿ ಈ ಕೃಷಿಯನ್ನು ನಿಲ್ಲಿಸಿದರು. ಸ್ವಂತ ಕುತ್ತಟ್ಟ ಇಲ್ಲದಿರುವುದು ಈ ಕಾರಣಗಳಲ್ಲಿ ಸೇರಿತ್ತು. ಆದ್ದರಿಂದ ಅವರು ಭೂಮಿಯನ್ನು ಗುತ್ತಿಗೆಗೆ ಕೊಡಬೇಕಾಯಿತು. ಮತ್ತೊಂದು ಕಾರಣವೆಂದರೆ ನಿತೀಶ್ ತನ್ನ ಹಳ್ಳಿಯ ವಿ.ಎಫ್.ಸಿ. ಕಮಿಟಿಯ

ಅಧ್ಯಕ್ಷನಾಗಿದ್ದ. ಆತ ವಿವರಿಸುವುದನೆಂದರೆ ಇತರರು ಸೌದೆ ಕಳ್ಳತನ ಮಾಡುವುದನ್ನು ಪ್ರತಿರೋಧಿಸಿದ ಮೇಲೆ ತಾನು ಅದೇ ಕಳ್ಳತನದ ಕಾರ್ಯ ಮಾಡುವುದು ನ್ಯಾಯ ಸಮ್ಮತವಲ್ಲವೆಂದು ಭಾವಿಸಿದ. ಇನ್ನೊಂದು ಕಾರಣವನ್ನು ಸಹ ಆತ ಕೊಡುತ್ತಾನೆ. ಅನೇಕ ಜನ ಕೂಲಿಕಾರರು ಅತ್ಯಂತ ಕಡಿಮೆ ಪ್ರಮಾಣದ ಹಣವನ್ನು ಪಡೆದು, ತಂಬಾಕು ಸಂಸ್ಕರಣೆಯ ಕಾಲದಲ್ಲೆ ಇಲ್ಲವೇ ಅದು ಮುಗಿದ ನಂತರ ಕಾಯಿಲೆಗೆ ತುತ್ತಾಗುತ್ತಾರೆ. ಇದು ಸಹ ಆತ ತಂಬಾಕು ಕೃಷಿ ಕೈಬಿಡಲು ಒಂದು ಕಾರಣವಾಗಿದೆ. ಈ ವಿಚಾರವು ತಾನು ತಂಬಾಕು ಕೃಷಿ ಮಾಡುತ್ತಿದ್ದಾಗ ಆತನ ತಲೆಭಾರವಾಗಿ ಪರಿಣಮಿಸುತ್ತಿತ್ತು. ಈಗ ತಾನೂ ಆ ತೆರನಾದ ಅಪರಾಧಿ ಮನೋಭಾವನೆಗಳಿಂದ ಮುಕ್ತನಾಗಿದ್ದೆನೆಂದು ಹೇಳುತ್ತಾರೆ. ಪ್ರಸ್ತುತ ಆತ ತನ್ನ ಎಲ್ಲ ಹನ್ನೆರಡು ಎಕರೆಯಲ್ಲಿ ಜೋಳ ಬೆಳೆಯುತ್ತಿದ್ದಾನೆ. ಏಕೆಂದರೆ ಅದು ಕಡಿಮೆ ಶ್ರಮದಾಯಕ ಕಡಿಮೆ ಕಾಳಜಿ, ಕಡಿಮೆ ಮಳೆಯಾಧಾರಿತ ಮತ್ತು ಸಂಪೂರ್ಣ ಲಾಭದಾಯಕವಾದದ್ದು.

## *11. ತಂಬಾಕು ಪರಿಶ್ರಮದ ಆರೋಗ್ಯ ಮೌಲ್ಯಗಳು*

ನವಕ್ಕ 37 ವರ್ಷ ವಯಸ್ಸಿನ ಅನಕ್ಷರಸ್ಥ ಮಹಿಳಾ ಕೂಲಿಕಾರರು. ಅವಳದು ಸಮಯನೂಸಾರವಾದ ಕೆಲಸ. ತಂಬಾಕಿನ ಋತುಗಳಲ್ಲಿ ತಂಬಾಕು ಹೊಲಗಳಲ್ಲಿ ಕೆಲಸ ಮಾಡುತ್ತಾಳೆ. ವರ್ಷದ ಇತರೆ ಋತುಗಳಲ್ಲಿ ಇತರೆ ಹೊಲಗಳಲ್ಲಿ ಅಥವಾ ಮನೆಗಳಲ್ಲಿ ಕೆಲಸಮಾಡುತ್ತಾಳೆ. ಋತುಮಾನ ಮತ್ತು ಕೆಲಸಕ್ಕೆನುಗುಣವಾಗಿ ಅವಳು ದಿನ ಒಂದಕ್ಕೆ 30-40 ರೂಗಳ ಸಂಪಾದನೆಯನ್ನು ಮಾಡುತ್ತಾಳೆ. ಅವಳಿಗೆ ಜಮೀನಿಲ್ಲ. ಅವಳ ಗುಡಿಸಲು ಸಹ ಬೇರೆಯವರ ಜಾಗದಲ್ಲಿ ನಿರ್ಮಿಸಲಾಗಿದೆ. ಅವರ ಮನೆಯಲ್ಲಿ ಐದು ಜನರಿದ್ದಾರೆ. ಅವಳ ಗಂಡ ಒಬ್ಬ ಅನಕ್ಷರಸ್ಥ ಕಾರ್ಮಿಕ. ಅವನು ವರ್ಷ ಒಂದಕ್ಕೆ ಸುಮಾರು 5,250 ರೂಗಳನ್ನು ಗಳಿಸುತ್ತಾನೆ. ಅವಳ ಮೂವರು ಮಕ್ಕಳು ಸಹ ಅನಕ್ಷರಸ್ಥ ಕಾರ್ಮಿಕರಾಗಿದ್ದು ದಿನಕ್ಕೆ 30 ರೂನಂತೆ ಸಂಪಾದಿಸುತ್ತಾರೆ. ನವಕ್ಕ 12 ವರ್ಷದವಳಾಗಿದ್ದಾಗಲೆ ತಂಬಾಕು ಹೊಲಗಳಲ್ಲಿ ಮತ್ತು ಸಂಸ್ಕರಣ ಘಟಕಗಳಲ್ಲಿ ಕೆಲಸ ಮಾಡಲು ಪ್ರಾರಂಭಿಸಿದಳು. ತಂಬಾಕಿನ ಪೂರ್ಣ ಶ್ರೇಣಿಯ ನೈಪುಣ್ಯತೆಯ ಕೆಲಸಗಳಾದ ಸಸಿ ನೆಡುವುದು, ಕಳೆ ತೆಗೆಯುವುದು, ಮಡಿ ಮಾಡುವುದು ಮತ್ತು ನಿರ್ವಹಿಸುವುದು, ಎಲೆಗಳನ್ನು ಕೀಳುವುದು, ಕಟ್ಟುವುದು, ಗ್ರೇಡಿಂಗ್ ಆಗಿ ಒಣಗಿದ ನಂತರ ಎಲೆಗಳನ್ನು ತೆಗೆಯುವುದು, ಮುಂತಾದ ಕೆಲಸಗಳನ್ನು ಅವಳು ಚೆನ್ನಾಗಿ ತಿಳಿದುಕೊಂಡಿದ್ದಾಳೆ. ಅವಳು ಗಿಡ ನೆಡುವ ದಿನಗಳಲ್ಲಿ ದಿನಕ್ಕೆ 40 ರೂಗಳು, ಇತರೆ ದಿನಗಳಲ್ಲಿ 30 ರೂಗಳನ್ನು ಗಳಿಸುತ್ತಾಳೆ.

ತಂಬಾಕು ಕೀಳುವ ದಿನಗಳು ತುಂಬ ಬಿರುಸಿನಿಂದ ಕೂಡಿರುತ್ತವೆಂದು ನವಕ್ಕ ಹೇಳುತ್ತಾಳೆ. ಕಾಫಿ ವಿರಾಮಗಳನ್ನು ಹೊರತು ಪಡಿಸಿ ಅವರು ಬೆಳಿಗ್ಗೆ 7 ರಿಂದ ಸಾಯಂಕಾಲ 7 ಗಂಟೆಯವರೆಗೆ ನಿರಂತರವಾಗಿ ಕೆಲಸ ಮಾಡುತ್ತಾರೆ. ಬೆಳಿಗ್ಗೆ 10 ಗಂಟೆಯವರೆಗೆ ಎಲೆ ಬಿಡಿಸುವ ಕೆಲಸ, ನಂತರ ವಾಹನಕ್ಕೆ ತುಂಬಿ, ಮಾಲೀಕರ ಮನೆಗೆ ತರುವುದು ಮತ್ತು 10-12 ಎಲೆಗಳಿರುವ ಗೊಂಚಲನ್ನು ಕಟ್ಟುವುದು. ತದನಂತರ ಈ ಗೊಂಚಲುಗಳನ್ನು ಕೋಲುಗಳಿಗೆ ಕಟ್ಟಿ ಕುತ್ತಟ್ಟದಲ್ಲಿ ಬೇಯಿಸಲಾಗುತ್ತದೆ. ಈ ಕೆಲಸವನ್ನು ಮಹಿಳೆಯರು ಮಾತ್ರವೇ ಮಾಡುವುದು - ಏಕೆಂದರೆ ಈ ಕೆಲಸಕ್ಕೆ ಬೇಕಾದ ನೈಪುಣ್ಯತೆ ಮತ್ತು ಸಹನೆಯನ್ನು ಅವರು ಹೊಂದಿರುತ್ತಾರೆ. ನಂತರ ಗಂಡಸರು ಕೋಲುಗಳನ್ನು ಕುತ್ತಟ್ಟಕ್ಕೆ ಕೊಂಡ್ಯೊಯುತ್ತಾರೆ ಸಂಸ್ಕರಣೆಯ ನಂತರ ಮಹಿಳಾ ಕಾರ್ಮಿಕರು ಜಾಗರೂಕತೆಯಿಂದ ಈ ಎಲೆಗಳನ್ನು ಬಿಚ್ಚಿ ಉಗ್ರಾಣದಲ್ಲಿಡುತ್ತಾರೆ. ಪ್ರವಣತೆ (ಗ್ರೇಡಿಂಗ್) ಯನ್ನು ನಿರಾಕರಿಸುತ್ತಾರೆ. ಏಕೆಂದರೆ ಈ ಕೆಲಸಕ್ಕಾಗಿ ದಿನದ ಕೊನೆಯವರೆವಿಗೂ ಕುಳಿತು ಕೊಳ್ಳಬೇಕಾಗುತ್ತದೆ. (ಮತ್ತು ಕೆಲವು ಸಮಯ ರಾತ್ರಿಯ ವೇಳೆಯಲ್ಲೂ).

ಪ್ರತಿ ತಂಬಾಕಿನ ಋತುಮಾನದಲ್ಲಿ ನವಕ್ಕ ಆಯಾಸ, ಕಾಲು ನೋವು, ಬೆನ್ನು ನೋವು, ತಲೆಶೂಲೆ, ಪದೇ ಪದೇ ವಾಂತಿ ಮಾಡುವುದು ಮುಂತಾದವುಗಳಿಂದ ನರಳುತ್ತಾಳೆ. ಅವಳು ರಕ್ತಹೀನತೆಯಿಂದ ಬಳಲುತ್ತಿದ್ದಾಳೆಂದು ವೈದ್ಯರು ಹೇಳಿದ್ದಾರೆ, ಆದಕ್ಕಾಗಿ ಅವಳಿಗೆ ಮಾತ್ರೆ ಮತ್ತು ಪುಷ್ಟಿವರ್ಧಕಗಳನ್ನು ನೀಡಿದ್ದಾರೆ ಪ್ರತಿ ತಂಬಾಕು ಋತುಗಳಲ್ಲಿ ಕಾರ್ಮಿಕರು ಕಾಯಿಲೆ ಬೀಳುವುದು, ವೈದ್ಯರಿಗೆ ಔಷಧಗಳಿಗೆ ಹಣ ಖರ್ಚು ಮಾಡುವುದು ಒಂದು ನಿಯಮಿತ ಲಕ್ಷಣವಾಗಿದೆ. ನವಕ್ಕ ನಮಗೆ ಹೇಳಿದಳು - ಅವಳು ತನ್ನ ಮಕ್ಕಳಿಗೆ ಗ್ರೇಡಿಂಗ್ ಮಾಡುವುದನ್ನು ಕಲಿಸಿಕೊಡಲು ಬಯಸಿದಳು ಆದರೆ ಅವಳ ಮಕ್ಕಳು ಕಲಿಯಲು ನಿರಾಕರಿಸಿದರು. ಅವರು ಹೇಳುತ್ತಾರೆ ನೀನಂತೂ ನಿನ್ನ ಆರೋಗ್ಯವನ್ನು ಹಾಳು ಮಾಡಿಕೊಂಡಿದ್ದಿಯಾ. ಈ ಕೆಲಸವನ್ನು ಮಾಡಿ ನಾವು ಸಹ ನಿನ್ನ ಹಾಗೆ ಆರೋಗ್ಯ ಕಳೆದುಕೊಳ್ಳಲು ಬಯಸುತ್ತೀಯಾ? ಇಷ್ಟೆಲ್ಲಾ ಕಷ್ಟಗಳು ಇದ್ದರೂ ಸಹ ನೀನೇಕೆ ಈ ಕೆಲಸವನ್ನು ಮಾಡುತ್ತೀಯ ಎಂದು ಕೇಳಿದ್ದಕ್ಕೆ ಅವಳು ಅದು ಒಂದೇ ಅವಧಿಯಲ್ಲಿ 3 ಅಥವಾ 4 ತಿಂಗಳು ಅವಿಚ್ಛಿನ್ನವಾದ (ನಿರಂತರವಾದ) ಉದ್ಯೋಗವನ್ನು ಒದಗಿಸುತ್ತದೆ. ಎಂದು ಉತ್ತರಿಸುತ್ತಾಳೆ.

:

# ಭಾರತದಲ್ಲಿ ತಂಬಾಕು ಸಾಗುವಳಿ : ಪರ್ಯಾಯಗಳ ಹುಡುಕಾಟಕ್ಕೆ ಸುಸಮಯ

ಸತ್ವಿಂದರ್ ಕೌರ್, M.Sc., Hons, Ph.D

ಪ್ರೊಫೆಸರ್, ಪಂಜಾಬ್ ಕೃಷಿ ವಿಶ್ವ ವಿದ್ಯಾಲಯ, ಲೂದಿಯಾನ

**ಸಂಪಾದಕೀಯ**

ಈ ಕೆಳಕಂಡ ಲೇಖನದಲ್ಲಿ ಭಾರತದಲ್ಲಿ ತಂಬಾಕು ಕೃಷಿಯ ಅನೇಕ ವಿಷಯಗಳಾದ ಅದರ ಹುಟ್ಟು, ಮೂಲ, ಅದು ರೈತರಿಗೆ ಮತ್ತು ಪರಿಸರಕ್ಕೆ ಉಂಟುಮಾಡುವ ಸಮಸ್ಯೆಗಳು, ಮತ್ತು ಶಕ್ತಿ ಶಾಲಿಯಾದ ಪರ್ಯಾಯ ಪರಿಹಾರಗಳ ಬಗ್ಗೆ ಚರ್ಚಿಸಲಾಗಿದೆ. ಲೇಖಕರು ಕಾಣುವಂತೆ ತಂಬಾಕು ಸ್ಥಳೀಯ ಬೆಳೆಯಲ್ಲಿ ಹೇಗೆ ಅನೇಕ ಕಾರಣಗಳಿಂದ ಇತರೆ ಬೆಳೆಗಳ ಮಾದರಿಗಳು ಬದಲಾದವೂ ಹಾಗೆಯೇ ಕೂಡ ಹೆಚ್ಚಾ ಪ್ರಯೋಜನಕಾರಿ ಬದಲಿ ವ್ಯವಸ್ಥೆ ಮಾಡಿಕೊಂಡು ತಂಬಾಕು ಕೃಷಿಯನ್ನು ಕಡಿಮೆ ಮಾಡಬಹುದು ಎಂಬುದನ್ನು ಸೂಚಿಸುತ್ತಾರೆ.

**ಪ್ರಸ್ತಾವನೆ - ತಂಬಾಕು ಕೃಷಿಯ ಮುಖ್ಯಾಂಶಗಳು**

- ಇತರೆ ಬೆಳೆಗಳಿಗಿಂತ ತಂಬಾಕಿನಿಂದ ಬರುವ ಲಾಭಾಂಶ ಕಡಿಮೆ. ತಂಬಾಕು ತೀವ್ರ ಪರಿಶ್ರಮದಾಯಕ, ತೀವ್ರ ಬೆಳೆ ಕೃಷಿ ಚಟುವಟಿಕೆಗಳಿಂದ ಕೂಡಿರುತ್ತದೆ. ಇದು ಹೊಲಗಳಲ್ಲೂ ತುಂಬಾ ಕಠಿಣವಾದುದ್ದು ಪ್ರತಿಫಲವನ್ನು ಪಡೆಯಲು ರಸಗೊಬ್ಬರ, ಕ್ರಿಮಿನಾಶಕ ಮತ್ತು ನೀರುಣಿಸುವಿಕೆ ಮುಂತಾದ ಖರ್ಚುದಾಯಕ ಚಟುವಟಿಕೆಗಳು ಬೇಕಾಗುತ್ತವೆ.

- ತಂಬಾಕು ಕೃಷಿಯು ಕಾರ್ಮಿಕರ ಆರೋಗ್ಯವನ್ನೇ ಹಾಳುಮಾಡುತ್ತಿದೆ. ವಾಂತಿ, ಒಗ್ಗದಿರುವಿಕೆ, ಹಸಿವಾಗದೆ ಸ್ಥಿತಿಗಳಗಳನ್ನುಂಟುಮಾಡುತ್ತದೆ.

- ತಂಬಾಕು ಕೃಷಿಗೆ ಪರ್ಯಾಯ ಬೆಳೆಗಳು ಲಭ್ಯವಿದ್ದು ಎನ್‌ಜಿಓ ಮತ್ತು ಸರ್ಕಾರದ ಸಹಕಾರದೊಂದಿಗೆ ಒಂದು ಮಂಡಳಿ ವೈವಿಧ್ಯಮಯ ಕಾರ್ಯಕ್ರಮದ ಮೂಲಕ ಇದನ್ನು ಸಾಧಿಸಬಹುದು.

- ಬಹಳಷ್ಟು ರೈತರು ತಂಬಾಕು ಕೃಷಿಯನ್ನು ಲಾಭದಾಯಕವೆಂದು ಮಾಡುವುದಿಲ್ಲ, ಆದರೆ ತಮ್ಮ ಕುಟುಂಬಗಳು ಪರಂಪಾನುಗತವಾಗಿ ಮಾಡಿಕೊಂಡು ಬಂದಿವೆಯೆಂದು ಮಾಡಲಾಗುತ್ತಾರೆ. ಪರ್ಯಾಯ ಬೆಳೆಗಳ ಬಗ್ಗೆ ಮಾಹಿತಿ ನೀಡುವ ಮೂಲಕ ಕಾರ್ಯಕರ್ತರು ತಂಬಾಕು ಕೃಷಿಕರನ್ನು ಇತರೆ ಬೆಳೆ ಕೈಗೊಳ್ಳುವಂತೆ ಮನವೊಲಿಸಬಹುದು.

- ತಂಬಾಕು ಬೆಳೆಯಿಂದ ಬರುವ ವರಮಾನವು ಬದಲಿ ಬೆಳೆಯಿಂದ ಬರುವ ವರಮಾನಕ್ಕಿಂತ ಹೆಚ್ಚಿದ್ದರು, ತಂಬಾಕು ಕೃಷಿ ರೋಗ ರುಜಿನಗಳ, ಸಾವು ನೋವುಗಳನ್ನುಂಟು ಮಾಡುವುದರಿಂದ ಬದಲಿ ಬೆಳೆಯಿಂದ ಬರಬಹುದಾದ ಯಾವುದೇ ಬೆಲೆಯನ್ನು ಸಾರ್ವಜನಿಕ ಆರೋಗ್ಯದ ಕೃಷಿಯಿಂದ ನೋಡಬೇಕು.

- ತಂಬಾಕು ಕೃಷಿಯು, ಕೃಷಿಯ ನೈಜ ಉದ್ದೇಶಗಳಾದ ಆಹಾರ ಒದಗಿಸವುದು, ಮತ್ತು ಜೀವನದ ಗುಣ ಮಟ್ಟವನ್ನು ವರ್ಧಿಸುವುದು ಮುಂತಾದವುಗಳನ್ನು ವಿಫಲಗೊಳಿಸುತ್ತದೆ. ಹಾಗೂ ರೋಗ, ನಿಶ್ಯಕ್ತಿ ಮತ್ತು ಅಕಾಲಿಕ ಮರಣವನ್ನುಂಟುಮಾಡುತ್ತಿದೆ.

- ತಂಬಾಕು ನಿಯಂತ್ರಣವು ರೈತರಿಗೆ ಬೆದರಿಕೆಯನ್ನೊಡ್ಡುವುದಿಲ್ಲ. ತಂಬಾಕು ಬಳಕೆಯ ಒತ್ತಡ (ತೀವ್ರತೆ) ವನ್ನುಂಟುಮಾಡುವುದು. ತಂಬಾಕು ನಿಯಂತ್ರಣದ ಪರಿಣಾಮವಾಗಿ ಈ ಕೈಗಾರಿಕೆಯು ಇಳಿಮುಖ ಲಾಭಾಂಶ ಸಮಸ್ಯೆಯನ್ನು ಎದುರಿಸಲು ಒಂದು ದಶಕವನ್ನು ತೆಗೆದು ಕೊಳ್ಳುತ್ತಿದೆ. ಏತನ್ಮಧ್ಯೆ ರೈತರು ತಂಬಾಕು ಬೆಳೆಯಿಂದ ಬೇರೆ ಬೆಳೆಗೆ ಹೋಗಲು ವಿಪುಲ ಸಮಯವಿರುತ್ತದೆ ಮತ್ತು ಅನೇಕ ಪ್ರಕರಣಗಳಲ್ಲಿ ಬದಲಾವಣೆಯು ನಿಜಕ್ಕೂ ರೈತರಿಗೆ ಲಾಭದಾಯಕವಾಗುತ್ತದೆ.

## ತಂಬಾಕು – ಒಂದು ವಿದೇಶಿ ಬೆಳೆ

ಅನೇಕ ವರ್ಷಗಳಿಂದ ಭಾರತದಲ್ಲಿ ತಂಬಾಕು ಬಳಕೆಯು ಅನೇಕ ರಂಬೆಗಳನ್ನು ಪಡೆದು ಸಮಾಜದ ಮುನ್ನಣೆಯನ್ನು ಗಳಿಸಿದೆ. ಅನೇಕರು ತಂಬಾಕು ನಮ್ಮ ಪುರಾತನ ನಾಗರೀಕತೆಯ ಒಂದು ಭಾಗವಾಗಿದೆ ಎಂಬ ಹಂತದವರೆಗೂ ನಂಬುತ್ತಾರೆ. ಇವರಿಗೆ ಇದರ ಬೆಳವಣಿಗೆಯ ಉಪಯೋಗ ಮತ್ತು ಸಾರ್ವಜನಿಕ ಆರೋಗ್ಯದ ದುಷ್ಪರಿಣಾಮಗಳ ಬಗ್ಗೆ ಎಳಷ್ಟೂ ಕಾಳಜಿ ಇರುವುದಿಲ್ಲ. ಇದು ಹಾಗಲ್ಲ. ವಾಸ್ತವವಾಗಿ ತಂಬಾಕು ಮಧ್ಯ ಮತ್ತು ದಕ್ಷಿಣ ಅಮೆರಿಕಾ, ಮೆಕ್ಸಿಕೊದ ಮೂಲದ ಗಿಡ. ಭಾರತ ಅಥವಾ ಏಷ್ಯಾದಲ್ಲಾಗಲಿ ತಂಬಾಕನ್ನು ಸಾಗುವಳಿ ಮಾಡಿದ ಯಾವುದೇ ರೀತಿಯ ಅರಣ್ಯ ವಾಸಿ ಸಂಬಂಧಿಗಳು ಕಂಡುಬರುವದಿಲ್ಲ. ಭಾರತದಲ್ಲಿ ಸಾಗುಮಾಡತಕ್ಕಂತ ಎಲ್ಲ ಬಗೆಯ ಸುಪ್ರಸಿದ್ದ ತಳಿಗಳು ಕೆನಡಾ ಇಲ್ಲವೆ ಯುಎಸ್‌ಎ ನೆಲಗಳ ಆಯ್ಕೆಗಳು ಮತ್ತು ಪರಿಚಯಗಳು (ಈ ನೆಲಗಳಿಂದ ಆಯ್ಕೆಮಾಡಿ ಪರಿಚಯ ಮಾಡಿದ ತಳಿಗಳು) . ಅದರಲ್ಲೂ ಬಹುತೇಕ ಯುಎಸ್‌ಎಯ ವರಿಜಿನಿಯ ರಾಜ್ಯದಿಂದ ಪರಿಚಯಿಸಿದ ವರಿಜನಿಯಾ ತಂಬಾಕು. 17ನೇ ಶತಮಾನದವರೆಗೂ ಭಾರತದಲ್ಲಿ ತಂಬಾಕು ಬೆಳೆಯನ್ನು ಪರಿಚಯಿಸಿರಲಿಲ್ಲ. ಭಾರತವು ಪ್ರಪಂಚದಲ್ಲೇ ಅತಿ ಹೆಚ್ಚು ತಂಬಾಕು ಉತ್ಪಾದಿಸುವ ಎರಡನೇ ರಾಷ್ಟ್ರವಾಗಿದೆ. ಉತ್ಪಾದನಾ ಪ್ರಮಾಣ ಶೇ10ರಷ್ಟು ಶೇಕಡಾವಾರು 34 ರ ಪ್ರಮಾಣದಲ್ಲಿ ತಂಬಾಕನ್ನು ಉತ್ಪಾದಿಸುವ ಚೀನಾವು ಮೊದಲನೆ ಸ್ಥಾನದಲ್ಲಿದೆ ಹಾಗೂ ಶೇಕಡಾ 9ರ ಪ್ರಮಾಣದಲ್ಲಿ ಬ್ರೆಜಿಲ್ ತಂಬಾಕು ಉತ್ಪದನೆಯಲ್ಲಿ ಭಾರತದ ಸಮೀಪದಲ್ಲಿದೆ.

ಸರ್ಕಾರದ ಬೆಂಬಲದೊಂದಿಗೆ ಅಭಿವೃದ್ಧಿಗೊಂಡ (ವೃದ್ಧಿಗೊಂಡ) ತಂಬಾಕು ಕೃಷಿ - ತಂಬಾಕು ಹೆಚ್ಚು ವರಮಾನದ ಬೆಳೆಯಾಗಿದ್ದು ಕಳೆದ 50 ವರ್ಷಗಳಲ್ಲಿ ಸರ್ಕಾರದ ಬೆಂಬಲ ಮತ್ತು ಆಧಾರೋಪಚಾರದಡಿಯಲ್ಲಿ ಪ್ರಗತಿಗೊಂಡಿದೆ. ಅಥವಾ ಪ್ರಬುದ್ಧ ಮಾನ ಸ್ಥಿತಿಗೆ ತಲುಪಿದೆ. ಅಖಿಲ ಭಾರತ ಸಮಾನಾಧಿಕರಣೆಕೆಯ ಜಾಲಕೃತಿಯೊಂದಿಗೆ ಭಾರತದಲ್ಲಿ 1947ರಲ್ಲಿ ತಂಬಾಕು ಬೆಳೆಯ ವ್ಯವಸ್ಥಿತವಾದ ಸುಧಾರಣೆಯು ಪ್ರಾರಂಭವಾಯಿತು. ಚೆನ್ನೈ, ಆಂಧ್ರ ಪ್ರದೇಶ, ಪಂಜಾಬ್, ಮೈಸೂರು (ಕರ್ನಾಟಕ) ಪಶ್ಚಿಮ ಬಂಗಾಳ ಮತ್ತು ಆಂಧ್ರದ ರಾಜಮಂಡ್ರಿಯಲ್ಲಿ ಒಂದು ಕೇಂದ್ರಿಯ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಇದರೊಂದಿಗೆ ತಂಬಾಕಿನ ಗುಣ ಮತ್ತು ಮಾರುಕಟ್ಟೆಯ ಸುಧಾರಣೆಗಳನ್ನು ಮಾಡಲೆಂದು ನಿರ್ಧಿಷ್ಟವಾದ ಸಂಶೋಧನಾ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಭಾರತೀಯ ತಂಬಾಕಿನ ರಫ್ತನ್ನು ಉತ್ತೇಜಿಸಲು ಹೊರ ದೇಶಗಳಿಗೆ ಪ್ರತಿನಿಧಿಗಳನ್ನು ಕಳುಹಿಸುವ ಒಂದು ಕೇಂದ್ರಿಯ ತಂಬಾಕು ಉತ್ತೇಜನಾ ಕೌನ್ಸಿಲ್ ಕೂಡ ಇದೆ. ತಂಬಾಕು ಬೆಳೆಯನ್ನು ಉತ್ತೇಜಿಸಲು ಪ್ರಯತ್ನಗಳನ್ನು ಕೈಗೊಂಡರೂ ಕೂಡ, ಇದು ತನ್ನೆಲ್ಲಾ ತೀವ್ರ

ಚಾಲನ ಶಕ್ತಿಯನ್ನು ಹೊಂದಿದಾಗ್ಯೂ ಕೂಡ ಲೆಕ್ಕಾಚಾರದ ತೀರ್ಮಾನದಂತೆ ಹಾಗೂ ಆದಕ್ಕಿಂತ ಹೆಚ್ಚು ಕುಟುಂಬದ ಸಂಪ್ರಾದಾಯದಿಂದಾಗಿ ಕಡಿಮೆ ಬೆಳೆಯನ್ನು ಬೆಳೆಯಲಾಯಿತು. ಏತನ್ಮಧ್ಯೆ, ಉತ್ಪಾದನ ವೆಚ್ಚದಲ್ಲಿ ಕುಟುಂಬದ ಶ್ರಮವನ್ನು ಆದರಲ್ಲೂ ನಿರ್ದಿಷ್ಟವಾಗಿ ಮಹಿಳೆಯರ ಮತ್ತು ಮಕ್ಕಳು ಪರಿಶ್ರಮವನ್ನು ಮುಖ್ಯವೆಂದು ತಿಳಿಯಲಿಲ್ಲ.

ಅವನತಿಯಲ್ಲಿರುವ ಬಹುತೇಕ ರಾಜ್ಯಗಳ ತಂಬಾಕು ಬೆಳೆಯಡಿಯಲ್ಲಿನ ಪ್ರದೇಶಗಳು : ತಂಬಾಕು ಉತ್ಪಾದನೆ ರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಾಗಿದ್ದರೂ ಕೂಡ, ಅನೇಕ ರಾಜ್ಯಗಳಲ್ಲಿ ಇದರ ಚಿತ್ರಣ ಮಾತ್ರ ಬೇರೆ ಬೇರೆಯಾಗಿದೆ. ತಂಬಾಕು ಕೃಷಿಯು ಪಂಜಾಬಿನಲ್ಲಿ ಸಂಪೂರ್ಣ ಕ್ಷಯವಾಗಿದ್ದರೆ, ಹಿಮಾಚಲ ಪ್ರದೇಶ ಮತ್ತು ಹರಿಯಾಣಗಳಲ್ಲಿ ಆದರ ಉತ್ಪಾದನೆಯು ಅವನತಿಯನ್ನು ಕಂಡಿದೆ. ಕೋಷ್ಟಕದಲ್ಲಿ ತೋರಿಸಿರುವಂತೆ (ಕೋಷ್ಟಕ 1) ಆಂಧ್ರಪ್ರದೇಶ, ಗುಜರಾತ್ ಮತ್ತು ಕರ್ನಾಟಕಗಳಲ್ಲಿ ತಂಬಾಕು ಕೃಷಿ ಪ್ರದೇಶವು 1984ರ ತನಕ ಹೆಚ್ಚಾಗಿದ್ದು 1996ರಿಂದ ಅವನತಿಯ ಹಾದಿ ಹಿಡಿದಿದೆ. ಕರ್ನಾಟಕ ರಾಜ್ಯವೊಂದನ್ನು ಬಿಟ್ಟು ಇತರೆ ರಾಜ್ಯಗಳಲ್ಲಿ ತಂಬಾಕು ಕೃಷಿಯನ್ನು ಕಡಿಮೆ ಮಾಡುವ ಪ್ರವೃತಿಯು ಕಾಣ ಸಿಗುತ್ತದೆ. ಉತ್ಪಾದನೆ ಎಲ್ಲಾ ರಾಜ್ಯಗಳಲ್ಲಿ ಆದರೆ ಮೂರನ್ನು ಬಿಟ್ಟು 1960-61 ಕ್ಕಿಂತ 1995-96ರಲ್ಲಿ ಕಡಿಮೆ ಪ್ರಮಾಣದಲ್ಲಿದೆ.

**ಕೋಷ್ಟಕ - 1 : ತಂಬಾಕು ಕೃಷಿಯಲ್ಲಿನ ಪ್ರದೇಶಗಳು (ಎ x 10 ಘನ)**

| ರಾಜ್ಯ | 1960-61 | 1983-84 | 1995-96 |
|---|---|---|---|
| ಆಂಧ್ರ ಪ್ರದೇಶ | 143.00 | 187.1 | 148.3 |
| ಗುಜರಾತ್ | 93.00 | 103.3 | 96.7 |
| ಕರ್ನಾಟಕ | 39.00 | 48.00 | 63.8 |
| ಮಹಾರಾಷ್ಟ್ರ | 26.0 | 10.1 | - |
| ಬಿಹಾರ್ | 16.0 | 13.4 | 13.9 |
| ತಮಿಳುನಾಡು | 19.0 | 12.4 | 6.8 |
| ಉತ್ತರ ಪ್ರದೇಶ | 19.0 | 14.7 | 16.4 |
| ಪಶ್ಚಿಮ ಬಾಂಗಾಳ | 17.0 | 15.4 | 11.7 |
| ಒರಿಸ್ಸಾ | 21.2 | 12.4 | 12.9 |

ತಂಬಾಕು ಬೆಳೆ ತೀವ್ರ ಚಾಲನ ಶಕ್ತಿಯನ್ನು ಪಡೆದರೂ ಸಹ ತಂಬಾಕು ಸಾಗುವಳಿಯಲ್ಲಿ ಒಟ್ಟು ಪ್ರದೇಶವು 1950-51 ರಲ್ಲಿನ 3.75 ಸಾವಿರ ಹೆಕ್ಟೇರ್ಸ್‌ನಿಂದ 1983ರಲ್ಲಿನ 5.01 ಸಾವಿರ ಹೆಕ್ಟರ್ಸ್‌ಗಳ ಲಘ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಆದರೆ ಇದೇ ಸಮಯದಲ್ಲಿ ಇತರೆ ಬೆಳೆಗಳು ಮಹತ್ತರವಾದ ಹೆಚ್ಚಳವನ್ನು ಕಂಡಿದೆ. ಬೆಂಬಲಿತ ಏಜೆಂಟರುಗಳ ಸಹಾಯದಿಂದ ತಂಬಾಕು ಉತ್ಪಾದನೆ ಕುಂಠಿತಗೊಂಡಿರುವುದು ಸುಸ್ಪಷ್ಟ ಮತ್ತು ಬೆಳೆಗಾರರಿಗೆ

ಇದೊಂದು ಅನಿವಾರ್ಯ ಆಯ್ಕೆ ಬೆಳೆಯೇನಲ್ಲ. ಚರಿತ್ರೆ ದಿವಸಗಳಿಂದಲೂ ಅನೇಕ ಸಂದರ್ಭಗಳು ಮತ್ತು ಕಾರಣಗಳಿಂದ ಅಗತ್ಯಕ್ಕೆ ಅನುಗುಣವಾಗಿ ಬೆಳೆ ಮಾದರಿಗಳು ಬದಲಾಗುತ್ತಾ ಬಂದಿವೆ ಕೆಲವು ಇತ್ತೀಚಿನ ಬದಲಾದ ಬೆಳೆ ಮಾದರಿಗಳು ಈ ಕೆಳಕಂಡಂತಿವೆ.

1. ನೀಲಿ ಕೃಷಿಯು 1857 ರಲ್ಲಿ 3,75,000 ಎ. ನಿಂದ 1956ರಲ್ಲಿ 2,200 ಎ.ಗೆ ಇಳಿದಿದೆ.

2. 1983 ರಲ್ಲಿನ ಗಾಂಜಾ ಬೆಳೆಯಡಿಯಲ್ಲಿನ ಪ್ರದೇಶವು 1993ರಲ್ಲಿ 13,932 ಹೆಕ್ಟೇರ್‌ಗೆ ಕಡಿಮೆ ಮಾಡಲಾಯಿತು.

3. ಆಂಧ್ರ ಪ್ರದೇಶ ಮತ್ತು ಕರ್ನಾಟಕ ರಾಜ್ಯಗಳ ಇತ್ತೀಚಿನ ದಶಕಗಳಲ್ಲಿ ಸಾಂಪ್ರದಾಯಿಕ ಸೂಕ್ಷ್ಮ ಏಕದಳ ಧಾನ್ಯಗಳಿಂದ (ರಾಗಿ, ಸಜ್ಜೆ ಮುಂತಾದವು) ಸೇಂಗಾ ಬೆಳೆಗೆ ಬದಲಾಗಿದೆ.

4. ಪಂಜಾಬಿನಲ್ಲಿ ಭತ್ತದ ಕೃಷಿಯನ್ನು ಪರಿಚಯಿಸಿ ಪ್ರೋತ್ಸಾಹ ನೀಡಲಾಯಿತು. ಆದೇನೇ ಇರಲಿ ಪರಿಸರದ ಸ್ಥಿತಿಗಳು ಮತ್ತು ಕಡಿಮೆ ಲಾಭಾಂಶಗಳ ಅನಿವಾರ್ಯತೆಯಿಂದಾಗಿ ಈ ಪ್ರದೇಶವು ಬೆಳೆ ಮಾದರಿಯ ಬೇರೊಂದು ಬದಲಾವಣೆಯ ಹೊಸ್ತಿಲಲ್ಲಿ ಪುನಃ ನಿಂತಿದೆ. ಬೆಳೆಯಾಗಿಯೂ ಸಹ ತಂಬಾಕು ಕಠಿಣ ಕೃಷಿ ಎಂಬ ಹೆಸರನ್ನು ಪಡೆದಿದೆ.

- ಮಣ್ಣಿನ ಸಾರ ಹೀನತೆಯನ್ನುಂಟುಮಾಡುವ ರಾಸಾಯನಿಕ ತ್ಯಾಜ್ಯಗಳನ್ನು ಅದು ಬಿಡುಗಡೆ ಮಾಡುತ್ತದೆ.

- ಮಣ್ಣಿನ ಸಾರಹೀನತೆ ಮತ್ತು ರೋಗಗಳು ಹಾಗೂ ಕೀಟಗಳ ಉಪದ್ರವವಿದೆ. ಫಲಿತಾಂಶದ ದೆಸೆಯಿಂದಬೆಳೆ ನಿರ್ವಹಣೆ ಕಾಲಪಗಳನ್ನು (ಕೆಲಸ) ಇತರೆ ಬೆಳೆ ಕೃಷಿಯನ್ನು ಕೈಗೊಳ್ಳುವಿಕೆ ಹಾಗೂ ಕೀಟ ನಾಶಕ, ರಸಗೊಬ್ಬರ ಮುಂತಾದ ರಾಸಾಯನಿಕಗಳನ್ನು ಬಳಸವುದರ ಮೂಲಕ ತೀವ್ರಗೊಳಿಸ ಬೇಕಾಗಿದೆ.

- 2000ದಲ್ಲಿ ಕೈಗೊಂಡ ಸೂಕ್ಷ್ಮಮಟ್ಟದ ಅಧ್ಯಯನ ಮತ್ತು ಕ್ರಿಯಾ ಕಾರ್ಯಕ್ರಮ ಒಂದರಲ್ಲಿ ಕಂಡುಕೊಂಡಂತೆ ತಂಬಾಕು ಹೊಲಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಹಸಿವಾಗದಿರುವಿಕೆ, ಒಗ್ಗದಿರುವಿಕೆ, ವಾಂತಿ, ಮುಂತಾದ ರೋಗಲಕ್ಷಣಗಳಿಂದ ನರಳವುದು ಕಂಡುಬರುತ್ತದೆ.

- ವರ್ಜಿನಿಯಾ ತಂಬಾಕು ಕಪ್ಪು ಮಣ್ಣಿನಲ್ಲಿ ಚೆನ್ನಾಗಿ ಬೆಳೆಯುತ್ತದೆ. ಮತ್ತು ಹತ್ತಿ, ಸೂಕ್ಷ್ಮ ಏಕದಳ ಧಾನ್ಯ ಮತ್ತು ತರಕಾರಿ ಕಾಯಿಪಲ್ಯ ಮುಂತಾದ ಬೆಳೆಗಳಿಗೆ ಕೋ ಕೊಡುವುದರ ಮೂಲಕ ಬೆಳೆಗಾರರ ಪೋಷಕಾಂಶವನ್ನು ದುಷ್ಪರಿಣಾಮಕ್ಕೆ ಒಳಪಡಿಸುತ್ತದೆ.

## ತಂಬಾಕು ಬೆಳೆ ಬದಲಿ ಪ್ರತಿನಿಧಿ : ಕೆಲವು ಸಾಧ್ಯತೆಗಳು

ತಂಬಾಕು ಕೃಷಿಯನ್ನು ಬದಲಾವಣೆಗೊಳಪಡದ ಪರಿಸ್ಥಿತಿಯನ್ನು ಹದಗೊಳಿಸಲು ಒಂದು ನಿರ್ದೇಶಿತ ಪ್ರಯತ್ನ ಬೇಕಾಗುತ್ತದೆ. ರೈತ ಸಮುದಾಯವು ಉದರ ಪೋಷಣೆಗೆಂದು ಅನ್ಯಮಾರ್ಗವಿಲ್ಲದ್ದರಿಂದ ತಂಬಾಕನ್ನು ಬೆಳೆಯಲಾಗುತ್ತದೆ ಎಂಬ ವಾದದಲ್ಲಿ ಯಾವ ಹುರಳೂ ಇಲ್ಲ. ತಂಬಾಕು ಏಷ್ಯಾ ಮತ್ತು ಭಾರತ ಉಪ ಖಂಡದ ಸಾಂಪ್ರದಾಯಕ ಬೆಳೆಯೇನಲ್ಲ. ಭಾರತದಲ್ಲಿ ಲಭ್ಯವಿರುವ ಅಗ್ಗದ ಜಮೀನು ಮತ್ತು ಕೌಟುಂಬಿಕ ಶ್ರಮದ ದೆಸೆಯಿಂದ ಇದು ಪ್ರಾರಂಭಿಕ ಚಾಲನ ಶಕ್ತಿಯನ್ನು ಪಡೆಯಿತು. ತದನಂತರ ಮಾರುಕಟ್ಟೆಯ, ಸರ್ಕಾರದ, ಲಾಭಕೋರರ ಒತ್ತಾಸೆ, ಬೆಂಬಲದೊಂದಿಗೆ ಅಭ್ಯುದಯಗೊಂಡಿತು.

ಈ ಮಧ್ಯೆ (ಇದರೊಂದಿಗೆ) ವರ್ಜನಿಯಾ ತಂಬಾಕನ್ನು ಬೆಳೆಯುವ ಕಪ್ಪು ಮಣ್ಣಿನ ನೆಲಗಳು ಹೆಚ್ಚು ಫಲವತ್ತಾಗಿದ್ದು ಹತ್ತಿ, ನಿರ್ದಿಷ್ಟ ಕಾಯಿ ಪಲ್ಯಗಳು ಹಾಗೂ ಕಾಳು ಬೆಳೆಗಳನ್ನು ಬೆಳೆಯಲು ಉತ್ತಮವಾಗಿದೆ.

### ಪರ್ಯಾಯ ಸ್ಥಳೀಯ ಬೆಳೆಗಳು

ಮೆಣಸಿನ ಕಾಯಿ, ಟಮೋಟ, ಎಗ್‌ಪ್ಲಾಂಟ್, ಬೆಂಡೆ ಗಿಡ, ಸೋಯಾಬೀನ್, ಹತ್ತಿಮುಂತಾದವುಗಳು ಸತ್ವಶಾಲಿ ಪರ್ಯಾಯ ಬೆಳೆಗಳಾಗಿವೆ. ಪ್ರಚಲಿತ ತಂಬಾಕು ಬೆಳೆಯುವ ಕಡೆ ಹಣ್ಣಿನ ತೋಟಗಳನ್ನು ಬೆಳೆಸುವುದು ಅಥವಾ ಪುಷ್ಪ ಕೃಷಿಯಡೆಗೆ ಮನತಿರುಗಿಸುವ ಸಾಧ್ಯತೆಗಳು ಸಹ ಇವೆ. ಬಹು ಉದ್ದೇಶಿತ ಪರ್ಯಾಯ ಬೇಳೆಗಳು ಅತಿ ಹೆಚ್ಚಿನ ಆರ್ಥಿಕ ಲಾಂಭಾಂಶವನ್ನು ತಂದು ಕೊಡುವುದು. ಪ್ರಶಾಂತವಾದ ಚಳಿಗಾಲದಲ್ಲಿ ಬೆಳೆದು ಪ್ರಗತಿಹೊಂದುವ ಭಾರತೀಯ ಮೂಲದ ಪ್ರಮುಖ ಬೆಳೆಯಾದ ಇಸ್ಸ್ಯಗೂಲ್‌ನ್ನು (ಪ್ಲಾಂಟಾಗೋ) ತಂಬಾಕಿಗೆ ಬದಲು ಪರ್ಯಾಯ ಲಾಭದಾಯಕವೆಂದು ಪರಿಗಣಿಸಬಹುದು. ಪ್ಲಾಂಟಾಗೋ ಬೀಜದ ಹೊಟ್ಟನ್ನು ನೈಸರ್ಗಿಕ ಮಂದ ಎರೇಚಕವಾಗಿ ಪ್ರಪಂಚದಾದ್ಯಂತ ಬೆಳೆಸುತ್ತಾರೆ. ಸಾಂಪ್ರದಾಯಕವಾಗಿ ಭಾರತದಲ್ಲಿ ಪ್ಲಾಂಟಾಗೋವನ್ನು ಈ ಉದ್ದೇಶಕ್ಕಾಗಿ ಬಳಸಲಾಗುತ್ತದೆ. ಪ್ಲಾಂಟಾಗೋ ಯಾಂತ್ರಿಕರಣಕ್ಕೆ ತಕ್ಕ ಬೆಳೆಯಾಗಿ ಪರಿವರ್ತನೆಗೊಂಡಿದೆ. ಪಶ್ಚಿಮಾರ್ಧಗೋಳದಲ್ಲಿ ಮೆಕ್ಸಿಕೋ ದೇಶವು ಪ್ಲಾಂಟಾಗೋ ಕೃಷಿಯನ್ನು ದೊಡ್ಡಪ್ರಮಾಣದಲ್ಲಿ ಕೈಗೊಂಡಿದೆ. ಭಾರತವು ಈ ಬೆಳೆಯನ್ನು ಪರಿಚಯಿಸಿದೆ. ರಫ್ತA ಸಾಮರ್ಥ್ಯದ ದೃಷ್ಟಿಯಿಂದ ಪ್ಲಾಂಟಾಗೊ ಕೃಷಿಯನ್ನು ಭಾರತದಲ್ಲಿ ಪುನರುಜ್ಜೀವನಗೊಳಿಸಬಹುದುದಾಗಿದೆ.

### ಈ ಮೊದಲೆ ಬೆಳೆದ ಪ್ರದೇಶಗಳಲ್ಲಿ ಪರ್ಯಾಯ ಬೆಳೆಗಳ ಅಳವಡಿಕೆ

ಕೆಳಕಂಡ ಕೋಷ್ಟಕದಲ್ಲಿ ಕಾಣಬರುವಂತೆ, ತಂಬಾಕು ಪ್ರಮುಖ ಬೆಳೆಯಾಗಿರುವ ರಾಜ್ಯಗಳಲ್ಲಿಯೂ ಸಹ ಇತರೆ ಬೆಳೆಗಳನ್ನು ಯಶಸ್ವಿಯಾಗಿ ಬೆಳೆಯಲಾಗಿದೆ. ಇದಕ್ಕೆ ದೊರೆತಿರುವ ಅತಿ ಹೆಚ್ಚಿನ ಬೆಂಬಲ ಬೆಲೆಯು ಗಣನೀಯ ಪ್ರಮಾಣದ ತಂಬಾಕಿನ ಜನಪ್ರಿಯತೆಗೆ ಕಾರಣವಾಗಿದೆ. ಈ ಪ್ರದೇಶಗಳಲ್ಲಿ ಈಗಾಗಲೇ ಬೆಳೆದಂತಹ ಬೆಳೆಗಳಾದ ಕಾಳು, ಬೆಳೆಗಳು, ಮೆಣಸಿನಕಾಯಿ, ಹತ್ತಿಮುಂತಾದವುಗಳಿಗೆ ಮಣ್ಣುಮತ್ತು ಇತರ ವಾಯುಗುಣ, ಹವಾಮಾನ ಪರಿಸ್ಥಿತಿಗಳು ಅಷ್ಟೇ ಉತ್ತಮ ಮಟ್ಟದ್ದಾಗಿವೆ.

**ಕೋಷ್ಟಕ - 2 :** ಕರ್ನಾಟಕ ಮತ್ತು ಗುಜರಾತ್ ರಾಜ್ಯಗಳಲ್ಲಿ (1984-85) ತಂಬಾಕು ಆಧಾರಿತ ಕೃಷಿ ವ್ಯವಸ್ಥೆಯನ್ನು ಹೊಂದಿರುವ ಪ್ರದೇಶದಲ್ಲಿನ ಇತರೆ ಬೆಳೆಗಳಿಗೆ ಪ್ರತಿಯಾಗಿ ತಂಬಾಕನ್ನು ಒಳಗೊಂಡ ಶೇಕಡವಾರು ಪ್ರದೇಶ.

| **ಬೆಳೆ** | **ಗುಜರಾತ್** | **ಕರ್ನಾಟಕ** |
|---|---|---|
| ಆಹಾರ ಧಾನ್ಯಗಳು | 33.7 | 32.2 |
| ಸೇಂಗಾ (ನೆಲಗಡಲೆ) | 3.7 | 17.6 |
| ಹರಳುಗಿಡ (ಬೆಳೆ) | 0.8 | - |
| ಹತ್ತಿ | 2.1 | - |
| ಕಬ್ಬು - | 1.7 | |
| ಫಲಗಳು | 1.7 | - |
| ತರಕಾರಿಗಳು (ಕಾಯಿಪಲ್ಯಗಳು ) | 0.7 | 0.9 |
| ಗೋಗ್ರಾಸ ಬೆಳೆಗಳು (ಮೇವು) | 2.0 | 2.9 |
| ತಂಬಾಕು | 53.6 | 35.9 |

ತಂಬಾಕು ಬೆಳೆಯುವ ಮತ್ತೊಂದು ಪ್ರಮುಖ ರಾಜ್ಯವಾದ ಗುಜರಾತ್‌ನಲ್ಲಿ ಕೈಗೊಂಡ ಅಧ್ಯಾಯನದಿಂದ ಹೊರಬಿದ್ದ ಅಂಶಗಳು :

- ಒಂದು ಎಕ್ಟರ್‌ಗೆ 9,560 ರೂಗಳ ವರಮಾನ ಗಳಿಸಿದ ನೀರುಣಿಸಿ ಬೆಳೆದ ಹತ್ತಿ ಬೆಳೆಯನ್ನು ಅನುಸರಿಸಿ ನೀರಾಯಿಸಿ ಬೆಳೆದ ಹರಳು ಗಿಡ ಬೆಳೆಯು ಒಂದು ಹೆಕ್ಟೇರ್‌ಗೆ 9,702 ರೂಗಳ ಅತಿ ಹೆಚ್ಚಿನ ಪ್ರತಿಫಲವನ್ನು ತಂದುಕೊಟ್ಟಿತು.

- ಆದೇನೇ ಇರಲಿ, ನೀರುಣಿಸಿದ ತಂಬಾಕು ಹೊಲಗಳಲ್ಲಿ, ಎರಡು ಬೆಳೆಗಳಾದ ತಂಬಾಕು - ಬೆಸಿಗೆ ಜೋಳ (ಬಾಜಾರ) ಅಥವಾ ತಂಬಾಕು - ಬೆಸಿಗೆ - ನೆಲಗಡಲೆಗಳನ್ನು ಪ್ರತಿ ಹೆಕ್ಟೇರ್‌ಗೆ ಕ್ರಮವಾಗಿ 5,500 ರೂಗಳು ಹಾಗೂ 5,700 ರೂಗಳ ಅಂದಾಜು ನಿವ್ವಳ ಆದಾಯವಾಗುವಂತೆ ನಿರಯಾಸವಾಗಿ ಬೆಳೆಯಬಹುದಾಗಿದೆ. (ಕೋಷ್ಟಕ 3ನ್ನು ನೋಡಿ).

- ಬೆಳೆಯ ಕ್ರಮಾಣುಸರಣಿ ಕುರಿತಂತೆ ದೊಡ್ಡ ಸಂಖ್ಯೆಯಲ್ಲಿ ತಂಬಾಕು ಬೆಳೆಯುವ ಪ್ರದೇಶಗಳಲ್ಲಿ ತಂಬಾಕು - ತಂಬಾಕು ಬೆಳೆಯು ಸಾಮಾನ್ಯ ಸ್ಥಿತಿಯ ಬೆಳೆ ಕ್ರಮಾನು ಸರಣಿಯಾಗಿದೆ. ನಿಶ್ಚಿತ ನೀರು ಪೂರೈಕೆ ಇರುವೆಡೆಯಲ್ಲಿ, ತಂಬಾಕು - ಜೋಳ (ಬಾಜಾರ, ಬಾಜ್ರ) ಇವು ಸಾಮಾನ್ಯ ಬೆಳೆ ಆವರ್ತನವಾಗಿದೆ. ತಂಬಾಕು - ಬೇಸಿಗೆ ಜೋಳ (ಮೊದಲ ವರ್ಷ) ಹತ್ತಿ (ಎರಡನೆಯ ವರ್ಷ) ಮತ್ತು ತಂಬಾಕು - ಬೇಸಿಗೆ ಜೋಳ (ಮೂರನೆಯ ವರ್ಷ) ಬೆಳೆ ಬದಲಾವಣೆಗಳ (ಆವರ್ಥನಗಳು) ತಂಬಾಕು - ತಂಬಾಕು

ಸಂಪ್ರದಾಯ ಬೆಳೆ ಆವರ್ತನಕ್ಕಿಂತ ಹೆಚ್ಚು ಲಾಭದಾಯಕವಾಗಿವೆ ಎಂಬುದು ಬೆಳೆ ಆವರ್ತನ ಅಧ್ಯಯನಗಳಿಂದ ಸೂಚಿತವಾಗಿರುವ ವಿಷಯವಾಗಿದೆ.

- ಗುಜರಾತ್‌ನ ತಂಬಾಕು ಬೆಳೆಯುವ ಪ್ರದೇಶಗಳಲ್ಲಿ ತಂಬಾಕು - ಬೇಸಿಗೆ ನೆಲಗಡಲೆ (ಸೇಂಗಾ) ಕೂಡ ಜನಪ್ರಿಯ ಬೆಳೆ ಮಾದರಿ ಕ್ರಮಾನುಸರಣೆಯಾಗಿ ಪರಿಣಮಿಸುತ್ತಾ ಇದೆ.

- ಪರ್ಯಾಯ ಬೆಳೆಗಳ ಲಭ್ಯತೆ ಇದ್ದಾಗ್ಯೂ ಕೂಡ, ತಂಬಾಕು ಕೃಷಿ ನಿರಂತರವಾಗಿ ಸಾಗುತ್ತಾ ಇದೆ. ಏಕೆಂದರೆ ಮುಖ್ಯವಾಗಿ ದನಗಳು ತಂಬಾಕು ಬೆಳೆಯನ್ನು ತಿನ್ನುವುದಿಲ್ಲ. ಹಾಗೆ ಬರಗಾಲವನ್ನು ಪ್ರತಿರೋಧಿಸುವುದೆಂದು ಇದನ್ನು ಪರಿಗಣಿಸಲಾಗಿದೆ. ನೀರಾವರಿ ಪದ್ಧತಿಯ ಸ್ಥಿತಿಗತಿಗಳು, ಇಳುವರಿ ಸುಧಾರಿಸಲು ಸಹಕಾರಿಸುತ್ತವೆ.

**ಕೋಷ್ಟಕ - 3**

ಗುಜರಾತ್ ರಾಜ್ಯದಲ್ಲಿನ ತಂಬಾಕು ಮತ್ತು ಇತರ ಪ್ರತಿ ಬೆಳೆಗಳು ಅರ್ಥವಲೋಕನ, ಅರ್ಥವಿವೇಚನ ವೀಕ್ಷಣೆ

| ಬೆಳೆ | ಇಳುವರಿ (ಕಿ.ಗ್ರಾಂ/ಎ) | ಬೆಲೆ (ರೂ/ಎ) | ಒಟ್ಟು (ರೂ/ಎ) | ನಿವ್ವಳ (ರೂ/ಎ) |
|---|---|---|---|---|
| ತಂಬಾಕು | 2,093 | 5,575 | 9,942 | 3,367 |
| ಬಾಜಾರ | 3,025 | 3,835 | 6,050 | 2,215 |
| ಹತ್ತಿ | 2,740 | 5,510 | 15,070 | 9,560 |
| ಸೇಂಗಾ (ಬೇಸಿಗೆ) | 1,327 | 4,170 | 6,635 | 2,465 |
| ಸೋಯಾಬೀನ್ | 772 | 2,165 | 2,316 | 151 |
| ಹರಳು ಬೆಳೆ | 3,575 | 2,810 | 12,512 | 9,702 |

ಆದೇನೆ ಆಗಲಿ, ಉತ್ತಮ ಇಳುವರಿಗಾಗಿ ಉತ್ತು ಬಿಟ್ಟ ಹೊಲದಲ್ಲಿ ಸಾಮಾನ್ಯವಾಗಿ ತಂಬಾಕು ಕೃಷಿಯನ್ನು ಕೈಗೊಳ್ಳಲಾಗುತ್ತದೆ. ಅಂದರೆ ಯಾವುದೇ ಮಧ್ಯಂತರ ಋತುಮಾನದ ಬೆಳೆಯನ್ನು ಬೆಳೆಯದೆ ಬೀಳು ಬಿಟ್ಟ ಜಮೀನುಗಳಾಗಿರುತ್ತವೆ. ಇದು ತುಂಬ ಮಹತ್ವವಾದದ್ದು. ಏಕೆಂದರೆ ತಂಬಾಕು ಬೆಳೆಯಿಂದ ಮಣ್ಣು ತನ್ನ ಸಾರಸತ್ವವನ್ನು ಕಳೆದು ಕೊಂಡಿರುತ್ತದೆ. ವಾಸ್ತವವಾಗಿ, ತುಂಬಾ ಪೈಪೋಟಿ ಇರುವ ಕೃಷಿ ಕ್ಷೇತ್ರದಲ್ಲಿ ಜಮೀನನ್ನು ಬೀಳು ಬಿಡುವುದು ಅಥವಾ ಉತ್ತು ಬಿಡುವುದು ಸದೃಢ ಆರ್ಥಿಕತೆಯ ಲಕ್ಷಣವಲ್ಲ.

## ಪರ್ಯಾಯ ಬೆಳೆ ಪದ್ಧತಿಯನ್ನು ಕಾರ್ಯರೂಪಕ್ಕೆ ತರುವುದು

ಕೃಷಿಯು ದೇಶದ ಆರ್ಥಿಕ ಬೆನ್ನಲುಬಾದ್ದರಿಂದ ಸ್ವಾತಂತ್ರ್ಯದ ತರುವಾಯು ಕೃಷಿ ಕ್ಷೇತ್ರವನ್ನು ಸುಧಾರಿಸುವ ಸಲುವಾಗಿ ಭಾರತದಲ್ಲಿ ರಾಷ್ಟ್ರವ್ಯಾಪಿ ಪ್ರಯತ್ನವನ್ನು ಕೈಗೊಳ್ಳಲಾಯಿತು. ಅಖಿಲ ಭಾರತ ಮಟ್ಟದಲ್ಲಿ ರಚಿಸಿದ ಭಾರತೀಯ ಕೃಷಿ ಆಲೋಚನ ಸಭೆಯು ತಂಬಾಕನ್ನೊಳಗೊಂಡಂತೆ ಪ್ರಮುಖ ಬೆಳೆಗಳನ್ನು ಸುಧಾರಿಸಲು ಸುಸಂಘಟಿತ ಪ್ರಯತ್ನವನ್ನು ಮಾಡಿತು. ಈ ಸುಧಾರಣೆಗಳು ಆಹಾರ ಧಾನ್ಯಗಳಲ್ಲಿ ಭಾರತವು ಸ್ವಾವಲಂಬಿಯಾಗಲು ಸಹಕಾರಿಯಾದವು ಹಾಗೂ ವಾಣಿಜ್ಯ ಬೆಳೆಗಳ ಔನ್ಯತಿಯು (ಪ್ರಗತಿಯು) ಜವಳಿ, ಸಕ್ಕರೆ ಮತ್ತು ತಂಬಾಕು ಉದ್ಯಮಗಳು ಪ್ರಗತಿ ಹೊಂದಲು ಸಹಕಾರಿಯಾದವು. ತಂಬಾಕು ಕೃಷಿಯ ಆರೋಗ್ಯ ಸಂಬಂಧಿ ಉಪ-ಪರಿಣಾಮಗಳು, ಹೆಚ್ಚುವರಿಯಾಗಿರುವ ದವಸ ಧಾನ್ಯಗಳು ಹಾಗೂ ಗಂಭೀರವಾಗಿ ಪರಿಗಣಿಸಬಹುದಾದ ಬೆಳೆಗಳಿಗೆ ಸಂಬಂಧಪಟ್ಟಂತೆ ಹೊಸ ಕೃಷಿ ಸುಧಾರಣೆಗಳನ್ನು ಕೈಗೊಳ್ಳಲು ಈಗ ಕಾಲ ಸುಸಮಯವಾಗಿದೆ. ಹೆಚ್ಚುವರಿ ಬೆಳೆಗಳಾದ ಗೋಧಿ ಮತ್ತು ಭತ್ತ ಹಾಗೂ ಆರೋಗ್ಯಕ್ಕೆ ಹಾನಿಕಾರಕವಾದ ಬೆಳೆಯಾದ ತಂಬಾಕು ಮುಂತಾದ ಬೆಳೆಗಳಿರುವ ಪ್ರದೇಶವನ್ನು ಕಡಿತಗೊಳಿಸುವುದು (ಕಡಿಮೆ) ಸಂದಿಗ್ಧ ವಿಷಯವಾಗಿದೆ. ಜಾಗತಿಕ ಮತ್ತು ಸ್ಥಳೀಯ ಮಾರುಕಟ್ಟೆಗಳಲ್ಲಿ ಪರಿಣಾಮಕಾರಿಯಾದ ಪೈಪೋಟಿ ನಡೆಸಲು ಬೆಳೆ ವಲಯ ಸರಹದ್ದು ಮತ್ತು ಗುಣಾತ್ಮಕ ಕೃಷಿಯನ್ನು ಕೈಗೊಳ್ಳುವುದು ಅತ್ಯಗತ್ಯವಾಗಿದೆ. ಲಭ್ಯವಿರುವ ಬೆಳೆಗೆ ಪ್ರಶಸ್ತ್ಯವಾದ ಪರಿಸರಗಳನ್ನು ವಿವೇಚನೆಯಿಂದ ಉಪಯೋಗಿಸಿಕೊಳ್ಳಬೇಕು. ಪಂಜಾಬಿನಲ್ಲಿ ಮಿತಿಮೀರಿದ ಅಕ್ಕಿ ಮತ್ತು ಗೋಧಿ ಉತ್ಪಾದನೆ ಹಾಗೂ ಭಾರತದ ಇತರೆ ರಾಜ್ಯಗಳು ಆಹಾರ ಧಾನ್ಯಗಳಲ್ಲಿ ಸ್ವಾವಲಂಬಿಗಳಾದ್ದರಿಂದ ಈ ಪ್ರಸ್ತಾಪವು ಉಂಟಾಗಿದೆ. ಇದಲ್ಲದೆ, ನೀರಿನ ಕೊರತೆ ಇರುವ ಪ್ರದೇಶಗಳಲ್ಲಿನ ರೈತರಿಗೆ ಭತ್ತದ ಕೃಷಿಯನ್ನು ಕೈಗೊಳ್ಳದಂತೆ ಸಲಹೆ ನೀಡಬಹುದಾಗಿದೆ. ಆರ್ಥಿಕವಾಗಿ ಉತ್ಪಾದನಾ ಸಾಮರ್ಥ್ಯವಿರುವ ವಯಸ್ಕ (ಗುಂಪುಗಳಲ್ಲಿ) ರಲ್ಲಿ ಅಕಾಲಿಕ ಮರಣ ಮತ್ತು ರೋಗರುಜ್ಜಿನಗಳಿಂದಂಟಾಗುವ ಆರೋಗ್ಯ ಮೇಲಿನ ಹೊರೆ ಹಾಗೂ ಬಳಕೆದಾರರ ಮೇಲೆ ಉಂಟಾಗುವ ನೇರ ದುಷ್ಪರಿಣಾಮಗಳ ಕೃಷಿಯಿಂದ ತಂಬಾಕು ಕೃಷಿಯನ್ನು ಕಡಿತಗೊಳಿಸಲು ಇದೇ ತೆರನಾದ ನೀತಿಯ ಅಗತ್ಯವಿದೆ. ಪಂಜಾಬಿನಲ್ಲಿ ಉಂಟಾದ ಹಸಿರು ಕ್ರಾಂತಿಯು ಆ ರಾಜ್ಯದಿಂದ ತಂಬಾಕು ಕೃಷಿಯನ್ನು ಸಹ ಅಳಿಸಿ ಹಾಕಿದೆ. ಪಂಜಾಬ್ ರಾಜ್ಯದಲ್ಲಿ 1964 ತನಕ ಸುಮಾರು 1,000 ಹೆಕ್ಟೇರ್ ಪ್ರದೇಶ ತಂಬಾಕು ಕೃಷಿಯಡಿಯಲ್ಲಿತ್ತು. ಪಂಜಾಬಿನಲ್ಲಿ ಸರ್ಕಾರಿ ತಂಬಾಕು ಸಂಶೋಧನ ಕೇಂದ್ರವನ್ನು ಮುಚ್ಚಲಾಯಿತು. ಪಂಜಾಬಿನಲ್ಲಿ ಸರ್ಕಾರಿ ತಂಬಾಕು ಸಂಶೋಧನ ಕೇಂದ್ರವನ್ನು ಮುಚ್ಚಲಾಯಿತು. ಪಂಜಾಬಿನಲ್ಲಿ ಉಳಿದ ತಂಬಾಕು ಕೃಷಿಯಡಿಯಲ್ಲಿ ಪ್ರದೇಶವನ್ನು ಸಂಪೂರ್ಣವಾಗಿ ತೆಗೆದುಹಾಕಲಾಯಿತು. ತದನಂತರ ಅಮೇರಿಕಾದ ಹತ್ತಿಯ ಆಗಮನದೊಂದಿಗೆ ಆ ಪ್ರದೇಶವು ಹತ್ತಿ ಬಯಲಾಗಿ / ಹತ್ತಿ ಬೆಳೆಯುವ ಪ್ರದೇಶವಾಗಿ ಅಭಿವೃದ್ಧಿಗೊಂಡಿತು.

ಪರಿಸಮಾಪ್ತಿಯಲ್ಲಿ ಈಗ ಕೃಷಿ ಮಾಡುತ್ತಿರುವ ಭಾರತದ ಕೃಷಿ ಪ್ರದೇಶಗಳಲ್ಲಿ(ತಂಬಾಕೇನು) ತಂಬಾಕು ಸಾಂಪ್ರದಾಯಕ ಬೆಳೆಯೇನಾಗಿರಲಿಲ್ಲ. ಅನುಭೋಗಿ ಸ್ನೇಹಿ, ರಫ್ತು ಸಾಮರ್ಥ್ಯ ಹೊಂದಿರುವ, ಕೊನೆ ಪಕ್ಷ ಸಮಾಂತರ ಲಾಭಾಂಶವನ್ನು ನೀಡುವ ಬೆಳೆಗಳಿಂದ ತಂಬಾಕು ಕೃಷಿ ಸ್ಥಾನವನ್ನು ತುಂಬಬಹುದು. ಸೌಮ್ಯ ಉಷ್ಣಾಂಶವಿರುವ ವಾತವರಣದಲ್ಲಿ ಬೆಳೆಯಬಹುದಾದ ಸಮಂಜಸ ಪರ್ಯಾಯ ಬೆಳೆಯಾದ ಪ್ಲಾಂಟಾಗೊವನ್ನು ಬೆಳೆಯಲು ಸರ್ಕಾರ ಉತ್ತೇಜನ, ಪ್ರೋತ್ಸಾಹ ನೀಡಬಹುದಾಗಿದೆ. ನೀಲಿ ಪೆಟ್ಟಿಗೆ ಅಥವಾ ಹಸಿರು ಪೆಟ್ಟಿಗೆ ತಂತ್ರಗಳಡಿಯಲ್ಲಿ ಸರ್ಕಾರದ ಬೆಂಬಲದೊಂದಿಗೆ ಸಂಬಂಧ ಪಟ್ಟ ಪ್ರದೇಶಗಳಲ್ಲಿ ಈ ಮೊದಲೇ ಬೆಳೆದ ಇತರೆ ಬೆಳೆಗಳಿಗೆ ಬದಲಾಗುವುದರಲ್ಲಿಯೇ ಅಡಗಿರುವುದು (ಇರುವುದು) ಸಾಮರ್ಥ್ಯ. ಇದನ್ನೆಲ್ಲ ಮಾಡಲು ರೈತರನ್ನು ಅಪತ್ರಾಂಕಿತ ಅಧಿಕಾರಿಗಳನ್ನು (ಎನ್‌ಜಿ.ಓ) ವಿಸ್ತಾರಣಾ ಕಾರ್ಯಕರ್ತರನ್ನು, ವಿಜ್ಞಾನಿಗಳನ್ನು ನೀತಿ ನಿರ್ಮಾತೃಗಳನ್ನು ಒಳಗೊಂಡ ದೀರ್ಘಕಾಲದ ಸುಸಜ್ಜಿತ ಸುಸಂಘಟಿತ ಕೌಶಲ್ಯದ ಅಗತ್ಯವಿದೆ ಎಂಬುದರಲ್ಲಿ ಸಂದೇಹವೇ ಇಲ್ಲ.

# ಉತ್ಪಾದಿಸುವುದು ಅಥವಾ ಉತ್ಪಾದಿಸುವುದು ಬೇಡ / ಉತ್ಪಾದಿಸುವುದಿಲ್ಲ
# ಬಾಂಗ್ಲದೇಶದಲ್ಲಿ ತಂಬಾಕು ಬಿಕ್ಕಟ್ಟನ್ನು ನಿಭಾಯಿಸುವುದು (ಪರಿಚಯಿಸುವುದು)

ಫಿರ್ದೌಸಿ ನಜೀರ್, ಉಪನ್ಯಾಸಕರು, ಅರ್ಥಶಾಸ್ತ್ರವಿಭಾಗ, ಢಾಕಾ ವಿಶ್ವವಿದ್ಯಾನಿಲಯ ಮತ್ತು
ಎ.ಎಂ. ಆರ್. ಚೌದ್ರಿ, ಉಪಕಾರ್ಯ ನಿರ್ವಾಹಕ ನಿರ್ದೇಶಕರು,
ಮತ್ತು ಸಂಶೋಧನಾ ನಿರ್ದೇಶಕರು, ಬಿ. ಆರ್. ಎ. ಸಿ.

## ಸಂಪಾದಕೀಯ

ಇತ್ತೀಚೆಗೆ ಬಾಂಗ್ಲಾದೇಶದಲ್ಲಿ ಕೈಗೊಂಡ ಸಂಶೋಧನೆಯ ಇಂಗಿತದ ಪ್ರಕಾರ ಅನೇಕರು ನಂಬುವಂತೆ ತಂಬಾಕು ಲಾಭದಾಯಕವಲ್ಲ ಎನ್ನಬಹುದಾಗಿದೆ. ಪರಿಸರಕ್ಕೆ ಕಡಿಮೆ ಹಾನಿಯುಂಟುಮಾಡುವ ಮತ್ತು ರೈತನ ಆರೋಗ್ಯಕ್ಕೆ ಪ್ರಯೋಜನ ಕಾರಿಯು ಆದ ತರಕಾರಿ ಮತ್ತು ಸೂರ್ಯಕಾಂತಿ ಬೆಳೆಗಳು ತಂಬಾಕಿಗಿಂತ ಹೆಚ್ಚು ಲಾಭವನ್ನು ತಂದುಕೊಡುವ ಬೆಳೆಗಳಾಗಿವೆ ಎಂಬುದನ್ನು ಈ ಅಧ್ಯಯನದ ಲೇಖಕರು ಕಂಡುಕೊಂಡಿದ್ದಾರೆ. ಈ ಕೆಳಗಿನ ಕಾರ್ಯಕಾರಣಿ ಸಾರಾಂಶವು ಅಧ್ಯಯನದ ಪ್ರಮುಖ ಸಂಗತಿಗಳನ್ನು ಮುಂದಿಡುತ್ತಾ ಸದೃಢವಾದ ಆರ್ಥಿಕ ಕಾರ್ಯಕೌಶಲ್ಯಗಳೆಂದರೆ ತಂಬಾಕು ಉದ್ಯಮವನ್ನು ಬಿಟ್ಟು ಇತರೆ ಆರ್ಥಿಕ ಕ್ಷೇತ್ರಗಳಲ್ಲಿ ಅಥವಾ ವಲಯಗಳಲ್ಲಿ ಬಂಡವಾಳ ತೊಡಗಿಸುವುದು ಎಂಗು ಅರ್ಥ ಎಂಬ ವಾದವನ್ನು ಮಂಡಿಸುತ್ತದೆ.

## ಕಾರ್ಯಕಾರಣಿ ಆಶಯ

ಈ ಅಧ್ಯಾಯವು ಬಾಂಗ್ಲದೇಶದ ತಂಬಾಕು ಕೃಷಿಯ ಆರ್ಥಿಕತೆಗಳಡೆಗೆ ಒಳ ದೃಷ್ಟಿಯನ್ನು ಬೀರುತ್ತದೆ. ಬಾಂಗ್ಲದೇಶದಲ್ಲಿ ತಂಬಾಕು ಕೃಷಿಯನ್ನು ಅನೇಕ ವರ್ಷಗಳಿಂದ ಮಾಡಲಾಗುತ್ತದೆ. ದೇಶದ ಅನೇಕ ಭಾಗಗಳಲ್ಲಿ ಈ ಬೆಳೆಯನ್ನು ಬೆಳೆಯುತ್ತಿದ್ದರೂ ಕೂಡ ಈಗ ರಂಗ್ಪುರ್ ಮತ್ತು ಕೃಷಿಯ ಪ್ರದೇಶಗಲ್ಲಿ ಪ್ರಮುಖ ಕೇಂದ್ರಗಳಾಗಿವೆ. ಚಿತ್ತಗಾಂಗ್ ಬೆಟ್ಟ ಪ್ರದೇಶಗಳಲ್ಲಿ ಕಾಡನ್ನು ಕಡಿದು ತಂಬಾಕು ಕೃಷಿಗೆ ಅಣಿಗೊಳಿಸುತ್ತಿರುವುದು ಇತ್ತೀಚೆಗೆ ವರದಿಯಾಗಿದೆ. ವಿವಿಧ ತಂಬಾಕು ಕಂಪನಿಗಳ ಆಶ್ರಯವು ಇಂಥ ತ್ವರಿತ ಬೆಳವಣಿಗೆಯ ಒಂದು ಪ್ರಮುಖ ಉಗಮ ಸ್ಥಾನವಾಗಿದೆ. ಸಂಭಾವನೀಯ ಅಗ್ಗಬೆಲೆಯ ಹುಡುಕಾಟದ ತಮ್ಮ ಸಂಶೋಧನೆಗಳ ಫಲವಾಗಿ ಈ ಕಂಪನಿಗಳು ರೈತರು ಮತ್ತವರ ಕುಟುಂಬಗಳ ಯಶಸ್ವಿಗೆ ಹಾಗೂ ಪ್ರಗತಿಗೆ ವಿಜಯದ ಎಲೆಯಂತೆ ತಂಬಾಕು ಕೃಷಿಗೆ ಒತ್ತಾಸೆ ಕೊಟ್ಟು ಉತ್ತೇಜಿಸುತ್ತಿದ್ದಾರೆ. ಸ್ಥೂಲ ಆರ್ಥಿಕ ಕೃಷಿಯಿಂದ ಸರ್ಕಾರಕ್ಕೆ ಇದೊಂದು ಉತ್ತಮ ಆದಾಯವಿರುವ ಮೂಲವಾಗಿ ಕಂಡುಬಂದಿದೆ.

ಸ್ಥೂಲ ಮಟ್ಟದಲ್ಲಿ, ತಂಬಾಕು ಕೃಷಿಯ ಎತ್ತರಕ್ಕೆ ತಲುಪಿದಂತೆ ತೋರಿಬಂದರೂ ಅದು ಈಗ ಕ್ರಮೇಣವಾಗಿ ಕುಸಿಯುತ್ತಾ ಇದೆ. ಆದರೆ ಖಾತ್ರಿಯಾದ ಅವನತಿ ಹಾದಿಯನ್ನು ತಳಿಯದಿರುವುದು ಸ್ಪಷ್ಟವಾಗಿದೆ. ಅದು ಅಲ್ಲದೆ ನಮ್ಮ ಮೋಜಣಿಯು ತೋರಿಸುವಂತೆ ಸೂಕ್ಷ್ಮ ಮಟ್ಟದಲ್ಲಿ ಈ ಬೆಳೆಯು ಹೆಚ್ಚುತ್ತಿರುವ ಮಹತ್ವವನ್ನು ಪಡೆಯುತ್ತಿದೆ. ದೇಶದ ಕಾಲು ಭಾಗ ಮಾದರಿ ರೈತರು ಕಳೆದ ಐದು ವರ್ಷದಲ್ಲಿ ತಂಬಾಕು ಕೃಷಿಯನ್ನು ಕೈಗೊಂಡಿದ್ದಾರೆ. ಈ ಬೆಳೆಯಿಂದ ಬರುವ ಲಾಭಂಶವು ಸ್ಪಷ್ಟವಾಗಿ ಈ ಚಮತ್ಕಾರದ ಹಿಂದಿರುವ ಚಾಲನಾಶಕ್ತಿಯಾಗಿದೆ. ಅಷ್ಟೇ ಲಾಭದಾಯಕವಾದ ಕೆಲವು ಪರ್ಯಾಯ ಬೆಳೆಗಳೊಂದಿಗೆ ತಂಬಾಕು ಸಹ ತುಂಬಾ ಲಾಭದಾಯಕ ಬೆಳೆ ಎಂಬ ಕೀರ್ತಿಗೆ ಪಾತ್ರವಾಗಿದೆ.

300 ಜನ ತಂಬಾಕು ಮೋಜಣಿ ಫಲಿತಾಂಶವು ಇದಕ್ಕೆ ವ್ಯತಿರಿಕ್ತವಾದ ಅಂಶಗಳನ್ನು ಹೊರಗೆಡುವಿದೆ. ತಂಬಾಕು ಕೃಷಿಗೆ ತೀವ್ರ ಶ್ರಮ ಬೇಕಾಗುತ್ತದೆ. ಬಹಳಷ್ಟು ರೈತರು ತಮ್ಮ ಕುಟುಂಬದ ಶ್ರಮವನ್ನು ಈ ಕೃಷಿಯಲ್ಲಿ ತೊಡಗಿಸುತ್ತಾರೆ. ಶ್ರಮಕ್ಕಾಗಿ ವ್ಯಯಿಸಿದ ಒಟ್ಟು ಆರ್ಥಿಕ ವೆಚ್ಚದಲ್ಲಿ ಶೇ 50ರಷ್ಟು ಕುಟುಂಬದ ಶ್ರಮವನ್ನು ಒಳಗೊಂಡಿರುತ್ತದೆ ಎಂದು ಈ ಅಧ್ಯಯನದಿಂದ ತಿಳಿದು ಬಂದ ಸಂಗತಿಯಾಗಿದೆ. ಹೀಗೆ ತೊಡಗಿದ ಶ್ರಮದ ಮೌಲ್ಯವನ್ನು ಗಣನೆಗೆ (ಲೆಕ್ಕಕ್ಕೆ) ತೆಗೆದುಕೊಂಡರೆ ತಂಬಾಕು ತನ್ನ ಲಾಭಾಂಶದಲ್ಲಿ ಬಹಳಷ್ಟನ್ನು ಕಳೆದುಕೊಳ್ಳುತ್ತದೆ. ಒಂದು ಎಕರೆಯಿಂದ ಬಂದ ಒಟ್ಟು ಅವಧಿಯನ್ನು ತಮ್ಮ ಶ್ರಮಕ್ಕಾಗಿ ದೊರೆತ ಹೆಚ್ಚಿನ ಪ್ರತಿಫಲವೆಂದು ತಿಳಿಯಬಾರದು. ಆದ್ದರಿಂದ, ಮೌಲ್ಯಧಾರಿತ - ಲಾಭಾಂಶದ ಪ್ರಮಾಣದಲ್ಲಿ ತೂಗಿದಾಗ ಇತರೆ ಆಹಾರ ಹಾಗೂ ವಾಣಿಜ್ಯ ಬೆಳೆಗಳಿಗಿಂತ ತಂಬಾಕು ಕಡಿಮೆ ಅನುಪಾತದ ಇಳುವರಿಯನ್ನು ನೀಡುವುದು. ದಿಟವಾಗಿ ನಮ್ಮ ಅಧ್ಯಯನದಲ್ಲಿ ಇಂಥ ಅನೇಕ ಬೆಳೆಗಳಾದ ಮೆಕ್ಕೆ ಜೋಳ, ಆಲೂಗಡ್ಡೆ ಕಬ್ಬು, ಸೂರ್ಯಕಾಂತಿ, ಹೂವುಕೋಸು, ಸುಗಂಧರಾಜ ಮುಂತಾದವುಗಳನ್ನು ಗುರುತಿಸಿದ್ದೇವೆ. ಗವಾಕ್ಷಿಯಲ್ಲಿ ಬೇಯಿಸುವ ತಂಬಾಕು ಮತ್ತು ಬಿಸಿಲಲ್ಲಿ ಬೇಯಿಸುವ ತಂಬಾಕುಗಳಿಗೆ ತಗುಲುವ ವಾಸ್ತವ ಖರ್ಚಿನಲ್ಲಿ ವ್ಯತ್ಯಾಸವಿದ್ದು ಮೊದಲನೆ ಪದ್ದತಿಯನ್ನು ಕೈಗೊಳ್ಳುವ ರೈತನಿಗೆ ಎರಡನೆ ಪದ್ಧತಿಯಲ್ಲಿ ತಂಬಾಕನ್ನು ಬೇಯಿಸುವುದಕ್ಕೆ ಎರಡು ಪಟ್ಟು ಹಣ ವ್ಯಯವಾಗುತ್ತದೆ. ಹೊರಗಿನಿಂದ ಶಾಖ ಕೊಟ್ಟು ಬ್ಯಾರ್ನ್‌ನಲ್ಲಿ ಎಲೆಗಳನ್ನು ಒಣಗಿಸುವುದನ್ನು ಗವಾಕ್ಷಿಯಲ್ಲಿ ತಂಬಾಕು ಬೇಯಿಸುವುದು ಒಣಗಿಸುವುದು ಎನ್ನುತ್ತೇವೆ. ಹಾಗೂ ಸೂರ್ಯನ ಕಿರಣಗಳಿಲ್ಲಿ ತಂಬಾಕು ಎಲೆಗಳನ್ನು ಒಣಗಿಸುವುದಕ್ಕೆ ಬಿಸಿಲಲ್ಲಿ ಬೇಯಿಸಿ/ ಒಣಗಿಸಿದ ತಂಬಾಕು ಎನ್ನುತ್ತೇವೆ. ರಂಗ್ಪೂರ್‌ನಲ್ಲಿ ಹೆಚ್ಚಾಗಿ ಬೆಳೆಯುವ ಬಿಸಿಲಲ್ಲಿ ಒಣಗಿಸಿದ ತಂಬಾಕು ಈ ಪದ್ಧತಿಯು ಅನೇಕ ಆರ್ಥಿಕವಾಗಿ ಲಾಭದಾಯಕವಾದ ಪರ್ಯಾಯ ಬೆಳೆಗಳಾದ ಬೋರೊ ಭತ್ತ, ಗೋಧಿ ಮೆಕ್ಕೆ ಜೋಳ, ಆಲೂಗೆಡ್ಡೆ, ಹೂವು ಕೋಸು ಮತ್ತು ಸುಗಂಧ ರಾಜ ಮುಂತಾದವುಗಳನ್ನು ಹೊಂದಿದೆ. ಕೃಷಿಯಾದಲ್ಲಿ ಪ್ರಮುಖವಾಗಿ ಬೆಳೆಯುವ ಗವಾಕ್ಷಿಯಲ್ಲಿ ಒಣಗಿಸಿದ / ಬೇಯಿಸಿದ ತಂಬಾಕು ಪದ್ಧತಿಯ ಪರ್ಯಾಯ ಬೆಳೆಗಳ ವಲಯವು ತುಂಬಾ ಕಡಿಮೆ ಇದ್ದು ಕಬ್ಬು ಮತ್ತು ಸುಗಂಧರಾಜ ಬೆಳೆಗಳನ್ನು ಮಾತ್ರ ಒಳಗೊಂಡಿದೆ.

ಸಾಮಗ್ರಿ ಸಲಕರಣೆಗಳ ಕೃಷಿಯಿಂದಲೂ, ಇತರೆ ಬೆಳೆಗಳಿಗಿಂತ ತಂಬಾಕು ಬೆಳೆಯು ಹೆಚ್ಚು ಖರ್ಚುದಾಯಕವಾದದ್ದು. ಒಣಗಿಸಲು ಬೇಕಾದ ಸೌದೆ ಮತ್ತು ರಸಗೊಬ್ಬರಗಳಿಗೆ ಹೆಚ್ಚಿನ ಮೊತ್ತದ ಹಣ ಖರ್ಚಾಗುತ್ತದೆ. ಈ ಎರಡು ಬಾಬುಗಳು ಉತ್ಪಾದನೆಯ ಒಟ್ಟು ಖರ್ಚಿನಲ್ಲಿ ಶೇಕಡವಾರು 50ಕ್ಕಿಂತ ಹೆಚ್ಚಾಗಿರುತ್ತದೆ. ತಂಬಾಕು ಕೃಷಿಗೆ ತೀವ್ರ ಸ್ವರೂಪದ ಖರ್ಚು ತಗುಲುವುದರಿಂದ ಉತ್ಪಾದನೆಯ ಸಮಯದಲ್ಲಿ ಗಣನೀಯ ಪ್ರಮಾಣದ ಬಂಡವಾಳ ಬೇಕಾಗುತ್ತದೆ. ರೈತರು ಆಗಾಗ್ಗೆ ಹೊರಗಡೆಯಿಂದ ಸಾಲವನ್ನು ಪಡೆಯಬೇಕಾಗುತ್ತದೆ. ಬಹಳಷ್ಟು ರೈತರು ಸಣ್ಣ ಹಾಗೂ ಅತ್ಯಲ್ಪ ಪ್ರಮಾಣದ ವರ್ಗಕ್ಕೆ ಸೇರಿದವರಾಗಿರುತ್ತಾರೆ. ಅವರ ಹೆಸರನ್ನು ಇಲ್ಲಿ ಹೇಳುವ ಅಗತ್ಯವಿಲ್ಲ. ಇವುಗಳಲ್ಲಿ ಬಹು ಸಂಖ್ಯಾ ಸಾಲಗಳು ತಂಬಾಕು ಸಂಬಂಧಿಯಾದ್ದರಿಂದ ಬಡವರು ಹೆಚ್ಚು ಇದರ ಮೇಲೆ ಅವಲಂಬಿತರಾಗಿರುತ್ತಾರೆ. ಅದು ಅಲ್ಲದೆ, ಹೆಚ್ಚಿನ ವಹಿವಾಟು ದರದಿಂದಾಗಿ ಸರಳ ಸೂತ್ರದ ಆಧಾರದ ಮೇಲೆ ಸಾಲ ನೀಡುವ ಔಪಚಾರಿಕ ಹಣಕಾಸು ಸಂಸ್ಥೆಗಳ ಬಳಿ ಸಾಲ ನಿರೀಕ್ಷಿಸಿದೆ. ಅತಿ ಹೆಚ್ಚು ಬಡ್ಡಿ ವಿಧಿಸುವ ಹಳ್ಳಿ ಲೇವಾದೇವಿಗಾರರ ಬಳಿ ಹಣ , ಸಾಲ ಪಡೆಯುವುದು ರೈತರಿಗೆ ಅನಿವಾರ್ಯವಾಗುತ್ತದೆ. ಲಾಭಾಂಶದ ದೃಷ್ಟಿಯಿಂದ, ಅಷ್ಟೇ ಅಲ್ಲದೆ ರೈತರು ತಂಬಾಕು ಬೆಳೆಯುವಂತೆ ನಿರ್ಧಾರ ಕೈಗೊಳ್ಳಲು, ಖಾತ್ರಿಯಾದ ಮಾರುಕಟ್ಟೆಗಳು ಮತ್ತು ಕೂಡಲೇ ಸಿಗುವ ಹಣ - ಇವುಗಳು ಸಹ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಬುದ್ಧಿವಂತ ಮತ್ತು ವಿವೇಕವುಳ್ಳ ರೈತನು ಬೇಗನೆ ನಾಶ ಹೊಂದುವಂತ ಹಾಗೂ ಅವುಗಳನ್ನು ಕೊಳ್ಳಲು ಅರ್ಹ ವ್ಯಕ್ತಿಗಳು ಸಿಗದಂತ ಬೆಳೆಗಳನ್ನು ಉತ್ಪಾದಿಸಲು

ಇಚ್ಚಿಸುವುದಿಲ್ಲ. ಮತ್ತೊಂದು ರೀತಿಯಲ್ಲಿ, ತಂಬಾಕು ಕಡಿಮೆ ದರದಲ್ಲಿ ಮಾರಾಟವಾದರೂ ಅದನ್ನು ಕೊಳ್ಳುವಂತಹವರು ಇರುವರೆಂದು ರೈತನಿಗೆ ತಿಳಿದಿರುವ ವಿಷಯವಾಗಿದೆ. ವಿವಿಧ ತಂಬಾಕು ಕಂಪನಿಗಳ ಕೃಪಾಶ್ರಯವು ತಂಬಾಕು ಎಲ್ಲೆಡೆ ಹರಡುವಂತಾಗಲು ಒಂದು ಬಹು ಮುಖ್ಯ ಪ್ರಚೋದನಾಶಕ್ತಿಯಾಗಿದೆ. ಈ ಕಂಪನಿಗಳು ದೊಡ್ಡ ಪ್ರಮಾಣದ ರೈತರುಗಳು ಮತ್ತು ಸಂಧಾನ ಮಾಧ್ಯಮವಾಗಿರಬಹುದಾದ ಸ್ವ ದಾಖಲಿತ ಒಪ್ಪಂದ ಮಾಡಿಕೊಂಡ ಬೆಳೆಗಾರರನ್ನು ಹೊಂದಿವೆ. ನಂತರ ಈ ರೈತರುಗಳಿಗೆ ಬೇಕಾದಂತಹ ಬಿತ್ತನೆಯ ಬೀಜಗಳು, ರಸಗೊಬ್ಬರಗಳು, ಕ್ರಿಮಿನಾಶಕಗಳು ಹಾಗೂ ತಾಂತ್ರಿಕ ಸಹಾಯವನ್ನು ಒಂದಾಗಿಸುತ್ತವೆ. ಬಳಕೆದಾರರ ಆಯ್ಕೆಗಳು ಮತ್ತು ಮಾರುಕಟ್ಟೆ ಬೇಡಿಕೆಗೆ ಅವಲಂಬಿತವಾಗಿ ಮೊದಲೇ ನಿರ್ಧರಿಸಿದ ಬೆಲೆಗೆ (ಪೂರ್ವನಿರ್ಧಾರಿಸಿದ ಬೆಲೆಗೆ (ಪೂರ್ವ ನಿರ್ಧಾರ) ಕೊಳ್ಳಲು ಸಾಧ್ಯವಾಗುವಂತೆ ಈ ಕಂಪನಿಗಳು ಕರಾರುವಕ್ಕಾದ ಶ್ರೇಣಿ ಮತ್ತು ಗುಣಮಟ್ಟದ ಎಲೆಗಳನ್ನು ಬೆಳೆಯುವಂತೆ ರೈತರಿಗೆ ಮಾಹಿತಿ ನೀಡುತ್ತವೆ. ಹೀಗಾಗಿ ಒಪ್ಪಂದ ಮಾಡಿಕೊಂಡ ಬೆಳೆಗಾರರ ಆರ್ಥಿಕ ಸ್ಥಿತಿ ಇತರರಿಗಿಂತ ಉತ್ತಮವಾಗಿರುತ್ತದೆ ಎಂಬುದು ಸ್ಪಷ್ಟವಾದ ಕಾರಣವಾಗಿದೆ, ವಾಸ್ತವವಾಗಿ, ಪ್ರತ್ಯಾಕ್ಷಕ ಪರಿಣಾಮವು ಇಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸುತ್ತದೆ. ಒಪ್ಪಂದ ಮಾಡಿಕೊಳ್ಳದ ರೈತನು ನೆರೆಯ ಬೆಳೆಗಾರರನ್ನು ನೋಡಿ ಆಕರ್ಷಿಸಲ್ಪಟ್ಟ ತಂಬಾಕು ಕೃಷಿ ಕೈಗೊಂಡು ಇದ್ದಕ್ಕಿಂದಂತೆ ಹೆಚ್ಚು ಹಣವನ್ನು ಗಳಿಸುತ್ತಾನೆ. (ಮುಂದೆ ಒಪ್ಪಂದ - ಬೆಳೆಗಾರನಾಗುತ್ತಾನೆ).

ಇವರಿಗೆ ಕಂಪನಿಗಳ ಪರೋಕ್ಷ ಕೃಪಾಶ್ರಯವಿರುತ್ತದೆ. ಒಪ್ಪಂದ ಬೆಳೆಗಾರರಷ್ಟೆ ಅಲ್ಲದೆ ಈ ಕಂಪನಿಗಳು ತಂಬಾಕು ಎಲೆಗಳನ್ನು ಪೂರೈಕೆ ಮಾಡುವ ವ್ಯಾಪಾರಸ್ಥರನ್ನು ಸಹ ಹೊಂದಿರುತ್ತದೆ. ಈ ವ್ಯಾಪಾರಿಗಳು ತಮಗೆ ಬೇಕಾದ ಲಾಭಾಂಶವನ್ನು ಸಂರಕ್ಷಿಸಿಕೊಂಡು (ಇಟ್ಟುಕೊಂಡು) ರೈತರಿಂದ ತಂಬಾಕನ್ನು ಖರೀದಿ ಮಾಡುತ್ತಾರೆ. ವಾಸ್ತವವಾಗಿ, ನಮ್ಮ ಮೋಜಣಿಯಲ್ಲಿ ಕಂಡಂತೆ ಬಹಳಷ್ಟು ರೈತರು ತಮ್ಮ ಉತ್ಪನ್ನವನ್ನು ಈ ವ್ಯಾಪಾರಿಗಳಿಗೆ ಮಾರಾಟ ಮಾಡಿರುವುದು ಬೆಳಕಿಗೆ ಬಂದಿದೆ.

ತಂಬಾಕು ಆರೋಗ್ಯ ಮತ್ತು ಪರಿಸರಕ್ಕೆ ಅಪಾಯ ಹಾಗೂ ಹಾನಿಕಾರಕ. ಹೊಲಗಳಿಂದ ಹೊರ ಹೊಮ್ಮುವ ತಂಬಾಕು ವಾಸನೆಯನ್ನು ನಿರಂತರವಾಗಿ ಉಸಿರಾಡುವುದರಿಂದ (ಒಳಗೆ ತೆಗೆದುಕೊಳ್ಳುವುದರಿಂದ) ಆಗಾಗ್ಗೆ ತಲೆಸುತ್ತುವಿಕೆ, ಓಕರಿಕೆ ಹಾಗೂ ವಾಂತಿ ಉಂಟಾಗುತ್ತದೆ. ರಾಸಾಯನಿಕಗಳಲ್ಲಿ ಮಿಂದು ಹಸಿರು ಎಲೆಗಳನ್ನು ಕಟಾವ್ ಮಾಡುವಾಗ ಚರ್ಮವು ಹೀರಿಕೊಳ್ಳುವ ಸಸ್ಯ ಕ್ಷಾರ ವಿಷದಿಂದ (ನಿಕೋಟಿನ್) ಹಸಿರು ತಂಬಾಕು ಅಸ್ವಸ್ಥತೆ ಎಂಬ ರೋಗ ಉಂಟಾಗುತ್ತದೆ. ತಂಬಾಕು ಎಲೆಗಳನ್ನು ಬೇಯಿಸಿ ಹದಮಾಡುವುದು, ರಸಾಯನಿಕ ರಸಗೊಬ್ಬರಗಳ ವಿಪರೀತ ಬಳಕೆಯು ಪರಿಸರದ ಅವನತಿಗೆ ಕಾರಣವಾಗುತ್ತವೆ. ಕುತೂಹಲಕಾರಿ ವಿಷಯವೆಂದರೆ ಬಹು ಸಂಖ್ಯೆಯ ರೈತರು ಈ ಬಗ್ಗೆ ಅರಿವುಳ್ಳವರಂತೆ ಕಂಡುಬಂದಿದೆ. ಈ ಮೋಜಣಿಯು ಸರ್ವೇಕ್ಷಣೆ ನಿರ್ದೇಸಿರುವ / ಸೂಚಿಸಿರುವ ಅಂಶವೇನೆಂದರೆ ರೈತರು ತಂಬಾಕು ಉತ್ಪಾದನೆಯನ್ನು ತ್ಯಜಿಸಲು ಇಚ್ಚೆವುಳ್ಳವರಾಗಿದ್ದಾರೆ. ಆದರೆ ಅವರಿಗೆ ಸಾಧ್ಯವಿರುವ ಪರ್ಯಾಯಗಳ ಬಗೆಗಾಗಲಿ ಅಥವಾ ಬದಲಾಗಲು ಸರಿಯಾದ ಸಾಧನ ಮಾರ್ಗಗಳ ಬಗೆಗಾಗಲಿ ಸರಿಯಾದ ಮಾಹಿತಿ ಮತ್ತು ಮಾರ್ಗದರ್ಶನ ಸಿಕ್ಕಲಿಲ್ಲ.

ಈ ಉದ್ಯಮವು ಅತಿ ಹೆಚ್ಚಿನ ತೆರಿಗೆಯನ್ನು ಭರಿಸುವುದರಿಂದ ತಂಬಾಕು ಸರ್ಕಾರದ ಖಜಾನೆಗೆ ಮಹತ್ವದ ಕೊಡುಗೆದಾರ ಎಂದು ವಾದಿಸಲಾಗಿದೆ. ಅದೇನೆ ಇರಲಿ, ತಂಬಾಕು "ಗುಣಹೇನ ", ನಾಗಿರುವುದರಿಂದ ಸರ್ಕಾರಕ್ಕೆ ಇದರಿಂದ ಎಷ್ಟೇ ಆದಾಯವಿದ್ದರೂ ತಂಬಾಕು ಕೃಷಿಯನ್ನು ಪ್ರೋತ್ಸಾಹಿಸಲಾಗದು. ತಂಬಾಕು ಒಂದು ಗುಣಹೇನ ಬೆಳೆಯೆಂದು ಅರ್ಥ ಮಾಡಿಕೊಳ್ಳುವುದು ಸರ್ಕಾರದ

ಕರ್ತವ್ಯವಾಗಿದೆ. ತಂಬಾಕು ಸಂಬಂಧಿ ರೋಗಗಳ ಪ್ರತ್ಯಕ್ಷ ಮತ್ತು ಪರೋಕ್ಷ ಖರ್ಚುಗಳನ್ನು ಈ ಬೆಳೆಯಿಂದ ಬಂದ ಆದಾಯದಿಂದ ಪ್ರತಿತೋಲನ ಮಾಡಲಾಗುತ್ತದೆ (ಸರಿತೂಗಿಸಲಾಗುತ್ತದೆ). ಆದುದರಿಂದ ಈ ಸರಕಿನ ಬಳಕೆ ಮತ್ತು ಉತ್ಪಾದನೆಯನ್ನು ಮೊಟಕುಗೊಳಿಸಲು ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಲೇ ಬೇಕಾಗಿದೆ. ಇದರೊಂದಿಗೆ, ಯಥೋಚಿತವಾದ ಕೃಷಿ ವಿಸ್ತರಣಾ ಸೇವೆಗಳ ಮೂಲಕ ತಂಬಾಕಿಗೆ ಬದಲು ಪ್ರಶಂಸನೀಯ ಮತ್ತು ಶಕ್ಯವಿರುವ ಪರ್ಯಾಯ ಬೆಳೆಗಳನ್ನು ರೈತರಿಗೆ ತೋರಿಸಬೇಕಾಗಿದೆ. ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸುವುದು, ನ್ಯಾಯಸಮ್ಮತ ಬೆಲೆಗಳ ಮೇಲೆ ಆಧಾರಭೂತವಾದ ಸಂಪಾದನಾ ಕಾರ್ಯಕಾರಣ ಸಾಮರ್ಥ್ಯಗಳನ್ನು ಆಚರಣೆಗೆ ತರುವುದು ಹಾಗೂ ಸಂಗ್ರಹಣ ಸೌಲಭ್ಯಗಳನ್ನು ಹೆಚ್ಚಿಸುವುದು ಕೂಡ ರೈತರು ತಂಬಾಕು ಬೆಳೆಯನ್ನು ಬೆಳೆಯುವುದನ್ನು ತೊರೆಯಲು ತ್ಯಜಿಸಲು ಪರಿವರ್ತಕನಂತೆ ಕೆಲಸ ಮಾಡುತ್ತದೆ. ತಂಬಾಕು ಬಳಕೆಯನ್ನು ಕಡಿಮೆಗೊಳಿಸುವ ಗುರಿಯನ್ನು ಹೊಂದಿರುವ ಬೇಡಿಕೆ ಭಾಗದ ಕ್ರಮಗಳೊಂದಿಗೆ ಮೇಲೆ ಬಣ್ಣಿಸಿದ ಪೂರೈಕೆ ಭಾಗದ ಕ್ರಮಗಳನ್ನು ಏಕೀಕರಿಸಬೇಕು. ಒಮ್ಮೆ ಈ ಸಾಧನಗಳನ್ನು ಪರಿಣಾಮಕಾರಿಯಾಗಿ ದುಡಿಸಿಕೊಂಡರೆ ಲಾಭದಾಯಕ ಎಂದು ಅನಿಸಿಕೊಳ್ಳುವ ಈ ಬೆಳೆಯ ಉತ್ಪಾದನೆಯನ್ನು ತೊರೆಯಲು ರೈತರು ಕಾರ್ಯಪ್ರವೃತ್ತರಾಗುವುದನ್ನು ನಾವು ನಿರೀಕ್ಷಿಸಬಹುದು ಹಾಗೂ "ಹಸಿರು" ಎಂಬ ನಿಜವಾದ ಅರ್ಥವನ್ನು ಹೊಂದಿರುವ ಬೆಳೆಗಳನ್ನು ಬೆಳೆಯಲು ಪ್ರಾರಂಭಿಸುತ್ತಾರೆ.

# ಬಾಂಗ್ಲಾದೇಶದಲ್ಲಿ ತಂಬಾಕು ಕೃಷಿಕರು
# ತಂಬಾಕು ಕಂಪನಿಗಳ ಶೋಷಣೆಯಲ್ಲಿ

ರರ್ತ ದೇಬ್ ಮತ್ತು ಅಮಿನುಲ್ ಇಸ್ಲಾಂ ಸುಜನ್,
ಒಂದು ಉತ್ತಮ ಬಾಂಗ್ಲಕ್ಕಾಗಿ ಕಾರ್ಯನಿರತ ಯೋಜನಾ ಅಧಿಕಾರಿಗಳು

**ಸಂಪಾದಕೀಯ**

ತಂಬಾಕು ಕೃಷಿಯ ಅರ್ಥ ವ್ಯವಸ್ಥೆಗೆ ಬಹು ಪ್ರಯೋಜನಕಾರಿ ಎಂಬುದನ್ನು ಅನೇಕ ಬಾರಿ ಮನಗಾಣಲಾಗಿದೆ. ಈ ಕೆಳಗಿನ ಸಂಶೋಧನೆಯು ನಿರ್ದೇಶಿಸುವುದೇನೆಂದರೆ ತಂಬಾಕು ಕೃಷಿಯು ಕೆಲವರಿಗೆ ಲಾಭದಾಯಕವಾದಾಗ, ಕನಿಷ್ಟ ಆರ್ಥಿಕ ಲಾಭಾಂಶವುಳ್ಳ ಬಹಳಷ್ಟು ಜನರಿಗೆ ಇದು ಹೊರೆಯಾದ ಉದ್ಯಮವಾಗಿದೆ. ರಾಷ್ಟ್ರೀಯ ಅಂಕಿಅಂಶಗಳು ಸೂಚಿಸುವುದೇನೆಂದರೆ, ಬಹುತೇಕ ತಂಬಾಕನ್ನು ಬೆಳೆಯುವ ಜಿಲ್ಲೆಯು ಅತ್ಯಂತ ಬಡ ಜಿಲ್ಲೆಗಳಲ್ಲಿ ಒಂದಾಗಿದೆ. ಬಾಂಗ್ಲದೇಶದಲ್ಲಿ ಅರಣ್ಯ ನಾಶಕ್ಕೆ ತಂಬಾಕು ಕೃಷಿಯು ಸಹ ಪ್ರಮುಖ ಕಾರಣವಾಗಿದೆ. ಇದು ಸರ್ಕಾರಕ್ಕೆ ಹೆಚ್ಚಿನ ಕಾಳಜಿ ಮತ್ತು ಕಳವಳಕ್ಕೆ ಕಾರಣವಾದ ಅಂಶವಾಗಿದೆ. ತಂಬಾಕು ನಿಯಂತ್ರಣ ಹಾಗೂ ನಗರದ ಪರಿಸರ ವಿಷಯ ಕ್ಷೇತ್ರಗಳಲ್ಲಿ ಕೆಲಸ ಮಾಡುವ "ಒಂದು ಉತ್ತಮ ಬಾಂಗ್ಲಾದೇಶಕ್ಕಾಗಿ ಶ್ರಮಿಸು ಅಥವಾ ದುಡಿ" ಎಂಬ ಸಂಘಟನೆಯಿಂದ ಈ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

**ಸಾರಾಂಶ**

ಬಾಂಗ್ಲಾದೇಶವು ಪ್ರಪಂಚದ ಪ್ರಮುಖ ತಂಬಾಕು ಉತ್ಪಾದಿಸುವ ದೇಶಗಳಲ್ಲಿ ಒಂದಾಗಾಗದಿದ್ದರೂ ಅದು ಪುಷ್ಕಳ ಪ್ರಮಾಣದ ಮೊತ್ತದ ತಂಬಾಕನ್ನು ಬೆಳೆಯುತ್ತಿದೆ. ತಂಬಾಕು ಕೃಷಿಗೆ ಮೀಸಲಿಟ್ಟ ಎಕರೆ ಪ್ರದೇಶಗಳು 1991 ರಿಂದ 2000ದಲ್ಲಿ ಬಹುತೇಕ 91,000 ಎಕರೆಗಳಿಂದ ಕೇವಲ 80,000 ಎಕರೆಗಳಿಗೆ ಕಡಿಮೆ ಮಾಡಲಾಗಿದೆ ಹಾಗೂ ಉತ್ಪಾದನೆ 34,000 ರಿಂದ 35,000 ಮೆಟ್ರಿಕ್ ಟನ್ಸ್‌ಗಳ ಲಘು ಪ್ರಮಾಣದಲ್ಲಿ ಹೆಚ್ಚಾಗಿದೆ.

**ಕೋಷ್ಟಕ - 1 :**

**1991-2000, ಬಾಂಗ್ಲಾದೇಶದಲ್ಲಿ ತಂಬಾಕು ಉತ್ಪಾದನೆ ಮತ್ತು ಪ್ರದೇಶ**

| ವರ್ಷ | 91-92 | 92-93 | 93-94 | 94-95 | 95-96 | 96-97 | 97-98 | 98-99 | 99-00 |
|---|---|---|---|---|---|---|---|---|---|
| ಪ್ರದೇಶ (ಎಕರೆಗಳಲ್ಲಿ) | 90,910 | 89,325 | 90,545 | 89,285 | 89,525 | 86,180 | 81,105 | 78,240 | 79,910 |
| ಉತ್ಪಾದನೆ (ಮೆ.ಟನ್ ಗಳಲ್ಲಿ) | 34,080 | 36,380 | 37,770 | 37,760 | 39,375 | 38,100 | 36,665 | 28,795 | 35,480 |

**ಕೃಪೆ** - ಬಾಂಗ್ಲದೇಶದ ಸಂಖ್ಯೆ ಸಂಗ್ರಹಣ ಕಾರ್ಯಾಲಯ ಬಾಂಗ್ಲಾದೇಶದ 2000 ವರ್ಷದ ಸಂಖ್ಯಾ ಸಂಗ್ರಹಣ, ವಹಿ ಡಾಕಾ, ಜೂನ್ 2002.

ಕೋಷ್ಟಕ 2ರಲ್ಲಿ ಕಾಣಸಿಗುವಂತೆ ರಂಗ್ಪುರ್ ಅತ್ಯಂತ ಮಹತ್ವವುಳ್ಳ ತಂಬಾಕು ಬೆಳೆಯುವ ಜಿಲ್ಲೆಯಾಗಿದ್ದು ಇದರೊಂದಿಗೆ ಇತರೆ ಜಿಲ್ಲೆಗಳು ಅದರಲ್ಲಿ ಒಂದಾದ ಕೃಷಿಯೂ ಸಹ ದೊಡ್ಡ ಪ್ರಮಾಣದ ತಂಬಾಕನ್ನು ಬೆಳೆಯುತ್ತದೆ.

**ಕೋಷ್ಟಕ - 2**

ಅತಿ ಹೆಚ್ಚು ತಂಬಾಕು ಕೃಷಿ ಇರುವ ಮೂಲು ಜಿಲ್ಲೆಗಳಲ್ಲಿನ ಎಕರೆವಾರು ತಂಬಾಕು ಉತ್ಪಾದನೆ 1991-2000 ಆಯ್ದ ವರ್ಷಗಳು (ಎಕರೆವಾರು ಪ್ರದೇಶಗಳು ಮತ್ತು ಉತ್ಪಾದನೆ ಮೆಟ್ರಿಕ್ ಟನ್ಸ್‌ಗಳಲ್ಲಿ)

| ಜಿಲ್ಲೆಗಳು | ಪ್ರದೇಶ ಮತ್ತು ಉತ್ಪಾದನೆ | 91-92 | 93-94 | 95-96 | 97-98 | 99-00 |
|---|---|---|---|---|---|---|
| ಕುಷ್ತಿಯಾ | ಪ್ರದೇಶ | 9,940 | 13,290 | 13,200 | 14,480 | 16,650 |
| | ಉತ್ಪಾದನೆ | 3,615 | 5,675 | 5,635 | 7,245 | 7,990 |
| ಚಿತ್ತಗಾಂಗ್ | ಪ್ರದೇಶ | 1,240 | 850 | 725 | 990 | 995 |
| | ಉತ್ಪಾದನೆ | 375 | 265 | 190 | 505 | 480 |
| ರಂಗ್ಪುರ್ | ಪ್ರದೇಶ | 59,180 | 63,375 | 64,300 | 57,320 | 50,860 |
| | ಉತ್ಪಾದನೆ | 23,375 | 27,630 | 29,635 | 26,130 | 23,970 |

ಕೃಪೆ - ಬಾಂಗ್ಲಾದೇಶದ ಸಂಖ್ಯಾ ಸಂಗ್ರಹಣ ಕಾರ್ಯಲಯ, ಬಾಂಗ್ಲಾದೇಶದ 2000 ವರ್ಷದ ಸಂಖ್ಯಾ ಸಂಗ್ರಹಣ ವಹಿ (ಪುಸ್ತಕ) ಡಾಕಾ. ಜೂನ್ 20002.

ಕುತೂಹಲಕಾರಿಯಾಗಿ, ಕೋಷ್ಟಕ 3ರಲ್ಲಿ ತೋರಿಸಿರುವಂತೆ, ರಂಗ್ಪುರ್ ಮತ್ತು ಕುಷ್ತಿಯಾ ಅತ್ಯಂತ ಕಡಿಮೆ ದರದ ಸಾಕ್ಷರತೆಯ ಪ್ರಮಾಣವನ್ನು ಹೊಂದಿರುವ ಜಿಲ್ಲೆಗಳಾಗಿದ್ದು ರಾಷ್ಟ್ರೀಯ ಸರಾಸರಿ 32.4 ಪ್ರಮಾಣಕ್ಕೆ ಹೋಲಿಸಿದಾಗ ರಂಗ್ಪುರ್ ಉಭಯ ಲಿಂಗಳು ಸೇರಿ (ಹೆಣ್ಣು ಮತ್ತು ಗಂಡು) 26.7 ಮತ್ತು ಕುಷ್ತಿಯಾ 25.8 ರ ಸಾಕ್ಷರ ದರವನ್ನು ಹೊಂದಿದೆ. ಕುಷ್ತಿಯವು ತೆಗೆದುಕೊಳ್ಳುವ ಸರಾಸರಿ ದಿನನಿತ್ಯದ ಆಹಾರದ ಪ್ರಮಾಣವು ರಾಷ್ಟೀಯ ಸರಾಸರಿ 2,157ಕ್ಕೆ ಪ್ರತಿಯಾಗಿ 2,185 ರ ಆಹಾರ ಪ್ರಮಾಣ) ರಂಗ್ಪುರ್ ಅತಿ ಕಡಿಮೆ (2,014 ಆಹಾರಾಂಶ) ಪ್ರಮಾಣದ್ದಾಗಿದೆ. ಕುಷ್ತಿಯಾ ಮತ್ತು ರಂಗ್ಪುರ್‌ಗಳು ದಿನ ನಿತ್ಯ ಉಪ ಭೋಗಿಸುವ ಅಕ್ಕಿಯ ಪ್ರಮಾಣವು ರಾಷ್ಟೀಯ ಸರಾಸರಿ ಗಿಂತ ಕಡಿಮೆ ಇರುತ್ತದೆ. ರಾಷ್ಟ್ರೀಯ ಸರಾಸರಿ 426ಕ್ಕೆ ಪ್ರಮಾಣ ಹೋಲಿಸಿದಾಗ ಪ್ರತಿ ಕಡಿಮೆ ಪ್ರಮಾಣದ್ದಾಗಿರುತ್ತದೆ. (ರಾಷ್ಟ್ರೀಯ ಸರಾಸರಿ 38.2ಕ್ಕೆ ಹೋಲಿಸಿದಾಗ ಪ್ರತಿ ಜಿಲ್ಲೆಯ ಪ್ರಮಾಣ 417) ಹಾಗೂ ಹಾಲಿನ ತಿಂಗಳ ಖರ್ಚುವೆಚ್ಚವು ಸಹ ಕಡಿಮೆ ಪ್ರಮಾಣದ್ದಾಗಿರುತ್ತದೆ. ರಾಷ್ಟ್ರೀಯ ಸರಾಸರಿ 38.2ಕ್ಕೆ ಹೋಲಿಸಿದಾಗ ಕುಷ್ತಿಯ ತಿಂಗಳಿಗೆ 30.7 ಟಾಕಾ ಹಾಗೂ ರಂಗ್ಪುರ್ ಕೇವಲ 15.3 ತಂಬಾಕಿನ ಮೇಲೆ ವ್ಯಯಿಸುವ ಖರ್ಚುಗಳು ತುಲನಾತ್ಮಕವಾಗಿ ಕಡಿಮೆ ಇರುವುದರಿಂದ ಈ ಕ್ಷೇತ್ರದಲ್ಲಿ ಮಾತ್ರ ಈ ಉಭಯತ್ರರೂ ಪ್ರಯೋಜನ ಪಡೆದಂತೆ ಕಂಡುಬರುತ್ತಾರೆ. ಪ್ರಾಯಶಃ ಸಾಕಷ್ಟು ತಂಬಾಕನ್ನು ಬೆಳೆಯುವುದರಿಂದ ಅವರು ಅದನ್ನು ಕೊಳ್ಳುವ ಅಗತ್ಯ ಕಂಡುಬರುವುದಿಲ್ಲ.

ತನ್ನ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲು ತಮ್ಮ ಕುಟುಂಬಗಳ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತವೆಯೇ ಎಂದು ಕೇಳಿದ ಪ್ರಶ್ನೆಗೆ, ರಾಷ್ಟ್ರೀಯವಾಗಿ ಬಹುತೇಕ 45 ಶೇಕಡವಾರು ಕುಟುಂಬಗಳಿಗೆ ಹೋಲಿಸಿದಾಗ ಕುಷ್ತಿಯಾದಲ್ಲಿ 40ರಷ್ಟು ಮತ್ತು ರಂಗ್ಪುರ್‌ನಲ್ಲಿ 59ರಷ್ಟಕ್ಕೂ ಅಧಿಕ ಕುಟುಂಬಗಳು ಹೌದು ಎಂಬ ಉತ್ತರ ನೀಡಿದವು. ಸಾಕ್ಷರತೆಯಲ್ಲಿ ಈ ಎರಡು ಜಿಲ್ಲೆಗಳು ರಾಷ್ಟ್ರೀಯ ಸರಾಸರಿಗಿಂತ ಅತಿ ಕಡಿಮೆ (ನೀಚ ದರ) ದಲ್ಲಿವೆ. ಆರ್ಥಿಕ ಅಂಕಿ- ಅಂಶಗಳಲ್ಲಿ ಕುಷ್ತಿಯಾ ಸ್ವಲ್ಪ ಉತ್ತಮ ಸ್ಥಿತಿಯಲ್ಲಿದ್ದು ದೇಶದ ಬಹುತೇಕ ತಂಬಾಕನ್ನು ಬೆಳೆಯುವ ರಂಗ್ಪುರ್‌ವು ಅತಿ ನೀಚ ಸ್ಥಿತಿಯಲ್ಲಿದೆ. ಈ ಎರಡು ಪ್ರದೇಶಗಳಲ್ಲಿನ ಬಹಳಷ್ಟು ಜನಸಂಖ್ಯೆಯ ಸಂಪ್ರದಾಯ ಬೆಳೆಯಾದ ತಂಬಾಕು ಬಡತನವನ್ನು ಹೋಗಲಾಡಿಸಲು ಸಹಕಾರಿಯಾಗದಿರುವುದು ಸ್ಪಷ್ಟವಾಗಿದೆ ಅದರಲ್ಲೂ ರಂಗ್ಪುರದಲ್ಲಿನ ಅತಿಯಾದ ಬಡತನವನ್ನು ಕಡಿಮೆ ಮಾಡಲು ಸಹಕಾರಿಯಾಗಿಲ್ಲ.

**ಕೋಷ್ಟಕ - 3**

ರಾಷ್ಟ್ರೀಯ ಸರಾಸರಿಗೆ ವಿರುದ್ಧವಾಗಿ, ಪ್ರತಿಯಾಗಿ ತಂಬಾಕು ಬೆಳೆಯುವ ಸುಸ್ಥಿತಿಯಲ್ಲಿರುವ ಪ್ರದೇಶಗಳ ವರ್ಗೀಕೃತ ಪರಿಮಾಣಗಳು

| | ಸಾಕ್ಷರತೆ | ಆರ್ಥಿಕ ಮುಗ್ಗಟ್ಟು (ಹೌದು) | ದಿನನಿತ್ಯ ತೆಗೆದುಕೊಳ್ಳುವ ಆಹಾರಾಂಶ | ಪ್ರತಿನಿತ್ಯದ ಅಕ್ಕಿ ಅನುಭೋಗ (ಗ್ರಾಮ್) | ಹಾಲಿನ ತಿಂಗಳ ಖರ್ಚು (ಟಾಕಾ) | ತಂಬಾಕಿನ ತಿಂಗಳ ಖರ್ಚು (ಟಾಕಾ) |
|---|---|---|---|---|---|---|
| ಕುಷ್ತಿಯಾ | 25.8 | 40.4 | 2,184.8 | 417 | 30.7 | 31.3 |
| ರಂಗ್ಪುರ್ | 26.7 | 59.2 | 2,013.7 | 417 | 15.3 | 18.9 |
| ರಾಷ್ಟ್ರೀಯ ಸರಾಸರಿ | 32.4 | 44.7 | 2,156.6 | 426 | 38.2 | 47.8 |

ಕೃಪೆ - ಬಾಂಗ್ಲದೇಶದ ಸಂಖ್ಯಾ ಸಂಗ್ರಾಹಣ ಕಾರ್ಯಾಲಯ ಬಾಂಗ್ಲದೇಶದ 2000 ವರ್ಷದ ಸಂಖ್ಯಾ ಸಂಗ್ರಹಣಾ ವಹಿ. ಢಾಕಾ - ಜೂನ್ 2002 ಮತ್ತು ಬಾಂಗ್ಲದೇಶದ ಸಂಖ್ಯಾ ಸಂಗ್ರಾಹಣಾ ಕಾರ್ಯಾಲಯ, ಬಡತನದ ಮೂಲಭೂತ ಅಗತ್ಯಗಳ ಆಯಾಮ ವಿಶ್ಲೇಷಣೆ, ಸಂಪುಟ 3 ಢಾಕಾ - ಆಗಸ್ಟ್ 1998.

ಬಾಂಗ್ಲದೇಶದಲ್ಲಿನ ತಂಬಾಕು ಕೃಷಿಕರ ಪರಿಸ್ಥಿತಿಯ ಬಗ್ಗೆ ಆಳವಾದ ತಿಳುವಳಿಕೆಯನ್ನು ಪಡೆಯಲಾಗದ ನಾವು ಕುಷ್ತಿಯಾಕ್ಕೆ ತೆರಳಿ ಬೇರೆ ಬೇರೆ ಹಳ್ಳಿಗಳ 35 ಜನ ತಂಬಾಕು ಕೃಷಿಕರೊಂದಿಗೆ ಸಂಭಾಷಿಸಿದೆವು. ರಾಷ್ಟ್ರೀಯ ಅಂಕಿ ಅಂಶಗಳ ಪ್ರಕಾರ, ರುಂಗ್ಪುರ್ ಗಿಂತ ಕೃಷ್ತಿಯಾದ ನಿವಾಸಿಗಳು ತಕ್ಕಮಟ್ಟಿಗಾದರೂ ಉತ್ತಮ ಸ್ಥಿತಿಯಲ್ಲಿರಲೇಬೇಕು.

(ದಾಖಲಿತ - ನೊಂದಾಯಿತ)

ಕಿರು ಕಂಪನಿಗಳು ಮತ್ತು ಶ್ರೀಮಂತ ಮಧ್ಯವರ್ತಿಗಳು ಮಾಡಿದ ಶೋಷಣೆ ಹಾಗೂ ತಮ್ಮ ಕೆಲಸ ಕಾರ್ಯಗಳನ್ನು ವಿವರಿಸಿದರು. ನಾವು ಸಂದರ್ಶನ ಮಾಡಿದ ರೈತರ ಪ್ರಕಾರ ಬಿಎಟಿನ ದಾಖಲಿತ ರೈತರನ್ನೊಳಗೊಂಡಂತೆ ಬ್ರಿಟಿಷ್ - ಅಮೇರಿಕಾ ತಂಬಾಕು ಸಂಘಟನೆ ಈ ಪ್ರದೇಶದಲ್ಲಿ ಬೆಳೆಗಾರರ ವರ್ಗವನ್ನು ಸೃಷ್ಟಿ ಮಾಡಿದೆ. ನಾವು ಮಾತನಾಡಿಸಿದ ರೈತರು ಹೇಳಿದರು. ದಾಖಲಿತ ರೈತರು ಬಿಎಟಿನ ಢಾಕಾ ತಂಬಾಕು ಈ ಸಂಘಟನೆಗೆ ಕೆಲಸ ಮಾಡಿದರೆ ಇತರೆ ಕಂಪನಿಗಳಿಗೆ ಈ ಪ್ರದೇಶದಲ್ಲಿ ಒಟ್ಟು ತಂಬಾಕು ಕೆಲಸ ಮಾಡುವ ಸಂಖ್ಯೆಯಲ್ಲಿ ಕೇವಲ ಶೇ.10 ಕೆಲಸ ಮಾಡುತ್ತಾರೆ.

ದಾಖಲಿತ ರೈತರು ಆದರಲ್ಲೂ ಬಿಎಟಿನಡಿಯಲ್ಲಿ ದಾಖಲೆಗೊಂಡವರು ಈ ಕಂಪನಿಯಿಂದ ಸಾಲವಾಗಿ ಬಿತ್ತನೆ ಬೀಜನಗಳು, ರಸಗೊಬ್ಬರ, ಕೀಟನಾಶಕಗಳು ಮತ್ತು ತಮ್ಮ ಕೃಷಿಗೆ ಬೇಕಾದ ಇತರೆ ಸಲಕರಣೆಗಳನ್ನು ಪಡೆಯುವುದರಿಂದ ಸಾಗುವಳಿಯ ಸಮಯದಲ್ಲಿ ಯಾವುದೇ ರೀತಿಯ ದೊಡ್ಡ ಪ್ರಮಾಣದ ಬಂಡವಾಳ ಅವರಿಗೆ ಬೇಕಾಗುವುದಿಲ್ಲ. ನೋಂದಾವಣಿಗೊಂಡ ಬಹುತೇಕ ರೈತರು ತಮ್ಮ ಸ್ಥಿತಿಗತಿಗಳನ್ನು ಬಗ್ಗೆ ತೃಪ್ತಿ ಹೊಂದಿದ್ದಾರೆ ಹಾಗೂ ನಾವು ನ್ಯಾಯ ಸಮ್ಮತ ಮೊತ್ತದ ಲಾಭಾಂಶವನ್ನು ಪಡೆಯುತ್ತಿದ್ದೇವೆಂದು ಭಾವಿಸುತ್ತಾರೆ. ಇವುಗಳಲ್ಲಿ ಕೆಲವು ಗುಂಪುಗಳಲ್ಲಿ ಸಹ ಕೆಲವು ತೊಂದರೆಗಳು ಹುಟ್ಟಿಗೊಳ್ಳುತ್ತವೆ. ಅವುಗಳೆಂದರೆ ಎಲೆಗಳನ್ನು ಮಾರಲು ದೀರ್ಘ ಕಾಲದವರೆಗೆ ಕಾಯುವುದು, ಅಥವಾ ತಂಬಾಕನ್ನು ಮಾರಾಟ ಮಾಡುವಾಗ ತಾವು ತೆಗೆದು ಕೊಂಡ (ಸಾಲವಾಗಿ) ವಸ್ತುಗಳಿಗೆ ಕಂಪನಿಗಳು ಹೆಚ್ಚಿನ ದರವನ್ನು ವಿಧಿಸುವುದು.

ಆದರೆ ದೊಡ್ಡ ಪ್ರಮಾಣದ ತೊಂದರೆಯನ್ನು ಅನುಭವಿಸುವವರು ನೋಂದಾವಣಿ ಮಾಡಿಕೊಳ್ಳದ ರೈತರು ರೈತರಿಂದ ತಾವು ಎಷ್ಟು ತಂಬಾಕನ್ನು ಖರೀದಿ ಮಾಡಿಕೊಳ್ಳಬೇಕು ಎಂಬುದನ್ನು ಬಿಎಟಿ ನಿರ್ಧರಿಸುತ್ತಾರೆ. ಒಂದು ವೇಳೆ ಹೆಚ್ಚು ತಂಬಾಕು ರೈತರಿಗೆ ಬೇಕಾದರೆ ಅವರು ಕಡಿಮೆ ದರದಲ್ಲಿ ನೊಂದಾವಣಿ ಮಾಡಿಕೊಳ್ಳದಿರುವ ರೈತರಿಂದ ಖರೀದಿ ಮಾಡಿಕೊಳ್ಳಬೇಕು. ಹೀಗಾಗಿ ಕೆಲವೇ ರೈತರು ಲಾಭವನ್ನು ಗಳಿಸಿದರೆ ಬಹುಸಂಖ್ಯಾ ರೈತರು ಬಲವಂತವಾಗಿ ತಮ್ಮ ಎಲೆಗಳನ್ನು ಕಡಿಮೆ ದರದಲ್ಲಿ ಮಾರಾಟ ಮಾಡುತ್ತಾರೆ. ಸ್ಥಳೀಯ ಕಂಪನಿಗಳಲ್ಲೂ ಅದೇ ಮಾದರಿಯ ಶೋಷಣೆ ಕಂಡುಬರುತ್ತದೆ. ರೈತರು ತಾವು ಮಾರಿದ ತಂಬಾಕಿನ ಹಣ ಪಡೆಯಲು ಒಂದರಿಂದ ಎರಡು ತಿಂಗಳು, ಮತ್ತು ಕೆಲವು ಸಾರಿ ಒಂದು ವರ್ಷದವರೆಗೆ ಕಂಪನಿಗಳಿಗೆ ಎಡತಾಗಬೇಕಾತ್ತದೆ. (ಓಡಾಡಬೇಕಾಗುತ್ತದೆ). ಉದಾಹರಣೆಗೆ ಜಿಲ್ಲೆಯ ನಾಯೆಸ್ಪುರ್ ಹಳ್ಳಿಯಲ್ಲಿ ಸುಮಾರು 150 ತಂಬಾಕು ಕೃಷಿಕರು ವಾಸವಾಗಿದ್ದು ಅವರಲ್ಲಿ ಕೇವಲ 8 ಜನ ರೈತರು ಮಾತ್ರ ತಮ್ಮ ಹೆಸರನ್ನು ನೋಂದಾಯಿಸಿ ಕೊಂಡಿದ್ದಾರೆ. ಉಳಿದ ರೈತರು ಬೀಜಗಳು, ರಸಗೊಬ್ಬರ, ಕ್ರಿಮಿನಾಶಕಗಳು ಮತ್ತು ಇನ್ನಿತರೆ ಒಳ ಖರ್ಚುಗಳನ್ನು ಭರಿಸಲು ತಮ್ಮ ಸ್ವಂತ ಹಣವನ್ನೇ ಬಳಸಬೇಕು. ನೊಂದಾವಣೆ ಇಲ್ಲದ ರೈತರು ತಮ್ಮ ತಂಬಾಕನ್ನು ಮುಕ್ತ ಮಾರುಕಟ್ಟೆಗಳಿಗೆ ಕೊಂಡ್ಯೊಯ್ದು ದಲ್ಲಾಳಿಗಳಿಗೆ ಮಾರಾಟ ಮಾಡುತ್ತಾರೆ. ದಲ್ಲಾಳಿಗಳು ನಂತರ ಆ ತಂಬಾಕನ್ನು ಬೇರೆ ಬೇರೆ ಕಂಪನಿಗಳಿಗೆ ಮಾರುತ್ತಾರೆ. ನೊಂದಾಯಿತ ರೈತರು ಕಂಪನಿಗಳಿಂದ ಒಂದು ಕಿಲೋ ಗ್ರಾಂ ತಂಬಾಕಿಗೆ 60 ಟಾಕಾಗಳನ್ನು (ಡಾಲರ್ 1.04) ಪಡೆದಿದೆ. ನೊಂದಾವಣಿಯಾಗದ ರೈತರು ಕೇವಲ 20-30 ಟಾಕಾಗಳನ್ನು (ಡಾಲರ್ 35-0.52) ಪಡೆಯುತ್ತಾರೆ. ಕೆಲವು ವೇಳೆ ಕಿ.ಗ್ರಾಂ ಒಂದಕ್ಕೆ ಅತಿ ಕಡಿಮೆ 5 ಟಾಕಾಗಳನ್ನು (ಡಾಲರ್ 0.09) ಪಡೆಯುತ್ತಾರೆ. ಅದು ಅವರ ಉತ್ಪಾದನಾ ಖರ್ಚನ್ನು ಸಹ ಪೂರೈಸುವಷ್ಟು ಸಾಕಾಗುವುದಿಲ್ಲ.

ಈ ಪ್ರದೇಶದಲ್ಲಿ ಅನೇಕ ಜನ ರೈತರು ತಂಬಾಕಿಗೆ ಬದಲೂ ಈಗ ದವಸ ಧಾನ್ಯಗಳ, ತರಕಾರಿಗಳು, ಕಬ್ಬು ಮತ್ತು ಇತರೆ ಬೆಳೆಗಳನ್ನು ಬೆಳೆಯುತ್ತಾರೆ. ದವಸ ಧಾನ್ಯಗಳು ಅಥವಾ ತರಕಾರಿಗಳನ್ನು ಬೆಳೆಯುವುದು



MH-120 07830 P03
COMMUNITY HEALTH CELL LIBRARY AND DOCUMENTATION UNIT

ತಂಬಾಕಿಗಿಂತ ಹೆಚ್ಚು ಲಾಭದಾಯಕವಾಗಬಲ್ಲದು ಎಂಬುದನ್ನು ಅವರು ಕಂಡು ಕೊಂಡಿದ್ದಾರೆ ಆದರೆ ಅನೇಕ ಜನ ರೈತರಿಗೆ ಈ ಪರ್ಯಾಯ ಬೆಳೆಗಳಿಗೆ ಬೇಕಾಗುವಷ್ಟು ಹಣ ತೊಡಗಿಸಲು ಅವರ ಬಳಿ ಸಾಕಷ್ಟು ಹಣವಿಲ್ಲವಾಗಿದೆ. ಒಂದು ವೇಳೆ ಬೇರೆ ಬೆಳೆ ಬೆಳೆಯಲು ಸರ್ಕಾರದಿಂದ ಸಾಲ ಪಡೆಯಲು ಸಮರ್ಥರೇ. ತಂಬಾಕಿಗಿಂತ ಇತರೆ ಬೆಳೆಗಳು, ತರಕಾರಿಗಳು ಮುಂತಾವುಗಳನ್ನು ಬೆಳೆಯಲು ಸಂತೋಷ ಪಡುತ್ತಾರೆ. ಆದರೆ ಸರ್ಕಾರದ ಬ್ಯಾಂಕುಗಳಿಂದ ಸಾಲ ಪಡೆಯುವುದು ಸಂಕೀರ್ಣ ಹಾಗೂ ತ್ರಾಸದಾಯಕ ಅಥವಾ ಕ್ಲಿಷ್ಟಕರ. ಈ ರೀತಿಯಾಗಿ ಸಾಲಗಳು ಇವರಿಗೆ ಸರಳವಾಗಿ ಲಭ್ಯವಾಗುವಂತೆ ಮಾಡುವುದರ ಮೂಲಕ ಬಡಜನರು ತಂಬಾಕು ಬೆಳೆಯುವಂತೆ ಆಮಿಷ ಒಡ್ಡುವಲ್ಲಿ ಬಿಎಟಿ ಮತ್ತು ಇತರೆ ಕಂಪನಿಗಳು ಸಮರ್ಥವಾಗಿದೆ.

## ಅರಣ್ಯನಾಶದ ಬಗ್ಗೆ ಒಂದು ಟಿಪ್ಪಣಿ

ಪರಿಸರದ ಮೇಲೆ ತಂಬಾಕಿನ ವಿನಾಶವು ಹೆಚ್ಚಿನ ಕಳವಳ ಹಾಗೂ ಕಾಳಜಿಯ ವಿಷಯವಾಗಿದೆ.

ಕೋಷ್ಟಕ 4 ರಲ್ಲಿ ಕಾಣುವಂತೆ ಬಾಂಗ್ಲದೇಶದ ಅರಣ್ಯ ಪ್ರದೇಶವು ಚದರ ಕಿಲೋಮೀಟರ್‌ಗಳಲ್ಲಿ 1995 ರಿಂದ 1997 ರವರೆಗೆ ಅವನತಿ ಹೊಂದಿದೆ.

**ಕೋಷ್ಟಕ 4**

ಬಾಂಗ್ಲದೇಶದ ಅರಣ್ಯ ಪ್ರದೇಶ

| **ವರ್ಷ** | **1997-96** | **1996-97** |
|---|---|---|
| ಪ್ರದೇಶ (ಚ.ಕಿಮಿ) | 21,913 | 21,657 |

**ಕೃಪೆ** - ಬಾಂಗ್ಲದೇಶದ ಸಂಖ್ಯಾ ಸಂಗ್ರಹಣಾ ಕಾರ್ಯಾಲಯ, ಬಾಂಗ್ಲದೇಶದ 2000 ವರ್ಷದ ಸಂಖ್ಯಾ ಸಂಗ್ರಹಣಾ ವಹಿ ಢಾಕಾ, ಜೂನ್ 2002.

ತಂಬಾಕು ಬೆಳೆಯುವ ಪ್ರದೇಶದಲ್ಲೂ ಸಹ ಅರಣ್ಯ ಪ್ರದೇಶ ಅವನತಿಯ ಹಾದಿಯನ್ನು ತುಳಿಯುತ್ತಾ ಇದೆ. (ನಾಶವಾಗುತ್ತಿದೆ) (ಕುಷ್ತಿಯಾದಲ್ಲಿ ಸಹಜವಾಗಿಯೇ ಅರಣ್ಯ ಪ್ರದೇಶವಿಲ್ಲದ್ದರಿಂದ ಅದು ಒಳಗೊಂಡಿಲ್ಲ).

**ಕೋಷ್ಟಕ - 5**

ಅತಿ ಹೆಚ್ಚು ತಂಬಾಕು ಬೆಯುವ ಬಾಂಗ್ಲದೇಶದ ಜಿಲ್ಲಾವಾರು ಅರಣ್ಯ ಪ್ರದೇಶ

| **ಜಿಲ್ಲೆ** | **1995-96** | **1996-97** |
|---|---|---|
| ರಂಗ್ಪುರ್ | 28.75 ಕಿ.ಮಿ | 27.77 ಕಿ.ಮೀ |
| ಚಿತ್ತಗಾಂಗ್ | 4,924 ಕಿ.ಮಿ | 2,730 ಕಿ.ಮೀ. |

**ಕೃಪೆ** - ಬಾಂಗ್ಲದೇಶದ ಸಂಖ್ಯಾ ಸಂಗ್ರಹಣಾ ಕಾರ್ಯಾಲಯ, ಬಾಂಗ್ಲದೇಶ 2000 ವರ್ಷದ ಸಂಖ್ಯಾ ಸಂಗ್ರಹಣಾ ವಹಿ, ಢಾಕಾ, ಜೂನ್ 2002.

ಸಂಶೋಧನೆ ತಿಳಿಸುವುದೇನೆಂದರೆ ಬಾಂಗ್ಲಾದೇಶದಲ್ಲಿ ಅರಣ್ಯ ನಾಶವಾಗುವುದಕ್ಕೆ ತಂಬಾಕು ಕೃಷಿಯೇ ಮಹತ್ತರವಾದ ಕಾರಣವಾಗಿತ್ತು . ಬಾಂಗ್ಲಾದೇಶದ ವಾರ್ಷಿಕ ಅರಣ್ಯನಾಶದಲ್ಲಿ ಶೇಕಡವಾರು 30 ಕ್ಕಿಂತ ಅಧಿಕವಾಗಿತ್ತು ಸಮಸ್ಯೆಯ ತೀವ್ರತೆಯ ದೃಷ್ಟಿಯಲ್ಲಿ ಅಂತರರಾಷ್ಟ್ರೀಯವಾಗಿ ಈ ದೇಶವು ಮೂರನೇ ಸ್ಥಾನದಲ್ಲಿದೆ. ಸಂಶೋಧನೆಯು ಸೂಚಿಸುವುದೇನೆಂದರೆ ತಂಬಾಕು ಕೃಷಿಯು ರೈತರಿಗೆ ಆದಾಯದ ಮೂಲವಷ್ಟೇ ಅಲ್ಲ ಪರಿಸರಕ್ಕೆ ಅನಿಷ್ಟ ಕಾರಕವೂ ಕೂಡ.

**ಕೋಷ್ಟಕ - 6**

ತಂಬಾಕು ಕೃಷಿಯಿಂದ ಉಂಟಾದ ಅರಣ್ಯ ನಾಶದ ಪ್ರಮಾಣಗಳು

| ದೇಶಗಳು | ಒಟ್ಟುವಾರ್ಷಿಕ ಕಟ್ಟಿಗೆಯ ಬಳಕೆ (.000 ಟನ್) | ಒಟ್ಟುವಾರ್ಷಿಕ ಅರಣ್ಯನಾಶ (.000 ಹೆ.) | ಒಟ್ಟುತಂಬಾಕು ಸಂಬಂಧಿ ಅರಣ್ಯ ನಾಶ.ಶೇ.ಗಳಲ್ಲಿ |
|---|---|---|---|
| ದಕ್ಷಿಣ ಕೊರಿಯಾ | 272.2 | 13.0 | 45.0 |
| ಉರುಗ್ವೆ | 7.6 | 0.4 | 40.6 |
| ಬಾಂಗ್ಲದೇಶ | 128.0 | 9.0 | 30.6 |

**ಕೃಪೆ** - ಜಿಸ್ ಎಚ್ ಜೆ. ತಂಬಾಕು ಕೃಷಿಗೆ ಸಂಬಂಧಿಸಿದ ಅರಣ್ಯನಾಶದ ಜಾಗತಿಕ ಮೌಲ್ಯ ಮಾಪನ ತಂಬಾಕು ನಿಯಂತ್ರಣ 1999, 8.18.28

## 1. ಪ್ರಕರಣಗಳು, ಪ್ರಕರಣ ಅಧ್ಯಯನಗಳು

ಕೇವಲ ಎಂದಿನಂತೆ ನಾನು ಸಾಲಗಾರನಾಗುತ್ತೇನೆ. ಮಹಬುಬುಲ್ ಆಲಂ 40 ವರ್ಷ ವಯಸ್ಸಿನ ಕುಷ್ಟಿಯಾದ ಮಿರ್‌ಪುರ್ ಥಾಣಾ ಗ್ರಾಮದ ತಂಬಾಕು ಕೃಷಿಕ. ಆವನಿಗೆ ಮೂರು ಜನ ಮಕ್ಕಳು ನಯನ್ ಪುರ್ ಆವರಲ್ಲಿ ಹಿರಿಯ ಶಾಲೆಯಲ್ಲಿ ಓದುತ್ತಿದ್ದಾರೆ. ಆಲಂ ಒಂದು ಎಕರೆ ಸ್ವಂತ ಜಮೀನನ್ನು ಹೊಂದಿದ್ದು ತಂಬಾಕು ಕೃಷಿಗೆಂದು ಮತ್ತೊಂದು , ಇನ್ನೊಂದು ಎಕರೆಯನ್ನು ಗೇಣಿ ಮೇರೆಗೆ ಪಡೆಯುತ್ತಾನೆ. ಆವನು ತಂಬಾಕು ಮಾರಾಟದಿಂದ ತಿಳಿಸಿದ ಅರ್ಧ ಮೊತ್ತದ ಹಣ ಜಮೀನಿನ ಗೇಣಿ ಹಣ ಕೊಡಲು ಖರ್ಚಾಗುತ್ತದೆ. ಉಳಿದ ಹಣದಲ್ಲಿ ತನ್ನೆಲ್ಲ ಒಳ ಖರ್ಚುಗಳನ್ನು ಭರಿಸಿಕೊಳ್ಳಲೇ ಬೇಕಾವುದರ ಜೊತೆಗೆ ಲಾಭಾಂಶವನ್ನು ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಆಲಂ ನೊಂದಾಯಿತ ಸದಸ್ಯನಲ್ಲದ್ದರಿಂದ ಮತ್ತು ಮಾರುಕಟ್ಟೆಯಲ್ಲಿ ತನ್ನ ತಂಬಾಕನ್ನು ಮಾರುತ್ತಾನೆ. ನೊಂದಾಯಿತ ರೈತರು ಕಿ.ಗ್ರಾ. ಒಂದಕ್ಕೆ 60 ಟಾಕಾಗಳನ್ನು ಪಡೆದರೆ ಆದಕ್ಕೆ ವ್ಯತಿರಿಕ್ತವಾಗಿ ಆಲಂ ಕಿ.ಗ್ರಾಂ. ಒಂದಕ್ಕೆ 5-30 ಟಾಕಾಗಳನ್ನು ಪಡೆಯುತ್ತಾನೆ. ನೀವೇಕೆ ಅಷ್ಟು ಕಡಿಮೆ ದರದಲ್ಲಿ ತಂಬಾಕನ್ನು ಮಾರಾಟ ಮಾಡುತ್ತೀರಾ ಎಂದು ಕೇಳಿದಾಗ ಆತ ಉತ್ಪಾದಿಸಿದ ಖರೀದಿಗಾರರು ಇಲ್ಲದಿರುವುದರಿಂದ ಆತನಿಗೆ ಬೇರೆ ಆಯ್ಕೆನೇ ಇಲ್ಲ, ಹಾಗೂ ಇಲ್ಲದಿದ್ದರೆ ತಂಬಾಕು ಮಾರಟವಾಗದೆ ಹಾಗೆ ಉಳಿದು ಕೊಳೆತು ಹೋಗುತ್ತದೆ. ಆತ ಎಷ್ಟು ಸಂಪಾದಿಸುತ್ತಾನೆಂದು ಕೇಳಿದಾಗ ಆಲಂ ಉತ್ತರಿಸಿದ , ನಾನು ಅನೇಕ ಬಾರಿ ನನ್ನ ಖರ್ಚುಗಳನ್ನು ಪೂರೈಸಲಾರೆ. ನನ್ನ ಮಕ್ಕಳ ಶಾಲಾ ಖರ್ಚುಗಳನ್ನು ಹಾಗೂ ಕುಟುಂಬದ ಖರ್ಚುವೆಚ್ಚಗಳನ್ನು ಭರಿಸಲು ನಾನು ಸಾಲ ಮಾಡಬೇಕಾಗುತ್ತದೆ. ನಾನು ಲಾಭಗಳಿಗೆ ತಂಬಾಕು

ಕೃಷಿಯನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಸದಾ ಬಯಸುತ್ತೇನೆ. ಆದರೆ ಎಂದಿನಂತೆ ನಾನು ಕೇವಲ ಸಾಲಗಾರನಾಗುತ್ತೇನೆ. ತಂಬಾಕು ಬೆಳೆಯುವುದು ಲಾಭದಾಯಕ ಎಂಬ ಸಾಮಾನ್ಯ ನಂಬಿಕೆಯ ಬಗ್ಗೆ ಕೇಳಿದಾಗ ಆಲಂ ಅವರು ಕೋಪಗೊಂಡು ಉತ್ತೇಜಿಸಿದರು, ಕಂಪನಿ ಬಿಲ್ಲೆ ಮತ್ತು ಹೆಚ್ಚು ಜಮೀನು ಹೊಂದಿರುವವರು ಲಾಭಂಶವನ್ನು ಪಡೆಯುತ್ತಾರೆ ಹಾಗೂ ಕಂಪನಿ ಇವರಿಂದ ನೇರವಾಗಿ ಖರೀದಿ ಮಾಡುತ್ತದೆ. ಆದರೆ ಬಿಲ್ಲೆ ಹೊಂದಿರುವವರ ಸಂಖ್ಯೆ ಬಹಳ ಕಡಿಮೆ, ಬಹಳಷ್ಟು ರೈತರು ನನ್ನ ಹಾಗೆ - ನಾವು ಯಾವಗಲೂ ವಂಚಿತರಾಗುತ್ತೇವೆ (ವಂಚಿಸಲ್ಪಡುತ್ತೇವೆ). ಲಾಭ, ತಂಬಾಕು ಖರೀದಿದಾರರರು ಹಾಗೂ ಕಂಪನಿಗಳ ಪಾಲಾಗುತ್ತದೆ.

## 2 ತಂಬಾಕು ಸಂಸ್ಕರಣೆಯ ಯಾತನೆಗಳು (ಸಂಕಷ್ಟಗಳು)

ಗುಲಾಮ್ ಆಲಿ, 35 ವರ್ಷ ವಯಸ್ಸು, 3 ಎಕರೆ ಜಮೀನನ್ನು ಹೊಂದಿದ್ದು ತಂಬಾಕು ಕೃಷಿ ಮಾಡುತ್ತಾನೆ. ತಂಬಾಕು ಸಂಸ್ಕರಣೆಯ ಪ್ರಕ್ರಿಯೆಯನ್ನು ವಿವರಿಸುತ್ತಾನೆ. ರುಚಿ, ವಾಸನೆ, ಬಣ್ಣ ಗಳಿಗಾಗಿ ಸಂಸ್ಕರಣೆ ಅಗತ್ಯವಾಗಿ ಬೇಕಾಗುತ್ತದೆ. ಮತ್ತು ಈ ಪ್ರಕ್ರಿಯೆ ಒಂದೂವರೆ ತಿಂಗಳವರೆಗೂ ನಡೆಯುತ್ತದೆ. ತಂಬಾಕಿನ ಪ್ರತಿ ತಂಡಕ್ಕೆ ಅದನ್ನು ಒಣಗಿಸಲು 4-5 ದಿನಗಳು ಬೇಕಾಗುತ್ತದೆ ಆ ಸಮಯದಲ್ಲಿ ಯಾರಾದರೊಬ್ಬರು ಹಗಲು ಮತ್ತು ರಾತ್ರಿ ಇದೇ ಜಾಗರೂಕತೆಯಿಂದ ನೋಡಿಕೊಳ್ಳಲೇಬೇಕು. ಸೌದೆ ಅಲಭ್ಯ ಹಾಗೂ ದುಬಾರಿಯಾದ ಕಾರಣ ತಂಬಾಕನ್ನು ಸಾಮಾನ್ಯವಾಗಿ ಒಣ ಹುಲ್ಲಿನಿಂದ ಒಣಗಿಸಲಾಗುತ್ತದೆ.

ಗುಲಾಮ್‌ನ ಹೆಂಡತಿ, 12 ವರ್ಷದ ಮಗ, ಮತ್ತು ಕಿರಿಯ ಸಹೋದರ ಎಲ್ಲರೂ ತಂಬಾಕು ಕೃಷಿಯ ಕೆಲಸಗಳಲ್ಲಿ ಈತನಿಗೆ ಸಹಾಯ ಮಾಡುತ್ತಾರೆ. ತಂಬಾಕು ಒಣಗಿಸುವುದು ಬೇಸರದ, ಪ್ರಯಾಣದ ಕೆಲಸವಾದ್ದರಿಂದ ಆತ ಮತ್ತು ಆತನ ಕುಟುಂಬದವರು ತಾವಾಗೇ ಕಾಯುವ ಈ ಪ್ರಯಾಸದ ಕೆಲಸವನ್ನು ಮಾಡುತ್ತಾರೆ. ಅವನು ಹೇಳಿದ ಬೆಂಕಿಯ ಮುಂದೆ ಕುಳಿತುಕೊಳ್ಳುವುದರಿಂದ ಅವರು ನಿರ್ಜಲವಾಗಿ ಬಿಡುತ್ತಾರೆ. ಮತ್ತು ತುಂಬ ಎಳನೀರು, ಕರ್ಜೂರದ ರಸ ಹಾಗೂ ಇನ್ನಿತರ ದ್ರವ ಪದಾರ್ಥಗಳನ್ನು ಅವರು ಸೇವಿಸಲೇಬೇಕಾಗುತ್ತದೆ. ಈ ಕೆಲಸ ಅವರನ್ನು ನಿತ್ರಾಣರನ್ನಾಗಿಯೂ ಸಹ ಮಾಡುತ್ತದೆ. ಈ ಪ್ರಕ್ರಿಯೆ ಮುಗಿದ ಬಳಿಕ ಮತ್ತೊಂದು ಕೆಲಸ ಮಾಡಲು ಅವರಿಗೆ ಶಕ್ತಿ ಇರುವುದಿಲ್ಲ. ನಾನು ಯಾವಾಗಲಾದರೂ ಕುಳಿತಕೊಂಡರೆ, ನನಗೆ ನಿದ್ರೆ ಬರುತ್ತದೆ. ತಂಬಾಕು ಒಣಗಿಸುವುದು ಆಯಾಸ ಮತ್ತು ಯಾತನಾಮಯ ಎಂದು ಗುಲಾಂ ಅವರು ಹೇಳುತ್ತಾರೆ.

## 3. ತಂಬಾಕಿನ ಪ್ರತಿ ಸ್ಪರ್ಧಿಯಾಗಿ (ಟರ್ನಿಪ್) ಸವಿಮೂಲಂಗಿ

ಕುತುಬುರ್ ರೆಹಮಾನ್, ವಯಸ್ಸು 40 ವರ್ಷ, ನಾಲ್ಕು ಜನ ಮಕ್ಕಳು ಅವರಲ್ಲಿ ಇಬ್ಬರು ಓದುತ್ತಿದ್ದಾರೆ. ಅವನಿಗೆ ಮೂರು ಎಕರೆ ಜಮೀನಿದ್ದು ಅದರಲ್ಲಿ ಭತ್ತ ಮತ್ತು ಸವಿಮೂಲಂಗಿಯನ್ನು ಬೆಳೆಯುತ್ತಾನೆ. ಸವಿಮೂಲಂಗಿ ಬೆಳೆದು ಹರಯಕ್ಕೆ ಬರಲು (ಪಕ್ವತೆಗೆ) ಎರಡೂವರೆ ತಿಂಗಳು ಬೇಕಾಗುತ್ತದೆ. ಹಾಗೂ ನಿವ್ವಳ ಲಾಭ 20,000 ಟಾಕಾ (ಡಾಲರ್ 46) ದ ಇಳುವರಿಯನ್ನು ನೀಡುತ್ತಾರೆ. ಕುತುಬುರ್ ವಿವರಿಸುವುದೇನೆಂದರೆ ಒಂದು ಎಕರೆ ತಂಬಾಕು ಕೃಷಿಗೆ 24, 000 (ಡಾಲರ್415) ಟಾಕಾಗಳು ಬೇಕಾಗುತ್ತದೆ. ಅದಕ್ಕೆ ವಿರುದ್ಧವಾಗಿ ಸವಿಮೂಲಂಗಿಗೆ 9000 (ಡಾ 156) ಟಾಕಾಗಳು ಸಾಕಾಗುತ್ತದೆ. ತದನಂತರ ನಾಲ್ಕು ತಿಂಗಳ ನಂತರ 12,000, 14,000 (ಡಾ 207, ಡಾ 242) ಪ್ರತಿಫಲ ದೊರೆಯುತ್ತದೆ. ಇದಕ್ಕೆ ಹೆಚ್ಚು ಶ್ರಮ ಹಾಗೂ

ಹಣವನ್ನು ತೊಡಗಿಸಿದ್ದಾಗ್ಯೂ, ಸವಿಮೂಲಂಗಿಕಿಂತ ಕಡಿಮೆ ಪ್ರತಿ ಫಲವನ್ನು ಕೊಡುತ್ತದೆ. ಹಾಗಾಗಿ ನಾನೇಕೆ ತಂಬಾಕು ಬೆಳೆಯಲಿ ಎನ್ನುತ್ತಾರೆ ಕುತುಬುರ್

## 4. ಅಧ್ಯಯನಕ್ಕೆ ಸಮಯವಿಲ್ಲ

42 ವರ್ಷ ಹರೆಯದ ರೈತ ಕರೀಂ ಉದ್ದಿನ್ ಎರಡು ಮಕ್ಕಳ ತಂದೆ. ತನ್ನ ಮಗ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಾನೆ. ಆದರೆ ಕೃಷಿ ಕೆಲಸಗಳಲ್ಲಿ ಸಹಾಯ ಮಾಡುತ್ತಾನೆ. ಕರೀಂ ವಿವರಿಸುವುದೇನೆಂದರೆ ತಂಬಾಕು ಬೆಳೆಯಲು ನಾಲ್ಕು ತಿಂಗಳು ಬೇಕಾಗುತ್ತದೆ. ಬೀಜ ಬಿತ್ತನೆಯಿಂದ ಹಿಡಿದು ಎಲೆ ಮಾರಾಟ ಮಾಡುವವರೆಗೂ ಹಾಗೂ ಈ ಸಮಯಾವಧಿಯಲ್ಲಿ ದೊಡ್ಡ ಪ್ರಮಾಣದ ಶ್ರಮದಾನ ಬೇಕಾಗುತ್ತದೆ. ಆತನ ಹೆಂಡತಿ ಮತ್ತು ಮಗ ಅವನ ಕೆಲಸದಲ್ಲಿ ಸಹಾಯ ಮಾಡಲೇಬೇಕು. ಆದರಿಂದ ಅವನ ಮಗನ ಅಧ್ಯಯನಕ್ಕೆ ತೊಂದರೆಯಾಗುತ್ತದೆ. ತಂಬಾಕು ಕೃಷಿಗೆ ಸಹಾಯ ಮಾಡುವ ಸಲುವಾಗಿ ಅವನ ಮಗ 3-4 ತಿಂಗಳು ಶಾಲಾ ರಜೆಯನ್ನು ತೆಗೆದುಕೊಳ್ಳಲೇಬೇಕು. ಕರೀಂ ನಮಗೆ ಹೇಳಿದ್ದೇನೆಂದರೆ ತನ್ನ ಮಗನಿಗೆ ರಜೆ ಕೊಡಿಸಲು ಅವನೇ ಶಾಲೆಗೆ ಹೋಗುತ್ತಾನಂತೆ, ತಂಬಾಕು ಹೊಲಗಳಲ್ಲಿ ಕೆಲಸ ಮಾಡಿ ತನ್ನ ಮಗ ತುಂಬ ದುರ್ಬಲನಾಗುತ್ತಾನೆ. ಹೀಗಾಗಿ ಅವನು ರಾತ್ರಿ ಸಮಯದಲ್ಲಿ ಅಭ್ಯಸಿಸಲು ಅಸಮರ್ಥನಾಗುತ್ತಾನೆ. ತನ್ನ ಮಗನ ಪರೀಕ್ಷೆಗಳು ಹತ್ತಿರವಾಗುತ್ತಿದ್ದಂತೆ ಅವನು ಸಿದ್ಧತೆ ಮಾಡಿಕೊಳ್ಳಲು ಶಕ್ತಿಯೇ ಇಲ್ಲವಾಗುತ್ತದೆ. ಆದ್ದರಿಂದ ಪರೀಕ್ಷೆಯಲ್ಲಿ ಉತ್ತೀರ್ಣನಾಗುವುದು ಅವನಿಗೆ ತುಂಬಾ ಕಠಿಣ ಕಷ್ಟವಾಗುತ್ತದೆ . ಆದರಿಂದ ತಾವು ಪ್ರಸ್ತವಾಗಿ ಅನುಭವಿಸುವುದಕ್ಕಿಂತ ತಮ್ಮ ಮಗ ಭವಿಷ್ಯದಲ್ಲಿ ಉತ್ತಮವಾದ ಅವಕಾಶಗಳನ್ನು ಹೊಂದಬೇಕು ಎಂಬ ಆಶಯವನ್ನು ಹೊಂದಿದಂತಹ ಪೋಷಕರಿಗೆ ಚಿಂತೆಯುಂಟಾಗುತ್ತದೆ.

## 5. ಬ್ಯಾಂಕ್ ಸಾಲದ ಅಭಾವದಿಂದ.....

55 ವರ್ಷ ಹರೆಯದ ರಾಜಿವ್ ಆಲಿ ಕುಷ್ಠಿಯ ಜಿಲ್ಲೆಯ ಬಾರೈಪರದ ನಿವಾಸಿ. ಅವನು ಬಿಎಟಿನ ನೊಂದಾಯಿತ ರೈತ. ಎರಡು ಎಕರೆಯಲ್ಲಿ ತಂಬಾಕು ಕೃಷಿ ಮಾಡುತ್ತಾನೆ. ಆತ ಅವರಿಗೆ ಹೇಳಿದ್ದೇನೆಂದರೆ ತಂಬಾಕು ಕೃಷಿ ತುಂಬಾ ಖರ್ಚುದಾರಿ ಮತ್ತು ತೀವ್ರ ಶ್ರಮದಾಯಕ ಹಾಗೂ ಇದರ ಸಾಗುವಳಿಯಿಂದ ಆರೋಗ್ಯ ಹಾಗೂ ಪರಿಸರ ಎರಡಕ್ಕೂ ಹಾನಿಯುಂಟಾಗುತ್ತದೆ. ಅನೇಕರು ತಂಬಾಕು ಬೆಳೆಯುತ್ತಿಯಾ ಎಂದು ಕೇಳಿದ್ದಕ್ಕೆ ಆತ ವಿವರಿಸುತ್ತಾನೆ, ನನ್ನ ಹತ್ತಿರ ಹಣವಿಲ್ಲ. ತಂಬಾಕು ಕೃಷಿಗೆ ಬೇಕಾದಪ್ರತಿಯೊಂದಕ್ಕೂ ಬಿಎಟಿ ಸಹಾಯ ಮಾಡುತ್ತದೆ. ಹಾಗಾಗಿ ನನಗೆ ಯಾವುದೇ ಖರ್ಚಗಳು ಇರುವುದಿಲ್ಲ. ನಾನು ದವಸಗಳನ್ನು ಬೆಳೆಯಬೇಕು. ನಾನು ಬ್ಯಾಂಕಿಗೆ ಹೋದೆ, ಆದರೆ ಬ್ಯಾಂಕ್ ನನಗೆ ಬೆಳೆ ಸಾಲ ಕೊಡಲು ತಿರಸ್ಕರಿಸಿತು. ಅವರು ಹಣ ಕೊಡುವುದಕ್ಕಿಂತ ಮುಂಚೆ ನಾವು ಸ್ವಲ್ಪ ಹಣವನ್ನು ಮೊದಲೇ ಠೇವಣಿ ಮಾಡಬೇಕಂತೆ. ಆದರೆ ಒಂದು ವೇಳೆ ನಾನು ಹಣ ಮಾಡಿದರೆ, ದವಸ ಬೆಳೆಯಲು ನನ್ನ ಹತ್ತಿರ ಸಾಕಷ್ಟು ಹಣವಿರುವುದಿಲ್ಲ. ಆದರೆ ತಂಬಾಕು ಕೃಷಿ ಅಷ್ಟೇನೂ ಲಾಭದಾಯಕವಲ್ಲ. ಪ್ರಾರಂಭದಲ್ಲಿ ಮಾತ್ರ ನಾವು ಸ್ವಲ್ಪ ಹಣವನ್ನು ಬಿಎಟಿನಿಂದ ಪಡೆಯುತ್ತೇವೆ. ಆದರೆ ಮಾರಾಟ ಬೆಲೆ ನಮ್ಮ ಶ್ರಮದಾನಕ್ಕೆ ಸಾಕಾಗುವಷ್ಟು ಇರುವುದಿಲ್ಲ. ಇತರೆ ದವಸ ಧಾನ್ಯಗಳನ್ನು ಬೆಳೆಯಲು ಸರ್ಕಾರ ಜನರಿಗೆ ಸಾಲವನ್ನು ನೀಡಿದರೆ, ನಂತರ ನನಷ್ಟೆಯಲ್ಲ, ಅನೇಕ ಇತರ ರೈತರು ತಂಬಾಕು ಬೆಳೆಯುವುದನ್ನು ನಿಲ್ಲಿಸುತ್ತಾರೆ.

## 6. ಜಟಿಲ ಸಮಸ್ಯೆ

52 ವರ್ಷ ವಯಸ್ಸಿನ ಅನ್ವರ್ ಹಕ್ ಕೂಡ ಬಿಎಟಿ ನೊಂದಾಯಿತ ರೈತ. ತನ್ನ ನಾಲ್ಕು ಎಕರೆ ಜಮೀನಿನಲ್ಲಿ ತಂಬಾಕು ಕೃಷಿಯನ್ನು ಮಾಡುತ್ತಾನೆ. ಅವನು ವಿವರಿಸುವುದೇನೆಂದರೆ, ಬಿಎಟಿ ತಂಬಾಕು ಬೆಳೆಯಲು ಅವನಿಗೆ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕ್ರಿಮಿನಾಶಕಗಳನ್ನು ನೀಡುತ್ತೇವೆ. ಆದರೆ ಅವನು ಇತರೆ ರೈತರು ಹೊಗೆಸೊಪ್ಪನ್ನು ಬೆಳೆಯುವಾಗ, ಸಂಸ್ಕರಿಸುವಾಗ ಹಾಗೂ ಮಾರಾಟ ಮಾಡುವಾಗ ಸಮಸ್ಯೆಗಳನ್ನು ಎದುರಿಸುತ್ತಾರೆ. ಕೆಲವು ಸಾರಿ ಖರೀದಿಸಿರುವ ರೈತರುಗಳು ಇದೇ ದಿನ ಕಾಯುವ ಹಾಗೆ ಮಾಡುತ್ತಾರೆ, ಮತ್ತು ಬೇರೆಯವರಿಗೆ ಮಾರಾಟ ಮಾಡುವ ಹಕ್ಕು ಅವರಿಗೆ (ರೈತರಿಗೆ) ಇರುವುದಿಲ್ಲ. ಕೆಲವು ವೇಳೆ ಕಂಪನಿ ಪ್ರತಿನಿಧಿಗಳು ಅವರ ತಂಬಾಕನ್ನು ತಿರಸ್ಕರಿಸುತ್ತಾರೆ. ಹಾಗಾಗಿ ಮಾರಾಟವಾಗದ ಎಲೆಗಳೊಂದಿಗೆ ರೈತರು ಮನೆಗೆ ಮರಳಲೇ ಬೇಕಾಗುತ್ತದೆ. ಇದೊಂದು ಕಠಿಣ ಕೆಲಸ ಎನ್ನುತ್ತಾರೆ ಅನ್ವರ್. ನಾನು ಕೆಟ್ಟ ಎಲೆಯನ್ನು ಆರಿಸಿ ತೆಗೆಯಬೇಕು, ಇದರಿಂದ ತಮ್ಮ ಕಾರ್ಮಿಕ ದರ ಹೆಚ್ಚಾಗುತ್ತದೆ. ಈ ರೀತಿಯಾಗಿ ಕಂಪನಿಗಳು ನಮ್ಮ ಲಾಭಂಶವನ್ನು ಕಡಿಮೆ ಮಾಡಲು ಸಮರ್ಥವಾಗುತ್ತವೆ. ನಾವು ದೂರು ಸಲ್ಲಿಸಿದರೆ ತಮ್ಮ ನೋಂದಾವಣೆಯನ್ನು ರದ್ದು ಗೊಳಿಸುತ್ತೇವೆಂದು ಬೆದರಿಕೆ ಹಾಕುತ್ತಾರೆ.

## 7. ದವಸ ಧಾನ್ಯಗಳು ನನಗೆ ಹೆಚ್ಚು ಲಾಭದಾಯಕವಾಗಬಲ್ಲವೆ?

35 ವರ್ಷ ಹರೆಯದ ಕುಮ್ರೂದ್ದಿನ್ ಚಿಕ್ಕ ಕುಟುಂಬವನ್ನು ಹೊಂದಿರುವ ಒಬ್ಬ ಸುಶಿಕ್ಷಿತ ವಿದ್ಯಾವಂತ. ತಮ್ಮ ಕುಟುಂಬ ಚಾರಿತ್ರಿಕವಾಗಿ ತಂಬಾಕನ್ನು ಬೆಳೆಯುತ್ತಿದ್ದರು. ಈ ನಿರ್ಧಾರವನ್ನು ಪ್ರಶ್ನಿಸುವ ಮಟ್ಟಕ್ಕೆ ಈತ ತಲುಪಿದ್ದಾನೆ. ತಂಬಾಕು ಬೆಳೆಯುವುದು ತಾನು ಯೋಚಿಸಿದಂತೆ ಲಾಭದಾಯಕವಲ್ಲವೆಂದು ನನ್ನ ತಂದೆ ಯವರೂ ಸಹ ಹೇಳಿದರು. ಹೀಗೆಂದು ಆತ ವಿಮರ್ಶೆ ಮಾಡಿದ. ಆತನ ತಂದೆ ಈ ಹಿಂದೆ ಹೆಚ್ಚು ಹಣವನ್ನು ಮಾಡಬಹುದೆಂದು ನಂಬಿ ತಂಬಾಕು ಬೆಳೆಯುವ ಸಲುವಾಗಿ ಆಹಾರ ಬೆಳೆಗಳ ಬೆಳೆಯುವುದನ್ನು ನಿಲ್ಲಿಸಿದರು. ಆದರೆ ಅವರು ಪಡೆದ ಅನುಭವವೇ ಬೇರೆಯಾಯಿತು. ತಾನು ತೊಡಗಿಸಿದ ಎಲ್ಲ ಬಂಡವಾಳಗಳನ್ನು ಲೆಕ್ಕಕ್ಕೆ ತೆಗೆದುಕೊಂಡ ನಂತರ ನಿಜಕ್ಕೂ ಅವನು ಕಡಿಮೆ ಸಂಪಾದನೆ ಮಾಡುತ್ತಿದ್ದ. ಹಾಗಾಗಿ ಆತ ಮರಳಿ ದವಸಗಳನ್ನು ಬೆಳೆಯಲು ಪ್ರಾರಂಭಿಸಿದ. A

# ಭಾರತದ ಆಹಮದಾಬಾದ್‌ನಲ್ಲಿ ಬೀಡಿ ಕಾರ್ಮಿಕರು : ಚಿಟ್ಟು ಹಿಡಿಸುವ ಕೆಲಸ (ವೃತ್ತಿ) ಅತ್ಯಲ್ಪ ವೇತನ / ಅತ್ಯಲ್ಪ ಕೂಲಿ

ಪ್ರಿಯ ರಾಘವನ್, ಸಂಶೋಧನ ಸಹ ಉದ್ಯೋಗಿ, ತಲೀಮ್

**ಸಂಪಾದಕೀಯ**

ಬೀಡಿ ಕಾಯಕವು ಭಾರತ ಮತ್ತು ಬಾಂಗ್ಲ ದೇಶಗಳಲ್ಲಿ ತಂಬಾಕು ಸಂಬಂಧಿ ಉದ್ಯೋಗದ ಪ್ರಮುಖ ವಲಯಗಳಲ್ಲಿ ಒಂದಾಗಿದೆ. ಬೀಡಿ ತಯಾರಿಕೆಯ ಪ್ರಕ್ರಿಯೆಯು ಸಂಪೂರ್ಣ ತೀವ್ರ ಶ್ರಮದಾಯಕ ವಾದ್ದರಿಂದ ಹೆಚ್ಚಿನ ಸಂಖ್ಯೆಯ ಕಾರ್ಮಿಕರನ್ನು ನೇಮಿಸಿ ಕೊಳ್ಳಬೇಕಾಗುತ್ತದೆ. ಬಹಳಷ್ಟು ಕಾರ್ಮಿಕರು ಮಕ್ಕಳು ಮತ್ತು ಮಹಿಳೆಯಾಗಿರುತ್ತಾರೆ. ಸುಖವಿರದ, ಬೇಸರ ತರಿಸುವ ಅತ್ಯಲ್ಪ ಪ್ರಮಾಣದ ಕೂಲಿ ದೊರೆಯುವ ಹಾಗೂ ಪುನರಾವರ್ತಿತ ಸ್ವರೂಪದ ಕೆಲಸವಾದ್ದರಿಂದ ಇದನ್ನು ಒಪ್ಪಿಕೊಳ್ಳಲು ಪುರುಷರು ಇಚ್ಚಿಸುವುದಿಲ್ಲ. ಈ ಅಧ್ಯಯನವು ಭಾರತದ ಒಂದು ಪ್ರದೇಶದಲ್ಲಿನ ಬೀಡಿ ಕಾರ್ಮಿಕ ರೊಂದಿಗೆ ನಡೆಸಿದ ಚರ್ಚೆಯ ಅಂಶಗಳನ್ನು, ಚರ್ಚಾಂಶಗಳನ್ನು ಮಂಡಿಸುತ್ತದೆ. (ಪ್ರದರ್ಶಿಸುತ್ತದೆ) ಹಾಗೂ ಈ ಕಾಯಕದಲ್ಲಿ ತೊಡಗಿಸಿಕೊಂಡಿರುವ ಕೆಲವು ವ್ಯಕ್ತಿಗಳ ವೃತ್ತಾಂತವನ್ನು ಬಹು ಮುಖ್ಯವಾಗಿ ಚರ್ಚಿಸಿದೆ. ಈ ಸಂಶೋಧನೆಯನ್ನು ಆಹಮದಾಬಾದ್‌ನ ತಲೀಮ್ ಸಂಶೋಧನಾ ಪ್ರತಿಷ್ಠಾನದ ಸಹಯೋಗದೊಂದಿಗೆ ನಡೆಸಲಾಗಿದೆ. ತಲೀಮ್ ಕಡಿಮೆ ಸವಲತ್ತುಗಳಿರುವವರಲ್ಲಿ ಸಂಶೋಧನೆ, ಶಿಕ್ಷಣ, ಹಾಗೂ ತರಬೇತಿ ಮುಂತಾದವುಗಳನ್ನು ಪ್ರೋತ್ಸಾಹಿಸುತ್ತದೆ.

**ಸಾರಾಂಶ**

ಆಹಮದಾಬಾದ್‌ನ ಕಾರ್ಮಿಕರೊಂದಿಗಿನ ಸಂದರ್ಶನವೂ ಅನೇಕ ಬಗೆಯ ವಿಷಯಗಳನ್ನು ಹೊರಗೆಡವಿದೆ / ಪ್ರಕಟ ಪಡಿಸಿದೆ. ಈ ಕಾರ್ಮಿಕರು ಬೀಡಿ ಕಟ್ಟುವ ಕೆಲಸವು ಅತಿ ಕಡಿಮೆ ಕೂಲಿ ಹೊಂದಿದೆ, ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತಿದೆ ಹಾಗೂ ಸುಖವಿರದ ಕಾಯಕವಾಗಿದೆ ಎಂದು ವಿವರಿಸಿದರು. ಈ ಕೆಲಸದಲ್ಲಿ ಒಂದು ಭಂಗಿಯಲ್ಲಿ ದೀರ್ಘಕಾಲದವರೆಗೆ ಕುಳಿತು ಕೂಂಡು ಒಂದೇ ರೀತಿಯ ದೈಹಿಕ ಶ್ರಮವನ್ನು ಪುನರಾವರ್ತಿತವಾಗಿ ಮಾಡಬೇಕಾಗುತ್ತದೆ. ಒಂದೇ ತೆರನಾದ ಚಿಟ್ಟು ಹಿಡಿಸುವ ಕೆಲಸ, ಜೊತೆಗೆ ಒಂದೆಡೆ ಸ್ಥಿರವಾಗಿರುವುದರಿಂದುಂಟಾಗುವ ದೈಹಿಕ ಬಳಲಿಕೆ ಹಾಗೂ ಪುನರಾವರ್ತಿತ ಚಲನ ವಲನಗಳಲ್ಲಿ ಮಗ್ನರಾಗಿರುವುದರಿಂದ ಈ ಕಾರ್ಯವು ತುಂಬಾ ಆಹಿತಕರವಾಗಿ ತೋರುತ್ತದೆ.

ಬೀಡಿ ಕಾರ್ಮಿಕರಲ್ಲಿ ಹೆಚ್ಚಾಗಿ ಮಹಿಳೆಯರು ಮತ್ತು ಮಕ್ಕಳು ಕಂಡುಬರುವುದು. ಪುರುಷರು ಈ ಕೆಲಸ ಕಡಿಮೆ ವೇತನವನ್ನು ಹೊಂದಿದೆ ಅಥವಾ ಅವರ ನಿರೀಕ್ಷಣೆಗಿಂತ ಕಡಿಮೆ ವೇತನವೆಂದು ಪರಿಗಣಿಸುತ್ತಾರೆ. ಕಡಿಮೆ ಆದಾಯ ದೈಹಿಕವಾಗಿ ಯಾತನಾಮಯವಾದ, ಬೇಸರ ತರಿಸುವ ಕೆಲಸವಾದರೂ ಆಕ್ಷೇಪಣೆ ಮಾಡದೆ ಈ ಕೆಲಸಕ್ಕೆ ನಿವೇದಿಸಿಕೊಳ್ಳುವವರಲ್ಲಿ ಬಹುತೇಕ ಮಹಿಳೆಯರು ಮತ್ತು ಮಕ್ಕಳಾಗಿರುತ್ತಾರೆ. ಅವರ ಸಮಯವು ಬೆಲೆಯಿಲ್ಲದ್ದು ಅಥವಾ ಮೌಲ್ಯರಹಿತವಾದದ್ದು ಎಂದು ಪರಿಗಣಿಸುವುದರಿಂದ ಅವರು ಗಳಿಸುವ ಅಲ್ಪ ಸ್ವಲ್ಪವೇ ತುಂಬಾ ಲಾಭದಾಯಕವೆಂದು ಪರಿಗಣಿಸುತ್ತದೆ. ಆದರೆ ಪುರುಷರು ಅಂಥ ಆದಾಯ ತಮಗೆ ಅವಮಾನಕರ ಹಾಗೂ ಅದೊಂದು ವ್ಯರ್ಥವಾಗಿ ಸಮಯವನ್ನು ಕಳೆದಂತೆ ಎಂದು ಪರಿಗಣಿಸುತ್ತಾರೆ. ಅನೇಕ ಮಹಿಳೆಯರ ಅರೆಪರ್‌ದಾ ವ್ಯವಸ್ಥೆಯ ಸ್ಥಿತಿಗತಿಗಳಿಗಾಗಿ ಅವರು

ಪರ್ಯಾಯ ಕೆಲಸಗಳನ್ನು ಮಾಡಲು ಮನೆಯಿಂದಾಚೆ ಹೋಗುವ ಹಾಗಿಲ್ಲ. ಆದ್ದರಿಂದ ಮನೆಯಲ್ಲಿಯೇ ಮಾಡಬಹುದಾದ ಸಣ್ಣ ಪುಟ್ಟ ಕೆಲಸಗಳನ್ನು ಆಯ್ಕೆ ಮಾಡಕೊಳ್ಳದೆ ಬೇರೆ ದಾರಿಯಿರುವುದಿಲ್ಲ.

ಅಲ್ಪ ಪ್ರಮಾಣದಲ್ಲಿ ಶಿಕ್ಷಣ ಕೌಶಲ್ಯಗಳು ಹಾಗೂ ಭರವಸೆಗಳಿಂದಾಗಿ ಬೀಡಿ ಕೆಲಸವು ಒಂದು ರೀತಿಯಲ್ಲಿ ಮಹಿಳೆಯರು ತಾವು ತಮ್ಮ ಮನೆಗೆ ಆರ್ಥಿಕರಾಗಿ ದೇಣಿಗೆ ನೀಡುತ್ತಿದ್ದೇವೆ. ತಾವೇನು ಸಂಪೂರ್ಣವಾಗಿ ನಿಷ್ಪ್ರಯೋಜಕರಲ್ಲ ಎಂದು ಭಾವಿಸಲು ಸಹಕಾರಿಯಾಗಿದೆ. ಖರೀದಿದಾರರು ನಿಮ್ನ ದರ್ಜೆಯ ಮಹಿಳೆಯರಿಂದ ಸುಲಭವಾಗಿ ಲಾಭಗಳಿಸುತ್ತಾರೆ. ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಕಡಿಮೆ ಕೂಲಿ ನೀಡುತ್ತಾರೆ. ಲಾಭಾಂಶವನ್ನು ನೀಡಲು ನಿರಾಕರಿಸುತ್ತಾರೆ ಹಾಗೂ ಕೊಳೆತ ಎಲೆಯಲ್ಲಿ ಸುತ್ತಿದ ಬೀಡಿಯನ್ನು ಸ್ವೀಕರಿಸುವುದಿಲ್ಲ ಹಾಗೂ ಹೊಸ ಎಲೆಯಿಂದ ಕೊಳೆತ ಎಲೆಯನ್ನು ಬದಲಾಯಿಸುವಂತೆ ಒತ್ತಾಯಿಸುತ್ತಾರೆ. ಮಹಿಳೆಯರಿಗೆ ಸ್ವತಂತ್ರ ಹಾಗೂ ಆಯ್ಕೆಗಳು ಇಲ್ಲದೆ ಇರುವುದರಿಂದ ಈ ಮಹಿಳೆಯರು ತಮ್ಮ ಶೋಷಣೆಯ ವಿರುದ್ಧ ಧ್ವನಿ ಎತ್ತಿದರೆ ಅವರಿಗೆ ಎಲೆಗಳನ್ನು ಮಾರಾಟ ಮಾಡುವುದನ್ನು ನಿಲ್ಲಿಸುತ್ತೇವೆಂದು ಖರೀದಿದಾರರು ಬೆದರಿಸುತ್ತಾರೆ.

ಈ ಸಮಸ್ಯೆಗಳಿಗೆ ಸೇರ್ಪಡೆಯಾದ ಮತ್ತೊಂದು ಸಂಗತಿ ಎಂದರೆ ವೇತನ (ಕೂಲಿ) ಸಮಸ್ಯೆ. ಸಂದರ್ಶನ ಕಾರರು ತಿಳಿದಂತೆ ಬೀಡಿ ಕಾಯಕ ಒಳ್ಳೆಯ ಲಾಭದಾಯಕ . ಕಾರ್ಮಿಕರು ದೂರಿರುವುದೇನೆಂದರೆ ಖರೀದಿದಾದರು ಇವರನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ ಹಾಗೂ ಕಡಿಮೆ ಗುಣಮಟ್ಟದ ಎಲೆಗಳನ್ನು ಆಗಾಗ ಕೊಡುತ್ತಾರೆ, ನಂತರ ಎಲೆ ಕಡಿಮೆ ಗುಣದ್ದಾಗಿದ್ದರೆ ಬೀಡಿಗಳಿಗೆ ಹಣ ನೀಡಲು ನಿರಾಕರಿಸುತ್ತಾರೆ. ಕಾರ್ಮಿಕ ವಾಣಿಜ್ಯಗಳನ್ನು ಪರಿಹರಿಸುವಲ್ಲಿ ಅವರಿಗೆ ಅದೃಷ್ಟವಿಲ್ಲ. ಕುತೂಹಲಕಾರಿಯಾಗಿ ಅವರು ವರದಿ ನೀಡುವುದೇನೆಂದರೆ ಬೀಡಿ ಕಾಯಕ ಒಂದು ಪ್ರಮುಖ ಆದಾಯದ ಮೂಲವಾಗಿರದೆ ಆಕಸ್ಮಿಕ ಹಾಗೂ ಹಂಗಾಮಿ ಉದ್ಯೋಗವಾಗಿರುತ್ತದೆ. ಇದೊಂದು ಶಾಶ್ವತ ಜೀವನಾಧಾರ ಕೆಲಸವಾಗಿರದೆ ಒಂದು ರೀತಿಯಲ್ಲಿ ಸರಳವಾಗಿ ಸ್ವಲ್ಪ ಪ್ರತ್ಯೇಕ ಹಣವನ್ನು ಗಳಿಸುವ ಕಾಯಕವಾಗಿದೆ. ಬೀಡಿ ಕಟ್ಟುವುದು ಪ್ರಮುಖ ಆದಾಯದ ಮೂಲವಾಗಿರುವ ಕಡೆಗಳಲ್ಲಿ ಕಾರ್ಮಿಕರು ಕಷ್ಟಕರವಾದ ಜೀವನ ನಡೆಸುತ್ತಾರೆ. ತಮಗೆ ಹಾಗೂ ತಮ್ಮ ಕುಟುಂಬಗಳಿಗೆ ಬೇಕಾದ ಮೂಲಭೂತ ಅವಶ್ಯಕತೆಗಳನ್ನು ಮಾತ್ರ ಒದಗಿಸಿಕೊಳ್ಳುವಲ್ಲಿ ಸಫಲರಾಗಿದ್ದರೆ ಅಥವಾ ಸಮರ್ಥರಾಗಿದ್ದಾರೆ.

## ಪ್ರಕರಣಗಳು

### ಒಬ್ಬ ವಿಧವೆಯ ಉಳಿವು

ರಾಧಬೆನ್ ರಾಮ್ನಾರಾಯಣ್ ಸಿರ್‌ಪುರಮ್ 50 ವರ್ಷ ವಯಸ್ಸಿನ ವಿಧವೆ. ಅವಳು ಚಿಕ್ಕವಳಿದ್ದಾಗ ಅವಳ ತಾಯಿ ತೀರಿಕೊಂಡಳು. ಹಾಗಾಗಿ ತನ್ನ ಎರಡು ಚಿಕ್ಕ, ಕಿರಿಯ ಸಹೋದರರನ್ನು ನೋಡಿಕೊಳ್ಳುವುದರಲ್ಲಿಯೇ ಅವಳ ಬಾಲ್ಯಜೀವನ ಕಳೆದುಹೋಯಿತು. ತನ್ನ 18ನೇ ವಯಸ್ಸಿನಲ್ಲಿ ಮದುವೆಯಾದಳು. ಅವಳ ಗಂಡ ಏಳು ವರ್ಷದ ನಂತರ ತೀರಿಹೋದ. ರಾಧಭೆನ್ ಆತನಿಂದ 2 ಗಂಡು 2 ಹೆಣ್ಣು ಮಕ್ಕಳನ್ನು ಪಡೆದಳು. ಅವಳ ಹಿರಿ ಮಗ ಅವಳಿಂದ ದೂರ ಹೋದರೆ, ತನ್ನ ಹಿರಿ ಮಗಳು ಮದುವೆಯಾಗಿ ಬೀಡಿ ಸುತ್ತುವ ಕೆಲಸಕ್ಕೆ ನೇಮಕಗೊಂಡಳು. ಎರಡನೆಯ ಮಗಳು ಮದುವೆಯಾದ ಎರಡೇ ತಿಂಗಳಿಗೆ ವಿಧವೆಯಾಗಿ ತನ್ನ ತಾಯಿ ಮತ್ತು ಕಿರಿಯ ಮಗನೊಂದಿಗೆ ವಾಸಿಸಲು ಮರಳಿ ಬಂದಳು.

ಮದುವೆಯಾದ ಮೇಲೆ ಸುಮಾರು 30 ವರ್ಷಗಳ ಹಿಂದೆ ತನ್ನ ನೆರೆಹೊರೆಯ ಮಹಿಳೆಯರು ಬೀಡಿ ಕೆಲಸ ನಿರ್ವಹಿಸುವುದನ್ನು ನೋಡಿ ರಾಧಬೆನ್ ಬೀಡಿ ಸುತ್ತುವ, ಕಟ್ಟುವ ಕೆಲಸವನ್ನು ಕಲಿತುಕೊಂಡಳು. ತನ್ನ ಮಗಳು ಬಟ್ಟೆ ಹೊಲಿಗೆಯಿಂದ ಒಳ್ಳೆಯ ಸಂಪಾದನೆ ಹಾಗೂ ಅವಳ ಕಿರಿಯ ಮಗ ವಜ್ರ ಸಂಸ್ಕರಣೆಯಿಂದಾಗಿ ಬೆಳೆಯ ಆದಾಯವಿರುವುದರಿಂದ ಅತಿ ಕಡಿಮೆ ದರದ ಬೀಡಿ ಕೆಲಸದ ಬಗ್ಗೆ ಅತಿ ಹೆಚ್ಚಿನ ಆಸಕ್ತಿಯನ್ನು ರಾಧ ಬೆನ್ ತೋರಿಸಿದಂತೆ ಕಂಡುಬಂದಿಲ್ಲ. ಅವಳು ಇತರೆ ಕೆಲಸಗಳಲ್ಲಿ ತರಬೇತಿ ಇಲ್ಲದ್ದರಿಂದ ಕಡಿಮೆ ವೇತನದ ಕೆಲಸಕ್ಕೆ ಬದಲಾಗಿ ಪರ್ಯಾಯ ಕೆಲಸಗಳು ಅವಳಿಗೆ ಕಂಡುಬರುವುದಿಲ್ಲ. ಅವಳು ಮತ್ತೊಂದು ವೇತನಕ್ಕೆ ಪ್ರಯತ್ನಪಟ್ಟರೆ ಖರೀದಿದಾರರು ಅವಳಿಗೆ ಕೆಲಸ ಕೊಡುವುದನ್ನೆ ನಿಲ್ಲಿಸಿ, ಹೆಚ್ಚಿನ ಹಣದ ಅಗತ್ಯವಿರುವ ಮಹಿಳೆಯರನ್ನು ಹುಡುಕಿ ಅವರನ್ನು ಶೋಷಿಸುತ್ತಾರೆ.

ರಾಧಬೆನ್ ದಿನದಲ್ಲಿ 5-6 ಗಂಟೆಗಳ ಕಾಲ ಬೀಡಿ ಸುತ್ತುವ ಕೆಲಸ ಮಾಡುತ್ತಾಳೆ. ಆದರೆ ವಯಸ್ಸಾದಂತೆ ತಾನು ಮೊದಲು ತ್ವರಿತವಾಗಿ ಕೆಲಸ ಮಾಡಿದಂತೆ ಈಗ ಬೀಡಿ ಸುತ್ತಲು ಅವಳಿಗೆ ಆಗುತ್ತಿಲ್ಲ. ನೆಲದ ಮೇಲೆ ದೀರ್ಘ ಕಾಲದವರೆಗೆ ಕುಳಿತು ಕೊಳ್ಳುವುದರಿಂದ ದೇಹಕ್ಕೆ ನೋವುಂಟಾಗುತ್ತದೆ. ಹಾಗೂ ಎಲೆ ಕತ್ತರಿಸುವಾಗ ಅವಳು ತನ್ನ ಮುಂಗೈಯಿಂದ ತೋಳಿನವರೆಗೆ ನೋವನ್ನು ಅನುಭವಿಸುತ್ತಾಳೆ. ಇತ್ತೀಚೆಗೆ ರಾಧಬೆನ್‌ಳ ಆರೋಗ್ಯ ಬಡವಾಗಿದೆ ಮತ್ತು ಅತಿ ರಕ್ತದೊತ್ತಡ ಮತ್ತು ಎದೆನೋವಿನಿಂದ ನರಳುತ್ತಿದ್ದಾಳೆ. ಅವಳು ಸುಮಾರು 800ರೂಗಳನ್ನು ತನ್ನ ವೈದ್ಯಕೀಯ ತಪಾಸಣೆಗೆಂದು ಖರ್ಚು ಮಾಡಿದ್ದಾಳೆ. ಬೀಡಿ ಕಾರ್ಮಿಕರಿಗಾಗಿ ಲಭ್ಯವಿರುವ ಆರೋಗ್ಯ ಕೇಂದ್ರದಲ್ಲಿ ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಪಡೆದುಕೊಂಡಿದ್ದಾಳೆ. ಆದರೆ ಇಲ್ಲಿ ಸಣ್ಣ ಕಾಯಿಲೆಗಾಳಾದ ಕೆಮ್ಮು, ಶೀತ ಮತ್ತು ಜ್ವರಗಳಿಗೆ ಮಾತ್ರ ಸೇವೆ ಸಿಗುತ್ತದೆ. ತೀವ್ರ ತರವಾದ ಕಾಯಿಲೆ ಅಥವಾ ಯಾವದೇ ವೈದ್ಯಕೀಯ ತಪಾಸಣೆಗಳಿಲ್ಲದೇ, ಈ ಕಾರ್ಮಿಕರು ಖಾಸಗಿ ಆಸ್ಪತ್ರೆಗಳಿಗೆ ಭೇಟಿನೀಡಿ ತಾವೇ ಖರ್ಚನ್ನು ಭರಿಸಬೇಕಾಗುತ್ತದೆ.

ವಯಸ್ಸಾದಂತೆ ಅವರ ಉತ್ಪಾದನಾ ಸಾಮರ್ಥ್ಯ ಕಡಿಮೆಯಾಗುವುದರಿಂದ ಅವರು ಯಾತನೆ ಪಡಲೇ ಬೇಕಾಗುತ್ತದೆ.

## *2. ಬೀಡಿ ಕಾರ್ಮಿಕರ (ಸಂತತಿಗಳು)*

ರಾಜಶ್ರೀ ಅವರ್ 29 ವರ್ಷ ಹರೆಯದ ಅವಿವಾಹಿತ ಮಹಿಳೆ. ತನ್ನ ಕುಟುಂಬದೊಂದಿಗೆ ವಾಸವಾಗಿದ್ದಾಳೆ. ಬೀಡಿ ಸುತ್ತುವ ಕೆಲಸವು ಅವರ ಮನೆಯ ಪ್ರಮುಖ ಆದಾಯ ಮೂಲವಾಗಿದೆ. ರಾಜಶ್ರೀ, ಅವಳ ನಾಲ್ಕು ಸಹೋದರಿಯರು, ಹಾಗೂ ಅವಳ ತಾಯಿ ಎಲ್ಲ ಬೀಡಿ ಸುತ್ತುತ್ತಾರೆ. ಅವಳ ಒಬ್ಬ ಸಹೋದರ ಹೊಲಿಗೆ ಅಂಗಡಿಯೊಂದರಲ್ಲಿ ಮಹಿಳೆಯರ ಬಟ್ಟೆಗಳನ್ನು ಹೊಲಿದು ತಿಂಗಳೊಂದಕ್ಕೆ 1000 ರೂಗಳನ್ನು ಸಂಪಾದಿಸುತ್ತಾನೆ. ರಾಜಶ್ರೀಯ ತಾಯಿ ಶ್ಯಾಮಲ ಬೆನ್ ತನ್ನ ಅತ್ತಿಗೆಯಿಂದ ಬೀಡಿ ಸುತ್ತುವ ಕೆಲಸವನ್ನು ಕಲಿತುಕೊಂಡಳು. ಸುಮಾರು 40 ವರ್ಷಗಳ ಹಿಂದೆ ಅವಳು ಬೀಡಿ ಸುತ್ತುವ ಕೆಲಸ ಪ್ರಾರಂಭ ಮಾಡಿದಾಗ 1000 ಬೀಡಿಗಳಿಗೆ 3 ರೂಗಳ ವೇತನವಿತ್ತು. ಈಗ ಅದು 1000ಕ್ಕೆ 34 ರೂಗಳಿಗೆ ಹೆಚ್ಚಿದೆ. ಆದೇನೆ ಇರಲಿ ಶ್ಯಾಮಲ ಬೆನ್ ಹೇಳುವುದೇನೆಂದರೆ, ಗಣನೀಯವಾಗಿ ಕೂಲಿದರ ಏರಿದಂತೆ ಕಂಡುಬಂದರೂ ಪ್ರಸ್ತುತ ಕೂಲಿ ದರದೊಂದಿಗೆ ಹೋಲಿಸಿದಾಗ ಕೊಳ್ಳುವ ಶಕ್ತಿ ಕಡಿಮೆ ಪ್ರಮಾಣದಲ್ಲಿದೆ.

ರಾಜಶ್ರೀ ಕಳೆದ 8-9 ವರ್ಷಗಳಿಂದ ಬೀಡಿ ಸುತ್ತುವ ಕೆಲಸ ಮಾಡುತ್ತಿದ್ದಾಳೆ. ಅವಳು ಈ ವೃತ್ತಿಯನ್ನು ತನ್ನ ತಾಯಿಯಿಂದ ಕಲಿತಳು. ಅವಳು ಪ್ರಾರಂಭದಲ್ಲಿ ತನ್ನ ತಾಯಿ ಕೆಲಸದಲ್ಲಿ ಬೀಡಿಗಳನ್ನು ಕಟ್ಟುವುದು,

ಎಲೆಗಳ ಎಳೆಗಳನ್ನು ತೆಗೆಯುವುದು ಹಾಗೂ ಎಲೆಗಳನ್ನು ಕತ್ತರಿಸುವುದು ಮುಂತಾದವುಗಳಲ್ಲಿ ಸಹಾಯ ಮಾಡುತ್ತಿದ್ದಳು. ಈಗ ರಾಜಶ್ರೀ ಒಬ್ಬಳೆ ಒಂದು ದಿನದಲ್ಲಿ 1000 ಬೀಡಿಗಳನ್ನು ಸುತ್ತುತ್ತಾಳೆ. ಅವಳ ತಾಯಿ ಹಾಗೂ ತನ್ನ ಇಬ್ಬರು ಕಿರಿಯ ಸಹೋದರಿಯರು ಒಂದು ದಿನದಲ್ಲಿ ಮತ್ತೊಂದು 1000 ಬೀಡಿಗಳನ್ನು ಕಟ್ಟುತ್ತಾರೆ. ಈಗ ತಾಯಿಯ ವೇಗ ಗಣನೀಯವಾಗಿ ಕಡಿಮೆಯಾಗಿದೆ. ಹಾಗಾಗಿ ಅವಳು ಎಲೆಗಳನ್ನು ಕತ್ತರಿಸುತ್ತಾಳೆ ಹಾಗೂ ಆ ಹುಡುಗಿಯರು ಬೀಡಿಗಳನ್ನು ಕಟ್ಟುತ್ತಾರೆ. ಬೀಡಿ ಕಾರ್ಮಿಕರ / ಕಟ್ಟುವವರ ಸ್ಥಿತಿಗತಿಗಳನ್ನು ಸುಧಾರಿಸಲು ಹಾಗೂ ವೇತನವನ್ನು ಹೆಚ್ಚಿಸಲು ಪ್ರಯತ್ನಿಸುವ ಕಾರ್ಮಿಕ ಸಂಘ ಅಸ್ತಿತ್ವದಲ್ಲಿದೆ ಎಂದು ರಾಜಶ್ರೀಯವರು ವಿವರಿಸಿ ಹೇಳಿದ್ದಾರೆ. ಕಾರ್ಮಿಕರಿಗೆ ಉದ್ಯೋಗದ ಪ್ರಯೋಜನಗಳನ್ನು ಲಾಭಗಳನ್ನು ಭದ್ರಪಡಿಸುವ ಸಲುವಾಗಿ ಈ ಸಂಘಟನೆಯು ಇತ್ತಿಚಿಗೆ 2 1/2 ತಿಂಗಳ ವರೆಗೆ ಕೆಲಸ ಸ್ಥಗಿತವನ್ನು ವ್ಯವಸ್ಥೆಗೊಳಿಸಿತು. ಮುಷ್ಕರದ ಪ್ರಾರಂಭದಲ್ಲಿ ಕಾರ್ಮಿಕರು ಬೀಡಿ ಕಾಯಕವನ್ನು ಒಪ್ಪಿಕೊಳ್ಳದಿರಲು ದೃಢವಾಗಿದ್ದರು. ಆದರೆ ಖರೀದಿದಾರರು ಸುತ್ತಿ ಬಳಸಿ ಕೊನೆಗೆ ಪ್ರಯೋಜನಗಳನ್ನು ಕೊಡಲು ನಿರಾಕರಿಸಿದರು. ಕಾಲ ಗತಿಸಿದಂತೆ ಅನೇಕ ಜನರು ಮೆತ್ತಗೆ ಮುಷ್ಕರ ತ್ಯಜಿಸಿ ಬೀಡಿ ಕಾಯಕ ಪ್ರಾರಂಭ ಮಾಡಿದರು. ಕೊನೆಗೆ ಮುಷ್ಕರ ಉತ್ಸಾಹವನ್ನು ಕಳೆದುಕೊಂಡು ಕಾರ್ಮಿಕ ಹಿಂದಿನ ವೇತನ ದರಕ್ಕೆ ಒಪ್ಪಿಕೊಂಡು ಕೆಲಸಕ್ಕೆ ಮರಳುವಂತಾಯಿತು.

ಬಹಳ ಕಾಲದವರೆಗೆ ಕುಳಿತುಕೊಳ್ಳುವುದರಿಂದ ನಮಗೆ ದೇಹಕ್ಕೆ ನೋವುಂಟಾಗುತ್ತದೆ ಎಂದು ರಾಜಶ್ರೀ ಕುಟುಂಬದವರು ಹೇಳುತ್ತಾರೆ. ಸ್ಥಳೀಯ ಎನ್‌ಜಿಓ ದಿಂದ ಬೀಡಿ ಕಾರ್ಮಿಕರಿಗಾಗಿ ಒದಗಿಸಿದ ಉಚಿತ ವೈದ್ಯಕೀಯ ಸೌಲಭ್ಯವನ್ನು ಪಡೆಯಲು ಅವರು ಅಸಮರ್ಥರಾಗಿದ್ದಾರೆ. ಏಕೆಂದರೆ ಆಸ್ಪತ್ರೆ ದೂರ ಇರುವುದರಿಂದ ತಾವೇ ಅಲ್ಲಿಗೆ ತಮ್ಮ ಹಣವನ್ನು ಖರ್ಚು ಮಾಡಿಕೊಂಡು ಪ್ರಯಾಣಿಸ ಬೇಕಾಗುತ್ತದೆ. ಅವರು ಕಾಯಿಲೆ ಬಿದ್ದಾಗ ಸ್ಥಳೀಯ ಖಾಸಗಿ ಆಸ್ಪತ್ರೆಗಳಿಗೆ ಹೋಗಲು ಇಚ್ಚಿಸುತ್ತಾರೆ.

ಬೀಡಿ ಕಾಯಕವು ಬಹಳ ಕಡಿಮೆ ಕೂಲಿಯನ್ನು ನೀಡುತ್ತದೆ / ಕೊಡುತ್ತದೆ ಎಂದು ಈ ಕುಟುಂಬಗಳಿಗೆ ಗೊತ್ತಿದ್ದರೂ, ಅವರು ಬೇರೆ ಯಾವುದೇ ಕೆಲಸವನ್ನು ಮಾಡಿದ ಅನುಭವವಿಲ್ಲದ್ದರಿಂದ ಇತರೆ ಕೆಲಸಗಳನ್ನು ಹುಡುಕಿಕೊಂಡು ಹೋಗಲು ಹೆದರುತ್ತಾರೆ. ಗೃಹವಾರ್ತೆ ಮತ್ತು ಮಕ್ಕಳನ್ನು ನೋಡಿಕೊಳ್ಳುತ್ತಾ ಬೀಡಿ ಕೆಲಸವನ್ನು ಮನೆಯಲ್ಲೆ ನಿರ್ವಹಿಸಬಹುದು. ಹಣ ಸ್ವಲ್ಪ ಇದ್ದಾಗ ಕೂಡ, ಈ ವೃತ್ತಿ ಬಹುತೇಕ ಬಂಡವಾಳವಿಲ್ಲದೆ ಪ್ರಾರಂಭಿಸಬಹುದು. ಕೆಲವೊಂದು ಸಲಕರಣೆಗಳನ್ನು ಖರೀದಿದಾರದಿಂದ ಕೊಳ್ಳಬೇಕಾಗುತ್ತದೆ. ಇತರೆ ವೃತ್ತಿಗಳಲ್ಲಿ ತೊಡಗಿಸುವ ಬಂಡವಾಳ ಹಾಗೂ ಮಾಡುವ ಕಲೆ, ಕೌಶಲ್ಯಗಳು ಇಲ್ಲದ್ದರಿಂದ ಅವರಿಗೆ ಬೇರೆ ಯಾವ ಆಯ್ಕೆಗಳು ಇರುವುದಿಲ್ಲ. ಅವರ ಅತಿ ಕಡಿಮೆ ಪ್ರಮಾಣದ ಗಳಿಕೆ ತಮ್ಮ ಮನೆ ಖರ್ಚನ್ನು ತೂಗಿಸಲು ಕನಿಷ್ಟವಾಗಿರುವುದರಿಂದ ಪರ್ಯಾಯ ಕೆಲಸಗಳನ್ನು ಮಾಡಲು ಅವಕಾಶವಿರುವುದಿಲ್ಲ. ಅವರು ಬಡತನದ ಚಕ್ರದಲ್ಲಿ ಸಿಲುಕಿಕೊಂಡಿದ್ದಾರೆ. ಶಿಕ್ಷಣದ, ನೈಪುಣ್ಯಗಳ ಹಾಗೂ ಹಣದ ಅಭಾವದಿಂದಾಗಿ ಕಡಿಮೆ ವೇತನದ ಕೆಲಸ ಮಾಡಲು ಅವರು ಬಲವಂತಾವಾಗಿ ಒಪ್ಪುತ್ತಾರೆ. ಹೀಗಾಗಿ ಅವರು ಪರ್ಯಾಯ ವೃತ್ತಿಗಳಲ್ಲಿ ಸಾಹಸ ಮಾಡಲು ಎಂದಿಗೂ ಸಮರ್ಥರಾಗುವುದಿಲ್ಲ. ಖರೀದಿದಾರರರು ಮಹಿಳೆಯರ ಬಡತನ, ಸ್ವಾತಂತ್ರ್ಯದ ಅಭಾವದಿಂದಾಗಿ ಪ್ರಯೋಜನ ಪಡೆಯುತ್ತಾರೆ. ಅವರಿಗೆ ಕಡಿಮೆ ವೇತನ ನೀಡುತ್ತಾರೆ. ಪ್ರತಿಭಟಿಸಿದರೆ ಕೆಲಸ ಕೊಡಲು ನಿರಾಕರಿಸುತ್ತೇವೆಂದು ಬೆದರಿಕೆ ಹಾಕುತ್ತಾರೆ.

## 3. ಬೀಡಿ ಕಾಯಕದ ವೃತ್ತಿ ಜೀವನ

ಸುಧಾಬೆನ್ ರಾಜ್ ನಾರಾಯಣ್ ಕೊಷ್ಟಿಯ 29 ವರ್ಷ ಹರೆಯದ ವಿವಾಹಿತ ಮಹಿಳೆ. ಎಂಟು ಜನ ಒಡಹುಟ್ಟಿದವರಲ್ಲಿ ಕಿರಿಯವಳು. ಅವಳು ನಾಲ್ಕನೇ ತರಗತಿ ಮಾತ್ರ ಓದಿ ಶಾಲೆ ಬಿಟ್ಟು, ತನ್ನ ತಾಯಿಯೊಂದಿಗೆ ಬೀಡಿ ಕೆಲಸಕ್ಕೆ ಸೇರಿಕೊಂಡಳು. ತನ್ನ 20ನೇ ವಯಸ್ಸಿನಲ್ಲಿ ಜವಳಿ ಜೀನ್‌ನಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕನೊಡನೆ ವಿವಾಹವಾದಳು. ಅವನು ದಿನಕ್ಕೆ 30-35 ರೂಗಳ ಸಂಪಾದನೆ ಮಾಡುತ್ತಿದ್ದ. ಅವಳು ತನ್ನ ಗಂಡನ ತಾಯಿ ಹಾಗೂ ವಿವಾಹಿತ ಸಹೋದರರೊಂದಿಗೆ ಒಟ್ಟಿಗೆ ವಾಸವಾಗಿದ್ದಳು. ಸುಧಾ ಬೆನ್ 7 ಮತ್ತು2 ವರ್ಷದ ಎರಡು ಮಕ್ಕಳನ್ನು ಹೊಂದಿದ್ದಾಳೆ . ಸುಧಾ ಬೆನ್ 9 ವರ್ಷಕ್ಕಿಂತಲೂ ಹೆಚ್ಚು ವರ್ಷಗಳಿಂದ ಬೀಡಿ ಕಟ್ಟುವ ಕೆಲಸ ಮಾಡುತ್ತಿದ್ದಾಳೆ. ಏಳು ದಿನದಲ್ಲಿ ಸುಮಾರು 8 ಗಂಟೆಗಳ ಕಾಲ ಕೆಲಸ ಮಾಡುತ್ತಾಳೆ. ಸುಮಾರು 600-700 ಬೀಡಿಗಳನ್ನು ತಯಾರಿಸಿ, ದಿನಕ್ಕೆ 25 ರೂಗಳನ್ನು ಸಂಪಾದಿಸುತ್ತಾಳೆ. ತನ್ನ ಒಪ್ಪಂದಕಾರನ ಬಗ್ಗೆ ಈಕೆ ತುಂಬಾ ಅತೃಪ್ತಳಾಗಿದ್ದಾಳೆ. ಏಕೆಂದರೆ ಅವನು ಕಡಿಮೆ ದರವನ್ನು ನೀಡುತ್ತಾನೆಂದಲ್ಲ ಆದರೆ ಆತನು ಕೀಳು ಗುಣಮಟ್ಟದ ಎಲೆಗಳನ್ನು ನೀಡುತ್ತಾನೆ. ಹಾಗಾಗಿ ಅವಳು ಎಲ್ಲ ಎಲೆಗಳನ್ನು ಉಪಯೋಗಿಸಲು ಆಗುವುದಿಲ್ಲ. ಈ ಮೂಲಕವಾಗಿ ತಾನು ಮಾಡುವ ಕೆಲಸದಲ್ಲಿ ಬೀಡಿಗಳ ಸಂಖ್ಯೆ ಕಡಿಮೆಯಾಗಿರುತ್ತದೆ. ತಾನು ತುಂಬಾ ಶೋಷಣೆಗೆ ಒಳಗಾಗುತ್ತೇನೆಂದು ಅವಳಿಗೆ ತಿಳಿಯುತ್ತದೆ. ಏಕೆಂದರೆ ಮೊದಲಿಗೆ ಅವಳಿಗೆ ಎಲೆ ಕೊಡುವವ ಗುತ್ತಿಗೆದಾರ, ಆದರೂ ಆ ಎಲೆಗಳಲ್ಲಿ ಬೀಡಿ ಕಟ್ಟಿ ಕೊಟ್ಟರೆ (ಕೊಳೆತ ಎಲೆಗಳಲ್ಲಿ) ಅದನ್ನು ತಿರಸ್ಕರಿಸುವವನು ಅದೇ ಗುತ್ತಿಗೆದಾರ. ಕೊರತೆ ಎಲೆಗಳನ್ನು ನೀಗಿಸಲು ತನ್ನ ಸ್ವಂತ ಹಣದಲ್ಲೆ ಆತನಿಂದ ಎಲೆಗಳನ್ನು ಕೊಳ್ಳಬೇಕಾಗುತ್ತದೆ. ಅವನು ನೀನು ಕೆಲಸ ಬಿಡು ಎಂದು ಕೇವಲವಾಗಿ ಸೂಚಿಸುವುದರಿಂದ ದೂರನ್ನು ಅಥವಾ ಅಹವಾಲನ್ನು ಹೇಳಿಕೊಳ್ಳುವುದರಲ್ಲಿ ಯಾವ ಅರ್ಥವೂ ಇಲ್ಲ. ಬೆಲೆಯಿಲ್ಲದ, ನಿಸ್ಸಹಾಯಕ, ಅನ್ಯಾಯದ ಹಾಗೂ ಶೋಷಣೆಯ ಭಾವನೆಗಳು ಬೀಡಿ ಕಾಯಕದ ಸ್ವಾಭಾವಿಕ ಅಂಗವೆಂಬಂತೆ ಸುಧಾಬೆನ್‌ಗಳಿಗೆ ತೋರಿಬರುತ್ತದೆ.

ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲದ ಈ ವೃತ್ತಿಯ ಬಗ್ಗೆ ಸುಧಾಬೆನ್‌ಳಿಗೆ ಜಿಗುಪ್ಸೆ ಮತ್ತು ಅಸಹ್ಯ ಭಾವನೆಗಳಿವೆ. ಅವಳು ಈ ಉದ್ಯೋಗವನ್ನು ತ್ಯಜಿಸಿ ಬೇರೆ ವೃತ್ತಿ ಮಾಡಲು ಬಯಸುತ್ತಾಳೆ. ಆದರೆ ಅವಳ ಗಂಡ ಹಾಗೂ ಇತರ ಕುಟುಂಬ ಸದಸ್ಯರು ಅವಳು ಮನೆಯಿಂದ ಹೊರಗೆ ಹೋಗಿ ಕೆಲಸ ಮಾಡುವುದನ್ನು ಆಕ್ಷೇಪಿಸುತ್ತಾರೆ. ಇತರೆ ಮನೆಯಲ್ಲಿ ಮಾಡಬಹುದಾದ ಕೆಲಸಗಳೆಂದರೆ ಮೇಣಬತ್ತಿ ಮಾಡುವುದು ಅಷ್ಟೇ ಸಮಯವನ್ನು ತೆಗೆದುಕೊಳ್ಳುತ್ತದೆ ಹಾಗೂ ಕಡಿಮೆ ವೇತನ. ಹಾಗಾಗಿ ಇದು ಬೀಡಿ ಕೆಲಸಕ್ಕೆ ಲಾಭದಾಯಕವಾದ ಪರ್ಯಾಯ ವೃತ್ತಿಯಲ್ಲ. ಉಚಿತ ವೈದ್ಯಕೀಯ ಸೇವೆಗಳನ್ನು ನೀಡುವ ಸ್ಥಳೀಯ ಎನ್‌ಜಿಓದ ಆಸ್ಪತ್ರೆಯು ದೂರವಿರುವುದರಿಂದ ಸುಧಾಬೆನ್ ಇದರಿಂದಲೂ ಸಹ ಪ್ರಯೋಜನವನ್ನು ಪಡೆದುಕೊಳ್ಳುವುದಿಲ್ಲ. ವೃತ್ತಿ ಸಂಘಕ್ಕೆ ಇವಳು ಸೇರಿದರೂ ಸಹ ಅವಳ ಶೋಷಣೆಯನ್ನು ಕಡಿಮೆ ಮಾಡಿ ಅವಳ ಕೆಲಸದ ಸ್ಥಿತಿಯನ್ನು ಸುಧಾರಿಸುವ ಅಥವಾ ಅವಳ ವೇತನ ದರವನ್ನು ಹೆಚ್ಚಿಸುವ ಯಾವ ಕೆಲಸವನ್ನೂ ಈ ಸಂಘ ಮಾಡಿಲ್ಲದಿರುವುದು ಸುಸ್ಪಷ್ಟ.

## 4. ಮಕ್ಕಳೆ ಏಕಮಾತ್ರ ಸಾಮಾಜಿಕ ಭದ್ರತೆ

ಕಲಮ್ಮ ರಾಂದಾಸ್ 72 ವರ್ಷ ವಯಸ್ಸಿನ ವಿಧವೆ. ತನ್ನ ಗಂಡನೊಂದಿಗೆ ಸುಮಾರು 50 ವರ್ಷಗಳ ಹಿಂದೆ ಅಹ್ಮದಾಬಾದ್‌ಗೆ ಬಂದಿದ್ದಳು. ಅವಳು ಚಿಕ್ಕಮಗುವಿನ ಬಸುರಿಯಾಗಿದ್ದಾಗ ಅವಳ ಗಂಡ ತೀರಿಹೋದ. ಕಲಮ್ಮ 9 ಮಕ್ಕಳಿಗೆ ಜನ್ಮ ನೀಡಿದರೂ, ನಾಲ್ಕು ಮಾತ್ರ ಅವುಗಳಲ್ಲಿ ಬದುಕುಳಿದವು. ಅವಳ ಗಂಡುಮಕ್ಕಳು ಕೆಲವು ವರ್ಷಗಳವರೆಗೆ ಓದಿದರೂ ಅವಳ ಹೆಣ್ಣು ಮಕ್ಕಳು ಮಾತ್ರ ಶಾಲೆಗೆ ಎಂದೂ ಹೋಗಲೇ ಇಲ್ಲ. ಅವರು ಮದುವೆಯಾಗಿ ತಮ್ಮ ಗಂಡಂದಿರ ಕುಟುಂಬಗಳೊಂದಿಗೆ ವಾಸವಾಗಿದ್ದಾರೆ. ನೆರೆ ಮನೆ ಮಹಿಳೆಯರಿಂದ ಬೀಡಿಕಟ್ಟುವ ಕೆಲಸ ಕಲಿತು ಅವಳು 25-30 ವರ್ಷಗಳವರೆಗೆ ಈ ಕೆಲಸವನ್ನು ಮುಂದುವರೆಸಿದ್ದಳು. ಅವಳ ಮಗಳಿಗೂ ಸಹ ಕಲಿಸಿದಳು. ಇಬ್ಬರು ಸೇರಿ ಒಂದು ದಿನಕ್ಕೆ 1000, ಬೀಡಿಗಳನ್ನು ಕಟ್ಟುತ್ತಿದ್ದರು. ಇದು ತನ್ನ ಗಂಡ ಸತ್ತ ಮೇಲೆ ತನ್ನ ಕುಟುಂಬದ ಪ್ರಮುಖ ಆದಾಯದ ಮೂಲವಾಯಿತು. ಅವಳಿಗೆ ವಯಸ್ಸಾದಂತೆ ಅವಳ ದೃಷ್ಠಿ ಮತ್ತು ವೇಗ ಕ್ಷೀಣಿಸಿತು. ಅವಳ ಆದಾಯವು ಸಹ. ಆದರೆ ಅದೃಷ್ಟವಶಾತ್ ಅವಳ ಮಕ್ಕಳು ದುಡಿದು ಸಂಸಾರಕ್ಕೆ ಆಧಾರವಾದರು. ಅವಳು ಅಂದಿನಿಂದ ಈ ಕೆಲಸದಿಂದ ನಿವೃತ್ತಿ ಹೊಂದಿದಳು.

ಸಂದರ್ಶನ ಮಾಡಿದ ಇತರರಿಗಿಂತ ಈಕೆ ಕಾರ್ಮಿಕ ಸಂಘದಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದಳು. ಅವಳು ಆದಾಯದಲ್ಲಿ ಅತ್ಯಂತ ಅಲ್ಪ ಪ್ರಮಾಣ ಆಗಿದ್ದರೂ, ಹೆಚ್ಚಳವನ್ನು ಕಂಡುಕೊಂಡಳು. ಈ ಮಧ್ಯೆ ಈ ಕೆಲಸದಿಂದ ಅವಳಿಗೆ ಬೆನ್ನು ನೋವು, ಎದೆ ನೋವು ಹಾಗೂ ಕೈ ನೋವುಗಳು ಉಂಟಾದವು. ಅವಳು ಆಗಾಗ್ಗೆ ಎನ್‌ಜಿಓ ವತಿಯಿಂದ ಸ್ಥಾಪಿಸಲ್ಪಟ್ಟ ಉಚಿತ ಆರೋಗ್ಯ ತಪಾಸಣಾ ಕೇಂದ್ರಕ್ಕೆ ಭೇಟಿ ನೀಡುವ ಅಭ್ಯಾಸ ಇಟ್ಟುಕೊಂಡಿದ್ದರೂ, ಅವಳು ಪ್ರಯಾಣ ದರವನ್ನು ಭರಿಸಲಾರಳಾದಳು ಹಾಗೂ ದೃಷ್ಟಿ ಹೀನತೆಯಿಂದಾಗಿ ಅವಳು ಒಂಟಿಯಾಗಿ ಪ್ರಯಾಣಿಸಿಲಾರಳು. ಅವಳು 25 ವರ್ಷಗಳವರೆಗೆ ಒಂದೇ ಕಂಪನಿಯಲ್ಲಿ ಕೆಲಸ ಮಾಡಿದ್ದರೂ, ಅವಳಿಗೆ ಉದ್ಯೋಗ ಭತ್ಯೆಗಳಾಗಲಿ ಅಥವಾ ನಿವೃತ್ತಿ ಲಾಭಂಶಗಳಾಗಲಿ ಸಿಗಲಿಲ್ಲ.

## 5. ಬೀಡಿ ವೃತ್ತಿಯಲ್ಲಿ ಸಿಲುಕಿ ಕೊಂಡು

ಮನಮ್ಮ ಲಕ್ಷ್ಮಿ ದತ್ತು ಮಂತಾತಿ 50 ವರ್ಷದ ವಿಧವೆ. 5 ಜನ ಒಡಹುಟ್ಟಿದವರಲ್ಲಿ ಜೇಷ್ಠೆ. ತನ್ನ ಏಳನೆ ವರ್ಷದಲ್ಲಿ ಮದುವೆಯಾದಳು. ಅವಳು ಶಾಲೆಗೆ ಹೋಗಲು ಅವಕಾಶವೇ ಇರಲಿಲ್ಲ. ಅವಳು ಮದುವೆಯಾದ ಕೂಡಲೇ ಬಲವಂತವಾಗಿ ಬೀಡಿ ಕೆಲಸಕ್ಕೆ ಸೇರಿಸಿದರು. ಅವಳ ಅತ್ತೆ ಕೈಮಗ್ಗದಿಂದ ಸೀರೆಗಳನ್ನು ನೂಲುವುದು ತುಂಬಾ ಕಷ್ಟಕರ ವೃತ್ತಿ ಮತ್ತು ಉರಿಬಿಸಿಲಿನಲ್ಲಿ ಕುಳಿತುಕೊಂಡು ನೂಲಬೇಕು. ಆದ್ದರಿಂದ ಬೀಡಿ ಕಾಯಕ ಕಡಿಮೆ ಅಹಿತಕರವಾದ ಪರ್ಯಾಯ ವೃತ್ತಿಯಾಗಿದೆಯೆಂದು ಸಲಹೆ ನೀಡಿದಳು. ಒಂದು ವರ್ಷದ ಅಧ್ಯಯನದ ನಂತರ ತನ್ನ ಎಂಟನೇ ವಯಸ್ಸಿನಲ್ಲಿ ತಾನೇ ಬೀಡಿ ಕಟ್ಟಲು ಸಮರ್ಥಳಾದಳು. ತನ್ನ ಗಂಡ ಒಂದು ಕಾರ್ಖಾನೆಯ ಕಾರ್ಮಿಕ. ಕುಡಿಯಲು ಪ್ರಾರಂಭಿಸಿ ಹೆಚ್ಚಿನ ಜೂಜುಗಾರನಾಗಿ ಸಂಸಾರಕ್ಕೆ ಯಾವದೇ ರೀತಿಯ ಬೆಂಬಲ ನೀಡದಾದ. ತನಗೆ ತಿಳಿದ ಏಕ ಮಾತ್ರ ಕಾಯಕ ಬೀಡಿಕಟ್ಟುವ ವೃತ್ತಿಯ ಮೂಲಕ ಲಕ್ಷ್ಮಿ ತನ್ನ ಕುಟುಂಬವನ್ನು ಪೋಷಿಸಿಕೊಂಡು ಹೋಗುವಂತಾಯಿತು. ತನ್ನ 21ನೇ ವಯಸ್ಸಿನಲ್ಲಿ 40 ವರ್ಷದ ಗಂಡ ಗೋಡೆಯಡಿ ಸಿಕ್ಕಿ ಸತ್ತು ಹೋದ. ಅವಳು ಕಾರ್ಖಾನೆಯಿಂದ ಯಾವುದೇ ಮರಣ ಭತ್ಯೆಗಳನ್ನು ಪಡೆಯಲಿಲ್ಲ.

ಲಕ್ಷ್ಮಿ ನಾಲ್ಕು ಮಕ್ಕಳಿಗೆ ಜನ್ಮ ನೀಡಿದ್ದರೂ, ಎರಡು ಆಕಾಲಿಕಲಾಗಿ ಜನಿಸಿ ನಂತರ ಸತ್ತವು. ತನ್ನ ತಾಯಿಗಿಂತ ಹೆಚ್ಚು ಕುಡಿತ ಮತ್ತು ಜೂಜನ್ನು ಪ್ರೀತಿಸುವ ಈ ಮಕ್ಕಳಿಂದ ತಾಯಿಗೆ ಯಾವುದೇ ಅಥವಾ ಎಳ್ಳಷ್ಟೂ ಬೆಂಬಲವಿಲ್ಲ

ದಿನ ಒಂದಕ್ಕೆ ಬೀಡಿ ಸುತ್ತಲು 8-10 ಗಂಟೆಗಳನ್ನು ವ್ಯಯಿಸುವುದನ್ನು ಲಕ್ಷ್ಮಿ ಅಭ್ಯಾಸ ಮಾಡಿಕೊಂಡಳು. ದಿನ ಒಂದಕ್ಕೆ 1,700 ಬೀಡಿಗಳನ್ನು ಕಟ್ಟಲು ಸಮರ್ಥಳಾಗುತ್ತಿದ್ದಳು. ಕಾರ್ಮಿಕ ವ್ಯಾಜ್ಯಗಳಿಂದಾಗಿ ಸುಮಾರು 7 ವರ್ಷಗಳ ಹಿಂದೆ ಒಬ್ಬ ಗುತ್ತಿಗೆ ದಾರ ಅವಳಿಗೆ 3000 ರೂಗಳ ಪರಿಹಾರ ನೀಡಿ ಹೆಚ್ಚಿನ ಪ್ರಯೋಜನಗಳನ್ನು /ವೇತನಗಳನ್ನು ನಿವಾರಿಸುವ ಸಲುವಾಗಿ ಈಕೆಯನ್ನು ಕೆಲಸದಿಂದ ತೆಗೆದುಹಾಕಿದ. ನಂತರ ಅವಳು ಮತ್ತೊಂದು ಕಂಪನಿಯಲ್ಲಿ ಬೀಡಿ ಕಾಯಕ ಪ್ರಾರಂಭಿಸಿದಳು. ದಿನಕ್ಕೆ 7-8 ಗಂಟೆ ದುಡಿದು, 600-700 ಬೀಡಿಗಳನ್ನು ಕಟ್ಟಿ ತಿಂಗಳಿಗೆ 600 ರೂಗಳ ಸಪಾದನೆ ಮಾಡುತ್ತಿದ್ದಳು. ಸಂಘದಲ್ಲಿ ಸೂಲಗಿತ್ತಿಯ ತರಬೇತಿಯನ್ನು ಹೊಂದಿದ್ದರಿಂದ ಹೆರಿಗೆ ವಷಯಗಳಲ್ಲಿ ಸಹಾಯ ಮಾಡಿ ವರ್ಷ ಒಂದಕ್ಕೆ ಕೆಲವು ಸಾವಿರ ರೂಗಳನ್ನು ಅವಳು ಈಗ ಗಳಿಸಲು ಸಹಾಯವಾಯಿತು. ಇತರೆ ಬೀಡಿ ಕಾರ್ಮಿಕರಂತೆ ಅವಳು, ತಲೆ ನೋವು, ಬೆನ್ನು ನೋವು ಮತ್ತು ಕೆಮ್ಮು ಮುಂತಾದವುಗಳಿಂದ ನರಳುತ್ತಿದ್ದಳು.

ಲಕ್ಷ್ಮಿ ತಿಂಗಳಿಗೆ 40-50 ರೂಗಳನ್ನು ಉಳಿಸುವ ಅಭ್ಯಾಸವನ್ನು ಮಾಡಿಕೊಂಡಿದ್ದಳು. ಆದರೆ ಅವಶ್ಯಕ ಸಾಮಗ್ರಿಗಳ ಬೆಲೆಯ ಹೆಚ್ಚಳದಿಂದಾಗಿ ಈಗ ಅವಳು ಅದನ್ನು ಮಾಡಲಾರಳು. ತನ್ನನ್ನು ರಕ್ಷಿಸಿಕೊಳ್ಳಲು ಅವಳು ತನ್ನೆಲ್ಲ ಆಭರಣಗಳು ಹಾಗೂ ಉಳಿತಾಯಗಳನ್ನು ಉಪಯೋಗಿಸಿಕೊಂಡಿದ್ದಾಳೆ. ಅವಳು ಭಾವಿಸುವುದೇನೆಂದರೆ, 25 ವರ್ಷಗಳ ಹಿಂದೆ ಬೀಡಿ ಕಾಯಕದಿಂದ ಬರುವ ಆದಾಯದ ನೈಜ ಬೆಲೆ ಬಹಳವಾಗಿತ್ತು. ಆದರೆ ಅವಳಿಗೆ ಬೇರೆ ಕೆಲಸ ಗೊತ್ತಿಲ್ಲದ್ದರಿಂದ ಬೀಡಿ ಕಾಯಕ ತ್ಯಜಿಸಲು ಪರ್ಯಾಯ ವೃತ್ತಿಗಳು ಕಾಣುತ್ತಿಲ್ಲ. ಅದೃಷ್ಟವಶಾತ್ ಸಂದರ್ಭಿಕವಾಗಿ ಭೇಟಿಯಾಗುವ ತನ್ನ ಸಹೋದರರಲ್ಲಿ ಒಬ್ಬ ಅವಳಿಗೆ ಹಣ ಕೊಡುತ್ತಾನೆ. ಅದಲ್ಲದೆ ಅವಳು ಬದುಕಲಾರಳು. ಲಕ್ಷ್ಮಿಗೆ ತುಂಬಾ ಅಗತ್ಯವಾದ ವಸ್ತುಗಳನ್ನು ಪಡೆಯಲು ನಡೆಸುವ ದಿನಿತ್ಯದ ಹೋರಾಟವೇ ಜೀವನವಾಗಿದೆ. ಪ್ರಸ್ತುತಕ್ಕಿಂತ ಭವಿಷ್ಯತ್ ಅವಳಿಗೆ ಮಂಕಾಗಿದೆ.

## 6. ಆಯ್ಕೆಗಳ ಅಭಾವ

ಸುಶೀಲ ಬೆನ್‌ಗೆ ಸುಮಾರು 50 ವರ್ಷ ವಯಸ್ಸು. ತನ್ನ 18ನೇ ವಯಸ್ಸಿನಲ್ಲಿ ತಿಂಗಳಿಗೆ 4,000 ರೂಗಳನ್ನು ಗಳಿಸುವ ಕಾರ್ಖಾನೆ ಕಾರ್ಮಿಕನೊಂದಿಗೆ ವಿವಾಹವಾಯಿತು. ಕಾರ್ಖಾನೆ ಮುಚ್ಚಿದ ಮೇಲೆ ತಿಂಗಳಿಗೆ 1,000 ರೂಗಳಂತೆ ಒಂದು ಬಟ್ಟೆ ಕಾರ್ಖಾನೆಯಲ್ಲಿ ಆತ ಕೆಲಸ ನೋಡಿಕೊಂಡ. ಅವರಿಗೆ ಮೂರು ಜನ ಮಕ್ಕಳಿದ್ದು ಇಬ್ಬರದು ಮದುವೆಯಾಗಿದೆ. ಸಾಲದ ಸಾಹಾಯದೊಂದಿಗೆ, ಸುಶೀಲ ಹಾಗೂ ಅವಳ ಗಂಡ 3 ಕೋಣೆಗಳಿರುವ ಮನೆಯನ್ನು ಖರೀದಿಸಿದರು.

ಸುಶೀಲ 30 ವರ್ಷಗಳಿಂದ ಬೀಡಿ ಕಟ್ಟುವ ಕೆಲಸ ನಿರ್ವಹಿಸುತ್ತಿದ್ದಾಳೆ. ತಾನು ಮಗುವಾಗಿದ್ದಾಗ ನೆರೆ ಮನೆಯ ಮಹಿಳೆಯರಿಂದ ಈ ಕೆಲಸ ಕಲಿತಳು. ಅವಳ ತಂದೆ ಈ ಕೆಲಸ ಮಾಡಲು ಬಿಡುತ್ತಿರಲಿಲ್ಲ. ತನ್ನ ಸೊಸೆಯರು ಮತ್ತು ಕಿರಿಯಮಗಳೊಂದಿಗೆ ಕೂಡಿಕೊಂಡು ದಿನಕ್ಕೆ 8-10 ಗಂಟೆ ಕೆಲಸವನ್ನು ಮನೆಯಲ್ಲೆ ಮಾಡುತ್ತಾರೆ. ಆದ್ದರಿಂದ ಅವರು ಬಹಳ ಕಡಿಮೆ ಅಂದರೆ 681 ರೂಗಳನ್ನು ಗಳಿಸುತ್ತಾರೆ. ನಾಲ್ಕು ಜನರಲ್ಲಿ ಯಾರೊಬ್ಬರಿಗೂ ಲಾಭವಿಲ್ಲ. ವಯಸ್ಸಾದ್ದರಿಂದ ಸುಶೀಲ ಯಾವುದೇ ರೀತಿಯಲ್ಲಿ ಬೀಡಿ ಕಟ್ಟಲಾರಳು.

ಆದರೆ ಎಲೆಗಳನ್ನು ತರಿಸಲು ತನ್ನ ಕೌಶಲ್ಯಗಳನ್ನು ಉಪಯೋಗಿಸಿಕೊಳ್ಳುತ್ತಾಳೆ. ಭಯಂಕರ ಹಣದುಬ್ಬರದ ಕಾರಣದಿಂದಾಗಿ ಅವಳು ಭಾವಿಸುವುದೇನೆಂದರೆ, 25 ವರ್ಷದ ಹಿಂದಿನ ವೇತನ, ಕೂಲಿ 1000ಕ್ಕೆ 3 ರೂಗಳು ಈಗಿನ 34ಕ್ಕೆ ವಿರುದ್ಧವಾಗಿ ಹೆಚ್ಚಾಗಿದ್ದವು. ಆದರಿಂದ ಅವಳು ಹೆಚ್ಚು ಕೊಳ್ಳಲು ಸಮರ್ಥಳಾಗುತ್ತಿದ್ದಳು. ಒಂದೇ ಭಂಗಿಯಲ್ಲಿ ದೀರ್ಘ ಕಾಲದವರೆಗೆ ಕುಳಿತುಕೊಳ್ಳುವುದರಿಂದ ದೇಹದ ನೋವು ಉಂಟಾಗುತ್ತದೆ. ಆದರೇ ಮಹಿಳೆಯರಿಗೆ ಶಿಕ್ಷಣ ಮತ್ತು ಇತರೆ ನೈಪುಣ್ಯಗಳು ಇಲ್ಲದ್ದರಿಂದ ಅವರು ಬದಲಿ ಆಯ್ಕೆ ಮಾಡಿಕೊಳ್ಳಲಾರರು.

## 7. ಏನು ಇಲ್ಲದಕ್ಕಿಂತ ಬೀಡಿ ಕಾಯಕ ಉತ್ತಮ

15 ವರ್ಷ ತಲುಪುವ ಮೊದಲೇ ಮದುವೆಯಾದ ಐಷಾ ಸಲೀಮ್ ಖಾನ್ ಕಳೆದ 22 ವರ್ಷಗಳಿಂದ ತನ್ನ ಗಂಡನ ಕುಟುಂಬದೊಂದಿಗೆ ವಾಸವಾಗಿದ್ದಾಳೆ. ನಾಲ್ಕು ಮಕ್ಕಳ ತಾಯಿ. ಅವಳ 3 ಗಂಡುಮಕ್ಕಳು ಕೆಲಸ ಮಾಡಲು 10ನೇ ತರಗತಿ ನಂತರ ಶಾಲೆಯನ್ನು ಬಿಟ್ಟರೆ ಅವಳ ಮಗಳು ಇನ್ನೂ ಶಾಲೆಯಲ್ಲಿ ಓದುತ್ತಿದ್ದಾಳೆ. ಅವಳು ಮಗುವಾಗಿದ್ದಾಗಲೇ ಬೀಡಿ ಕಟ್ಟುವುದನ್ನು ಕಲಿತಳು. ಆದರೆ ಮದುವೆಯಾದ 2 ವರ್ಷದ ನಂತರವೇ ತನ್ನ ಕೆಲವು ಗೆಳತಿಯರು ಹಾಗೂ ನೆರೆ ಹೊರೆಯವರೊಂದಿಗೆ ಈ ಕೆಲಸ ಪ್ರಾರಂಭಿಸಿದಳು. ಬೀಡಿ ಕಟ್ಟುವುದನ್ನು ಅವಳ ಗಂಡ ಮತ್ತು ಮಕ್ಕಳು ಆಕ್ಷೇಪಿಸುತ್ತಾರೆ. ಆದರೆ ಇದು ಲಾಭದಾಯಕವಾಗಿ ನಾವು ಮಗ್ನರಾಗಿರುವಂತೆ ಮಾಡುತ್ತದೆ. ಎಂದು ಭಾವಿಸುತ್ತಾಳೆ. ಚಿಲ್ಲರೆ ಖರ್ಚುಗಳಿಗೆ ಕಿಸೆ ಹಣ ದೂರಕಿಸಿಕೊಡುತ್ತದೆ. ಹಾಗೂ ಗೃಹ ವಾರ್ತೆಯು ನೈಜವಾದ ಕೆಲಸವಲ್ಲ ಎಂದು ಪರಿಗಣಿಸುವುದರಿಂದ ಈ ಕೆಲಸದಿಂದಾಗಿ ಅವಳು - ನಾನು ಸ್ವಲ್ಪ ಉಪಯೋಗಕ್ಕೆ ಬರುವವಳು - ಎಂದು ಭಾವಿಸುತ್ತಾಳೆ.

ಐಷಾ ಚುರುಕಾಗಿ ಕೆಲಸ ಮಾಡುವುದರಿಂದ ಕೇವಲ ನಾಲ್ಕು ತಾಸುಗಳಲ್ಲಿ 1000 ಬೀಡಿಗಳನ್ನು ಕಟ್ಟ ಬಲ್ಲಳು. ಹೀಗಾಗಿ ತನ್ನ ಗಂಡನ ಸಣ್ಣ ಪುಟ್ಟ ಕೆಲಸಗಳನ್ನು ಮಾಡಲು ಹಾಗೂ ತನ್ನ ಕುಟುಂಬವನ್ನು ಗಮನಿಸಿಕೊಳ್ಳಲು ಸಮಯವನ್ನು ಬಳಸಿಕೊಳ್ಳುತ್ತಾಳೆ. ಈ ಕೆಲಸದಿಂದ ಅವಳು ಬೀಡಿ ಕಾರ್ಮಿಕರಿಗಾಗಿ ನೀಡುವ ಸರ್ಕಾರದ ವಿಶೇಷ ಕಾರ್ಯಕ್ರಮಗಳ ಅಡಿಯಲ್ಲಿ ತನ್ನ ಮಗಳಿಗೆ ವಿದ್ಯಾರ್ಥಿ ವೇತನ ಕೊಡಿಸುವುದರ ಮೂಲಕ ಪ್ರಯೋಜನ ಪಡೆಯುತ್ತಾಳೆ.

ಅವಳು ಕಟ್ಟುವ ಬೀಡಿಗಳು ದೊಡ್ಡ ಪ್ರಮಾಣದಾಗಿದ್ದು, 1000ಕ್ಕೆ 34ರ ಬದಲು 36 ರೂಗಳನ್ನು ಪಡೆಯುತ್ತಾಳೆ. ಹೆಚ್ಚಿನ ಸಂಭಾವನೆಯನ್ನು ಮುಂದಿಟ್ಟುಕೊಂಡು ಐಷಾ ಇತ್ತೀಚೆಗೆ ಬೀಡಿ ಕಾರ್ಮಿಕರು ಹಮ್ಮಿ ಕೊಂಡಿದ್ದ ಅಯಶಸ್ವಿ ಮುಷ್ಕರದಲ್ಲಿ ಮುಳುಗಿದ್ದಳು. ಆದರೆ ಈ ಮುಷ್ಕರದಿಂದ ಯಾವುದೇ ಪರಿಹಾರ ಕಂಡುಕೊಳ್ಳಲಾಗಲಿಲ್ಲ. ಮುಷ್ಕರದ ನಂತರ, ತನ್ನ ನೆರೆಹೊರೆಯವರಂತೆ ಅವಳು ಹಿಂದಿನ ಷರತ್ತುಗಳ ಮೇರೆಗೆ ಕೆಲಸಕ್ಕೆ ಮರಳಿದಳು.

ಐಷಾಳ ದೃಷ್ಟಿಯಲ್ಲಿ ಬೀಡಿ ಕಟ್ಟುವುದು ಒಂದು ನ್ಯಾಯಬದ್ಧವಾದ ಉದ್ಯೋಗವಾಗಿದೆ. ತನ್ನ ನೆರೆಯ ಮಹಿಳೆಯರಿಗೆ ಸಾಮಾನ್ಯವಾದ ಸ್ವೀಕಾರಾರ್ಹವಾದ ಉದ್ಯೋಗವಾಗಿದೆ. ಈ ಕೆಲಸದಿಂದ ಅವಳು ಹೆಚ್ಚುವರಿ ಆದಾಯಗಳಿಸುವುದರಿಂದ ತನ್ನ ಮನೆಗೆ ಇದೊಂದು ವಿಶೇಷ ದೇಣಿಗೆ ಎಂದು ಪರಿಗಣಿಸುತ್ತಾಳೆ.

## ೮. ಬೀಡಿಉದ್ಯೋಗದಿಂದ ಬಟ್ಟೆ ಹೊಲಿಗೆಯೆಡೆಗೆ

ಮೋಟಿಬೆನ್ ಜಯಂತಿಲಾಲ್ ಕೊಷ್ಟಿಯಾಗೆ 38 ವರ್ಷ. ಬಡ ಕುಟುಂಬಕ್ಕೆ ಸೇರಿದ್ದಾಳೆ. ಸುಮಾರು ಹತ್ತು ವರ್ಷಗಳ ಹಿಂದೆಯೇ ವಿಧವೆಯಾದಳು. ತನಗೆ ಮತ್ತು ತನ್ನ ಇಬ್ಬರು ಮಕ್ಕಳಿಗೆ ಅವಳೇ ಏಕಮಾತ್ರ ಆಧಾರ. ಒಂದೇ ಕೊಠಡಿ ಇರುವ ಮನೆಯಲ್ಲಿ ವಾಸವಾಗಿದ್ದಾರೆ. ತನ್ನ ತಾಯಿ ಮತ್ತು ಸಹೋದರಿಯರೊಂದಿಗೆ ಪೂರ್ಣ ಸಮಯ ಬೀಡಿ ಕಟ್ಟುತ್ತಿದ್ದಳು. ಆದರೆ ವೇತನ ತುಂಬಾ ಕಡಿಮೆ ಇರುವುದರಿಂದ ಜೀವನ ನಡೆಸುವುದು ಕಠಿಣ ಎಂಬುದು ಅವಳಿಗೆ ಬೇಗನೆ ತಿಳಿಯಿತು. ಅವಳು ತನ್ನ ಬಾಲ್ಯದಲ್ಲಿ ಬಿಟ್ಟು ಹೊಲಿಯುವುದನ್ನು ಒಂದು ಹವ್ಯಾಸವಾಗಿ ಕಲಿತಿದ್ದಳು ಹಾಗೂ ತನ್ನ ಕುಟುಂಬಕ್ಕೆ ಬಟ್ಟೆ ಹೊಲಿದು ಕೊಡುತ್ತಿದ್ದಳು.

ಸುಮಾರು ಏಳು ವರ್ಷದ ಹಿಂದೆ ಮೋಟಿಬೆನ್ ತಂಬಾಕಿಗೆ ಬದಲಿಗೆ ತಾನು ಬಿಟ್ಟು ಹೊಲಿಗೆಯಿಂದ ತನ್ನ ಜೀವನ ನಡೆಸಬೇಕೆಂದು ಅರ್ಥಮಾಡಿಕೊಂಡಳು ಹಾಗೇ, ಯಶಸ್ವಿಯಾಗಿ ತನ್ನ ಬೀಡಿ ವೃತ್ತಿಯಿಂದ ಬಟ್ಟೆ ಹೊಲಿಗೆ ವೃತ್ತಿಗೆ ಬದಲಾದಳು. ಬೀಡಿ ಕಟ್ಟುವುದಕ್ಕಿಂತ ತುಂಬ ಹೆಚ್ಚಿನ ಲಾಭದಾಯಕವಾದ ಬಟ್ಟೆ ಹೊಲಿಗೆ ಕಾಯಕದಿಂದ ಅವಳು ಸಂತೋಷವಾಗಿದ್ದಾಳೆ. ಅವಳು 1000 ಬೀಡಿಗಳನ್ನು ಕಟ್ಟಿ ದಿನಕ್ಕೆ 34 ರೂಗಳನ್ನು ಗಳಿಸಬಲ್ಲವಳಾಗಿದ್ದರೆ ಬಟ್ಟೆ ಹೊಲಿಗೆಯಿಂದ ದಿನಕ್ಕೆ 100 ರೂಗಳನ್ನು ಸಂಪಾದಿಸುತ್ತಾಳೆ ಹಾಗೂ ಮದುವೆ ಮತ್ತು ಹಬ್ಬದ ಸಮಾರಂಭಗಳಲ್ಲಿ ಅದಕ್ಕಿಂತಲೂ ಹೆಚ್ಚು ಲಾಭ ಗಳಿಸುತ್ತಾಳೆ.

ಮೋಟಿಬೆನ್‌ನ ತಾಯಿ ಮತ್ತು ತಂಗಿಯರು ಬೀಡಿ ಕಟ್ಟುವುದನ್ನು ಮುಂದುವರೆಸಿದ್ದಾರೆ, ಏಕೆಂದರೆ ಕೆಲಸ ಸಂತೋಷಕರ ಹಾಗೂ ಲಾಭದಾಯಕ ಅಂತಲ್ಲ ಆದರೆ ನಾವು ಮಾಡಬಹುದಾದ್ದರೂ ಇದೆ. ಅಹಮದಾಬಾದ್, ರಖಿಯಾಲ್, ಮಣಿಖಡ್ಡಿಯ ಬೀಡಿ ಔಷಧಾಲಯಕ್ಕೆ ಭೇಟಿ. ಬೀಡಿ ಕಟ್ಟುವ ಕಾರ್ಮಿಕರ ಕಲ್ಯಾಣಕ್ಕಾಗಿ ಶ್ರಮಿಸುವ ಸೇವಾ ಎಂಬ ಸರ್ಕಾರೇತರ ಸಂಘಟನೆಯೊಂದು ಈ ಔಷಧಾಲಯವನ್ನು ಸ್ಥಾಪಿಸಿತು. ಈ ಕಾರ್ಮಿಕರ ಔಷಧಾಲಯದಲ್ಲಿ ನೇಮಕಗೊಂಡ ವೈದ್ಯರು ರಜೆಯಲ್ಲಿದ್ದರಿಂದ ನಾವು ಔಷಧ ಮಾರಾಟ ಮಾಡುವ ಶ್ರೀ ಹಿತೇಶ್ ದೇವ್ ಅವರೊಂದಿಗೆ ಮಾತನಾಡಿದೆವು. ಈತ ವೈದ್ಯರ ಅನುಪರಿಸ್ಥಿತಿಯಲ್ಲಿ ಈ ಚಿಕಿತ್ಸಾಲಯವನ್ನು ನಡೆಸುತ್ತಾನೆ. ಶ್ರೀದೇವ್ ಕೆಲವು ತಿಂಗಳ ಹಿಂದಷ್ಟೇ ಚಿಕಿತ್ಸಾಲಯಕ್ಕೆ ಸೇರಿಕೊಂಡಿದ್ದ. ಆದರೆ 13 ವರ್ಷಗಳಿಂದ ಬೀಡಿ ಕಾರ್ಮಿಕರೊಂದಿಗೆ ಕೆಲಸ ಮಾಡುತ್ತಿದ್ದಾನೆ. ಬೀಡಿ ಕಾರ್ಮಿಕರು ಆಗಾಗ್ಗೆ ಅನೇಕ ಗಂಟೆಗಳವರೆಗೆ ಒಂದೇ ಭಂಗಿಯಲ್ಲಿ ಕುಳಿತು ಕೆಲಸ ಮಾಡುವುದರಿಂದ ಬೆನ್ನು ನೋವು ಬರುತ್ತದೆ. ಹಾಗೂ ಆಗಾಗ್ಗೆ ಕೆಮ್ಮು ಸಹ ಇರುತ್ತದೆ ಎಂದು ಹೇಳಿಕೊಳ್ಳುತ್ತಾರೆ ಎಂದು ಶ್ರೀ ದೇವ್ ಅವರು ವಿವರಿಸಿದರು. ಕೆಲವು ಬೀಡಿ ಕಾರ್ಮಿಕರು ಬೀಡಿ ಕಟ್ಟುವುದರಿಂದ ತಮ್ಮ ಚರ್ಮ ಹಳದಿ ಬಣ್ಣಕ್ಕೆ ತಿರುಗಿದೆ ಎಂದು ದೂರುತ್ತಾರೆಂದು ಸಹ ಅವನು ಹೇಳಿದ. ಅವು ಹೊರಗಡೆ ಈ ಕೆಲಸವನ್ನು ಮಾಡಿದರೆ ಬೀಡಿಕಟ್ಟುವುದು ಕಾರ್ಮಿಕರ ಆರೋಗ್ಯವನ್ನು ಭಾರಿ ಪ್ರಮಾಣದಲ್ಲಿ ಹಾನಿಮಾಡುವುದಿಲ್ಲವೆಂದು ಅವನು ಪರಿಗಣಿಸುತ್ತಾನೆ / ಪರಿಭಾವಿಸುತ್ತಾನೆ.

# ಬೀಡಿ ಕೈಗಾರಿಕೆಯಲ್ಲಿ ಬಾಲ ಕಾರ್ಮಿಕರು (ಬಾಲಕರ ವೃತ್ತಿ), ಬಾಂಗ್ಲಾದೇಶ

ಥೆರೆಸ್ ಬ್ಲಾನ್‌ಚೆಟ್, ಸಮಾಜ ಮಾನವ ಶಾಸ್ತ್ರಜ್ಞ, ಯುನಿಸೆಫ್‌ಗೆ ಸಿದ್ದಪಡಿಸಿದ ವರದಿ
- ಡಾಕಾ, ಮಾರ್ಚ್ 2000

## ಸಂಪಾದಕೀಯ

ಈ ಕೆಳಗಿನ ಲೇಖನವು ಬಾಂಗ್ಲದೇಶದಲ್ಲಿ UNICEF ನಿಂದ ನಿಯೋಜಿಸಿದ ವರದಿಯ ಒಂದು ಉದ್ಧೃತ ಭಾಗವಾಗಿದೆ. ಈ ವರದಿಯು ಮುಖ್ಯವಾಗಿ ಮಕ್ಕಳು ಅನುಭವಿಸಿದ ಕಠಿಣ ಪರಿಸ್ಥಿತಿಗಳನ್ನು ಎತ್ತಿ ಹೇಳುತ್ತದೆ ಹಾಗೂ ಈ ಒಂದು ಕಾಯಕದಲ್ಲಿ ಮಹಿಳೆಯರು ಎದುರಿಸಿದ ಸಮಸ್ಯೆಗಳನ್ನು ಸಹ ಸಚಿತ್ರಗೊಳಿಸುತ್ತದೆ. ಅನೇಕರಿಗೆ ವೇತನವು ಅತ್ಯಂತ ಅಲ್ಪ ಪ್ರಮಾಣವಾದುದರಿಂದ ಇದೊಂದು ಲಾಭದಾಯಕ ಉದ್ಯೋಗವಾಗಿ ಕಂಡುಬರುವುದು ತುಂಬಾ ಪ್ರಯಾಸಕರ. ಮತ್ತು ಅವರು ಕೆಲಸದಲ್ಲಿ ಸಿಲುಕಿಕೊಂಡಿದ್ದಕ್ಕೆ ಇತರೆ ಕಾರಣಗಳೆಂದರೆ ಪೋಷಕರ ಮತ್ತು ಗಂಡಂದಿರ ಶೋಷಣೆಯೇ ಮುಖ್ಯವಾಗಿದೆ. ಈ ಬೀಡಿ ಕಾರ್ಮಿಕರು ಹೇಳುವ ಕಥೆಗಳು ತಮ್ಮ ಜೀವನದ ಕಷ್ಟ ಕಾರ್ಪಣ್ಯಗಳನ್ನು ಹಾಗೂ ಆರ್ಥಿಕ ಅಭಿವೃದ್ಧಿ ಅಥವಾ ಸುಧಾರಣೆಗೆ ಬಹುತೇಕ ಅವಕಾಶವನ್ನು ನೀಡಿದೆ. ಇರುವಂತಹ ಕಠಿಣತಮ ಸ್ವರೂಪದ ಉದ್ಯೋಗದ ಕ್ಲೇಶ ರೂಪಗಳನ್ನು ವಿಶದಗೊಳಿಸುತ್ತವೆ. ಈ ಉದ್ಧೃತ ಭಾಗವನ್ನು ಅಥವಾ ಲೇಖನವನ್ನು UNICEF ನ ಅನುಮತಿಯೊಂದಿಗೆ ಇಲ್ಲಿ ಮುದ್ರಿಸಲಾಗಿದೆ.

## ಹಿನ್ನಲೆ

ಬಾಂಗ್ಲದೇಶದಲ್ಲಿನ (5) ಐದು ಪ್ರದೇಶಗಳಲ್ಲಿ (ಜಾಗಗಳಲ್ಲಿ) ಸಂಗ್ರಹಿಸಿದ, 440 ಮನೆಗಳವರೊಡನೆ ನಡೆಸಿದ ಪ್ರಶ್ನಾವಳಿ, ಕೇಂದ್ರೀಕೃತ ಗುಂಪು ಚರ್ಚೆಗಳು, ಬಾಲ ಬೀಡಿ ಕಾರ್ಮಿಕರ ಪ್ರಕರಣ ಇತಿಹಾಸಗಳು, ಹಾಗೂ ಕಾರ್ಮಿಕ ಸಂಘದ ನಾಯಕರುಗಳನ್ನು ಬಾಲ ಕಾರ್ಮಿಕರ ಪೋಷಕರನ್ನು ಉಸ್ತಾದ್ (ಮೇಲ್ವಿಚಾರಕರು, ತರಬೇತುದಾರರು) ಮತ್ತು ವಾಹನ ಚಾಲಕರನ್ನು (ಇತರರಿಗೆ ಗುತ್ತಿಗೆ ನೀಡುವ ನೋಂದಾಯಿತ ಕಾರ್ಮಿಕರು), ಕಾರ್ಖಾನೆಯ ವ್ಯವಸ್ಥಾಪಕರನ್ನು ಶಿಕ್ಷಕರನ್ನು ಮತ್ತು ಮುಖ್ಯ ಶಿಕ್ಷಕರನ್ನು ಎನ್‌ಜಿಓ ದ ಕಾರ್ಮಿಕರನ್ನು ಮತ್ತು ಕಾರ್ಖಾನೆಯ ನಿರೀಕ್ಷಕರುಗಳನ್ನು ಸಂದರ್ಶಿಸಿದೆ. ಮಾಹಿತಿಯನ್ನು ಈ ವರದಿಯು ಪ್ರಸ್ತುತ ಪಡಿಸುತ್ತದೆ. ತಮ್ಮ ಮನೆಗಳಲ್ಲಿ ಮತ್ತು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವಾಗ ಬಾಲ ಕಾರ್ಮಿಕರನ್ನು ವೀಕ್ಷಿಸಲಾಗಿದೆ.

ಕತ್ತರಿಸಿದ ಎಲೆಗಳು ಮತ್ತು ತಂಬಾಕಿನ ಕಾಂಡಗಳನ್ನು ತುಂಬಿ, ನಂತರ ರುಚಿಕರ ಸ್ವಾದವನ್ನು ಸೇರಿಸಿ ಕೈಯಿಂದ ಸುತ್ತಿದ, ಕಟ್ಟಿದ ಅಗ್ಗದ ಬೆಲೆಯ ಸಿಗರೇಟುಗಳೇ ಈ ಬೀಡಿಗಳು. 250 ರ ಕಟ್ಟೊಂದಕ್ಕೆ ಡಾಲರ 0.05-0.07ರ ದರದಲ್ಲಿ ಮಾರಾಟ ಮಾಡಲಾಗುತ್ತದೆ. ಬೀಡಿ ತಯಾರಿಸುವುದು ಬಹಳ ಸುಲಭ. ಸಂಕೀರ್ಣ ತಂತ್ರಜ್ಞಾನದ ಅವಶ್ಯಕತೆ ಇಲ್ಲ ಹಾಗೂ ವಿದ್ಯುತ್ತಿನ ಅಗತ್ಯವೂ ಸಹ ಬೇಕಿಲ್ಲ. ಭಾರತದ ಬೀಡಿಗಳಂತೆ ಅಲ್ಲಿ ಬಾಂಗ್ಲ ಬೀಡಿಗಳು. ಬಾಂಗ್ಲದೇಶದಲ್ಲಿ ತುಂಬ್ರೆ ಮರಗಳು ಬೆಳೆಯದಿರುವುದರಿಂದ ಆ ದೇಶದ ಬೀಡಿಗಳನ್ನು ಸಿಗರೇಟ್ ಕಾಗದದಲ್ಲಿ ತಯಾರಿಸಲಾಗುತ್ತದೆ. ಸಿಗರೇಟ್ ಕಾಗದಕ್ಕೆ ಬದಲಾದ್ದರಿಂದ ಬೀಡಿ ತಯಾರಿಸುವುದು ತುಂಬಾ ಸುಲಭವಾಯಿತು. ಹಾಗಾಗಿ ಮಕ್ಕಳು ಈ ಕೆಲಸವನ್ನು ಸುಲಭವಾಗಿ ನಿರ್ವಹಿಸಬಹುದಾಗಿದೆ.

ನೇರವಾಗಿ ಹಣ ನೀಡದೆ ಪಾಲುದಾರ ವ್ಯವಸ್ಥೆಯನ್ನು ಅನುಸರಿಸುತ್ತಾರೆ. ಯಾರು ಸಂಖ್ಯೆಯನ್ನು ಹೊಂದಿರುತ್ತಾರೋ ಅಂಥವರು ಒಂದು ನಿರ್ದಿಷ್ಟಸಂಖ್ಯೆ ಬೀಡಿಗಳನ್ನು ಕೊಟ್ಟದ್ದಕ್ಕೆ ಹಣವನ್ನು ಪಡೆಯುತ್ತಾರೆ. ಮಧ್ಯವರ್ತಿಗಳೇ ಬೀಡಿ ಕಾರ್ಮಿಕರೊಂದಿಗೆ ಒಪ್ಪಂದ ಮಾಡಿಕೊಳ್ಳುವವರು. ಸಾಮಾನ್ಯವಾಗಿ ಮಹಿಳೆಯರು ಮತ್ತು ಮಕ್ಕಳೊಂದಿಗೆ ಇವರ ಸಂಪರ್ಕ ಹೆಚ್ಚು ಹಾಗೂ ಇವರು ಈ ಕೆಲಸದಿಂದ ಬರುವ ಬಹಳಷ್ಟು ಪ್ರಮಾಣದ ಹಣವನ್ನು ತಾವೇ ಪಡೆದುಕೊಳ್ಳುತ್ತಾರೆ. ಒಂದು ಪ್ರದೇಶದಲ್ಲಿ ಕಾರ್ಮಿಕರು (ನಿಜವಾಗಿ ಬೀಡಿ ತಯಾರಿಸುವವರು) ತಾವು ನಿರ್ವಹಿಸುವ ಪ್ರಮಾಣಕ್ಕೆ ಅವಲಂಬಿತವಾಗಿ ಪ್ರತಿ ದಿನ 3,000-12,000 ಬೀಡಿಗಳು ದಿನವೊಂದಕ್ಕೆ 0.18 -0.71 ಡಾಲರ್‌ಗಳನ್ನು ಸ್ವೀಕರಿಸುತ್ತಾರೆ. ಆ ಪ್ರದೇಶದಲ್ಲಿ ಹೊಸದಾಗಿ ಬಂದವರಿಗೆ 3-4 ತಿಂಗಳ ಕೆಲಸದ ಹಣವನ್ನು ಕೊಡವುದಿಲ್ಲ. ಇನ್ನೊಂದು ಪ್ರದೇಶದಲ್ಲಿ ಮನೆಯಲ್ಲೆ ಕೆಲಸ ಮಾಡುವ ಕಾರ್ಮಿಕರಿಗೆ ಕಾರ್ಖಾನೆಯಲ್ಲಿನ ಕಾರ್ಮಿಕರಿಗಿಂತ 7.2ರಷ್ಟು ಕಡಿಮೆ ಪ್ರಮಾಣದ ಕೂಲಿಯನ್ನು ನೀಡಲಾಗುತ್ತಿತ್ತು. ಮತ್ತೊಂದು ಜಾಗದಲ್ಲಿ ಮಹಿಳೆಯರು ತಿಳಿಸಿದ್ದೇನೆಂದರೆ ಎರಡು ಗಂಟೆಯ ನಂತರ ಅವರು ಡಾ.0.04ರಷ್ಟನ್ನು ಗಳಿಸುತ್ತಾರೆ. ಇಲ್ಲಿ ಒಂದು ಲೋಟ ಟೀನ ಬೆಲೆ ಡಾ.0.04 ನಿಂದ 0.05 ರಷ್ಟಿರುತ್ತದೆ. ಬೀಡಿ ಕಾರ್ಮಿಕರು ಸರ್ಕಾರ ನಿಗದಿಪಡಿಸಿದಂತೆ ಶೇ.12 ರಿಂದ ಶೇ.65 ರಷ್ಟು ಕೂಲಿ ದರವನ್ನು ಪಡೆಯುತ್ತಾರೆ. ಅದರಲ್ಲಿ ಹೆಚ್ಚಿನ ಆದಾಯ ವಯಸ್ಕ ಮಹಿಳೆಯರು ಮತ್ತು ಪುರುಷರಿಗೆ ಹೋಗುತ್ತದೆ. ಮಕ್ಕಳು ಮತ್ತು ಮಹಿಳೆಯರಿಗೆ ಕಡಿಮೆ ಪ್ರಮಾಣದ ಕೂಲಿ ದರವನ್ನು ನೀಡಲಾಗುತ್ತದೆ.

ಒಬ್ಬ ಉಪಗುತ್ತಿಗೆದಾರ ಕಾರ್ಖಾನೆಯ ಪ್ರವೇಶ ದ್ವಾರದ ಬಳಿ ಇರುವ ಚಿಹ್ನೆಯನ್ನು ತೋರಿಸುತ್ತಾ ಹೇಳಿದ - ಆತ ಬಾಲ ಕಾರ್ಮಿಕರ ಶೋಷಣೆಯ ವಿರುದ್ಧವಾಗಿದ್ದಾನಂತೆ. ಆತ ಹೇಳಿದ, ಮಾಲೀಕರು ಇದನ್ನು ಇಲ್ಲಿ ಇಟ್ಟಿದ್ದಾರೆ. ಆದರೆ ಆತ ಬಾಲ ಕಾರ್ಮಿಕರನ್ನು ತಡೆಯಲು ಬಯಸುವುದಿಲ್ಲ. ಸರ್ಕಾರವೂ ಸಹ $0.35 ಡಾಲರ್‌ಗೆ ಒಂದು ದಿನ ಯಾರು ಕೆಲಸ ಮಾಡುತ್ತಾರೆ? ಯಾವೊಬ್ಬ ವಯಸ್ಕನೂ ಇಲ್ಲ, ನಮಗೆ ಮಕ್ಕಳು ಬೇಕು. ಈ ಕೆಲಸಕ್ಕಾಗಿ ಮಾಲೀಕರು ನಮಗೆ 0.59 ಡಾಲರ್‌ಗಳನ್ನು ಕೊಡುತ್ತಾರೆ ಆದರೆ ನಾವು ಅದನ್ನು $0.35 ಡಾಲರ್‌ನಲ್ಲಿ ಮಾಡಿಸುತ್ತೇವೆ. ನಾವು ಮಕ್ಕಳಿಗೆ ಮೋಸ ಮಾಡುತ್ತೇವೆ?

ಬೀಡಿ ತಯಾರಿಸುವುದು ಪುನರಾವರ್ತಿತ ಬೇಜಾರು ತರಿಸುವ ವೃತ್ತಿ. ಅದನ್ನು ಒಂದೇ ಭಂಗಿಯಲ್ಲಿ ಕುಳಿತು ಅನೇಕ ತಾಸುಗಳವರೆಗೆ ಮಾಡಬೇಕಾಗುತ್ತದೆ. ಇದರಿಂದ ಭೌದ್ಧಿಕ ಉತ್ಸಾಹ ಸ್ವಲ್ಪವೂ ಇಲ್ಲ.

## ಬೀಡಿ ಕೆಲಸ ಮಾಡಲು ಕಾರಣಗಳು

ಮಹಿಳೆಯರು, ಮಕ್ಕಳು ಯಾವ ಕಾರಣಗಳಿಗಾಗಿ ಈ ಕೆಲಸ ಮಾಡುತ್ತಾರೆ ಎಂದು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವ್ಯತ್ಯಾಸವಾಗುತ್ತದೆ. ಅತಿ ಕಡಿಮೆ ಕೂಲಿಯ ಕೆಲಸ ಮಾಡಲು ಕೇವಲ ಬಡತನವಷ್ಟೆ ಕಾರಣವಲ್ಲ. ತಂದೆ ತಾಯಿಗಳು ಮಕ್ಕಳನ್ನು ಬಲವಂತವಾಗಿ ಈ ಕೆಲಸಕ್ಕೇ ನೂಕುವುದು ಇತರೆ ಕಾರಣಗಳಾಗಿವೆ. ಈ ಅಧ್ಯಯನದಿಂದ ಕಂಡಿದ್ದೇನೆಂದರೆ ಶೇ.36.6 ಮಹಿಳೆಯರ ಪ್ರಕಾರ ಬೀಡಿ ಕೆಲಸಕ್ಕೆ ತಮ್ಮ ಮಕ್ಕಳನ್ನು ತೊಡಗಿಸುವುದಕ್ಕೆ ಮುಖ್ಯವಾಗಿ ಬಡತನವೇ ಕಾರಣವಾಗಿದೆ. ಇತರೆ ಕಾರಣಗಳೆಂದರೆ.

1. ಉತ್ತಮ ವೇತನ ಪಡೆದು ಕಾರ್ಖಾನೆಗಳಲ್ಲಿ ಕೆಲಸ ಮಾಡುವ ತಾಯಂದಿರು ತಮ್ಮ ಮಕ್ಕಳನ್ನು ನೋಡಿಕೊಳ್ಳುವವರು ಯಾರು ಇಲ್ಲದವರು ಅಥವಾ ಮನೆಯಲ್ಲಿರುವ ತಮ್ಮ ಹೆಣ್ಣು ಮಕ್ಕಳನ್ನು ರಕ್ಷಿಸುವವರು ಇಲ್ಲದವರು ತಮ್ಮೊಂದಿಗೆ ತಮ್ಮ ಮಕ್ಕಳನ್ನು ಕಾರ್ಖಾನೆಗೆ ಕರೆದುಕೊಂಡು ಹೋಗುತ್ತಾರೆ. ಹಾಗಾಗಿ ಈ ಮಕ್ಕಳು ಸಹಜವಾಗಿಯೇ ಕೆಲಸ ಮಾಡುತ್ತಾ ದಿನ ಕಳೆಯುತ್ತಾರೆ.

2. ಪರದಾ ಇರುವ ತಾಯಂದಿರು ಮನೆಯಲ್ಲೇ ಕೆಲಸ ಮಾಡಬೇಕಾಗುತ್ತದೆ.(ಕಾರ್ಖಾನೆಗೆ ಹೋಗಲು ಅವಕಾಶವಿರುವುದಿಲ್ಲ). ಆದ್ದರಿಂದ ಅವರು ಮತ್ತು ಅವರ ಮಕ್ಕಳು ಸ್ವಲ್ಪ ಪ್ರಮಾಣದ ಹಣವನ್ನು ಗಳಿಸುತ್ತಾರೆ. ಅವರು ತಮ್ಮ ಗಂಡು ಮಕ್ಕಳನ್ನು ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಕಳಿಸಬಹುದು.

3. ಕೆಲಸ ಮಾಡದ ಗಂಡಂದಿರು ಅಥವಾ ತಮ್ಮ ಆದಾಯವನ್ನು ತಮ್ಮ ಹೆಂಡತಿಯರೊಂದಿಗೆ ಹಂಚಿಕೊಳ್ಳದ ಗಂಡಂದಿರನ್ನು ಹೊಂದಿರುವ ಮಹಿಳೆಯರು ಬೀಡಿ ಕಟ್ಟಲು ತಮ್ಮ ಮಕ್ಕಳನ್ನು ಬಲವಂತ ಪಡಿಸಬಹುದು. ಆದ್ದರಿಂದ ಅವರು ತಮ್ಮ ಮಕ್ಕಳ ಸಂಪೂರ್ಣ ಆದಾಯವನ್ನು ತಮಗೊಪ್ಪಿಸುವಂತೆ ಬಲವಂತ ಪಡಿಸಬಹುದು.

4. ಮಕ್ಕಳನ್ನು ನಿಯಂತ್ರಿಸುವ ಒಂದು ಮಾರ್ಗ (ತೊಂದರೆಗಳಿಂದ ಅವರನ್ನು ಸಂರಕ್ಷಿಸುವುದು). ನನ್ನ ಮಗ ಕಳ್ಳನಾಗಲಿ ಅಥವಾ ಡಕಾಯಿತನಾಗಲಿ ಆಗುವುದು ಬೇಡ. ಅವನು ಕೆಲಸ ಮಾಡುವುದನ್ನು ಕಲಿಯಲಿ, ಎನ್ನುತ್ತಾಳೆ ಒಬ್ಬ ತಾಯಿ ತನ್ನ ಮಗನ ಬಗ್ಗೆ.

ಪುರುಷರು ಕುಳಿತು ಮಾಡುವ ಕೆಲಸವನ್ನು ಅಪೌರುಷವೆಂದು ಪರಿಗಣಿಸುತ್ತಾರೆ. ಹಾಗೂ ಕಡಿಮೆ ವೇತನವಾದ್ದರಿಂದ ಈ ಕೆಲಸ ಮಾಡಲು ನಿರಾಕರಿಸುತ್ತಾರೆ ಮತ್ತು ಬದಲಿಗೆ ತಮ್ಮ ಹೆಂಡರು ಮಕ್ಕಳನ್ನು ಈ ಕೆಲಸಕ್ಕೆ ಒತ್ತಾಯವಾಗಿ ನೂಕುತ್ತಾರೆ. ಬೀಡಿ ತಯಾರಿಸುವ ಕುಟುಂಬಗಳಲ್ಲಿ ಹೆಚ್ಚಿನ ಪ್ರಮಾಣದ ಬಹು ಪತ್ನಿತ್ವ ಪದ್ಧತಿಯಿದೆ. ಬೀಡಿ ಕಾಯಕದಲ್ಲಿ ತೊಡಗಿರುವ ಮಹಿಳೆಯರು ಮತ್ತು ಮಕ್ಕಳು ತಮ್ಮನ್ನು ತಾವೇ ಬೆಂಬಲಿಸಿಕೊಳ್ಳಬಲ್ಲರು. ಹಾಗಾಗಿ ತಮ್ಮ ಗಂಡಂದಿರು ಹೆಚ್ಚು ಹೆಡಂದಿರನ್ನು ಮದುವೆ ಮಾಡಿಕೊಳ್ಳಲು ಅವಕಾಶ ನೀಡುತ್ತಾರೆ. ತಮ್ಮ ಬಹು ಪತ್ನಿತ್ವದ ಸಂಘಟನೆಗಳ ಮೂಲಕ ತಾವು ಅನೇಕ ಮಕ್ಕಳ ತಂದೆ ಯಾದ್ದರಿಂದ ಪುರುಷರು ಪರಿಣಾಮಕಾರಿಯಾಗಿ ಬೀಡಿ ಕಾರ್ಮಿಕರ ಸ್ಥಿರವಾದ ಪೂರೈಕೆಯನ್ನು ದೃಢ ಪಡಿಸುತ್ತಾರೆ. ಹೆಂಡತಿ ಕಾಯಿಲೆ ಬಿದ್ದು ದುಡಿಯಲು ಅಸಮರ್ಥಳಾದರೆ, ಅವಳನ್ನು ವಿಚ್ಛೇದಿಸುವ ಸಂಭಾವನೀಯತೆಯಿರುತ್ತದೆ.

ಒಂದು ಪ್ರಕರಣ ಅಧ್ಯಯನವು ಆರು ವರ್ಷಗಳಿಂದ ಬೀಡಿ ತಯಾರಿಸುವ 15 ವರ್ಷ ವಯಸ್ಸಿನ ಒಬ್ಬ ಬಾಲಕನನ್ನು ಒಳಗೊಂಡಿದೆ. ಅವನು ವಿವರಿಸುವುದೇನೆಂದರೆ ಅವನು ಸಂಪಾದಿಸುವ ಹಣದಲ್ಲಿ ದೊಡ್ಡ ಮೊತ್ತವನ್ನು ಅವನ ತಂದೆ ಜೂಜಾಡಲೆಂದು ಕಿತ್ತುಕೊಳ್ಳುತ್ತಿದ್ದರಿಂದ ಅವನು ಮತ್ತು ಅವನ ಸಹೋದರ ಶಾಲೆ ಬಿಟ್ಟು ಒತ್ತಾಯಪೂರ್ವಕವಾಗಿ ಬೀಡಿ ಕಾಯಕ ಮಾಡಬೇಕಾಯಿತು. ಆ ಹುಡುಗ ಹೇಳಿದ, ನನ್ನ ಕಿರಿಯ ಸಹೋದರನ ಆರೋಗ್ಯ ಹಾಳಾಗಿದೆ. ಆದರೆ ನಮ್ಮ ತಂದೆ ಹಣ ಮಾತ್ರ ಬಯಸುತ್ತಾನೆ. ಈ ಕೆಲಸದಿಂದ ನಮ್ಮ ಆರೋಗ್ಯದ ಮೇಲೆ ಯಾವ ಪರಿಣಾಮವಾಗುತ್ತದೆ ಎಂಬುದರ ಬಗ್ಗೆ ನಮ್ಮ ತಂದೆ ತಿಳಿದು ಕೊಳ್ಳಲು ಬಯಸುವುದಿಲ್ಲ. ಕಳೆದ ಮೂರು ತಿಂಗಳಿಂದ (ಈ ಸಂದರ್ಶನಕ್ಕಿಂತ ಮೊದಲು) ನಾವು ಒಂದು ಅರ್ಧ ದಿವಸ ರಜೆ ಮಾಡಿಲ್ಲ. ದಿನಕ್ಕೆ 10-12 ತಾಸುಗಳಂತೆ ನಾವು ವಾರದಲ್ಲಿ 7 ದಿನಗಳು ಕೆಲಸವನ್ನು ಮಾಡುತ್ತಿದ್ದೇವೆ.

ಈ ಅಧ್ಯಯನದಲ್ಲಿ ಕಂಡುಬರುವಂತೆ, ಮಕ್ಕಳು ತಮ್ಮ ಬೀಡಿ ಕಾಯಕದಿಂದ ತಮ್ಮ ಕುಟುಂಬಕ್ಕೆ ಶೇ. 8-40ರಷ್ಟು ದೇಣಿಗೆ ನೀಡಿದ್ದಾರೆ. ಮಕ್ಕಳ ಮಾತುಗಳಲ್ಲಿ ಹೇಳುವುದಾದರೆ, ತಮ್ಮ ತಂದೆಯರು ಕೆಲಸವನ್ನು ಮಾಡದೆ ತಮ್ಮ ಹಣವನ್ನೇ ಖರ್ಚು ಮಾಡುವುದರಿಂದ ಹಾಗೂ ತಮ್ಮ ಕುಟುಂಬಗಳ ಬಗ್ಗೆ ಯಾವುದೇ ಜವಾಬ್ದಾರಿ ತೋರಿಸದೇ ಇರುವುದು ಹೆಚ್ಚು ಪ್ರತಿ ಶತಗಳಿಗೆ ಕಾರಣವಾದ ಅಂಶವಾಗಿದೆ. ಈ ಪ್ರದೇಶಗಳಲ್ಲಿ

ಸರಾಸರಿ ತಿಂಗಳಿಗೆ ಹುಡಗರು 12.47 ಡಾಲರ್ ಮತ್ತು ಹುಡುಗಿಯರು 4.93 ಡಾಲರ್‌ಗಳನ್ನು ಗಳಿಸುತ್ತಾರೆ. ಹುಡುಗಿಯರು ಮನೆ ಕೆಲಸಗಳು ಮತ್ತು ಮಕ್ಕಳನ್ನು ನೋಡಿಕೊಳ್ಳಬೇಕಾದ್ದರಿಂದ ಹುಡುಗರಿಗೆ ಹೋಲಿಸಿದಾಗ ಶೇ.40 ಕಡಿಮೆ ಸಮಯವನ್ನು ಈ ಕೆಲಸದಲ್ಲಿ ವ್ಯಯಿಸುವುದರಿಂದ ಈ ವ್ಯತ್ಯಾಸ ಕಂಡುಬರುತ್ತದೆ. ಈ ಅಧ್ಯಯನವು ಕಂಡುಕೊಂಡ ಅಂಶವೇನೆಂದರೆ ಹುಡುಗಿಯರಿಗಿಂತ ಹೆಚ್ಚು ಹುಡುಗರು ಕಾರ್ಖಾನೆಯಲ್ಲಿ ಕೆಲಸ ಮಾಡಿದರೆ ಹೆಚ್ಚು ಹುಡುಗಿಯರು ಮನೆಯಲ್ಲೇ ಕೆಲಸ ಮಾಡುತ್ತಾರೆ. ಮತ್ತು ಸಂಪೂರ್ಣ ಅತಿ ಸಂಭವನೀಯರಾಗಿ ಹುಡುಗರಿಗಿಂತ ಹುಡುಗಿಯರೇ ಹೆಚ್ಚು ಈ ಕೆಲಸ ಮಾಡುವುದು ಹಾಗೂ ಹುಡುಗರಿಗಿಂತ ಹುಡುಗಿಯರೇ ಚಿಕ್ಕ ವಯಸ್ಸಿನಲ್ಲಿ ಈ ಕೆಲಸ ಪ್ರಾರಂಭಿಸುವುದು. ಹುಡುಗರಿಗೆ ವಯಸ್ಸಾದಂತೆ ಹಾಗೂ ಇತರೆ ಕಸಬುಗಳಾದ ರಿಕ್ಷಾ ಎಳೆಯುವುದು. ಮುಂತಾವುಗಳನ್ನು ಮಾಡಲು ಸಾಧ್ಯತೆಗಳಿರುವುದರಿಂದ, ಅವರು ಬೀಡಿ ಕಾಯಕವನ್ನು ತ್ಯಜಿಸುತ್ತಾರೆ ಆದರೆ ಹುಡುಗಿಯರಿಗೆ ಇಂಥ ಆಯ್ಕೆಗಳು ಇರುವುದಿಲ್ಲ. ತಮ್ಮ ತಾರುಣ್ಯದ ಸಮಯದಲ್ಲಿ ಕೆಲವು ಹುಡುಗಿಯರು ತಾತ್ಕಾಲಿಕವಾಗಿ ಕೆಲಸ ಬಿಡಬಹುದು. ಆದರೆ ಮದುವೆಯಾದಾಗ ಅವರನ್ನು ಒತ್ತಾಯಪೂರ್ವಕವಾಗಿ ಈ ಕೆಲಸದಲ್ಲಿ ಮುಂದುವರೆಯುವಂತೆ ಮಾಡುತ್ತಾರೆ. ಈ ರೀತಿಯಾಗಿ ಅವರು ಜೀವಮಾನವಿಡಿ ಈ ಕೆಲಸಕ್ಕೆ ಆರ್ಪಿತವಾಗುತ್ತಾರೆ.

ಇಬ್ಬರು ಸಹೋದರಿಯರು ತಾವು ಯಾವ ರೀತಿಯಾಗಿ ಈ ಬೀಡಿ ವೃತ್ತಿಯ ಬಗ್ಗೆ ಭಾವಿಸುತ್ತೇವೆಂಬುದನ್ನು ವಿವರಿಸುತ್ತಾರೆ "ನಾನು ಇಡಿ ದಿವಸ ಕುಳಿತು ಕೊಂಡಿರಲು ಇಷ್ಟ ಪಡುವುದಿಲ್ಲ, ನಾನು ಬೀಡಿ ವೃತ್ತಿಯನ್ನು ದ್ವೇಷಿಸುತ್ತೇನೆ. ದೀರ್ಘಕಾಲದಿಂದ ನಾನು ಈ ಕೆಲಸವನ್ನು ಮಾಡುತ್ತಿದ್ದೇನೆ. ವೇತನ ತುಂಬ ಕಡಿಮೆ. ಇದೆಲ್ಲವನ್ನು ತನ್ನ ತಾಯಿಯೇ ಇಟ್ಟುಕೊಳ್ಳುತ್ತಾಳೆ. ನಾನು ಅವಳ ಹೆದರಿಕೆಯಿಂದ ಕೆಲಸ ಮಾಡುತ್ತೇನೆ. ನಾನು ಕೆಲಸ ಮಾಡದಿದ್ದರೆ, ಅವಳು ನನ್ನನ್ನು ಶಿಕ್ಷಿಸುತ್ತಾಳೆ. ಯಾರಾದರೂ ಕೆಲಸ ಮಾಡುವುದನ್ನು ಬಿಟ್ಟು ಉಪವಾಸ ಸಾಯಿರಿ ಎಂದರೆ ನಾನು ತುಂಬಾ ಸಂತೋಷಪಡುತ್ತೇನೆ" 11 ವರ್ಷದ ಬಾಲಕ - "ನಾನು ನನ್ನ 5ನೇ ವಯಸ್ಸಿನಿಂದ ಈ ಕೆಲಸವನ್ನು ಮಾಡುತ್ತಿದ್ದೇನೆ ಮತ್ತು ಮದುವೆಯಾದ ಮೇಲೆ ಈ ಕೆಲಸವನ್ನು ಮುಂದು ವರೆಸಿಕೊಂಡು ಹೋಗಲು ನಾನು ಬಯಸುವುದಿಲ್ಲ.......... ನಾನು ನನ್ನ ಮಕ್ಕಳನ್ನು ಎಂದಿಗೂ ಈ ಕೆಲಸ ಮಾಡಲು ಬಿಡುವುದಿಲ್ಲ. ಅಷ್ಟೇ ಅಲ್ಲ ಇಡೀ ದಿವಸ ಕುಳಿತು ಮಾಡುವ ಯಾವುದೇ ಕೆಲಸಕ್ಕೆ ಕಳುಹಿಸುವುದಿಲ್ಲ" 14 ವರ್ಷದ ಬಾಲಕಿ.

**ಕಾರ್ಖಾನೆ ಕೆಲಸ**

ಸಮೀಕ್ಷೆ ಮಾಡಿದ ಕೆಲಸ ಮಾಡುತ್ತಿರುವ ಮಕ್ಕಳಲ್ಲಿ ಶೇ 13ರಷ್ಟು ಮಕ್ಕಳು 9 ವರ್ಷ ವಯಸ್ಸಿನ ಒಳಗಿನವರಾಗಿದ್ದರು. ವಯಸ್ಸಾದ ಮಕ್ಕಳಷ್ಟೇ ಸಮಯ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಚಿಕ್ಕ ಮಕ್ಕಳ ಆರೋಗ್ಯವು ಸಾಮಾನ್ಯವಾಗಿ ಹದಗೆಟ್ಟಿತ್ತು ಮತ್ತು ಬೆಳವಣಿಗೆ ಕುಂಠಿತವಾಗಿತ್ತು. ಅತಿ ಚಿಕ್ಕ ವಯಸ್ಸಿನ ಮಗುವಾಗಿ ಕಾರ್ಖಾನೆಯನ್ನು ಪ್ರವೇಶಿಸಿದರೆ ಅಷ್ಟೇ ದೀರ್ಘಕಾಲದವರೆಗೆ ನೌಕರನಾಗಿ ಉಳಿಯುತ್ತಾನೆ ಹಾಗೂ ನಷ್ಟಗಳು ಸಹ ದೊಡ್ಡ ಪ್ರಮಾಣದ್ದಾಗಿರುತ್ತವೆ. ಅಂಥ ಮಕ್ಕಳಿಗೆ ನಿದ್ದೆ ಬರುವುದಿಲ್ಲ, ಹಸಿವಿರುವುದಿಲ್ಲ, ಕೆಲವು ಸಾರಿ ಅವರಿಗೆ ಆಹಾರದ ಅಭಾವವಿರುತ್ತದೆ. ಈ ಕಾರ್ಖಾನೆಯಲ್ಲೇ ನಾನು ಅತ್ಯಂತ ಕಿರಿಯ, ಹಾಗಾಗಿ ಎಲ್ಲರು ನನ್ನನ್ನು ಹೊಡೆಯುತ್ತಾರೆ. ಈ ದಿನ ನಾನು ಒಬ್ಬ ಹುಡುಗನೊಂದಿಗೆ ಜಗಳವಾಡಿದೆ. ಉಸ್ತಾದ್ (ಮೇಲ್ವಿಚಾಕರು) ನನ್ನನ್ನು ಮನೆಗೆ ಕಳುಹಿಸಿದರು. ನಾನು ಮನೆಗೆ ಬಂದದ್ದನ್ನು ನೋಡಿ ನನ್ನ ತಾಯಿ ಕೋಪಗೊಂಡು ನನಗೆ ಥಳಿಸಿದಳು. ಇನ್ನೂ ನಾನು ನನ್ನ ತಂದೆಯ ಹತ್ತಿರ ಹೊಡೆತ ತಿನ್ನಬೇಕಾಗಿದೆ. ಅವನು ಮನೆಗೆ ಬಂದಾಗ ಇದು ನಡೆಯುತ್ತದೆ. ಉಸ್ತಾದ್ ನನ್ನನ್ನು ಮನೆಗೆ ಕಳುಹಿಸುವುದರಿಂದ ಅವನು ನನಗೆ ಶಿಕ್ಷಿಸುವುದಕ್ಕಿಂತ ಹೆಚ್ಚು ನನಗೆ ಮನೆಯಲ್ಲೇ ಕಠಿಣ ಶಿಕ್ಷೆಯಾಗುತ್ತದೆ, ಎಂಬುದನ್ನು ನನ್ನ ಉಸ್ತಾದ್ ಬಲ್ಲ.

ನಾನು ಕೆಲಸ ಮಾಡಿದ ದಿನಗಳಲ್ಲಿ 0.5 ಡಾಲರ್‌ಗೆ ದೊರೆಯುವ ಒಂದು ಪ್ಲೇಟ್ ಊಟವನ್ನು ಕೊಳ್ಳಲು ನನಗೆ ಅವಕಾಶವಿರುತ್ತದೆ. ಆದರೆ ನಾನು ಕಾರ್ಖಾನೆಗೆ ಹೋಗದಿದ್ದರೆ ನನಗೆ ಊಟವಿಲ್ಲ. ಈ ದಿನ ಬೆಳಿಗ್ಗೆ ಊಟ ಮಾಡದೆ, ನಾನು ಕಾರ್ಖಾನೆಗೆ ಹೋದೆ. ಯಾವುದೇ ಆಹಾರವನ್ನು ಪಡೆಯದೇ, ತಿನ್ನದೆ ಮರಳಿ ಬಂದೆ. ಉಸ್ತಾದ್ ನನಗೆ ಒಂದು ಬನ್ನು ಸಹ ಕೊಡಿಸಲಿಲ್ಲ. ನಾನು ಕೆಲಸ ಮಾಡಲು ತುಂಬಾ ಹಸಿದಿದ್ದೇನೆ ಎಂದು ಹೇಳಿದಾಗ ಸಾಮಾನ್ಯವಾಗಿ ಆತ ಬನ್ನು ಕೊಡಿಸುತ್ತಾನೆ.

"ನಾನು ಮತ್ತು ನನ್ನ ಸಹೋದರ, ಇಬ್ಬರೂ ಈ ಕೆಲಸವನ್ನು ಇಷ್ಟ ಪಡುವುದಿಲ್ಲ. ಆದರೆ ನಮ್ಮ ಪೋಷಕರಿಗೆ ಅದೆಲ್ಲ ತಿಳಿಯುವುದಿಲ್ಲ. ನಾನು ಕಾರ್ಖಾನೆಗೆ ಹೋಗದಿದ್ದರೆ ನನಗೆ ಊಟ ಇಲ್ಲ............."ಬತ್ಸು, 8 ವರ್ಷಗಳು.

ಬತ್ಸು ಮತ್ತು ಅವನ ಸಹೋದರ ಕಜ್ಜಗಳಿಂದ ಆವರಿಸಲ್ಪಟ್ಟಿದ್ದು ದುರ್ಬಲ ಆರೋಗ್ಯವನ್ನು ಹೊಂದಿದವರಂತೆ ಕಂಡುಬಂದರು. ವಿಶೇಷವಾಗಿ ಬತ್ಸುವಿನ ಬೆಳವಣಿಗೆ ಕುಂಠಿತವಾಗಿರುವುದು ಕಂಡುಬಂತು. ಬಹುತೇಕ (76) ಹುಡುಗರು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದರು ಹಾಗೂ ಬಹಳಷ್ಟು (81) ಹುಡುಗಿಯರು ಮನೆಗಳಲ್ಲಿ ಕೆಲಸ ಮಾಡುತ್ತಿದ್ದರು. ಪ್ರತಿಯೊಂದು ವಾಸಸ್ಥಾನವು ತನ್ನದೇ ಆದ ಸಮಸ್ಯೆಯನ್ನು ಹೊಂದಿದೆ. ಸಾಮಾನ್ಯವಾಗಿ, ಮನೆಗಿಂತ ಕಾರ್ಖಾನೆಯ ಭೌತಿಕ ಪರಿಸರ ಹೀನವಾಗಿದೆ. ಬಹುತೇಕ ಕಾರ್ಖಾನೆಗಳು ಸಿಮೆಂಟಿನ ನೆಲ ಮತ್ತು ದೊಡ್ಡ ತಗಡಿನ ಜೋಪಡಿಗಳಾಗಿದ್ದು ಅದರಲ್ಲಿ ನೂರಾರು ಕಾರ್ಮಿಕರು ಕುಳಿತುಕೊಳ್ಳುತ್ತಾರೆ. ಕೆಲವು ಕಾರ್ಖಾನೆಗಳು 2-3 ಅಂತಸ್ತುಗಳನ್ನು ಹೊಂದಿದ್ದು ಮೇಲಿನ ಅಂತಸ್ತಿನ ನೆಲವು ಬೇಸಿಗೆಯ ಕಾಲದಲ್ಲಿ ಸಹಿಸಲು ಅಸಾಧ್ಯವಾದ ಬಿಸಿಯಿಂದ ಕೂಡಿರುತ್ತದೆ. ಭೇಟಿ ನೀಡಿದ ಯಾವುದೇ ಕಾರ್ಖಾನೆಗಳಲ್ಲಿ ಫ್ಯಾನ್‌ಗಳು ಇರಲಿಲ್ಲ. ಕೆಲವರು ಮೊಗಸಾಲೆಯಲ್ಲಿ ಕುಳಿತು ಕೊಳ್ಳಬಲ್ಲವರಾದರೆ ಇತರರು ಕತ್ತಲೆಂದು ಗಾಳಿಯಾಡದ ಮೂಲೆಗಳಲ್ಲಿ ಕುಳಿತುಕೊಳ್ಳುತ್ತಾರೆ. ಪಾಯಿ ಖಾನೆಗಳು ಸಾಕಷ್ಟು ಇಲ್ಲದಿದ್ದರೂ, ಇರುವವುಗಳನ್ನೇ ಸರಿಯಾಗಿ ಇಟ್ಟುಕೊಂಡಿಲ್ಲ. ಕುಡಿಯುವ ನೀರು ಮತ್ತು ಕ್ಯಾಂಟಿನ್‌ಗಳು ಸಹ ಅಸಮರ್ಪಕವಾಗಿದೆ. ಅವೇನೇ ಇರಲಿ, ಸಾಮಾನ್ಯವಾಗಿ, ಕಾರ್ಖಾನೆ ಕಾರ್ಮಿಕರಿಗೆ ಮನೆಯಲ್ಲಿ ಕೆಲಸ ಮಾಡವವರಿಗಿಂತ ಹೆಚ್ಚಿನ ಕೂಲಿ ನೀಡುತ್ತಾರೆ.

"ಮೊದಲು ನಾನು ಆರೋಗ್ಯವಾಗಿದ್ದೆ. ಈಗ ನಾನು ದುರ್ಬಲ ಮತ್ತು ಸಪೂರವಾಗಿದ್ದೇನೆ. ಪ್ರತಿದಿನ ನಾನು ತಂಬಾಕು ಗಾಳಿ ಮತ್ತು ಸೂಕ್ಷ್ಮ ತಂಬಾಕು ಧೂಳನ್ನು ಒಳ ತೆಗೆದುಕೊಳ್ಳುತ್ತೇನೆ. ಕಾರ್ಖಾನೆಯಲ್ಲಿ ತುಂಬಾ ಕಾವು, ಬಿಸಿ ಇರುತ್ತದೆ. ಅಲ್ಲಿ ಗಾಳಿಯ ಸಂಚಾರವಿಲ್ಲ. ಗಂಟೆಗಟ್ಟಲೆ ನಾನು ಒಂದೇ ಭಂಗಿಯಲ್ಲಿ ಕುಳಿತಿರಬೇಕಾಗುತ್ತದೆ. ನಾನು ಎಷ್ಟು ಸಣ್ಣ ನೀವು ನೋಡಿ. ಆದ್ದರಿಂದ ನನಗೆ ಸಾಮಾನ್ಯ ಬೆಳವಣಿಗೆ ಇಲ್ಲ ಏಕೆಂದರೆ ನಾನು ನನ್ನ ಎಲ್ಲ ಸಮಯವನ್ನು ಕುಳಿತುಕೊಂಡೆ ವ್ಯಯಿಸುತ್ತೇನೆ. ಅಥವಾ ಕಳೆಯುತ್ತೇನೆ" ..... 12 ವರ್ಷದ ಬಾಲಕ.

ಬೀಡಿ ಕೆಲಸಗಳಲ್ಲಿ ಎದುರಿಸುವ ಅನೇಕ ಸಮಸ್ಯೆಗಳಲ್ಲಿ ಪದೇ ಪದೇ ಮಾಡುವ ಮತ್ತು ಬೇಸರ ತರಿಸುವ ಸ್ವರೂಪವುಳ್ಳ ಕೆಲಸಗಳಾಗಿವೆ. ದೇಹದ ಬೇರೆಬೇರೆ ಭಾಗಗಳಲ್ಲಿ ನೋವು, ದುರ್ವಾಸನೆ ಮತ್ತು ಗಾಳಿ ಬೆಳಕಿನ ಅಭಾವ, ತಮ್ಮ ಮಾಲೀಕರ / ಮೇಲ್ವಿಚಾರಕರ ಬೈಗುಳ ಮತ್ತು ಒರಟಾದ ನಡವಳಿಕೆ, ದೀರ್ಘ ಸಮಯದ ಕೆಲಸ, ಮತ್ತು ಕುಂಠಿತ ಆರೋಗ್ಯ ಬೆಳವಣಿಗೆ, ಬೆನ್ನುನೋವು, ಹಸಿವಿಲ್ಲದಿರುವಿಕೆ, ತಲೆ ಸುತ್ತು, ಎದೆಯುರಿ, ನಿಶ್ಯಕ್ತಿ, ಜಠರದ ಅಸ್ತವ್ಯಸ್ತತೆ, ಜ್ವರ, ತಲೆನೋವು, ಕೆಮ್ಮು ಮತ್ತು ಶ್ವಾಸಕೋಶ ಕಾಯಿಲೆಗಳು

ಮುಂತಾದವುಗಳಾಗಿವೆ. ಮನೆಯಲ್ಲಿತಮ್ಮ ದಿನಗಳನ್ನುಕಳೆಯುವ ಕಾರ್ಖಾನೆ ಕಾರ್ಮಿಕರನ್ನುಸಾಮಾನ್ಯವಾಗಿ ಅವರ ಹಳದಿ ಬಣ್ಣದ ಚರ್ಮದಿಂದಾಗಿ ಗುರುತಿಸಬಹುದಾಗಿದೆ. ಜನ ಜಂಗುಳಿ ಇರುವ ಕಾರ್ಖಾನೆಗಳಲ್ಲಿ ಕ್ಷಯ ಎಲ್ಲರಿಗೆ ತಿಳಿದಿರುವ ಒಂದು ಸಾಮಾನ್ಯ ರೋಗವಾಗಿದೆ. ತಂಬಾಕು ಧೂಳನ್ನು ಉಚ್ಚಿಸಿಸುವ ಪರಿಣಾಮ ಮತ್ತು ಬೀಡಿ ಕಾರ್ಮಿಕರಲ್ಲಿ ಸಂಭಾವನೀಯವಾಗಿ ಹೆಚ್ಚಿನ ದರದಲ್ಲಿ ಧೂಮಪಾನ ಮಾಡುವವರನ್ನು ತಿಳಿದುಕೊಂಡಿಲ್ಲ. ಕಾರ್ಖಾನೆಗಳಲ್ಲಿ ಹುಡುಗರು ಹೊಡೆತ ಮತ್ತು ಹಿಂಸೆ, ಯಾತನೆಗಳನ್ನು ಅನುಭವಿಸಿದರೆ ಹುಡುಗರು ಲೈಂಗಿಕ ಕಿರುಕುಳಕ್ಕೆ ತುತ್ತಾಗುತ್ತಾರೆ.

ತನ್ನ ಚಿಕ್ಕಮ್ಮನೊಂದಿಗೆ ವಾಸಿಸುತ್ತಿರುವ ಒಬ್ಬ ಅನಾಥಳು ಈ ಕಥೆಯನ್ನು ಹೇಳುತ್ತಾಳೆ - "ನಾನು ನನ್ನ ತಂಗಿ ಒಬ್ಬನೇ ಉಸ್ತಾದ್ ಕೈ ಕೆಳಗೆ ಮೂರು ವರ್ಷದವರೆಗೆ ಕೆಲಸ ಮಾಡಿದಿವಿ. ಅವನು ನಮಗೆ ತುಂಬ ದಯಾಳು. ನಾವು ಮಧ್ಯಾಹ್ನ ಊಟಕ್ಕೆ ಮನೆಗೆ ಹೋಗುತ್ತಿರಲಿಲ್ಲ, ಹಾಗಾಗಿ ಅವನು ನಮಗೆ ಬನ್ನು ಬಿಸ್ಕತ್ತು ಅಥವಾ ಏನಾದರೂ ತಿನ್ನಲಿಕ್ಕೆ ಕೊಡುತ್ತಾ ಇದ್ದ. ನಾನು ನನ್ನ ಉಸ್ತಾದ್‌ನೊಂದಿಗೆ ನಿಕಟವರ್ತಿಯಾದೆ ಮತ್ತು ಅವನನ್ನು ನಂಬಿದೆ. ರಾತ್ರಿ ಸಮಯದಲ್ಲಿ ನಾವು ವಾಪಸ್ ಒಟ್ಟಿಗೆ ನಡೆದುಕೊಂಡು ಹೋಗುತ್ತಿದ್ದವು. ಏಕೆಂದರೆ ನಾವಿಬ್ಬರು ಒಂದೇ ಹಳ್ಳಿಯಲ್ಲಿ ವಾಸಿಸುತ್ತಿದ್ದೆವು. ನನ್ನ ಚಿಕ್ಕಮ್ಮ ನಾನು 1000-1200 ಬೀಡಿ ತಯಾರಿಸಿ ದಿನಕ್ಕೆ 0.89 - 1.06 ಡಾಲರನ್ನು ಸಂಪಾದಿಸಬೇಕೆಂದು ಬಯಸುತ್ತಿದ್ದಳು. ಅಷ್ಟೊಂದು ಸಂಪಾದಿಸುವುದು ಅಂದರ ನಾನು ನನ್ನ ಕೆಲಸವನ್ನು ಮುಗಿಸುವ ಹೊತ್ತಿಗೆ ರಾತ್ರಿ ತುಂಬ ತಡವಾಗುತ್ತಿತ್ತು ಮತ್ತು ಸ್ವಲ್ಪ ದೂರದಲ್ಲಿರುವ ನಮ್ಮ ಹಳ್ಳಿಗೆ ಮರಳಿ ಬರುತ್ತಾ ಇದ್ದೆ.

ಒಂದು ರಾತ್ರಿ ನಮ್ಮ ಉಸ್ತಾದ್ ನನ್ನ ಸಹೋದರಿಯನ್ನು ಬೇಗನೆ ಕಳುಹಿಸಿ ನನ್ನೊಬ್ಬಳನ್ನೆ ಕರೆದು ಕೊಂಡು ಹೊರಟ. ದಾರಿಯಲ್ಲಿ ಅವನು ನನ್ನ ಸ್ತನಗಳಿಗೆ ಮುತ್ತಿಟ್ಟು ನನ್ನನ್ನು ಸ್ಪರ್ಶಿಸಿದ. ನನಗೆ ನಾಚಿಕೆಯಾಯ್ತು. ಇದನ್ನು ಯಾರಿಗೂ ಹೇಳಬೇಡವೆಂದು ಹೇಳಿ ನನಗೆ 0.18 ಡಾಲರ್‌ಗಳನ್ನು ಕೊಟ್ಟ. ನಾನು ಹಾಗೆ ಮಾಡಿದ್ದರೆ, ನನ್ನ ಕೆಲಸ ಹೋಗುತ್ತಿತ್ತು. ನಾನು ತುಂಬ ಹೆದರಿ ಅತ್ತು ಬಿಟ್ಟೆ ಮತ್ತು ಮರುದಿನ ನನ್ನ ಚಿಕ್ಕಮ್ಮನಿಗೆ ಎಲ್ಲವನ್ನು ಹೇಳಿದೆ. ಆದರೆ ಅವಳು ನನ್ನನ್ನು ನಂಬಲಿಲ್ಲ. ನೀನು ಕೆಲಸ ಬಿಡುವುದಕ್ಕೆ ಇದೆಲ್ಲ ಹೇಳುತ್ತಾ ಇದ್ದಿಯಾ ಎಂದು ಹೇಳಿದಳು. ನನ್ನ ಚಿಕ್ಕಮ್ಮಳಿಗೆ ಹೆದರಿ ನಾನು ಕಾರ್ಖಾನೆಗೆ ಮರಳಿ ಹೋದೆ. ಉಸ್ತಾದ ನನ್ನನ್ನು ಅಲ್ಲಿ ನೋಡಿದ ಮೇಲೆ ಇವಳೊಂದಿಗೆ ಇನ್ನೂ ಹೆಚ್ಚಿನ ಸಂಪರ್ಕವನ್ನು ಹೊಂದಿದರೂ ಯಾರೂ ಪ್ರತಿಭಟಿಸುವುದಿಲ್ಲ ಎಂಬುದನ್ನು ತಿಳಿದುಕೊಂಡ. ಒಮ್ಮೆ ಅವನ ಹೆಂಡತಿ ಊರಲ್ಲಿಲ್ಲದಾಗ ಅವನು ನನ್ನನ್ನು ಅವನ ಮನೆಗೆ ಕರೆದೊಯ್ದ...........ಅವನು ನನ್ನನ್ನು ಪಕ್ಕನೆ ಹಿಡಿದುಕೊಂಡು ಅನೈತಿಕ ಚೇಷ್ಟೆಗಳನ್ನು ಮಾಡಿದ. ಈ ರೀತಿಯಾಗಿ ನಾನು ಅವನೊಂದಿಗೆ ಕೆಲವು ಸಮಯದವರೆಗೆ ಲೈಂಗಿಕ ಕ್ರಿಯೆಗೆ ಒಳಪಟ್ಟೆ. ನಂತರ ಒಂದು ದಿನ ನಾನು ಪುಷ್ಪವತಿಯಾದೆ. ನಾನು ಈ ಬಗ್ಗೆ ಹೇಳಿದೆ. ನನ್ನ ಬಗೆಗಿದ್ದ ಅವನ ಮನೋಭಾವ ಇದ್ದಕ್ಕಿದಂತೆಯೇ ಬದಲಾಯಿತು. ಕೆಲಸದಿಂದ ಕಿತ್ತು ಹಾಕಿದ ಮೇಲೆ, ನನ್ನ ಚಿಕ್ಕಮ್ಮ ಬೇರೊಂದು ಕಾರ್ಖಾನೆಗೆ ಕಳುಹಿಸಿದಳು. ಅಲ್ಲಿಯೂ ಸಹ ಅವಳು ರಾತ್ರಿ ವಿಳಂಬವಾಗುವವರೆಗೆ ಕೆಲಸ ಮಾಡಬೇಕಾಯಿತು. ಈ ರೀತಿಯಾಗಿ ಕಾರ್ಖಾನೆಯ ಹುಡುಗಿಯರು ಹಾಳಾಗುತ್ತಾರ. ಬಡ ಹುಡುಗಿಯರಿಗೆ ನ್ಯಾಯವೇ ಇಲ್ಲ. ತನ್ನಲ್ಲ ಆದಾಯವನ್ನು ತನ್ನ ಚಿಕ್ಕಮ್ಮ ಇಟ್ಟುಕೊಳ್ಳುತ್ತಾಳೆ. ಅವಳು ಏನನ್ನೂ ಕೊಡುವುದಿಲ್ಲ. ಕಿಸೆ ಹಣವನ್ನು ಸಹ. ಅವಳು ನನ್ನ ಕೂಲಿ ಹಣವನ್ನು ನೇರವಾಗಿ ಸಂಗ್ರಹಿಸಿಕೊಳ್ಳುತ್ತಾಳೆ....ನನ್ನ ಬಗ್ಗೆ ಚಿಂತಿಸಬೇಡಿ. ನಾನು ಈಗಾಗಲೆ ಹಾಳಾಗಿದ್ದೇನೆ. ನಾನು ನನ್ನ ಚಿಕ್ಕ ತಂಗಿಯ ಬಗ್ಗೆ ಹೆಚ್ಚು ಯೋಚಿಸುತ್ತೇನೆ. ಅವಳಿಗೆ ಏನಾಗುವುದು? ಅವಳು ಇಲ್ಲೇ ಇದ್ದರೆ ಅವಳು ಕೂಡ ಹಾಳಾಗುತ್ತಾಳೆ. ನಾನು ಇಲ್ಲಿ ಕೆಲಸ ಮಾಡುವುದಕ್ಕಿಂತ ಬಂದೂಕಿನ ಗುಂಡಿನಿಂದ ಸಾಯುವುದು ಉತ್ತಮವೆಂದು ಯೋಚಿಸುತ್ತೇನೆ. ನಮ್ಮನ್ನು ಯಾರು ನಂಬುವುದಿಲ್ಲ.



COMMUNITY HEALTH CELL LIBRARY AND DOCUMENTATION UNIT BANGALORE
MH-120
07830 P03

ನಮ್ಮ ಮಾತಿಗೆ ಬೆಲೆನೇ ಇಲ್ಲ... 13 ವರ್ಷದ ಬಾಲಕ

ಕಾರ್ಖಾನೆಗಳಲ್ಲಿ ಉದ್ಭವಿಸುವ ಸಮಸ್ಯೆಗಳನ್ನು ಅಥವಾ ಸಂಘರ್ಷಗಳನ್ನು ಪರಿಹರಿಸುವ ಮಧ್ಯವರ್ತಿಯಾದ ಒಬ್ಬ ಕಾರ್ಮಿಕ ಸಂಘದ ನಾಯಕನನ್ನು ಒಂದು ವೇಳೆ ಒಂದು ಹುಡುಗಿ ತನಗೆ ತನ್ನ ಮೇಲ್ವಿಚಾರಕನಿಂದ ಲೈಂಗಿಕ ಕಿರುಕುಳ ಉಂಟಾಗುತ್ತಿದೆ ಎಂದು ದೂರು ಸಲ್ಲಿಸಿದ್ದರೆ ತಾವು ಮಧ್ಯೆ ಪ್ರವೇಶಿಸಿ ಆ ಮಗುವನ್ನು ರಕ್ಷಿಸುತ್ತಿದ್ದಿರಾ ಎಂದು ಕೇಳಿದೆವು. ಆತ ಉತ್ತರಿಸಿದ್ದೇನೆಂದರೆ ಕಾರ್ಮಿಕ ನಾಯಕನಾಗಿ ಆತ ಅಧಿಕಾರಿ ನೌಕರರ ಕ್ಷೇಮದ ಬಗ್ಗೆ ಮುಖ್ಯವಾಗಿ ಹಿತಾಸಕ್ತಿ ಹೊಂದಿದ್ದು ತಮ್ಮ ಸಹಾಯಕರುಗಳ ಬಗ್ಗೆ ಅಲ್ಲ ಎಂಬುದು ತಿಳಿಯಿತು.

ಕಾರ್ಖಾನೆ ಮಾಲೀಕರು ಕಾರ್ಮಿಕ ಕಾನೂನುಗಳಿಂದ ದಿನಕ್ಕೆ ಗರಿಷ್ಠ ಕೆಲಸದ ವೇಳೆ, ಕಡ್ಡಾಯ ರಜೆಗಳು, ಕೆಲಸ ನಿರ್ವಹಿಸಲು ಯೋಗ್ಯವಾದ ಸೌಲಭ್ಯಗಳು ಹಾಗೂ ಕನಿಷ್ಠ ಕೂಲಿದರ ಮುಂತಾವುಗಳನ್ನು ನಿಯತವಾಗಿ ಉಪೇಕ್ಷಿಸುತ್ತಾರೆ. ಕಾರ್ಖಾನೆ ಪರಿಸರದಲ್ಲಿರುವ ಅಂತಿಮ ಸಮಸ್ಯೆಯೆಂದರೆ ಮಕ್ಕಳು ಬೆಳೆದು ಸಕಾರಾತ್ಮಕವಾಗಿ ಮಾದರಿಯಾಗದಿರುವ, ಆಗಾಗ ಪುರುಷರೇ ತುಂಬಿ ಕೊಂಡಿರುವ ವಾತಾವರಣವಾಗಿದೆ. ಶಿಕ್ಷಣದ ಅಭಾವ, ಪುನರಾವರ್ತಿತ ಕೆಲಸ, ಮತ್ತು ಬೌದ್ಧಿಕ ಉದ್ದೀಪನತೆ ಇಲ್ಲ ದಿರುವುದರಿಂದ ಮಕ್ಕಳ ಮಾನಸಿಕ, ಸಾಮಾಜಿಕ ಮತ್ತು ಶಾರೀರಿಕ ಅಭಿವೃದ್ಧಿ ಅಡ್ಡಿ ಯುಂಟಾಗುತ್ತದೆ.

## ಗೃಹ ಕಾರ್ಮಿಕರು

ಗೃಹ ಕಾರ್ಮಿಕರು ಕಾರ್ಖಾನೆ ಕಾರ್ಮಿಕರಿಗಿಂತ ಹೆಚ್ಚು ಸುಲಲಿತವಾದ ಕಾರ್ಯಸೂಚಿಯನ್ನು ಹೊಂದಿರುತ್ತಾರೆ. ಅವರು ಅರೆಕಾಲಿಕರಾಗಿ ಬೀಡಿ ಕೆಲಸವನ್ನು ಮಾಡಬಹುದು. ಅವರು ಕಾರ್ಯ ನಿರ್ವಹಿಸುವ ವಾತಾವರಣ ಸಾಮಾನ್ಯವಾಗಿ ಹಿತಕರವಾಗಿರುತ್ತದೆ. ಮಕ್ಕಳು ತಮ್ಮ ಪೋಷಕರ ಮೇಲ್ವಿಚಾರಣೆಯಲ್ಲಿ ಕೆಲಸ ಮಾಡುತ್ತಾರೆ. ಸಾಮಾನ್ಯವಾಗಿ ತಾಯಿ ಮೇಲ್ವಿಚಾರಣೆಯಲ್ಲಿ. ಕೆಲವರು ಮರದ ನೆರಳಿನಡಿಯಲ್ಲಿ ಸೇರಿಕೊಂಡು ಮಾತನಾಡುವುದು ಬಾನುಲಿ ಕೇಳುವುದನ್ನು ಮಾಡಿದರೆ, (ಕೆಲವು ಪ್ರಕರಣಗಳಲ್ಲಿ) ಇತರರ ವಿಷಯಗಳಲ್ಲಿ ಹುಡುಗಿಯರು ಮತ್ತು ಮಹಿಳೆಯರು ತಮ್ಮ ಮನೆಯ ನಿರ್ಬಂಧಿತ ಏಕಾಂತದಲ್ಲೆ ಕೆಲಸ ಮಾಡುತ್ತಾರೆ. ಪರಾದ ಪದ್ಧತಿಯ ಕಠಿಣ ನಿಯಮಗಳಿಂದಾಗಿ ಅನೇಕ ಮಹಿಳಾ ಕಾರ್ಮಿಕರನ್ನು ಬೇಟಿ ಮಾಡಿ ಸಂದರ್ಶಿಸಲು ಆಗಲಿಲ್ಲ. ಮನೆಯಲ್ಲೇ ಕೆಲಸ ಮಾಡುವ 14 ವರ್ಷದ ಹುಡುಗಿ ತನ್ನ ತಾಯಿ ಮನೆಯಲ್ಲಿ ಇಲ್ಲದಾಗ ನನ್ನನ್ನು ಅತ್ಯಾಚಾರ ಮಾಡಲಾಯಿತು ಎಂದು ಹೇಳಿದನ್ನು ನೋಡಿದರೆ ಮನೆಯಲ್ಲಿಮಾಡುವ ಕೆಲಸವೂ ಸಹ ಹುಡುಗಿಯರಿಗೆ ಸುರಕ್ಷಿತ ಅಲ್ಲ ಎಂಬುದು ತಿಳಿಯುತ್ತದೆ. ಅತಿ ಹೆಚ್ಚಿನ ಪ್ರಮಾಣದ ಕೆಲಸವನ್ನು ಮಾಡಬೇಕು ಎಂದು ತಾಯಿಂದಿರು ತಮ್ಮ ಮಕ್ಕಳ ಮೇಲೆ ಅಧಿಕ ಒತ್ತಡ ಹಾಕಬಹುದಾದ್ದರಿಂದ ಮನೆಯಲ್ಲಿ ನಿರ್ವಹಿಸುವ ಬೀಡಿ ಕಾಯಕವೂ ಸಹ ಕಾರ್ಖಾನೆ ಕೆಲಸದ ತರನಾದ ಅಂಶಗಳನ್ನು ಹೊಂದಿರುತ್ತದೆ.

"ನನ್ನ ತಾಯಿ ನನಗೆ ಶಾಲೆಗೆ ಹೋಗಲು ಬಿಡುವುದಿಲ್ಲ. ಅವಳು ನನಗೆ ಆಟವಾಡಲು ಬಿಡುವುದಿಲ್ಲ. ಕೆಲವು ಸಾರಿ ನಾನು ಮರಗಳನ್ನು ಹತ್ತುತ್ತೇನೆ. ಹಾಸಿಗೆ ಅಡಿಯಲ್ಲಿ ಬಚ್ಚಿಟ್ಟು ಕೊಳ್ಳುತ್ತೇನೆ. ಆದರೆ ನನ್ನ ತಾಯಿ ನನ್ನನ್ನು ಬೆನ್ನಟ್ಟಿ ನಾನು ಸಿಕ್ಕಾಗ ಚೆನ್ನಾಗಿ ಹೊಡೆಯುತ್ತಾಳೆ. ಕೆಲವು ಸಾರಿ ನನಗೆ 0.02 - 0.04 ಡಾಲರ್‌ಗಳನ್ನು ಕೊಡುತ್ತಾಳೆ. ಹಾಗಾಗಿ ನಾನು ಅವಳೊಂದಿಗೆ ಕೆಲಸ ಮಾಡುತ್ತೇನೆ. ನಾನು ಬೀಡಿ ಕೆಲಸ ದ್ವೇಷಿಸುತ್ತೇನೆ. ಆದರೆ ನಾನು ನನ್ನ ತಾಯಿಗೆ ಸಹಾಯ ಮಾಡಲೇ ಬೇಕು. ನನ್ನ ಸಹೋದರ ಕೆಲಸ ಮಾಡಲು

ಆಗುವುದಿಲ್ಲ. ಏಕೆಂದರೆ ಅವನ್ನು ಇನ್ನೂ ಹುಡುಗ"....... 7 ವರ್ಷದ ಬಾಲಕಿ.

ಒಬ್ಬ 13 ವರ್ಷ ವಯಸ್ಸಿನ ಕನ್ಯೆ ತನ್ನ ಕುಟುಂಬಕ್ಕಾಗಿ ಬೀಡಿ ತಯಾರಿಸುವ ತನ್ನ ಪರಿಸ್ಥಿತಿಯನ್ನು ವಿವರಿಸಿದಳು. ಅವಳು ತನ್ನ ದಿನನಿತ್ಯದ ಕೆಲಸಕ್ಕಾಗಿ ವೇತನವನ್ನಾಗಿ ಅಥವಾ ಕಿಸೆ ಹಣವನ್ನಾಗಿ ಪಡೆಯುವುದಿಲ್ಲ. 5-6 ಗಂಟೆಗಳಿಗೆ 0.10 ಡಾಲರ್‌ಗಳನ್ನು ಪಡೆಯುವ ಒಬ್ಬ 14 ವರ್ಷದ ಹುಡುಗಿ ಈ ಕೆಲಸವನ್ನು ವರ್ಣಿಸುತ್ತಾಳೆ - "ಈ ಹಣದಿಂದ ನಾನು ಬಟ್ಟೆಗಳನ್ನು ಕೊಳ್ಳುತ್ತೇನೆ. ಮಡಿಕೆಗಳ, ಬಳೆಗಳು ಮತ್ತು ನನ್ನ ಜಡೆಗೆ ಬ್ರೋಚುಗಳನ್ನು ಕೊಳ್ಳುತ್ತೇವೆ. ನಾನು ನನ್ನ ವರದಕ್ಷಿಣೆಗಾಗಿ ಉಳಿಸುವುದಿಲ್ಲ. ಹಣ ಅಷ್ಟೊಂದು ಕಡಿಮೆ ಇರುತ್ತದೆ. ಒಂದರಿಂದ ಎರಡು ತಿಂಗಳಿಗೊಮ್ಮೆ ನಾನು ಬಟವಾಡೆ ಪಡೆಯುತ್ತೇನೆ. ಕೆಲವು ಸಾರಿ ಉಸ್ತಾದ್ ನಮಗೆ ಬಟವಾಡೆ ಮಾಡುವುದಿಲ್ಲ. ಹಾಗಾಗಿ ನಾವು ಜಗಳ ಮಾಡುತ್ತೇವೆ. ಆದರೆ ನಾವು ರಂಪ ಮಾಡುವುದಿಲ್ಲ. ಇಲ್ಲದಿದ್ದರೆ ಅವನು ನಮಗೆ ಕೆಲಸ ಕೊಡುವುದನ್ನೇ ನಿಲ್ಲಿಸಿಬಿಡುತ್ತಾರೆ. ಅವರು ಕೊಟ್ಟಾಗ ನಾವು ಹಣವನ್ನು ಪಡೆಯಬೇಕು. ಇಲ್ಲಿ ನಮಗೆ ಬೇರೆ ಕೆಲಸವೇ ಇಲ್ಲ".

## ವಿದ್ಯಾಭ್ಯಾಸ (ಶಿಕ್ಷಣ)

ನಮ್ಮ ಅಧ್ಯಯನದಲ್ಲಿ ಕಂಡುಬಂದ 5-15 ವರ್ಷ ವಯಸ್ಸಿನ ಮಕ್ಕಳಲ್ಲಿ ನಮ್ಮ ಸಮೀಕ್ಷೆಯ ಸಮಯದಲ್ಲಿ ಶೇ. 53 ರಷ್ಟು ಮಕ್ಕಳು ಯಾವುದೇ ವಿದಧ ಶಾಲೆಗೆ ಹೋಗುವುದು ಕಂಡುಬಂದಿಲ್ಲ ಹಾಗೂ ಶೇ. 40ರಷ್ಟು ಮಕ್ಕಳು ತಮ್ಮ ಜೀವನದಲ್ಲೇ ಶಾಲೆಗೆ ಹೋಗಿಲ್ಲ. ಕೇವಲ ಶೇ.26ರಷ್ಟು ಮಕ್ಕಳು ಶಾಲೆ ಮತ್ತು ಕೆಲಸವನ್ನು ಸಂಯೋಜಿಸುದಲ್ಲಿ ಸಫಲರಾಗಿದ್ದಾರೆ. ಕೆಲಸದ ಸಮಯ ದೀರ್ಘವಿರುವುದರಿಂದ ಹಾಗೂ ಕಲಿಕೆಯಿಂದ ಉತ್ಪಾದನೆಗೆ ಅಡ್ಡಿಯಾಗುತ್ತದೆ ಎಂದು ಕಾರ್ಖಾನೆ ವ್ಯವಸ್ಥಾಪಕರು ಭಾವಿಸುವುದರಿಂದ ಸಹಜವಾಗಿಯೇ ಕಾರ್ಖಾನೆ ಕಾರ್ಮಿಕರಿಗೆ ಶಾಲೆಗೆ ಹೋಗಲೂ ಆಗುವುದಿಲ್ಲ. ಕೆಲವು ಪ್ರಕರಣಗಳಲ್ಲಿ ಹುಡುಗಿಯರು ಕಡಿಮೆ ಸಂಪಾದನೆ ಮಾಡುವುದರಿಂದ ಹುಡುಗರಿಗಿಂತ ಹುಡುಗಿಯರನ್ನು ಶಾಲೆಗೆ ಕಳುಹಿಸಲು ಪೋಷಕರು ಹೆಚ್ಚು ಬಲವನ್ನು ತೋರಿಸುತ್ತಾರೆ.

ಈ ಬೀಡಿ ಕಾಯಕದಿಂದಾಗಿ ದೇಶ, ರಾಷ್ಟ್ರ ಅಭದ್ರವಾಗುತ್ತದೆ. ಮಕ್ಕಳ ಆರೋಗ್ಯ ಹಾಳಾಗಿದೆ ಮತ್ತು ಅವರ ಜೀವಿತ ಅವಧಿ 20 ವರ್ಷಗಳಷ್ಟು ಕಡಿಮೆಯಾಗಿದೆ. ಅವರು ಕೇವಲ ಶಿಕ್ಷಣದಿಂದ ಮಾತ್ರ ವಂಚಿತರಾಗಿಲ್ಲ. ಆದರೆ ಎಲ್ಲದರಿಂದಲೂ. ಇದಕ್ಕಾಗಿ ಮೊದಲು ದ್ವೇಷಿಸಬೇಕಾದದ್ದು ಅಥವಾ ಆರೋಪಿಸಬೇಕಾದದ್ದು ಪೋಷಕರನ್ನು. ಬಡತನ ಅವರು ನೀಡುವ ಕಾರಣ. ಆದರೆ ಅನೇಕ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಶಕ್ಯರಿದ್ದಾರೆ. ಈ ಪೀಳಿಗೆಯ ಮಕ್ಕಳು ನಿರ್ಧಿಷ್ಟವಾಗಿ ಬೀಡಿ ಕಾಯಕದಿಂದ ದುಷ್ಪರಿಣಾಮಕ್ಕೊಳಗಾಗಿದ್ದಾರೆ. ತಂದೆ ಆರನೆ ತರಗತಿಯವರೆಗೆ ಓದಿರಬಹುದು. ಆದರೆ ಮಗ ಆ ಮಟ್ಟಕ್ಕೂ ತಲುಪಲಾರ........ಮುಖ್ಯೋಪಾಧ್ಯಾಯರು. ಶಾಲೆಗೆ ಹೋಗುವುದರಿಂದ ತಮ್ಮ ಗಂಡು ಮಕ್ಕಳು ವ್ಯವಹಾರ ಜ್ಞಾನ ಕಲಿಯಲು ಆಗುವುದಿಲ್ಲ ಎಂಬ ಹೆದರಿಕೆ ಯಿಂದ ಕೆಲವು ಪೋಷಕರು ತಮ್ಮ ಮಕ್ಕಳು ಶಾಲೆಗೆ ಹೋಗುವುದಕ್ಕಿಂತ ಕೆಲಸ ಮಾಡಬೇಕೆಂದು ಇಚ್ಛಿಸುತ್ತಾರೆ. ಎಳೆ ವಯಸ್ಸಿನಲ್ಲಿ ಮಕ್ಕಳನ್ನು ಕೆಲಸ ಮಾಡುವಂತೆ ಬಗ್ಗಿಸದಿದ್ದರೆ ಅವರು ಎಂದೂ ಕೆಲಸ ಕಲಿಯದೇ ಅಥವಾ ಕೆಲಸ ಮಾಡಲು ಬಯಸದೆ ಹಾಗೆ ಸುತ್ತಾಡಿಕೊಂಡಿದ್ದು ಅಂತಿಮವಾಗಿ ಹಣ ಪಡೆಯಲು ಅಪ್ರಾಮಾಣಿಕ ಮಾರ್ಗಗಳನ್ನು ತುಳಿಯುತ್ತಾರೆ ಎಂದುಕೊಳ್ಳುವ ಒಂದು ಬಲವಾದ ನಂಬಿಕೆ ಇದೆ. ಅವರು ಶಾಲೆ ಮಕ್ಕಳಿಗೆ ಕೆಲಸದ ಅಭ್ಯಾಸವನ್ನು ಮತ್ತು ಪ್ರಾಮಾಣಿಕತೆಯನ್ನು ತುಂಬುವ ಒಂದು ಪರ್ಯಾಯ ವ್ಯವಸ್ಥೆ ಎಂದು ಪರಿಗಣಿಸುವುದಿಲ್ಲ. ಇಲ್ಲಿ ಪುನಃ

ಮಕ್ಕಳನ್ನು ಬೀಡಿ ಕೆಲಸ ಮಾಡುವಂತೆ ಒತ್ತಾಯಿಸುವ ಅಂಶ ಬಡತನವಲ್ಲ, ಆದರೆ ಸಾಮಾಜಿಕ ಕಾರಣಗಳು, ವೈಷಮ್ಯಗಳಾಗಿವೆ. ಹೆಣ್ಣು ಮಕ್ಕಳಿಗೆ ಬೀಡಿ ಕಾಯಕವು ಅವರನ್ನು ತೊಂದರೆಯಿಂದ ಸುರಕ್ಷಿಸುವ ಒಂದು ಮಾರ್ಗವಾಗಿದೆ. ಕೆಲವು ಹುಡುಗಿಯರು 2 1/2 ಗಂಟೆ ಕೆಲಸಕೆ 0.03 ಡಾಲರ್‌ಗಳನ್ನು ಮಾತ್ರ ಗಳಿಸುವುದು. ಈ ಕೂಲಿಯು ಸ್ಪಷ್ಟವಾಗಿಯೇ ಈ ಕೆಲಸಕ್ಕೆ ಪ್ರೇರಣೆಯಲ್ಲ, ಆದರೆ ಪರದಾ ಪದ್ಧತಿಯಲ್ಲಿ ಸೌಶೀಲವುಳ್ಳ ಹುಡುಗಿಯರನ್ನಾಗಿ ಬೆಳೆಸುವ ಆಕಾಂಕ್ಷೆಯಿಂದ ಸಂಪೂರ್ಣವಾಗಿ ತೊಡಗಿರುವ ಕಠಿಣವಾದ ಕೆಲಸವನ್ನು ಮಾಡಲು ಪ್ರೇರೆಪಿಸಲ್ಪಡುತ್ತಾರೆ . **ಬೀಡಿ ಕಾಯಕವು ಎಲ್ಲದ್ದಕ್ಕಿಂತ ಹೆಚ್ಚಾಗಿ ಹುಡುಗಿಯರನ್ನು ನಿಯಂತ್ರಿಸುವ ಒಂದು ಸಾಧನ ಮಾರ್ಗವಾಗಿದೆ.** ಹುಡುಗರ ದೃಷ್ಟಿಯಿಂದ ಆದಾಯ ಮುಖ್ಯವಾಗಿದೆ.

ಹಣದ ಅಗತ್ಯವಿಲ್ಲದ ಕೆಲವು ಪೋಷಕರು ಈ ರೀತಿಯಾಗಿ ಶಿಕ್ಷಣ ನೀಡುವ ಮಾಧ್ಯಮವನ್ನಾಗಿ ಕೊಂಡು ತಮ್ಮ ಮಕ್ಕಳನ್ನು ಬೀಡಿ ಕೆಲಸ ಮಾಡಲು ಒತ್ತಾಯಪಡಿಸುತ್ತಾರೆ. ದಿನಕ್ಕೆ ಒಂದೂವರೆ- ನಾಲ್ಕುಕಾಲು ಗಂಟೆಗಳ ಕಾಲ ಕೆಲಸ ಮಾಡುವಂತೆ ನನ್ನನ್ನು ಒತ್ತಾಯಿಸುತ್ತಾರೆ. - ನಾನು ದಿನದಲ್ಲಿ ಕಡಿಮೆ ಸಮಯ ಶಾಲೆಗೆ ಹೋಗುವುದು ಎಂದು ಒಬ್ಬ 11 ವರ್ಷದ ಹುಡುಗ ಹೇಳಿದ. ನಾನು ಕೆಲಸ ಮಾಡದಿದ್ದರೆ ನನ್ನನ್ನು ಶಿಕ್ಷಿಸುತ್ತಾರೆ. ನನ್ನ ಪೋಷಕರು ಹೆದರಿಸುತ್ತಾರೆ. ನನಗೆ ಅವರು ಈ ರೀತಿ ಹೇಳುತ್ತಾರೆ. ನೀನು ಅನ್ನ ಇಲ್ಲದೆ ಹೋಗುತ್ತೀಯ ನಾನು ನಿನ್ನನ್ನು ಮನೆಯಿಂದ ಒದ್ದೋಡಿಸುತ್ತೇನೆ. ನಾನು ಇದನ್ನು ಕೇಳಿದಾಗ ನನ್ನ ಮನಸ್ಸಿಗೆ ನೋವಾಗುತ್ತದೆ. ಕೆಲವು ಸಾರಿ ಶಿಕ್ಷೆ ಆಗುವುದನ್ನು ತಪ್ಪಿಸುವ ಸಲುವಾಗಿ, ನನ್ನ ಕೆಲಸವನ್ನು ಮಾಡಲು ನನ್ನ ಪಕ್ಕದ ಮನೆಯವನಿಗೆ ನನ್ನ ಸ್ವಂತ ಕಿಸೆ ಹಣದಿಂದ ಹಣವನ್ನು ಕೊಡುತ್ತಾನೆ. 14 ವರ್ಷದ ಒಬ್ಬ ಹುಡುಗ ಶಾಲೆಗೆ ಹೋಗುವುದನ್ನು ನಿಲ್ಲಿಸಿದ ಮೇಲೆ ಅವಳಿಗೆ ದಿನಕ್ಕೆ 8-10 ಗಂಟೆಗಳ ಬೀಡಿ ಕೆಲಸವನ್ನು ನೀಡಲಾಯಿತು. ಅವಳನ್ನು ಕಾರ್ಯೋನ್ಮುಖಳಾಗುವಂತೆ ಮಾಡಿ ನಿರ್ಬಂಧಿಸಲು ಇದು ಅವಶ್ಯಕ ಎಂದು ಅವರ ತಾಯಿ ವಿವರಿಸುತ್ತಾರೆ. 5 ನೇ ತರಗತಿಯ ನಂತರ ಶಾಲೆಗೆ ಹೋಗುವ ಹುಡುಗಿಯರನ್ನು ಕೆಟ್ಟ ದೃಷ್ಟಿಯಿಂದ ನೋಡುವುದರಿಂದ ಇವರು ಶಾಲೆಯನ್ನು ತ್ಯಜಿಸುತ್ತಾರೆ. ನಮ್ಮ ಅಧ್ಯಯನ ಪ್ರದೇಶಗಳ ಒಂದರಲ್ಲಿ, ಒಬ್ಬ ಧಾರ್ಮಿಕ ನಾಯಕ 1950ರಲ್ಲಿ ಭೇಟಿ ನೀಡಿ ಪೋಷಕರಿಗೆ ಹೇಳಿದ, ನಿಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬೇಡಿ. ಅವರಿಗೆ ಆಂಗ್ಲ ಭಾಷೆಯನ್ನು ಕಲಿಸುತ್ತಾರೆ. ಅವರು ಇಂಗ್ಲೀಷ್‌ನ್ನು ಮಾತನಾಡಲು ಪ್ರಾರಂಭಿಸಿದರೆ ಕಾಫಿರ್ ರಾಗುತ್ತಾರೆ. ನಾಸ್ತಿಕರಾಗುತ್ತಾರೆ. ಇತ್ತೀಚಿನ ಧಾರ್ಮಿಕ ನಾಯಕರುಗಳು ಅವೇ ಸಾಲುಗಳನ್ನು ಪುನರುಚ್ಚರಿಸುತ್ತಾ ಬರುತ್ತಿದ್ದಾರೆ. ಇದರಿಂದ ಕೆಲವು ಪೋಷಕರಿಗಾದರೂ ತಮ್ಮ ಮಕ್ಕಳನ್ನು ಶಾಲೆಯಿಂದ ದೂರವಿಡಲು ಕಾರಣವಾಗಿದೆ. ಇತರೆ ಪ್ರಕರಣಗಳಲ್ಲಿ ಕಿಸೆ ಹಣಕ್ಕಾಗಿ ಶಾಲೆ ಬಿಟ್ಟು ಕಾರ್ಖಾನೆಗೆ ಬಂದು ಕೆಲಸ ಮಾಡುವಂತೆ ಹುಡುಗರಿಗೆ ಉಸ್ತಾದ್ ಕ್ರಮೇಣವಾಗಿ ಮನಗಾಣಿಸಬಹುದು.

“ನನ್ನ ಅಣ್ಣನೊಂದಿಗೆ ಕೆಲಸ ಮಾಡಲು ನನ್ನನ್ನು ಎರಡನೆ ತರಗತಿಯಿಂದ ಬಿಡಿಸಿ ಕಾರ್ಖಾನೆಗೆ ಕಳುಹಿಸಿದರು. ಅದು ನಾಲ್ಕು ವರ್ಷಗಳ ಹಿಂದೆ. ನಾವು ಕೆಲಸ ಮಾಡಬೇಕು - ಏಕೆಂದರೆ ನಮ್ಮ ತಂದೆ ಒಳ್ಳೆಯವರಲ್ಲ, ನಾನು ಈ ಕೆಲಸವನ್ನು ದ್ವೇಷಿಸುತ್ತೇನೆ. ನಾನು ಕೆಲಸ ಬಿಡಬೇಕು ಎಂದಿದ್ದೇನೆ. ಆದರೆ ನನ್ನ ತಾಯಿ ಕಾಯಲು ಹೇಳುತ್ತಾರೆ. ಇನ್ನು ಎರಡು ವರ್ಷವಾದರೆ ನೀನು ಢಾಕಾ ಅಥವಾ ಚಿತ್ತಗಾಂಗ್‌ಗೆ ಹೋಗಿ ಹೋಟಲ್ ಹುಡುಗನಾಗಿ ಕೆಲಸ ಗಿಟ್ಟಿಸಬಹುದು ಎಂದು ನನ್ನ ತಾಯಿ ಹೇಳುತ್ತಾರೆ. ಯಾವುದೇ ಇತರೆ ಕೆಲಸ ಬೀಡಿ ಕೆಲಸಕ್ಕಿಂತ ಉತ್ತಮ ಕೆಲಸ. ಒಬ್ಬ ರಿಕ್ಷಾ ಎಳೆಯುವವನಿಗೆ ವಿಶ್ರಾಂತಿ ತೆಗೆದುಕೊಳ್ಳಲು, ಹೊರಾಂಗಣದಲ್ಲಿ ಸುತ್ತಾಡಲು ಸ್ವತಂತ್ರ ವಿರುತ್ತದೆ. ಅವನು ಬೀಡಿ ಕಾರ್ಮಿಕರಿಗಿಂತ ಹೆಚ್ಚು ಸಂಪಾದಿಸುತ್ತಾನೆ ಹಾಗೂ ನಮ್ಮ ಹಾಗೆ ಗಾಳಿಯಾಡದ ಮೂಲೆಯಲ್ಲಿ ದಿನವಿಡಿ ಕುಳಿತುಕೊಳ್ಳುವ ಹಾಗಿಲ್ಲ. ಅಂಗಡಿ ನೋಡಿಕೊಳ್ಳುವುದು ಸಹ ಒಂದು ಉತ್ತಮ ಕೆಲಸ ಏಕೆಂದರೆ ಅದು ಸುರಕ್ಷಿತ, ನನ್ನ ತಂದೆಯು ಬೀಡಿ

ಕಾರ್ಮಿಕರಾಗಿದ್ದರು. ಆದರೆ ರಿಕ್ಷಾ ಎಳೆಯುವವನಾಗಲು ಕೆಲಸ ಬಿಟ್ಟರು. ಈಗ ಅವನು ತನ್ನ ಬಹುತೇಕ ಆದಾಯವನ್ನು ತನಗಾಗೇ ಖರ್ಚು ಮಾಡುತ್ತೇನೆ.........ಮೊಹಿನುದ್ದಿನ್, 12 ವರ್ಷದ ಬಾಲಕ.

ಪುರುಷರು ಹೊರಗೆ ಹೋದಾಗ, ಮಹಿಳೆಯರು ಪರದಾ ಪದ್ಧತಿಯಿಂದ ಮನೆಯಲ್ಲಿರಬೇಕಾಗುತ್ತದೆ. ಅಂಥ ಸಮಯದಲ್ಲಿ ಮಕ್ಕಳ ಉಸ್ತುವರಿ ನೋಡಿಕೊಳ್ಳಲು ಯಾರೂ ಇರುವುದಿಲ್ಲ, ಅಪಾಯಕಾರಿ ಸ್ವತಂತ್ರದ ತಮ್ಮ ಮಕ್ಕಳನ್ನು ಶಿಕ್ಷಿಸಲು ಅವರನ್ನು ಕಾರ್ಖಾನೆಗೆ ಕಳುಹಿಸಿ ಉಸ್ತಾದ್‌ನ ಮೇಲ್ವಿಚಾರಣೆಯಲ್ಲಿ ನಿಯಂತ್ರಿಸುವುದು ಪೋಷಕರಿಗಿರುವ ಒಂದು ಮಾರ್ಗವಾಗಿದೆ. ತಮ್ಮ ಮಕ್ಕಳನ್ನು ಕಾರ್ಖಾನೆಗೆ ಕಳುಹಿಸುವ ಪೋಷಕರು ಆದರಿಂದ ತಮ್ಮ ಮಕ್ಕಳ ಮೇಲೆ ಉಂಟಾಗುವ ನಕರಾತ್ಮಕ ಪ್ರಭಾವವನ್ನು ಸಹಿಸಿಕೊಳ್ಳಬೇಕಾಗುತ್ತದೆ. ಆವರ ದುರ್ಬಲ ಆರೋಗ್ಯ, ಜಿಗುಪ್ಸೆಗಳು, ತಾವೇ ತೆಗೆದುಕೊಳ್ಳುವ ಪರಿಹಾರಗಳು, ವಿಸಿಆರ್, ಸಿನಿಮಾ, ಧೂಮಪಾನ, ಸಿಗರೇಟ್, ಮತ್ತು ಮಂಡೂನಾ ಇತರೆ). ಹೆಚ್ಚಿನ ಪ್ರಮಾಣದ ಜಿಗುಪ್ಸೆ ಮತ್ತು ಹಿಂಸೆಯಿಂದ ತತ್ತರಿಸಿರುವ ಒಂದು ನಿರ್ದಿಷ್ಟವಾದ ಪ್ರದೇಶವನ್ನು ನೋಡಿದೆವು. ಅಲ್ಲಿ ಪುರುಷರು ಪರದಾ ಪದ್ಧತಿಯಿಂದ ನಿರ್ಭಂಧಿತರಾದ ತಾಯಂದಿರು ಮತ್ತು ಮಕ್ಕಳನ್ನು ಬಿಟ್ಟು ವಲಸೆ ಹೋಗುತ್ತಾರೆ. **ಕುತೂಹಲಕಾರಿಯಾದ ಅಂಶವೆಂದರೆ ಕಾರ್ಮಿಕರು ಅಗ್ಗವಾಗಿ ಮತ್ತು ವಿಪುಲವಾಗಿ ದೊರೆಯುವುದರಿಂದ ಒಂದು ಬೀಡಿ ಕಾರ್ಖಾನೆಯನ್ನು ಸ್ಥಾಪಿಸಲು ಆಯ್ಕೆ ಮಾಡಿಕೊಂಡಂತ ಪ್ರದೇಶವೆ ಇದಾಗಿತ್ತು.**

ಈ ಮಧ್ಯೆ ಶಾಲೆಗೆ ಹೋಗುವ ಆಸಕ್ತಿಯನ್ನು ತೋರಿಸುವಲ್ಲಿ ತಮ್ಮ ಪೋಷಕರಿಗಿಂತ ಮಕ್ಕಳೇ ಎರಡೂವರೆ ಬಾರಿಗಿಂತ ಹೆಚ್ಚು ಸಾಧ್ಯತೆಯನ್ನು ತೋರಿಸಿದರು. ಆದರೆ (ಮೇಲೆ ತಿಳಿಸದಂತೆ) ಎರಡನ್ನು ಮಾಡುವುದು ಅವರಿಗೆ ತುಂಬಾ ಕಷ್ಟ. ಹುಡುಗಿಯರಲ್ಲಿ ಒಂದು ಉದಾಹರಣೆಯೆಂದರೆ, ಕೆಲಸದ ಸಮಯ ದಿನಕ್ಕೆ 8-16 ಗಂಟೆಗಳು ಆದರಲ್ಲಿ ಹೆಚ್ಚಿನ ಕಾರ್ಯವ್ಯಾಪ್ತಿ 11-12 ಗಂಟೆಗಳು.

**ಕಾರ್ಮಿಕರ ಶೋಷಣೆ**

ಬೀಡಿ ಕಾರ್ಖಾನೆಗಳನ್ನು ಬಹಳ ಸಮಾನ್ಯವಾಗಿ ದುರ್ಬಲ ವರ್ಗದವರು ವಾಸಿಸುವ ಸ್ಥಳದಲ್ಲಿ ಸ್ಥಾಪಿಸಲಾಗುತ್ತದೆ. ಇವರು ಸೌಲ್ಯವಂಚಿತ ಜನತೆಯ ಕಾರ್ಮಿಕ ಶಕ್ತಿಯನ್ನು, ಮಕ್ಕಳ ನಿರ್ಭಲತೆಯನ್ನು, ಹಾಗೂ ಮಹಿಳೆಯರು ಪ್ರತ್ಯೇಕತೆಯನ್ನು ಉಪಯೋಗಿಸಿಕೊಳ್ಳುತ್ತಾರೆ, ಹೀಗಾಗಿ ಕಾರ್ಮಿಕರಿಕೆ ಅತ್ಯಂತ ಕಡಿಮೆ ಪ್ರಮಾಣದ ವೇತನವನ್ನು ನೀಡಲು ಸಾಧ್ಯವಾಗುತ್ತದೆ. ನಾನು ಅಧ್ಯಯನ ಕೈಗೊಂಡ ಕೆಲವು ಕಡೆಗಳಲ್ಲಿ ಆರ್ಥಿಕವಾಗಿ ದಿವಾಳಿಯಾದ ಪ್ರದೇಶಗಳಲ್ಲಿ ಬೀಡಿ ಕಾರ್ಖಾನೆಯನ್ನು ಸ್ಥಾಪಿಸಿರುವುದು ಕಂಡುಬಂದಿದೆ, ಮತ್ತು ಈ ಬೀಡಿ ಕೈಗಾರಿಕೆಯು ಕಾರ್ಮಿಕರ ಸಾಮಾಜಿಕ - ಆರ್ಥಿಕ ಗುಣಮಟ್ಟವನ್ನು ಸುಧಾರಿಸಲು ಏನನ್ನು ಮಾಡಿಲ್ಲ. ಬಾಲಕರ ಕೆಲಸವು ಕುಟುಂಬಗಳ ಆದಾಯವನ್ನು ಕೆಲವು ವರ್ಷಗಳವರೆಗೆ ಹೆಚ್ಚಿಸಿದಂತೆ ಕಂಡುಬಂದರೂ, ಇದು ದೀರ್ಘಾವಧಿಯ ಪ್ರಯೋಜನಗಳನ್ನು ಹೊಂದಿರುವಂತೆ ಕಂಡುಬರುವುದಿಲ್ಲ, ಮತ್ತು ಮಕ್ಕಳು ಶಾಲೆಗೆ ಹೋಗಲು ಇದರಿಂದ ಆಗಾಗ್ಗೆ ಅಡ್ಡಿಯಂಟಾಗುತ್ತದೆ. ಬೀಡಿ ಕೆಲಸದಿಂದ ಯಾವಬ್ಬನೂ ಶ್ರೀವಂತನಾಗುವುದಿಲ್ಲ ಎಂಬುದನ್ನು ಅನೇಕ ಪೀಳಿಗೆಗಳಿಂದ ಬೀಡಿ ಕಾಯದಲ್ಲಿ ತೊಡಗಿಸಿಕೊಂಡಿರುವ ಅನೇಕ ಕುಟುಂಬಗಳು ಅಂಗೀಕರಿಸುತ್ತವೆ.

**ಕೆಲಸದಿಂದ ಬಿಡುಗಡೆ**

ಹುಡುಗಿಯರು ಮನೆಯಲ್ಲೇ ತಮ್ಮ ಕೆಲಸ ಮುಂದುವರಿಸಿದ್ದಾಗ್ಯೂ, ಬಾಲಕರ ಶ್ರಮವನ್ನು ಕೊನೆಗೊಳಿಸಲೆಂಬಂತೆ ಕೆಲವು ಕಾರ್ಖಾನೆಗಳು ಸ್ಥಳಾಂತರಗೊಂಡಿವೆ. ಈ ಬದಲಾವಣೆಯನ್ನು ಕಂಡು ಒಬ್ಬ ಬಾಲಕ ತನ್ನ ಸಂತೋಷವನ್ನು ವ್ಯಕ್ತಪಡಿಸಿದ. ಕಾರ್ಖಾನೆಯಿಂದ ನಮ್ಮನ್ನು ವಜಾ ಮಾಡಿದ್ದು ನಮಗೆ ಒಳ್ಳೆಯದಾಗಿದೆ. ನಾವು ಈಗ ಆಟವಾಡಬಹುದು, ನಾವು ಶಾಲೆಗೆ ಹೋಗಬಹುದು, ನಮ್ಮ ಆರೋಗ್ಯ ಸುಧಾರಿಸಿದೆ. ನಮ್ಮ ಆದಾಯವಿಲ್ಲದೆ ನಮ್ಮ ಪೋಷಕರು ಕುಟುಂಬವನ್ನು ನಿರ್ವಹಿಸಬೇಕು. ಇದು ತುಂಬಾ ಕಷ್ಟ, ಆದರೆ ಈ ಹಳ್ಳಿಯಲ್ಲಿ ಬೀಡಿ ಕಾರ್ಖಾನೆಗಳೇ ಇಲ್ಲದಿದ್ದರೆ, ಮೊದಲನೆಯದಾಗಿ ಅವರು ನಮ್ಮ ಆದಾಯದ ಮೇಲೆ ಅವಲಂಬಿತರಾಗಿರುತ್ತಿರಲಿಲ್ಲ..........11ವರ್ಷದ ಬಾಲಕ.

# ತಂಬಾಕಿನಿಂದ ಇತರೆ ಅನುಭೋಗಿ ಉತ್ಪನ್ನಗಳ ಮತ್ತು ಸೇವೆಗಳೆಡೆಗೆ ಕೇರಳ ದಿನೇಶ್ ಬೀಡಿಯ (ಭಾರತ) ವೈವಿಧ್ಯಮಯ ಪ್ರಯತ್ನಗಳು, ಸಾಮಾಜಿಕ ಮತ್ತು ಆರ್ಥಿಕ ಲಾಭಾಂಶಗಳು

ಶೋಭಾ ಜಾನ್, ತಂಬಾಕು ನಿಯಂತ್ರಣ ಸಲಹೆಗಾರರು, ಪಾತ್ ಕೆನಡಾ

## ಸಂಪಾದಕೀಯ

ಮುಂದಿನ ಕೆಲವು ದಶಕಗಳವರೆಗೆ ತಂಬಾಕಿನ ಬೇಡಿಕೆಯಿಲ್ಲ. ಸಂಪೂರ್ಣ ಅವನತಿ ಕಂಡುಬರುವ ಸಂಭವವಿಲ್ಲದಿದ್ದರೂ, ನಿರ್ಧಿಷ್ಟ ಮಾರುಕಟ್ಟೆ ವಲಯಗಳು ಈಗಾಗಲೇ ದುಷ್ಪರಿಣಾಮಕ್ಕೆ ಒಳಗಾಗಿರಬಹುದು. ಕೇರಳ ದಿನೇಶ್ ಬೀಡಿ ಕಾರ್ಮಿಕರ ಕೇಂದ್ರ ಸಹಕಾರ ಸಂಘ ನಿಯಮಿತವು 1967 ರಲ್ಲಿ ಸ್ಥಾಪನೆಗೊಂಡ ಈ ಸಂಘವು ಇತ್ತೀಚಿನ ವರ್ಷಗಳಲ್ಲಿ ಬೀಡಿ ಮಾರಾಟ ಅವನತಿ ಹೊಂದುತ್ತಿರುವುದನ್ನು ತಿಳಿದುಕೊಳ್ಳುತ್ತಾ ಇದೆ. ಹೀಗೆ ಅದು ಬೀಡಿ ಕೆಲಸವನ್ನು ಬಿಟ್ಟು ಬೇರೆ ಕೆಲಸಗಳನ್ನು ಮಾಡಲು ಸಮರ್ಥರಾದಂತವರ ನೆಮ್ಮದಿಗೆ, ತನ್ನ ಲಾಭಾಂಶವನ್ನು ಉಳಿಸಿಕೊಂಡು ಹೋಗುವ ಕೃಷಿಯಿಂದ ಇತರೆ ಉತ್ಪನ್ನಗಳೆಡೆಗೆ ತನ್ನ ಮನಸ್ಸನ್ನು ತಿರುಗಿಸುವ ಆವಶ್ಯಕತೆ ಇದೆ ಎಂಬುದನ್ನು ಮನಗಂಡಿದೆ. ಕೆರಳ ದಿನೇಶ್ ಬೀಡಿ ಯಲ್ಲಿ ತೊಡಗಿರುವ ವಿಭಿನ್ನ ಅಥವಾ ಬಗೆ ಬಗೆಯ ಜನಗಳಾದ ಶ್ರೀಮಾನ್ ಕುಂಜುರಾಮನ್, ಛೇರ್‌ಮ್ಯಾನ್, ಶ್ರೀ ಎಸ್.ಬಿ. ಶ್ರೀಧರನ್, ಕಾರ್ಯದರ್ಶಿ, ಶ್ರೀರವೀಂದ್ರನ್ ಸಾರ್ವಜನಿಕ ಸಂಬಂಧಗಳ ಅಧಿಕಾರಿ ಮತ್ತು ಸಹಕಾರ ಸಂಘದಲ್ಲಿ ಕೆಲಸ ಮಾಡುತ್ತಿರುವ ಅನೇಕ ಬಗ್ಗೆಯ ಕಾರ್ಮಿಕರುಗಳನ್ನು ಸಂದರ್ಶಿಸಿ ಪಡೆದ ಮಾಹಿತಿಯನ್ನು ಈ ಲೇಖನವು ಮಂಡಿಸುತ್ತದೆ. ಅಥವಾ ಈ ಲೇಖನದಲ್ಲಿ ಪ್ರಸ್ತುತ ಪಡಿಸಲಾಗಿದೆ.

## ಸಾರಾಂಶ

ಸಹಕಾರ ಸಂಘವನ್ನು ಸ್ಥಾಪಿಸುವುದಕ್ಕಿಂತ ಮೊದಲು ಕಾರ್ಮಿಕರು ತಮ್ಮ ಮನೆಯಿಂದ ಹೊರಗೆ ಬೀಡಿ ತಯಾರಿಸುತ್ತಿದ್ದರು. ಈ ಸಹಕಾರ ಸಂಘವು ಬೀಡಿ ಕಾರ್ಮಿಕರಲ್ಲಿ ಮಾಲೀಕತ್ವ ಮತ್ತು ಸಮುದಾಯದ ಅರಿವನ್ನುಂಟುಮಾಡುವ ಮತ್ತು ತಮ್ಮ ಬೀಡಿಗಳನ್ನು ಸಾಮೂಹಿಕವಾಗಿ ಮಾರಾಟ ಮಾಡುವ ಸ್ಥಳವನ್ನು ಒದಗಿಸಿಕೊಡುವ ಮತ್ತು ಲಾಭಾಂಶದಲ್ಲಿ ಪಾಲುದಾರಿಕೆಯನ್ನು ಕೊಡಿಸುವ ಉದ್ದೇಶವನ್ನು ಹೊಂದಿತು. ಈ ಸಹಕಾರ ಸಂಘವು ಕಾರ್ಮಿಕರಿಗೆ ಸೇರಿದ್ದರೂ ಕೇರಳ ಸರ್ಕಾರದಿಂದ ಭಾಗಶಃ ಬೆಂಬಲವನ್ನು ಪಡೆಯುತ್ತದೆ. 25 ಸಾವಿರ ಬೀಡಿ ಕಾರ್ಮಿಕರನ್ನು ಹೊಂದಿರುವ ಈ ಸಹಕಾರ ಸಂಘವು ಏಷ್ಯಾದಲ್ಲೆ ಅತ್ಯಂತ ದೊಡ್ಡ ಸಂಖ್ಯೆಯ ಕೈಗಾರಿಕಾ ಕಾರ್ಮಿಕರನ್ನು ಹೊಂದಿರುವ ಉದ್ಯಮವೆಂದು ಪ್ರತಿ ಪಾದಿಸುತ್ತದೆ. ಹಾಗೂ ಇದು 260 ಬೀಡಿ ತಯಾರಿಸುವ ಕಾರ್ಯಾಗಾರಗಳನ್ನು, 750 ಸಿಬ್ಬಂದಿಗಳನ್ನು ಮತ್ತು ಇತರೆ ಕಾರ್ಯನಿರ್ವಾಹಕ ಯಂತ್ರಿಕರನ್ನು ಹೊಂದಿದೆ.

## ಸಂದರ್ಶನಾರ್ಥಿಗಳು

ಬೀಡಿ ಮಾರಾಟದ ಇಳಿಮುಖಕ್ಕೆ ಈ ಕೆಳಗಿನ ಕಾರಣಗಳನ್ನು ಕೊಡುತ್ತಾರೆ.

1. ಬೀಡಿ ಆರೋಗ್ಯಕ್ಕೆ ಹಾನಿಕರ ಎಂದು ಆರೋಗ್ಯ ಶಿಕ್ಷಣ ಸಂದೇಶ ನೀಡುತ್ತದೆ.

2. ಹೆಚ್ಚು ಸದೃಢವಾಗಿ ಪ್ರೋತ್ಸಾಹಗೊಂಡ ಸಿಗರೇಟ್‌ಗಳಿಂದಾಗಿ ಯುವ ವಲಯದ ಹಾನಿ.

3. ಜಗಿಯುವ ತಂಬಾಕಿನೊಂದಿಗೆ ಪೈಪೋಟಿ, ಇದರಲ್ಲಿ ಒಮ್ಮೊಮ್ಮೆ ಗಾಂಜಾ ಇದ್ದು ಹೆಚ್ಚಿದ ಮತ್ತು ಹಾಗೂ ಚಟ ಹಿಡಿಸುವ ಪ್ರಭಾವವನ್ನು ಹೊಂದಿದೆ ಎಂದು ಒಬ್ಬ ಸಂದರ್ಶನಾರ್ಥಿ ಹೇಳುತ್ತಾನೆ.

4 ಅಗಿಯುವ ತಂಬಾಕಿಗೆ ವಿರುದ್ಧವಾಗಿ ಧೂಮಪಾನಕ್ಕಿರುವ ಸಾಮಾಜಿಕ ನಿಷಿದ್ಧತೆ.

5. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸುವಂತೆ ಕೇರಳದ ಉಚ್ಚ ನ್ಯಾಯಲಯ ಹೊರಡಿಸಿದ ಆಜ್ಞೆಯ ಪರಿಣಾಮಕಾರಿಯಾದ ಕಾರ್ಯಪಾಲನೆ. ಶ್ರೇಷ್ಠ ನ್ಯಾಯಾಲಯ ನಿರ್ಧಾರದಿಂದ ಶೇ.25ರಷ್ಟು (ಬೀಡಿ) ಧೂಮಪಾನದಲ್ಲಿ ಕಡಿತ ಉಂಟಾಯಿತೆಂದು ಒಬ್ಬ ಸಂದರ್ಶನಾರ್ಥಿ ತಿಳಿದುಕೊಂಡಿದ್ದಾರೆ.

1967 ಸ್ಥಾಪನೆಗೊಂಡಾಗಿನಿಂದ 1990ರವರೆಗೆ ಈ ಸಹಕಾರ ಸಂಘ ಉತ್ಪಾದಿಸಿದ ಉತ್ಪನ್ನ ಬೀಡಿ ಮಾತ್ರ. ಬೀಡಿ ಮಾರಾಟದ ಅವನತಿಯಿಂದಾಗಿ ವೈವಿಧ್ಯತೆಯ ಪ್ರಾರಂಭಕ್ಕೆ ಕಾರಣವಾಗಿ ಇದರಡಿಯಲ್ಲಿ ಮೂರು ಹೊಸ ಘಟಕಗಳನ್ನು ಹಮ್ಮಿಕೊಳ್ಳಲಾಯಿತು. ದಿನೇಶ್ ಆಹಾರಗಳು, ದಿನೇಶ್ ಛತ್ರಿ ಮತ್ತು ದಿನೇಶ್ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಗಳು.

ದಿನೇಶ್ ಫುಡ್ಸ್ 1997ರಲ್ಲಿ ಪ್ರಾರಂಭವಾಗಿ ಕೊಬ್ಬರಿ, ಕ್ಷೀರ, ಚಟ್ನಿ ಪುಡಿ, ಉಪ್ಪಿನಕಾಯಿ, ಮಸಾಲ ಹಾಗೂ ಮಸಾಲ ಪುಡಿ, ಮುರಬ್ಬ (ಜಾಮ) ಮತ್ತು ಹಣ್ಣಿನ ರಸವನ್ನು ಉತ್ಪಾದಿಸಿ ಮಾರುಕಟ್ಟೆಗೆ ಬಿಡತೊಡಗಿತ್ತು. 1999ರಲ್ಲಿ ಪ್ರಾರಂಭಗೊಂಡ ದಿನೇಶ್ ಛತ್ರಿ ಈಗ 16 ಬಗೆಯ ಛತ್ರಿಗಳನ್ನು ಉತ್ಪಾದಿಸುತ್ತದೆ. ಇತ್ತೀಚೆಗೆ ಸ್ಥಾಪನೆಗೊಂಡ ದಿನೇಶ್ ಮಾಹಿತಿ ತಂತ್ರಜ್ಞಾನ ಸಿಸ್ಟಮ್ಸ್ ಕಂಪ್ಯೂಟರ್ ತರಗತಿಗಳನ್ನು ಸಹಕಾರ ಬ್ಯಾಂಕುಗಳಿಗೆ ಸೂಕ್ಷ್ಮತಂತ್ರಾಂಶ (ಸಾಫ್ಟ್‌ವೇರ್) ವನ್ನು ಅಭಿವೃದ್ಧಿಪಡಿಸುವುದು ಮತ್ತು ದತ್ತ ಮಾಹಿತಿಯನ್ನು ದಾಖಲಿಸುವ ಕೆಲಸ ಮುಂತಾದವುಗಳನ್ನು ಕೈಗೊಳ್ಳುತ್ತದೆ. ಐಟಿ ಸಾಹಸಿಗಳಿಗೆ ಮೂಲಭೂತ ಸೌಲಭ್ಯವನ್ನು ಒದಗಿಸುವ ಉದ್ದೇಶದಿಂದ ಈ ಘಟಕವು ತಂತ್ರೋದ್ಯಾನವನ ಎಂಬ ಮತ್ತೊಂದು ಘಟಕವನ್ನು ಸ್ಥಾಪಿಸಿದೆ.

ಸಾಮಾಜಿಕ - ಆರ್ಥಿಕ ಕ್ಷೇಮಾಭ್ಯುದಯ ನೀತಿ ತನ್ನ ಅಂಗವಾಗಿರುವುದರಿಂದ ಸರ್ಕಾರ ಇತ್ತೀಚಿನ ವರ್ಷಗಳಲ್ಲಿ ಸಾಂಪ್ರದಾಯಕ ಆರ್ಥಿಕ ವಲಯಗಳಾದ ಬಿದಿರು, ಗೇರು, ಕೈಮಗ್ಗದ ಉತ್ಪನ್ನಗಳು ಮತ್ತು ಬೀಡಿಗಳು ಮುಂತಾದವುಗಳನ್ನು ರಕ್ಷಿಸಲು ಸಂಕಲ್ಪ ಮಾಡಿದೆ. ಉಗ್ರ ಸ್ವರೂಪದ ಪೈಪೋಟಿಯ ಜಾಗತೀಕರಣಗೊಂಡ ಮತ್ತು ಯಾಂತ್ರಿಕರಣಗೊಂಡ ಅರ್ಥ ವ್ಯವಸ್ಥೆಯಲ್ಲಿ, ಅತೀವ ಶ್ರಮದಾಯಕ ಸ್ವರೂಪದ ಈ ಸಾಂಪ್ರದಾಯಕ ಆರ್ಥಿಕ ಚಟುವಟಿಕೆಗಳು ದುರ್ಬಲವಾಗಿದೆ. ಇಂಥಹ ಪ್ರಯತ್ನಗಳನ್ನು ಬೆಂಬಲಿಸುವಲ್ಲಿ ಕಿಷ್ಟ ಕಾರ್ಪಣ್ಯಗಳಿದ್ದು ಸರ್ಕಾರವೂ ಈ ವಲಯಗಳಲ್ಲಿ ಕೆಲಸ ಮಾಡುವವರೆಗೆ ಬದಲಿ ಉದ್ಯೋಗಗಳನ್ನು ನೀಡಿ ಪುನಶ್ಚೈತನ್ಯಗೊಳಿಸುವಡೆಗೆ ಗಮನಹರಿಸಿದೆ, ದಿನೇಶ್ ಬೀಡಿಯ ವೈವಿಧ್ಯಮಯ ಬೆಳವಣಿಗೆಯು ಉದ್ಯೋಗ ರಕ್ಷಣೀಕರಣದ ನಿಟ್ಟನಲ್ಲಿನ ಒಂದು ಪ್ರಯತ್ನವಾಗಿತ್ತು. ಪ್ರಾರಂಭದಲ್ಲಿ ಕೇವಲ 400 ಕಾರ್ಮಿಕರನ್ನು (25,000ದಲ್ಲಿ) ಬೀಡಿ ಕೆಲಸದಿಂದ ಇತರೆ ಘಟಕಗಳಿಗೆ ಸ್ಥಳಾಂತರಿಸಲಾಯಿತು. ಬೀಡಿ ಕಾರ್ಮಿಕರಲ್ಲಿ ಹೆಚ್ಚು ವಿದ್ಯಾವಂತರಾದವರು ಹೆಚ್ಚು ಕೌಶಲ್ಯದಿಂದ ಕೂಡಿದ ಕೆಲಸಗಳಾದ ಯಂತ್ರ ನಡೆಸುವುದು, ಛತ್ರಿ ತಯಾರಿಸುವುದು, ಅಥವಾ ಗುಮಾಸ್ತ ಹುದ್ದೆಗಳನ್ನು ಗಳಿಸುವಲ್ಲಿ ಯಶಸ್ವಿಯಾದರು. ಕೆಲವು ಘಟಕಗಳು ಲಾಭಾಂಶ ಗಳಿಸುತ್ತಿವೆ ಅಥವಾ ಬೇರ್ಪಡುತ್ತ ಇವೆ ಕೂಡ, ಇನ್ನು ಕೆಲವು ನಷ್ಟದಲ್ಲಿ ನಡಿಯುತ್ತಾ ಇವೆ.

ಹೊಸ ಘಟಕಗಳಿಗೆ ಸ್ಥಳಾಂತರಗೊಂಡ ಕಾರ್ಮಿಕರಿಗೆ ಬೀಡಿ ಕೈಗಾರಿಕೆಯಲ್ಲಿ ನೀಡಿದಷ್ಟೇ ವೇತನವನ್ನು

ನೀಡಲಾಗುತ್ತದೆ. ಆದರೆ ಈಗ ವೇತನಗಳು ಸುಭದ್ರ ಹಾಗೂ ಪ್ರತಿ ವಾರಕ್ಕೆ ನಿಗದಿತವಾಗಿ ನೀಡಲಾಗುತ್ತದೆ. ಆದರೆ ಬೀಡಿ ಕೈಗಾರಿಕೆಯಲ್ಲಿ ಇದು ಅಸ್ಥಿರ ಸ್ವರೂಪವನ್ನು ಹೊಂದಿತ್ತು. ಜೊತೆಗೆ ಬೀಡಿ ತಯಾರಿಕೆಯಲ್ಲಿ ವಯಸ್ಸಾದಂತೆ ತಮ್ಮ ಸಾಮರ್ಥ್ಯ ಕಡಿಮೆಯಾಗುತ್ತಿತ್ತು ಎಂದು ಕಾರ್ಮಿಕರು ಪದೇ ಪದೇ ವರದಿ ಮಾಡುತ್ತಾ ಇದ್ದರು. ಹೀಗೆ ಅವರು ಭವಿಷ್ಯದಲ್ಲಿ ನಾವು ನಮ್ಮ ಕೆಲಸ ಕಳೆದುಕೊಳ್ಳುತ್ತೇವೆಂದು ಭಾವಿಸುತ್ತಿದ್ದರು. ಬೀಡಿ ಕಾಯಕವು ಏಕ ವ್ಯಕ್ತಿಗಳಿಗೆ ಭವಿಷ್ಯದ ಆಶ್ವಾಸನೆಯನ್ನು ನೀಡುವುದಿಲ್ಲ, ಆದರೆ ಇತರೆ ಉದ್ಯೋಗಳು ದಿನಕಳೆದಂತೆ (ವಯಸ್ಸಾದಂತೆ) ನಿರ್ದಿಷ್ಟವಾಗಿ ದುಷ್ಪರಿಣಾಮಗಳಿಗೆ ಒಳಪಡುವುದಿಲ್ಲ. ಅಂದರೆ ಅದು ದೀರ್ಘಕಾಲದ ಉದ್ಯೋಗ ಜೀವನ ನೀಡಿ, ಹೆಚ್ಚು ನಿವ್ವಳ ಲಾಭಂಶ ಮತ್ತು ಹೆಚ್ಚು ಉದ್ಯೋಗ ಭದ್ರತೆಯನ್ನು ತನ್ನ ಕಾರ್ಮಿಕರಿಗೆ ನೀಡುತ್ತದೆ. ಬೀಡಿ ಬಳಕೆಯು ಅವನತಿ ಹಾದಿ ಹಿಡಿದಿರುವುದು ಸ್ಪಷ್ಟವಾಗಿರುವುದರಿಂದ ಇತರೆ ಘಟಗಳಲ್ಲಿನ ಉದ್ಯೋಗಗಳು ಸುಭದ್ರ - ಏಕೆಂದರೆ ಈ ಘಟಕಗಳು ಸ್ಥಿರವಾದ ಅಥವಾ ಬೇಡಿಕೆಗಳು ಹೆಚ್ಚುವಂತ ಉತ್ಪನ್ನಗಳನ್ನು ತಯಾರು ಮಾಡುತ್ತವೆ. ಜೊತೆಗೆ ವೈವಿಧ್ಯಗೊಂಡು ಬೆಳೆದ ಘಟಕಗಳಲ್ಲಿ ಕಾರ್ಮಿಕ ಕಡಿಮೆ ದೈಹಿಕ ಶ್ರಮ ಸಾಕಾಗುತ್ತದೆ. ಈ ಯಾವುದೇ ಘಟಕಗಳಲ್ಲಿ ಕಾರ್ಮಿಕರು ಒಂದೇ ಭಂಗಿಯಲ್ಲಿ ಕುಳಿತು ದೀರ್ಘ ಕಾಲದವರೆಗೆ ಕೆಲಸಮಾಡುವ ಹಾಗಿಲ್ಲ, ಇಲ್ಲವೆ ನಿರ್ದಿಷ್ಟವಾದ ಮಾಂಸಖಂಡಗಳಿಗೆ ನೋವುಂಟು ಮಾಡುವಂತಹ ಪುನರಾವರ್ತಿತ ಕೆಲಸವೂ ಅಲ್ಲ. ಬೀಡಿ ಕಾರ್ಮಿಕರು ಸಾಮಾನ್ಯವಾಗಿ ಅಸ್ತಮಾ, ಮೂಲವ್ಯಾಧಿ, ಶ್ವಾಸಕೋಶದ ನಂಜುಗಳು, ಉಲ್ಬಣಗೊಂಡ ಕ್ಷಯ ಮುಂತಾವುಗಳಿಂದ ನರಳಿದರೆ ಇಂಥ ಸಮಸ್ಯೆಗಳು ಬದಲಾಗಿ ವೈವಿಧ್ಯಮಯಗೊಂಡ ಉದ್ಯಮ ಘಟಕಗಳಲ್ಲಿ ಕಂಡು ಬರುವುದಿಲ್ಲ. ಅಂತಿಮವಾಗಿ, ಕಾರ್ಮಿಕರು ಇತರ ಘಟಕಗಳಲ್ಲಿ ತಮ್ಮ ಉನ್ನತ ಸ್ಥಾನ ಮಾನಗಳ ಅರಿವನ್ನು ತಿಳಿದು ಕೊಳ್ಳುತ್ತಾರೆ. ತಮ್ಮ ಶೈಕ್ಷಣಿಕಾ ಸ್ಥಾನಕ್ಕೆ ಮನ್ನಣೆ ಸಿಕ್ಕಿದೆ ಎಂದು ಅವರು ಭಾವಿಸುತ್ತಾರೆ. ಹಾಗೂ ಇನ್ನೂ ಹೆಚ್ಚಿನ ಅಭಿವೃದ್ಧಿ ಹೊಂದಲು ಅವರಿಗೆ ಈಗ ಅವಕಾಶ ವಿದೆ. ಈ ಅವಕಾಶಗಳು ಬೀಡಿ ಕಾಯಕದಲ್ಲಿ ಇರಲಿಲ್ಲ. ಕಾರ್ಮಿಕರ ಮಕ್ಕಳನ್ನು ಕಂಪ್ಯೂಟರ್ ಶಿಕ್ಷಣಕ್ಕೆ ಕಳುಹಿಸಿರುವುದರಿಂದ ಇವರೂ ಸಹ ವೈವಿಧ್ಯಮಯಗೊಂಡ ಉದ್ಯಮ ಘಟಕದಿಂದ ಪ್ರಯೋಜನವನ್ನು ಪಡೆಯುತ್ತಿದ್ದಾರೆ.

ವೈವಿಧ್ಯಮಯಗೊಳ್ಳುವ ಉದ್ಯಮದ ಪ್ರಕ್ರಿಯೆಯು ಬಹುತೇಕ ಸಕಾರಾತ್ಮವಾಗಿತ್ತು, ಕೆಲವು ನಿರ್ದಿಷ್ಟ ಅಡ್ಡಿ ಆತಂಕಗಳನ್ನು ಎದುರಿಸುತ್ತದೆ. ಸರಕುಗಳಿಗೆ ಮಾರುಕಟ್ಟೆ ಒದಗಿಸುವುದು ತಂಬಾ / ಹೆಚ್ಚು ಸ್ಪರ್ಧಾತ್ಮಕವಾಗಿರುತ್ತದೆ. ಮತ್ತು ದಿನೇಶ್ ಉತ್ಪನ್ನಗಳಿಗೆ ಇನ್ನೂ ಮಾರುಕಟ್ಟೆಯಲ್ಲಿ ಹೆಸರಾಂತ ಮನ್ನಣೆ ಸಿಕ್ಕಿಲ್ಲ. ಸಹಕಾರ ಸಂಘವು ತನ್ನ ಕಾರ್ಮಿಕರಿಗೆ ನ್ಯಾಯಬದ್ಧವಾದ ವೇತನವನ್ನು ನೀಡಲು ಪ್ರಯತ್ನಿಸುತ್ತಿರುವುದರಿಂದ ಕಾರ್ಮಿಕರನ್ನು ಶೋಷಣೆ ಮಾಡಿ ಖಾಸಗಿ ಬೀಡಿ ಕಂಪನಿಗಳು ಕಡಿಮೆ ದರದಲ್ಲಿ ಉತ್ಪಾದಿಸಿದ ಉತ್ಪನ್ನಗಳಿಗಿಂತ ಹೆಚ್ಚಿನ ಖರ್ಚು ಸಹಕಾರ ಸಂಘದ ಉತ್ಪನ್ನಗಳಿಗೆ ತಗುಲುತ್ತದೆ. ದಿನೇಶ ಬೀಡಿ 1000 ಬೀಡಿಗಳಿಗೆ 75 ರೂಗಳನ್ನು ನೀಡಿದರೆ ಖಾಸಗಿ ಕಂಪನಿಗಳು ಅದೇ ಸಂಖ್ಯೆಯ ಬೀಡಿಗಳಿಗೆ 50 ರೂಗಳನ್ನು ನೀಡುತ್ತದೆ. ವೈವಿಧ್ಯಮಯ ಬದಲಿ ಉದ್ಯಮ ಒಂದು ದೀರ್ಘಾವಧಿಯ ಪ್ರಕ್ರಿಯೆ ಮತ್ತು ಭವಿಷ್ಯದ ಲಾಭಾಂಶವನ್ನು ಪ್ರಾಥಮಿಕ ಹಂತದಲ್ಲಿ ನಿರ್ಧರಿಸುವುದು ಬಲು ಕಷ್ಟ. ಆದರೆ ಬಲವಾದ ಮಾರುಕಟ್ಟೆ ಪ್ರಯತ್ನಗಳು ಮತ್ತು ಸರ್ಕಾರದ ಬೆಂಬಲದಿಂದಾಗಿ ಯಶಸ್ವಿಯಾಗುವ ಸಾಧ್ಯತೆಗಳು ಕಾಣಬರುತ್ತವೆ.

ಈ ವೈವಿಧ್ಯಮಯ ಪ್ರಕ್ರಿಯೆಯೊಳಕ್ಕೆ ಕಾಲಿಟ್ಟು ಸುಮಾರು 4 ವರ್ಷ ಸಂದಿವೆ, 32 ಹೊಸದಾಗಿ ಉತ್ಪಾದಿಸಿದ ಉತ್ಪನ್ನಗಳಲ್ಲಿ ಸರಿ ಸುಮಾರು ಅರ್ಧ ಲಾಭಾಂಶವನ್ನು ಗಳಿಸುತ್ತಿವೆ. ತನ್ನ ಸಾಮಾಜಿಕ ಧ್ಯೇಯೋದ್ದೇಶಗಳನ್ನು ತಲುಪಲು ಈ ಕಾರ್ಮಿಕ ಸಹಕಾರ ಸಂಘದ ಹೆಚ್ಚಿದ ಜವಾಬ್ದಾರಿಯು ಕೇವಲ ಗರಿಷ್ಠ ಮಟ್ಟದ ಲಾಭಾಂಶವನ್ನು ಪಡೆಯಲು ಮಾತ್ರ ಈ ಉದ್ಯಮವನ್ನು ನಡೆಸುತ್ತಿಲ್ಲ ಎಂಬುದಾಗಿದೆ. ಈ ಸಹಕಾರಿ ಸಂಘದ ಸಾಮಾಜಿಕ ಗುರಿಗಳು ಗರಿಷ್ಠಮಟ್ಟದ ಉದ್ಯೋಗ, ಮತ್ತು ಉದ್ಯೋಗಿಗಳಿಗೆ ಪ್ರಯೋಜನ ಹಾಗೂ

ನ್ಯಾಯಸಮ್ಮತವಾದ ವೇತನ, ಮುಂತಾದವುಗಳನ್ನು ಒದಗಿಸಿಕೊಡುವುದಾಗಿದೆ.

ತಂಬಾಕು ನಿಯಂತ್ರಣ ಸಂಬಂಧ ಪಟ್ಟಂತೆ ವೈವಿಧ್ಯಮಯ ಉದ್ಯಮದ ಒಂದು ನಷ್ಟವೇನೆಂದರೆ ಸಹಕಾರ ಸಂಘವು ತನ್ನ ಇತರೆ ಉತ್ಪನ್ನಗಳನ್ನು ಪ್ರೋತ್ಸಾಹಿಸಿವುದರ ಜೊತೆಗೆ ತನ್ನ ಬೀಡಿಗಳಿಗೆ ಅಪರೋಕ್ಷವಾಗಿ ಪ್ರಚಾರ ನೀಡುತ್ತಿದೆ. ಆಗ ಸಹಕಾರ ಸಂಘದ ವ್ಯವಸ್ಥಾಪಕರು ಇದನ್ನು ಒಂದು ಅನುಕೂಲ ಎಂದು ಪರಿಗಣಿಸುತ್ತಾರೆ. ಮತ್ತು ಅವರು ಒಂದು ವಿಶಾಲವಾದ ಮಾರುಕಟ್ಟೆಯನ್ನು ಪಡೆಯಬಹುದು ಎಂದು ಭಾವಿಸುತ್ತಾರೆ. (ಸಮರ್ಥವಾಗಿ ಮಕ್ಕಳನ್ನು ಒಳಗೊಳ್ಳತ್ತದೆ). ಇದರಿಂದ ತಂಬಾಕು ನಿಯಂತ್ರಣದ ಮೇಲೆ ಒಂದು ವ್ಯಾಪಕ ನಿಷೇಧ ಇದರಡಿಯಲ್ಲಿ "ಗುರುತು ವಿಸ್ತರಣೆ "ಯನ್ನು ಒಳಗೊಳ್ಳುವ ಅಗತ್ಯತೆಯನ್ನು ಇನ್ನೂ ಹೆಚ್ಚು ಬಲಪಡಿಸುತ್ತದೆ.

**ಕೋಷ್ಟಕ 1**

ವೈವಿಧ್ಯಕರಣ ಪ್ರಕ್ರಿಯೆಯ ಪ್ರಾರಂಭ ವರ್ಷದಿಂದ ಪ್ರಸ್ತುತ ವರ್ಷದವರೆಗೆ ಮಾರಾಟದ ಅಂಕಿ ಅಂಶಗಳು

| ವರ್ಷ | ವಾರ್ಷಿಕ ಮಾರಾಟ (10,00,00 ರೂಗಳಲ್ಲಿ) | | |
|---|---|---|---|
| | ಸಮಗ್ರ | ಮಸಾಲ ಪುಡಿ | ಕೊಬ್ಬರಿ ಕ್ಷೀರ |
| 1998-99 | 24.83 | 8.05 | 2.46 |
| 1999-00 | 98.66 | 34.42 | 7.55 |
| 2000-01 | 288.00 | 74.99 | 11.22 |
| 2001-02 | 332.00 | 160.00 | 15.04 |

## ಪ್ರಕರಣಗಳು : ಬೀಡಿಗಳಿಂದ ಆಹಾರ ಸಂಸ್ಕರಣೆಯೆಡೆಗೆ

1. ಕರುಣಾಕರನ್, ತನ್ನ ಮೂವತ್ತರ ಪ್ರಾರಂಭದಲ್ಲಿ ಮದುವೆಯಾಗಿ ಎರಡು ಚಿಕ್ಕ ಮಕ್ಕಳನ್ನು (ಈಗತಾನೆ ನಡೆಯಲು ಪ್ರಯತ್ನಿಸುತ್ತಿರುವ ಮಕ್ಕಳು) ಹೊಂದಿದ್ದಾನೆ. ದಿನೇಶ್ ಬೀಡಿ ಸಹಕಾರ ಸಂಘವನ್ನು ಸೇರುವುದಕ್ಕಿಂತ ಮೊದಲು ಅವನು ಪಿ.ಯು.ಸಿ ಯನ್ನು ಮುಗಿಸಿದ್ದ. ಪ್ರತಿದಿನ 1000 ದಂತೆ ಈ ಸಹಕಾರ ಸಂಘದಲ್ಲಿ ಆತ 14 ವರ್ಷಗಳವರೆಗೆ ಬೀಡಿ ಕಟ್ಟುವ ಕೆಲಸ ಮಾಡಿದ್ದ.

ಮೂರು ವರ್ಷಗಳ ಹಿಂದೆ ಸಾಪೇಕ್ಷವಾಗಿ ಹೆಚ್ಚು ಶೈಕ್ಷಣಿಕ ಸ್ಥಾನವನ್ನು ಹೊಂದಿದ್ದರಿಂದ ಅವನನ್ನು ಸಹಕಾರ ಸಂಘದ ವೈವಿಧ್ಯಮಯ ಉದ್ಯಮ ಘಟಕಗಳೊಂದರಲ್ಲಿಗೆ ಕೆಲಸಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು. ಅದೂ ಆಹಾರ ಸಂಸ್ಕರಣಾ ಘಟಕವಾಗಿದ್ದು ಅಲ್ಲಿ ಮರಬ್ಬು (ಜಾಮ್), ಸಿಹಿಪಾನೀಯ, ಗೊಜ್ಜು (ಸಾಸ್), ಮುಂತಾದವುಗಳನ್ನು ತಯಾರಿಸಲಾಗುತ್ತದೆ. ಉತ್ತಮ ವಿದ್ಯಾವಂತರು ಹೊಸ ಕೌಶಲ್ಯಗಳನ್ನು ಕಲಿಯುವುದರಲ್ಲಿ ಹೆಚ್ಚು ಪ್ರವೀಣರು. ಹಾಗೂ ಇಂಥವರನ್ನು ತರಬೇತುಗೊಳಿಸುವುದರಿಂದ ಹೆಚ್ಚು ಪ್ರಯೋಜನವನ್ನು ಪಡೆಯಬಹುದು ಎಂದು ಸಹಕಾರಿ ಸಂಘದ ವ್ಯವಸ್ಥಾಪಕರು ತಿಳಿದುಕೊಂಡಿದ್ದಾರೆ. ಪ್ರಾರಂಭದಲ್ಲಿ ಇತರ ಘಟಕಕ್ಕೆ ಬದಲಾಗಬೇಕು ಎಂಬುದಕ್ಕೆ ಇದು ಕರುಣಾಕರನ್‌ನ ಪ್ರಮುಖ ಪ್ರೇರಣೆ ಅವನಿಗಿದ್ದ ಅವನ ಭವಿಷ್ಯದ ಭಯವಾಗಿತ್ತು. ಜನರಿಗೆ ವಯಸ್ಸಾದಂತೆ ಅವರ ಕೈಗಳು ನಡುಗಲು ಪ್ರಾರಂಭವಾಗುತ್ತವೆ. ಹೀಗಾಗಿ ಅವರು ಎಲೆಯ ಮೇಲೆ ಸರಿಯಾದ / ಧೃಢವಾದ ಹಿತವನ್ನು ಹೊಂದಲಾರರು. ಇದರಿಂದ ದಿನಕ್ಕೆ ಕಡಿಮೆ ಬೀಡಿ ತಯಾರಿಕೆ, ಕಡಿಮೆ ವೇತನ ಪಡೆಯಬೇಕಾಗುತ್ತದೆ. ಆಹಾರ ಸಂಸ್ಕರಣ ಘಟಕದಲ್ಲಿ ಆತ ವಿವರಿಸುತ್ತಾನೆ "ಹೊಸ ಘಟಕದ ಯಾವುದೇ ಕೆಲಸಗಳಿಗೆ ಸೂಕ್ಷ್ಮ ಯಾಂತ್ರಿಕ ಸುಸಂಘಟಾನಾ ಕೌಶಲ್ಯದ ಅಗತ್ಯ ಇಲ್ಲದಿರುವುದರಿಂದ ಇಲ್ಲಿ ಮುಪ್ಪಿಗೆ ಯಾವುದೇ ಪಾತ್ರದ ಅಗತ್ಯ ವಿರುವುದಿಲ್ಲ".

ಈ ಹೊಸ ಘಟಕ್ಕೆ ಸೇರಿದ ಮೇಲೆ ಕರುಣಾಕರನ್ ಮತ್ತೊಂದು ಪ್ರಯೋಜನವನ್ನು ಕಂಡುಕೊಂಡಿದ್ದಾನೆ. ಅವನ ವೇತನವನ್ನು ಸಕಾಲದಲ್ಲಿ ಕೊಡಲಾಗುತ್ತದೆ. ಆಗಾಗಿ ತನ್ನ ಕುಟುಂಬಕ್ಕೆ ಬೇಕಾದ ವಾರಾಂತ್ಯದ ಪಡಿತರವನ್ನು ಕೊಳ್ಳಲು ಸಮರ್ಥನಾಗಿದ್ದಾನೆ. ಅದೂ ಅಲ್ಲದೆ, ಬೀಡಿ ಘಟಕದಲ್ಲಿ ಕೆಲಸ ಸಂಕುಚಿತವಾಗುತ್ತಿತ್ತು - ಅಂದರೆ ವಾರದಲ್ಲಿ 6 ದಿವಸದಿಂದ 4 ದಿವಸಕ್ಕೆ ಕ್ಷೀಣಿತವಾಗುತ್ತಿತ್ತು. ಹೀಗಾಗಿ ಜನರು ಇತರೆ ದಿನಗಳಲ್ಲಿ ಬೇರೆ ಕೆಲಸವನ್ನು ಹುಡುಕಿಕೊಳ್ಳಬೇಕು, ಆದರೆ ಈ ಉಳಿದೆರೆಡು ದಿನಗಳಲ್ಲಿ ಹೊಲದ/ಗದ್ದೆ ಕೆಲಸಗಳು ದೊರೆಯುವುದು ಬಹುತೇಕ ಅಸಾಧ್ಯವಾದ ವಿಷಯವಾಗಿದೆ. ಕೃಷಿ ಉದ್ಯೋಗ ಋತುಮಾನ ಅವಲಂಬಿಯಾದರೆ, ಆಹಾರ ಸಂಸ್ಕರಣೆಯು ವರ್ಷವಿಡೀ ಸ್ಥಿರವಾಗಿರುತ್ತದೆ. ಇನ್ನೂ ಹೆಚ್ಚಿನ ಪ್ರಯೋಜನವೆಂದರೆ ಬೇಸರ ತರಿಸುವ ಬೀಡಿ ತಯಾರಿಕೆಯ ವೃತ್ತಿಯಿಂದ ಮುಕ್ತಿ. ಒಬ್ಬ ಸುಶಿಕ್ಷಿತ ವಿದ್ಯಾವಂತನಾದ್ದರಿಂದ ಆತನಿಗೆ ಬೀಡಿ ಕೆಲಸವು ಬೇಸರದ ಮತ್ತು ಜಿಗುಪ್ಸೆಯ ಕಾಯಕವಾಗಿ ಕಂಡುಬಂದಿದೆ. ಇದಕ್ಕೆ ವ್ಯತಿರಿಕ್ತವಾಗಿ ಹೊಸ ಉದ್ಯೋಗವು ವೈವಿಧ್ಯಮಯ ಕಲಾಪಗಳು, ಸೀಸೆಯನ್ನು ಸ್ವಚ್ಛ ಮಾಡಿ ಭರ್ತಿ ಮಾಡುವುದು, ಮುಂತಾದವುಗಳನ್ನು ಒಳಗೊಂಡಿರುತ್ತದೆ. ಉದ್ಯೋಗ ಪರಿಸರವು ಸಹ ಉತ್ತಮವಾಗಿದೆ. ಒಳ್ಳೆಯ ಬೆಳಕಿದ್ದು ಆರೋಗ್ಯಕರ ಕೊಠಡಿ ವ್ಯವಸ್ಥೆಗಳನ್ನು ಹೊಂದಿರುತ್ತದೆ. ಕರುಣಾಕರನ್‌ನ ಆರೋಗ್ಯಕ್ಕೂ ಸಹ ಪ್ರಯೋಜನಕಾರಿಯಾಗಿದೆ. ಬೀಡಿ ತಯಾರಿಸುವಾಗ ಅವನು ಅನುಭವಿಸುತ್ತಿದ್ದಂತಹ ತಂಬಾಕು ಅಲರ್ಜಿ ಮುಂತಾದ ಯಾವುದೇ ಸಾಮಸ್ಯೆಯನ್ನು ಎದುರಿಸುತ್ತಿಲ್ಲ.

## 2. ಲಲಿತ

ಲಲಿತ 35 ವರ್ಷದ ಮಹಿಳೆ - 10 ನೇ ತರಗತಿಯವರೆಗೆ ಓದಿದ್ದಾಳೆ. ಅವಳು 1983ರಲ್ಲಿ ದಿನೇಶ್ ಬೀಡಿಗೆ ಸೇರಿದಳು. ಹಾಗೂ ಕಳೆದ ಮೂರು ವರ್ಷಗಳಲ್ಲಿ ಆಹಾರ ಸಂಸ್ಕರಣಾ ಘಟಕದಲ್ಲಿ ಕೆಲಸ ನಿರ್ವಹಿಸಿದ್ದಾಳೆ. ಬೀಡಿ ಕಾಯಕದ ಉದ್ಯೋಗದಿಂದ ಹೊರಹೋಗಲು ಅವಳಿಗೆ ಅವಕಾಶ ಒದಗಿ ಬಂದಾಗ, ಹೆಚ್ಚು ವೈವಿಧ್ಯತೆಗೆ ಅವಕಾಶವಿರುವ ಉದ್ಯೋಗವನ್ನು ಪಡೆಯಲು ಅವಳು ಹೆಚ್ಚು ಹರ್ಷಿತಳಾದಳು. ಬೀಡಿ ಉದ್ಯೋಗದಲ್ಲಿ ಒಂದೇ ಭಂಗಿಯಲ್ಲಿ ಕುಳಿತು ಅನೇಕ ಗಂಟೆಗಳವರೆಗೆ ಕೆಲಸ ಮಾಡಬೇಕಾಗುತ್ತಿತ್ತು. ಆದರೆ ಈಗ ತನ್ನ ಕೆಲಸದಲ್ಲಿ ಮುಕ್ತವಾಗಿ ತಿರುಗಾಡಬಹುದು ಹಾಗೂ ವೈವಿಧ್ಯಮಯ ಬೇರೆ ಬೇರೆ ಕೆಲಸಗಳನ್ನು ಮಾಡಬಹುದು.

ಬೀಡಿ ಉದ್ಯೋಗ ಮಾಡುವಾಗ ತಾನು ಆಗಾಗ್ಗ ಸೀನುವುದು, ಕೆಮ್ಮುವುದು ಮುಂತಾದ ತೊಂದರೆಗಳಿಂದ ಬಳಲುತ್ತಿದ್ದೆಎಂಬುದನ್ನು ಲಲಿತ ತಿಳಿಸುತ್ತಾಳೆ. ಭುಜದ ಬಾಹು ಮತ್ತು ನೋವುಗಳಿಂದಲೂ ಸಹ ಅವಳು ಬಳಲುತ್ತಿದ್ದಳು. ಹೊಸ ಘಟಕದಲ್ಲಿ, ತನ್ನ ಮೂಲಭೂತ ಅಗತ್ಯಗಳನ್ನು ಪೂರೈಸುವ ಹಾಗೂ ತನ್ನ ಕುಟುಂಬಕ್ಕೆ ಬೇಕಾದ ಆಹಾರ ಸಾಮಾಗ್ರಿಗಳನ್ನು ಕೊಳ್ಳಲು ಸಾಕಾಗುವಷ್ಟು ಸ್ಥಿರವಾದ ಆದಾಯ ಬರುತ್ತಿರುವುದನ್ನು ಲಲಿತ ಕಂಡುಕೊಂಡಿದ್ದಾಳೆ, ತಾನು ಬೀಡಿ ಉದ್ಯೋಗದಲ್ಲಿ ಅನುಭವಿಸಿದ್ದಕ್ಕಿಂತ ಹೆಚ್ಚು ಒಳ್ಳೆಯ ಉದ್ಯೋಗ ಭದ್ರತೆಯನ್ನು ಅವಳು ಕಂಡುಕೊಂಡಿದ್ದಾಳೆ.

## ಮಿನಿ ಮಿನಿ

28 ವರ್ಷದ ಮಿನಿಮಿನಿ 1996ರಲ್ಲಿ ದಿನೇಶ್ ಬೀಡಿಗೆ ಸೇರಿಕೊಂಡಳು. ವೈವಿಧ್ಯಮಯ ಉದ್ಯೋಗ ಪ್ರಕ್ರಿಯೆಯ ಅಂಗವಾದ್ದರಿಂದ 1999ರಲ್ಲಿ ಅವಳನ್ನು ಕೇಂದ್ರಿಯ ಸಹಕಾರಿ ಸಂಘಕ್ಕೆ ಸ್ವಾಗತಗಾರ್ತಿಯಾಗಿ ಆಯ್ಕೆ ಮಾಡಿಕೊಳ್ಳಲಾಯಿತು. ಅವಳು 12ನೇ ತರಗತಿಯವರೆಗೆ ಎರಡು ಜನ ಮಕ್ಕಳು ಶಾಲೆಯಲ್ಲಿ ಓದುತ್ತಿದ್ದಾರೆ. ಬೀಡಿ ತಯಾರಿಸುತ್ತಿದ್ದಾಗ ಮಿನಿ ಒಂದು ವಾರಕ್ಕೆ ಸುಮಾರು 400 ರೂಗಳನ್ನು ಸಂಪಾದಿಸುತ್ತಿದ್ದಳು. ಸ್ವಾಗತಗಾರ್ತಿಯಾದ ಮೇಲೆ ಅವಳ ವೇತನ ಹೆಚ್ಚಿತು. ಈಗ ಅವಳು ವಾರಕ್ಕೆ 690 ರೂಗಳನ್ನು ಗಳಿಸುತ್ತಾಳೆ. ಹೆಚ್ಚಿನ ವೇತನದೊಂದಿಗೆ ಅವಳು ತನ್ನ ಸಮಾಜ ಸ್ಥಾನವನ್ನು ಸುಧಾರಿಸಿಕೊಂಡಿದ್ದಾಳೆ. ಕಛೇರಿ ಕೆಲಸದಿಂದ ಸುಖಿಸುತ್ತಾಳೆ ಹಾಗೂ ತನ್ನ ಬೀಡಿ ಉದ್ಯೋಗದಂತಲ್ಲದೆ ಅವಳು ವಿಶಾಲ ಪ್ರಪಂಚಕ್ಕೆ ತೆರೆಯಲ್ಪಟ್ಟಿದ್ದಾಳೆ. ತಂಬಾಕು ಅಲರ್ಜಿಗಳ ಹಿಂದಿನ ಬಳಲಿಕೆಯಿಂದ ಪಾರಾಗಿ ಅವಳು ನೆಮ್ಮದಿಯಿಂದ ಇದ್ದಾಳೆ ಹಾಗೂ ಹೊಸ ಸ್ಥಾನ ದಿಂದ ತನ್ನ ಕೊಳ್ಳುವ ಸಾಮರ್ಥ್ಯ ಹೆಚ್ಚಾಗಿದೆ ಎಂದು ಭಾವಿಸುತ್ತಾಳೆ.

## ಅನಿತ

ಅನಿತ 15 ವರ್ಷಗಳವರೆಗೆ ಬೀಡಿ ಘಟಕವೊಂದರಲ್ಲಿ ಕೆಲಸ ಮಾಡಿದಳು. ಈಗ ಅವಳು ಕೇಂದ್ರ ಸಹಕಾರಿ ಸಂಘವೊಂದರಲ್ಲಿ ಗುಮಸ್ತೆಯಾಗಿದ್ದಾಳೆ. ಉದ್ಯೋಗದಲ್ಲಿ ಬದಲಾವಣೆಯಾದ್ದರಿಂದ ಅವಳಿಗೆ ಹೆಚ್ಚಿನ ಸ್ಥಾನ ಹಾಗೂ ಹೆಚ್ಚು ಪ್ರಗತಿದಾಯಕ ಉದ್ಯೋಗ ಪರಿಸರ ಸಿಕ್ಕಿದೆ. ಇಲ್ಲಿ ಅವಳು ಬೀಡಿ ಉದ್ಯೋಗದ ಉಗ್ರ ಸ್ವರೂಪದ ಬೇಸರ ತರಿಸುವ ಉದ್ಯೋಗದಿಂದ ಪಾರಾಗಿ ಹೊಸ ಹೊಸ ವಿಷಯಗಳನ್ನು ಕಲಿತುಕೊಳ್ಳಲು ಸಮರ್ಥಳಾಗಿದ್ದಾಳೆ. ಇತರರಂತೆ ಇವಳೂ ಸಹ ಬೀಡಿ ಉದ್ಯೋಗದಿಂದ ಪಾರಾಗಿ ಹೆಚ್ಚು ಆಸಕ್ತಿದಾಯಕ ಉದ್ಯೋಗದೆಡೆಗೆ ಸಾಗಲು ಹರ್ಷ ಪಡುತ್ತಾಳೆ.

# ಭಾರತದ ರಾಜಸ್ಥಾನ ರಾಜ್ಯದಲ್ಲಿ ತುಂಬ್ರೆ ಎಲೆ ಸಂಗ್ರಹಿಸಿ ಬಡುಕಟ್ಟಿನ ಜನರು ಯೋಗ್ಯವಾದ ವ್ಯವಹಾರ ಮತ್ತು ನ್ಯಾಯಬದ್ದವಾದ ವೇತನದ ಕನಸು ಕಾಣುತ್ತಾರೆ

## ಸಂಪಾದಕೀಯ

ಭಾರತದಲ್ಲಿ ಬೀಡಿಗಳನ್ನು ತುಂಬ್ರೆ ಎಲೆಯಲ್ಲಿ ತಯಾರಿಸುತ್ತಾರೆ. ಅರಣ್ಯದಿಂದ ತುಂಬ್ರೆ ಎಲೆ ಸಂಗ್ರಹಣೆ ಮಾಡುವುದು ತಂಬಾಕು ಸಂಬಂಧಿ ಉದ್ಯೋಗದ ಇನ್ನೊಂದು ರೂಪ. ಭಾರತದ ರಾಜಸ್ತಾನ ರಾಜ್ಯದ ಎರಡು ಜಿಲ್ಲೆಗಳಾದ ಬನ್ಸ್‌ವಾರ ಮತ್ತು ಉದಯ್‌ಪುರ್‌ಗಳಿಂದ ಸಂಗ್ರಹಿಸದ ಮಾಹಿತಿಯನ್ನು ಈ ಲೇಖನ ಒಳಗೊಳ್ಳುತ್ತದೆ. ರಾಜಸ್ತಾನವು ಭಾರತದ ವಾಯುವ್ಯಭಾಗ ಮತ್ತು ಪಾಕೀಸ್ತಾನದ ಪಶ್ಚಿಮ ಮತ್ತು ವಾಯುವ್ಯದಲ್ಲಿ ಕಂಡುಬರುತ್ತದೆ. ರಾಜಸ್ತಾನದ ಅರ್ಥ ವ್ಯವಸ್ಥೆಯ ಪ್ರಮುಖವಾಗಿ ಕೃಷಿಗೆ ಆಧಾರಿತವಾಗಿದೆ. ಸೂಕ್ಷ್ಮ ಏಕದಳ ಧಾನ್ಯಗಳು, ಮೆಕ್ಕೆ ಜೋಳ, ಹಾಗೂ ಹತ್ತಿ ಪ್ರಮುಖ ಬೆಳೆಗಳಾಗಿದೆ. ಬನ್ಸ್‌ವಾರ ಜಿಲ್ಲೆಯಲ್ಲಿ ಪ್ರಮುಖವಾಗಿ ಬುಡಕಟ್ಟು ಜನರು ವಾಸಿಸುತ್ತಾರೆ. ಉದಯ್‌ಪುರ್ ಇದರ ನೆರೆ ಜಿಲ್ಲೆ.

ಸಂದರ್ಶನಾರ್ಥಿಗಳಲ್ಲಿ ಅಸ್ತ ಸನ್‌ಸ್ಥಾನ್ ಎನ್.ಜಿ.ಓ. ದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರು ಒಳಗೊಳ್ಳುತ್ತಾರೆ. ತುಂಬ್ರೆ ಎಲೆ ಸಂಗ್ರಹಣೆಗಾರರ ಅನೇಕ ವಿಷಯಗಳಿಗೆ ಸಂಬಂಧ ಪಟ್ಟಂತೆ ಅಸ್ತ ಸಂಘಟನೆ ಕೆಲಸ ನಿರ್ವಹಿಸುತ್ತದೆ. ಅದರಲ್ಲೂ ನಿರ್ದಿಷ್ಟವಾಗಿ ತುಂಬ್ರೆ ಎಲೆ ಮಾರಾಟಕ್ಕೆ ತಕ್ಕ ಬೆಲೆ ಕೂಡಿಸುವ ನಿಟ್ಟನಲ್ಲಿ ಕೆಲಸ ಮಾಡುತ್ತಿದೆ. ಅಸ್ತ ಸಹಕಾರ ಸಂಘದಲ್ಲಿನ ತುಂಬ್ರೆ ಎಲೆಗೆ ಮಾರುಕಟ್ಟೆ ಚಟುವಟಿಕೆಯನ್ನು ಒದಗಿಸಿಕೊಡುವ ಕಾರ್ಮಿಕರನ್ನು ಮತ್ತು ಕಛೇರಿ ಸಿಬ್ಬಂದಿಯವರು ಮತ್ತು ಸಹಕಾರ ಸಂಘಗಳಿಗೆ ಮತ್ತು ಖಾಸಗಿ ಗುತ್ತಿಗೆದಾರರಿಗೆ ತಮ್ಮ ಎಲೆಗಳನ್ನು ಮಾರಾಟ ಮಾಡುವವರು ಇತರೆ ಸಂದರ್ಶನಾರ್ಥಿಗಳಾಗಿದ್ದಾರೆ.

## ಸಾರಾಂಶ

ಈ ಸಂಶೋಧನೆ ಕೆಲವು ವಿಷಯಗಳನ್ನು ಹೊರಗೆಡೆ ವಿದೆ. ರಾಜಸ್ತಾನ ರಾಜ್ಯದಲ್ಲಿರುವ ತುಂಬ್ರೆ ಎಲೆ ಸಂಗ್ರಹಿಸುವವರೆಲ್ಲರು ಬಡವರು, ಹಾಗೂ ಶಿಕ್ಷಣ ಇಲ್ಲದೆ ಇರುವವರು ಹಾಗೂ ಬುಡಕಟ್ಟು ಜನಾಂಗದವರು. ಅವರು ಯೋಗ್ಯವೇತನ ಅಥವಾ ವ್ಯವಹಾರದ ತಮ್ಮ ಹಕ್ಕನ್ನು ರಕ್ಷಿಸಿಕೊಳ್ಳಲು ಶಕ್ತಿ ಇಲ್ಲದವರು. ಇದಕ್ಕೆ ಪ್ರತಿಯಾಗಿ ಖರೀದಿದಾರರಲ್ಲಿ ಯಾರೊಬ್ಬರೂ ಬುಡಕಟ್ಟಿನ ಜನಾಂಗದವರಿಲ್ಲ. ಕೆಲವು ಖರೀದಿದಾರರು ತಮ್ಮ ಎಲೆಗಳನ್ನು ಬೀಡಿ ತಯಾರಿಕರಿಗೆ ಮಾರಿದರೆ, ಕೆಲವರು ತಾವೇ ಬೀಡಿ ತಯಾರಿಕರಾಗಿದ್ದಾರೆ. ಬಹುತೇಕ ಸಂಗ್ರಹದಾರರಲ್ಲಿ ಮಹಿಳೆಯರು ಮತ್ತು ಮಕ್ಕಳೇ ಆಗಿದ್ದಾರೆ. ಮತ್ತು ಕೆಲಸವನ್ನು ಅತ್ಯಂತ ಕಡು ಬೇಸಿಗೆಯ ತಿಂಗಳುಗಳಾದ ಮೇ, ಜೂನ್ ಋತುಮಾನದಲ್ಲಿ ಮಾಡಲಾಗುತ್ತಿದೆ. ಮರ ದೊಡ್ಡದಿದ್ದರೆ ಎಲೆ ಕೀಳಲು ಜನರು ಅದನ್ನು ಹತ್ತಬೇಕು. ಇದರಿಂದ ತುಂಬಾ ಅಪಾಯವಿದ್ದು ಸಣ್ಣಪುಟ್ಟ ಗಾಯಗಳು ಮತ್ತು ಕೆಲವೊಮ್ಮೆ ಸಾವು ಸಂಭವಿಸಬಹುದು. ಈ ಎಲ್ಲಿ ಅಪಾಯಗಳಿಗೆ ತಾವೇ ಜವಾಬ್ದಾರರಾಗಿರುತ್ತಾರೆ.

ಈ ಕೆಲಸವು ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತದೆ. ಅರಣ್ಯ ಇಲಾಖೆ ಮತ್ತು ಎನ್.ಜಿ.ಓ. ದ ಪ್ರಕಾರ ಜನರು ಒಂದು ದಿನಕ್ಕೆ 15-17 ಗಂಟೆಗಳ ಸಮಯ ಕೆಲಸ ಮಾಡುತ್ತಾರೆ. ಜನರು ಬೆಳಗಿನ ಜಾವ 5 ಗಂಟೇಗೆ ಅರಣ್ಯಕ್ಕೆ ಹೋಗುತ್ತಾರೆ. ಮತ್ತು ಎಲೆ ತೆಗೆದುಕೊಂಡು ಮಧ್ಯಾಹ್ನ 1 ಗಂಟೆಗೆ ಮರಳುತ್ತಾರೆ. ಮನೆಯಲ್ಲಿ1-5 ಗಂಟೆಯೊಳಗೆ ಎಲೆಗಳನ್ನು ಚೀಲಕ್ಕೆ ತುಂಬುತ್ತಾರೆ ನಂತರ ಎಲೆಗಳನ್ನು ಮಾರಾಟ ಮಾಡಲು ಹೋಗುತ್ತಾರೆ. ಅನೇಕ ಜನರು ಎಲೆಗಳನ್ನು ಮಾರಾಟಕ್ಕೆ ತಂದಿರುವುದರಿಂದ ಇದು ಹೆಚ್ಚಿನ ಪ್ರಮಾಣದ ಸಮಯವನ್ನು ತೆಗೆದುಕೊಳ್ಳುತ್ತಾರೆ. ಹಾಗಾಗಿ ಜನರು ರಾತ್ರಿ 1 ಗಂಟೆಯವರೆಗೆ ಮರಳಿ ಬರುವುದಿಲ್ಲ.

ಎಲೆ ಸಂಗ್ರಹಕರು ಉಳಿವಿಗಾಗಿ ಹೋರಾಟ ಮಾಡುತ್ತಿರಬೇಕಾದರೆ ಖರೀದಿದಾರರು ವಿಭಾಗೀಯ ಅರಣ್ಯ ಕಛೇರಿಗೆ ಒಂದು ಕಾರ್ ಕೊಟ್ಟಿರುವುದು ಇವರ ಗಮನಕ್ಕೆ ಬಂತು. ಅವರ ಅತೃಪ್ತಿಯಿಂದಾಗಿ ಮುಷ್ಕರ ನಡೆದು 1991 ರಲ್ಲಿ ಸಹಕಾರ ಸಂಘಗಳು ರಚನೆಯಾದವು. ಈ ಸಂಘಟನೆಗಳು ಪರಿಸ್ಥಿತಿಯನ್ನು ಸ್ವಲ್ಪ ಮಟ್ಟಿಗೆ ಸುಧಾರಿಸಿದವು. ಆದರೆ ಕಡಿಮೆ ವೇತನದ ದೀರ್ಘ ಸಮಯದ ಕೆಲಸವಾದ ಎಲೆ ಸಂಗ್ರಹಣೆಯು ಮೊದಲಿನಂತೆ ಮುಂದುವರೆಯಿತು. ಇತರೆ ಪ್ರದೇಶದಲ್ಲಿ 100 ಕಟ್ಟಿನ ಎಲೆಗೆ 50-1001 ರೂಗಳನ್ನು ಕೊಡುತ್ತಿದ್ದರೆ, ರಾಜಸ್ತಾನ್‌ದಲ್ಲಿ ಮಾತ್ರ ಅದೇ ಪ್ರಮಾಣಕ್ಕೆ 71ರೂ ಗಳನ್ನು ಮಾತ್ರ ನೀಡಲಾಗುತ್ತಿತ್ತು. ಈ ವಿಷಯ ಎಲೆ ಸಂಗ್ರಹಕರಿಗೆ ಅರಿವಾದಾಗ ಕಾರ್ಮಿಕರ ಅಶಾಂತಿಯ ಕಟ್ಟೆಯೊಡೆಯಲು ಪ್ರಾರಂಭವಾಯಿತು. ಇದರಿಂದ 1990ರಲ್ಲಿ 16 ದಿನಗಳ ಪ್ರತಿಭಟನಾ ಮುಷ್ಕರ ನಡೆದು ಖರೀದಿದಾರರರು ಹೆಚ್ಚಿನ ವೇತನವನ್ನು ನಿಡಲು ಒಪ್ಪಿಗೊಂಡರು.

ಎಲೆ ಖರೀದಿದಾರರು ಮಾಡುವ ಆರ್ಥಿಕ ಶೋಷಣೆಯು ಸಂದರ್ಶನಾರ್ಥಿಗಳು ತಿಳಿಸಿದ ಸಮಸ್ಯೆಗಳಲ್ಲಿ ಒಂದಾಗಿತ್ತು. ಖರೀದಿದಾರ ಆಗಾಗ ಎಲೆ ಕಟ್ಟುಗಳನ್ನು ಸರಿಯಾಗಿ ಎಣಿಸುವುದಿಲ್ಲ, ಎಲೆಗಳನ್ನು ತಿರಸ್ಕರಿಸುತ್ತಾರೆ ಆದರೆ ಅವುಗಳ ನಂತರ ಹಣಕೊಡದೆ ತೆಗೆದುಕೊಂಡು ಹೋಗುತ್ತಾರೆ. ಹಣಕೊಡುವ ಬದಲು ಆಗಾಗ್ಗೆ ಅವರು ಗುರುತಿನ ಚೀಟಿ ನೀಡಿ 5-7 ದಿನಗಳ ನಂತರ ಹಣವನ್ನು ಪಡೆಯಿರಿ ಎಂದು ಹೇಳುತ್ತಾರೆ. ಅನೇಕರು ಈ ಕೂಪನ್‌ಗಳನ್ನು ಕಳೆದುಕೊಳ್ಳುವುದರಿಂದ ತಮ್ಮ ಕೂಲಿ ಹಣವನ್ನು ಪಡೆಯಲು ಆಗುವುದಿಲ್ಲ. ಸಾಗಾಣಿಕೆಯಲ್ಲಿ ಆಗುವ ನಷ್ಟವನ್ನು ಭರ್ತಿ ಮಾಡಿಕೊಳ್ಳಲು ಪ್ರತಿ 20 ಕಟ್ಟಿಗೆ ಒಂದು ಕಟ್ಟು ಎಲೆಯನ್ನು ಖರೀದಿದಾರರು ಉಚಿತವಾಗಿ ತೆಗೆದುಕೊಳ್ಳುತ್ತಾರೆಂದು ಒಬ್ಬ ಕಾರ್ಮಿಕನ ಮಗ ನಮಗೆ ವರದಿ ನೀಡಿದ. ಅತ್ಯಂತ ಕಡಿಮೆ ಪ್ರಮಾಣದ ಕೂಲಿಯನ್ನು ನೀಡುವುದರಿಂದ ಇದು ಒಂದು ರೀತಿಯ ಆರ್ಥಿಕ ಶೋಷಣೆಯನ್ನು ಪ್ರತಿನಿಧಿಸುತ್ತದೆ. ಸರ್ಕಾರವು ಪ್ರತಿವರ್ಷ ತುಂಬ್ರೆ ಎಲೆಗಳ ವೇತನ ದರವನ್ನು ಘೋಷಣೆ ಮಾಡಿದರೂ, ಇದರಿಂದ ಶ್ರೀಮಂತ ಖರೀದಿದಾರರಿಗೆ ಲಾಭ, ಕಾರ್ಮಿಕರಿಗಲ್ಲ ಎಂದು ಕಾರ್ಮಿಕರು ಭಾವಿಸುತ್ತಾರೆ.

ಹೊಲಸು ಭಾಷೆ, ಅವಮಾನ, ಭಯ ಮತ್ತು ಇತರೆ ನೀಚ ನಡುವಳಿಕೆಗಳಿಂದ ಕಾರ್ಮಿಕರನ್ನು ನಡೆಸಿಕೊಳ್ಳುತ್ತಾರೆಂದು ಒಬ್ಬ ಪ್ರತಿವಾದಿ ದೂರಿದನು. ಉದಾಹರಣೆಗೆ. ಖರೀದಿದಾರರು ಎಲೆಗಳು ಸರಿಯಿಲ್ಲವೆಂದು ಕೂಗಾಡುತ್ತಾರೆ. ಮತ್ತು ಸಂಗ್ರಹಣೆದಾರರಿಗೆ ಪ್ರತಿಕ್ರಿಯೆ ಮಾಡದಂತೆ ಬೆದರಿಸುತ್ತಾರೆ. ಇದರೊಂದಿಗೆ ಸುಡು ಬಿಸಿನಲ್ಲಿ ನಡಿಗೆ ಮತ್ತು ಎಲೆಗಳನ್ನು ಪ್ಯಾಕ್ ಮಾಡುವುದರಿಂದ ತಲೆ ನೋವು ಮತ್ತು ಇತರೆ ಬಳಲಿಕೆಗಳು ಉಂಟಾಗುತ್ತವೆ. ಅರಣ್ಯದಲ್ಲಿ ಮರಗಳು ವಿರಳವಾಗಿರುವುದರಿಂದ ಎಲೆಗಳನ್ನು ಸಂಗ್ರಹಸಲು ಹೆಚ್ಚು ಸಮಯ ಮತ್ತು ಶ್ರಮ ಬೇಕಾಗುತ್ತದೆ. ಹೀಗಾಗಿ ಈ ಉದ್ಯೋಗಕ್ಕೆ ಅತಿ ಹೆಚ್ಚಿನ ಸಮಯವು ಬೇಕಾಗುತ್ತದೆ. ಎಲೆಗಳ ಲಭ್ಯತೆ ಇಳಿಮುಖವಾಗುತ್ತಿರುವುದರಿಂದ ಎಲೆ ಸಂಗ್ರಹಣೆಯು ದೀರ್ಘಾವಧಿಯ ಲಾಭಾಂಶದ ಬಗ್ಗೆ ಕಾಳಜಿಯನ್ನು ಕೆಲವು ಸಂದರ್ಶನಾರ್ಥಿಗಳು ವ್ಯಕ್ತ ಪಡಿಸಿದರು.

## ಪರ್ಯಾಯಗಳು ಯಾವವು

ವೈದ್ಯಕೀಯ ಗಿಡ ಮೂಲಿಕೆಗಳು, ರಾಮಫಲ, ಮತ್ತು ಇತರೆ ಹಣ್ಣುಗಳನ್ನು ಸಂಗ್ರಹಣೆ ಮಾಡಿ ಮಾರುಕಟ್ಟೆಗೆ ಬಿಡುವಂತಹ ವೈವಿಧ್ಯಮಯ ಉದ್ಯಮಗಳನ್ನು ಮಾಡುವ ಸಾಧ್ಯತೆ ಸಹಕಾರ ಸಂಘಗಳಿಗಿದೆ. ಮಕ್ಕೆ ಜೋಳ, ದ್ವಿದಳ ಧಾನ್ಯ ಮುಂತಾದ ಕೃಷಿ ಉದ್ಯೋಗಗಳು ಇತರೆ ಸಾಧ್ಯತೆಗಾಳಾಗಿವೆ. ಸಹಕಾರ ಸಂಘಗಳ ಮೂಲಭೂತ ಸೌಲಭ್ಯಗಳೊಂದಿಗೆ ಇತರೆ ಬೆಳೆಗೆ ಬದಲಾವಣೆಯಾಗುವುದು ಸಾಧ್ಯವಿದೆ ಮತ್ತು ಈಗಾಗಲೆ ಅರಣ್ಯದಲ್ಲಿ ತುಂಬ್ರೆ ಎಲೆಗಳು ಅವನತಿ ಹೊಂದುತ್ತಿರುವುದರಿಂದ ಇದು ಇನ್ನೂ ಚೆನ್ನಾಗಿ ಅಗತ್ಯವಾಗಲುಬಹುದು. ತುಂಬ್ರೆ ಎಲೆಯನ್ನು ಖರೀದಿಸಲು ಬುಡಕಟ್ಟೇತರ ಜನಗಳ ಮೇಲೆ

ಅವಲಂಬಿತರಾಗುವುದಕ್ಕಿಂತ ಕಾರ್ಮಿಕರು ಹೆಚ್ಚು ನೇರವಾಗಿ ಪ್ರಯೋಜನ ಪಡೆಯಬಹುದಾದ ಮತ್ತು ಹೊಲಸು ನಡವಳಿಕೆಗಳಿಲ್ಲದ ನವೀಕರಿಸಬಹುದಾದ ನೈಸರ್ಗಿಕ ಸಂಪನ್ಮೂಲಗಳ ಉಪಯೋಗದಿಂದ ಲಾಭವನ್ನು ಪಡೆಯಬಹುದಾದ ಒಂದು ಮಾರ್ಗವನ್ನು ಕಂಡುಕೊಳ್ಳಲು ಇಚ್ಛಿಸುತ್ತಾರೆ.

ಮಹಿಳೆಯರ ಹಾಗೆ ಬುಡಕಟ್ಟು ಜನರಿಗೆ ತಂಬಾಕು ಕೆಲಸವಲ್ಲದೆ ಬೇರೆ ಕೆಲಸಗಳನ್ನು ಮಾಡಲು ಆಗದಿರುವುದರಿಂದ ತಂಬಾಕು ಕೈಗಾರಿಕೆಯು ಈ ಜನರ ಗುಂಪನ್ನು ಸುಲಭವಾಗಿ ಶೋಷಣೆ ಮಾಡಬಹುದಾಗಿದೆ. ಅವರಿಗೆ ಬೇರೆ ಕೆಲಸಗಳು ಸುಲಭವಾಗಿ ಸಿಗದಿರುವುದರಿಂದ ಇವರು ತಮ್ಮ ದಿನನಿತ್ಯದ ಅಸ್ತಿತ್ವಕ್ಕೆ ಸಾಕಾಗದಿರುವ ಪ್ರಮಾಣ ಕೂಲಿದರಕ್ಕೆ ಕೆಲಸ ಮಾಡಲು ಒಲವು ತೋರುತ್ತಾರೆ. ಇತರೆ ಉದ್ಯೋಗವಕಾಶಗಳು ಲಭ್ಯವಾದರೆ ಪ್ರಸ್ತುತವಾಗಿ ತುಂಬ್ರೆ ಎಲೆಗಳನ್ನು ಶೇಖರಿಸುವವರು ಸಂತೋಷವಾಗಿ ಬೇರೆ ಕೆಲಸಕ್ಕೆ ಹೋಗುತ್ತಾರೆ.

### ಪ್ರಕರಣಗಳು

### *ಋತುಮಾನ ಅನುಸಾರ ತುಂಬ್ರೆ ಎಲೆ ಸಂಗ್ರಹಣೆ ಮಾಡುವವರು*

**1. ಭೂಮ.** 22 ವರ್ಷದ ಭೂಮ ತನ್ನ ವಯಸ್ಸಾದ ತಂದೆ ಮತ್ತು ನಾಲ್ಕು ಜನ ಮಕ್ಕಳನ್ನು ನೋಡಿಕೊಳ್ಳಲೇ ಬೇಕು. ಕನಿಷ್ಟ ಶಿಕ್ಷಣ ಪಡೆದ ಬುಡುಕಟ್ಟು ಕಾರ್ಮಿಕನಾಗಿದ್ದರಿಂದ ಕೂಲಿ ಸಂಪಾದನೆ. ಅವನಿಗೆ ಆಯ್ಕೆಗಳೇ ಇಲ್ಲ. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಅವನು ಎಲೆ ಸಂಗ್ರಹಣೆ ಕೆಲಸ ಕೈಗೊಳ್ಳುತ್ತಾನೆ. ಈ ಕೆಲಸವು ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತದೆ. ದೈಹಿಕವಾಗಿ ಅಪಾಯಕಾರಿ (ಮರದಿಂದ ಬೀಳುವ ಅಪಾಯವಿದೆ) ಮತ್ತು ಕಡಿಮೆ ವೇತನದಿಂದ ಕೂಡಿದೆ ಎಂದು ದೂರಿದರೂ ಸಹ ಅವನು ಕಳೆದ 10 ವರ್ಷದಿಂದ ಈ ಕೆಲಸ ಮಾಡುತ್ತಿದ್ದಾನೆ. ಅವನು ತನ್ನ ಸಂಬಂಧಿಗಳಾದ ನಾಲ್ಕು ಜನ ಮಹಿಳೆಯರೊಂದಿಗೆ ಬೆಳಗಿನ ಜಾವ ಅರಣ್ಯಕ್ಕೆ ಹೋಗುತ್ತಾನೆ. 50 ಎಲೆಗಳ ಕಟ್ಟನ್ನು ತೆಗೆದುಕೊಂಡು ಸುಮಾರು ಮಧ್ಯಾಹ್ನ ಹೊತ್ತಿಗೆ ಮರಳಿ ಬರುತ್ತಾರೆ. ಅವರು ಎಲೆಗಳನ್ನು ಮಾರಾಟಕ್ಕೆ ತೆಗೆದುಕೊಂಡು ಹೋಗುವ ತನಕ ಅಂದರೆ ಸಂಜೆಯವರೆಗೆ ಈ ಕಾರ್ಯ ಮುಂದುವರೆಯುತ್ತದೆ. ಎಲೆಗಳನ್ನು ಕಲೆ ಹಾಕುವ ದಿನಗಳಲ್ಲಿ ನಮಗೆ ಸಮಯ ಸಿಗುವುದೇ ಅಪರೂಪ ಎಂದು ಭೂಮ ಹೇಳುತ್ತಾರೆ. ಅದೃಷ್ಟವಶಾತ್ ಇದನ್ನು ಸಹಕಾರ ಸಂಘಕ್ಕೆ ಎಲೆಗಳನ್ನು ಮಾರುವುದರಿಂದ ಇತರರು ಸರಕಾರ ಸಂಘಕ್ಕೆ ಮಾರದವರು ಅನುಭವಿಸುವಂತ ಯಾತನೆ ಮತ್ತು ಶೋಷಣೆಯನ್ನು ಅನುಭವಿಸುವುದಿಲ್ಲ. ಆದರೆ 100 ಎಲೆಗಳನ್ನು ಕಟ್ಟೊಂದಕ್ಕೆ 33 ರೂಗಳಂತೆ ದಿನಕ್ಕೆ ಸುಮಾರು 50 ರೂಗಳನ್ನು ಸಂಪಾದಿಸಬಲ್ಲವನಾಗಿದ್ದಾನೆ. ಅವಶ್ಯಕ ಸಾಮಗ್ರಿ, ಸರಕುಗಳ ಬೆಲೆಗಳಲ್ಲಿ ಹೆಚ್ಚಳ ಮತ್ತು ತಾವು ಪಟ್ಟ ಶ್ರಮಕ್ಕೆ ಹೋಲಿಸಿದರೆ ಬರುವ ಆದಾಯ ಅಸಮರ್ಪಕವೆಂದು ಭೂಮ ಭಾವಿಸುತ್ತಾರೆ. ಆ ದಿನಗಳಲ್ಲಿ ಬೇರೆ ಉದ್ಯೋಗಗಳ ಅಭಾವ ವಿರುವುದರಿಂದ, ಆರ್ಥಿಕವಾಗಿ ಲಾಭದಾಯಕವಲ್ಲದಿದ್ದರೂ ಜನರು ಈ ಕೆಲಸ ಮಾಡಲು ಒಲವು ತೋರಿಸುತ್ತಾರೆ.

**2. ಭನ್ವರಿ ಬಾಯಿ** 35 ವರ್ಷದ ಮಹಿಳೆ ಆ ದಿನಗಳಲ್ಲಿ ಬೇರೆ ಉದ್ಯೋಗ ಇಲ್ಲದಿರುವುದರಿಂದ ಎಲೆಗಳನ್ನು ಸಂಗ್ರಹಿಸುತ್ತಾಳೆ. ಅವಳು ಅವಿದ್ಯಾವಂತೆ ಮತ್ತು ಬುಡಕಟ್ಟು ಜನಾಂಗಕ್ಕೆ ಸೇರಿದವಳಾದ್ದರಿಂದ ಬೇರೆ ಕೆಲಸಗಳನ್ನು ಮಾಡಲು ಅವಳಿಗೆ ಸಾಧ್ಯವಾಗುವುದಿಲ್ಲ. ರಸ್ತೆ ನಿರ್ಮಾಣ ಮಾಡುವ ಗುಂಪಿನವರು ಸಹ ನನ್ನನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲವೆಂದು ದೂರುತ್ತಾಳೆ. ಈ ಉದ್ಯೋಗ ದೀರ್ಘ ಸಮಯವನ್ನು ತೆಗೆದುಕೊಳ್ಳುವುದರ ಜೊತೆಗೆ ಇತರೆ ಚಟುವಟಿಕೆಗಳಿಗೆ ಸಮಯವಿರುವುದಿಲ್ಲ. ಕಾಡಿನಲ್ಲಿ ಕೆಲಸ ಮಾಡುವಾಗ ಕ್ರೂರ ಪ್ರಾಣಿಗಳು ಹಲ್ಲೆ ಮಾಡುವ, ಹಾವು ಕಚ್ಚುವ ಮತ್ತು ಮರದಿಂದ ಕೆಳಗೆ ಬೀಳುವ ಭಯವಿರುತ್ತದೆಂದು ಅವಳು ದೂರುತ್ತಾಳೆ. ಅವಳು ದಿನವೊಂದಕ್ಕೆ ಕೇವಲ 100 ಎಲೆಗಳ ಒಂದು ಕಟ್ಟನ್ನು ಸಂಗ್ರಹಿಸಲು

ಸಾಧ್ಯವಾಗುವುದರಿಂದ ದಿನಕ್ಕೆ 33 ರೂಗಳನ್ನು ಮಾತ್ರ ಸಂಪಾದಿಸುತ್ತಾಳೆ. 100 ಎಲೆಗಳ ಕಟ್ಟಿಗೆ 50 ರೂಗಳು ದೊರಕಬೇಕು ಎಂದು ಭಾವಿಸುತ್ತಾಳೆ. ಆದರೆ ಅವಳಿಗೆ ಬೇರೆ ದಾರಿ ಇಲ್ಲದ್ದರಿಂದ ಸಹಕಾರ ಸಂಘದವರು ನೀಡುವ ಮೊತ್ತವನ್ನೆ ಸ್ವೀಕರಿಸುತ್ತಾಳೆ.

**3. ಕಾಳಿದೇವಿ** - ಅವಿದ್ಯಾವಂತೆ. 50 ವರ್ಷದ ಮಹಿಳೆಯಂತಹ ಕಾಳಿದೇವಿಗೆ ಯಾವುದೇ ಉದ್ಯೋಗ ಅವಕಾಶಗಳಿಲ್ಲ. ಆದರೆ ಅತ್ಯಂತ ಕಡಿಮೆ ಲಾಭದಾಯಕ ತುಂಬ್ರೆ ಎಲೆ ಸಂಗ್ರಹಣೆ ಮಾತ್ರ ಅವಳಿಗೆ ಲಭ್ಯ. ಅವಳು ಸಹಕಾರ ಸಂಘವಿಲ್ಲದಿರುವ ಪ್ರದೇಶದಲ್ಲಿ ವಾಸವಾಗಿದ್ದಾಳೆ. ಆದ್ದರಿಂದ ಅವಳು ಬುಡಕಟ್ಟು ಜನರಿಗೆ ಬೆಲೆಯನ್ನು ಕೊಡದ ವಾಣಿಜ್ಯ ಖರೀದಿದಾರರೊಂದಿಗೆ ವ್ಯವಹರಿಸಬೇಕಾಗಿದೆ.

ಕಾಳಿದೇವಿ ತನ್ನ ಬಾಲ್ಯದ ದಿನಗಳಿಂದಲೂ ತುಂಬ್ರೆ ಎಲೆಗಳ ಸಂಗ್ರಹಣಾ ಕಾರ್ಯವನ್ನು ನಿರ್ವಿಸುತ್ತಿದ್ದಾಳೆ. ಇತರ ಋತುಮಾನಗಳಲ್ಲಿ ಆಕೆಯು ಕೃಷಿ ಕೆಲಸ, ಮತ್ತು ಇತರೆ ಉದ್ಯೋಗಳು ಲಭ್ಯವಿದ್ದಾಗ ಕೂಲಿಗಾಗಿ ಈ ಕೆಲಸಗಳನ್ನು ನಿರ್ವಹಿಸುತ್ತಾಳೆ.

ತುಂಬ್ರೆ ಎಲೆಗಳನ್ನು ಸಂಗ್ರಹಿಸುವ ಇತರ ಕಾರ್ಮಿಕರಂತೆ ಇವಳೂ ಸಹ ಈ ಕೆಲಸವು ಶ್ರಮದಾಯಕ ಸ್ವರೂಪವುಳ್ಳದ್ದು ಮತ್ತು ಇಡೀ ದಿನ ಕೆಲಸ ಮಾಡಬೇಕು ಎಂಬುದಾಗಿ ದೂರುತ್ತಾಳೆ. ಅವಳು ಒಂದು ವೇಳೆ ಮರದಿಂದ ಬಿದ್ದು ಸಾಯುವ ಇಲ್ಲವೇ ಗಾಯಗಳಾಗುವ ಸಂಭವನೀಯತೆಯ ಬಗ್ಗೆ ಚಿಂತಿಸುತ್ತಾಳೆ. ಮತ್ತು ತುಂಬ್ರೆ ಎಲೆ ದಿನಗಳಲ್ಲಿ ನಮಗೆ ಸರಿಯಾಗಿ ಊಟ ಮಾಡುವುದಕ್ಕೆ ಸಮಯವಿರುವುದಿಲ್ಲ ಎಂದು ದೂರುತ್ತಾಳೆ. ಖರೀದಾರರ ಶೋಷಣೆಯ ಬಗ್ಗೆ ಸಹ ಅವಳು ದೂರುತ್ತಾಳೆ. ಖರೀದಿದಾರರು ಎಲೆಗಳನ್ನು ತಿರಸ್ಕರಿಸಿ ದೂರ ಎಸೆಯುತ್ತಾರೆ. ಸಂಗ್ರಹಣೆದಾರರು ಹೋದ ಮೇಲೆ ಅವುಗಳನ್ನು ಉಪಯೋಗಿಸಲು ಆರಿಸಿಕೊಳ್ಳುತ್ತಾರೆ. ಪ್ರತಿನೂರು ಕಟ್ಟಿಕೆ ಕಟ್ಟುಗಳನ್ನು ಖರೀದಿದಾರರು ಉಚಿತವಾಗಿ ತೆಗೆದು ಕೊಳ್ಳುತ್ತಾರೆಂದು ಸಹ ತನ್ನ ಅಹವಾಲನ್ನು ಹೇಳಿಕೊಳ್ಳುತ್ತಾಳೆ. ಈ ಎಲೆ ಸಂಗ್ರಹಣೆದಾರರ ಪುನರಾವರ್ತಿತ ದೂರುಗಳಿಂದ ಯಾವುದೇ ರೀತಿಯ ಫಲಿತಾಂಶ ಬಂದಿಲ್ಲ.

ಕಾಳಿದೇವಿ ಕೆಲಸ ಮಾಡಿದರೆ ದಿನಕ್ಕೆ ಸುಮಾರು 50 ರೂಗಳನ್ನು ಸಂಪಾದಿಸುತ್ತಾಳೆ. ಆದರೆ ತಾನು ವಾಸಿಸುವ ಪ್ರದೇಶದಲ್ಲಿ ಇರುವ ಮರಗಳಲ್ಲಿ ಹೆಚ್ಚು ಎಲೆಗಳು ಇಲ್ಲದಿರುವುದರಿಂದ ಪ್ರತಿದಿನ ಕೆಲಸ ಮಾಡಲು ಆಗುವುದಿಲ್ಲವೆಂದು ಹೇಳುತ್ತಾಳೆ. 15-30 ದಿನಗಳ ಒಂದು ಋತುಮಾನದಲ್ಲಿ ಅವಳು 3-4 ದಿನಗಳು ಎಲೆ ಸಂಗ್ರಣೆಯನ್ನು ನಿಲ್ಲಿಸಬೇಕಾಗುತ್ತದೆ. ಹೀಗೆ ಅವಳು ಒಂದು ಋತುಮಾನಕ್ಕೆ 400-500 ರೂಗಳನ್ನು ಸಂಪಾದಿಸಬಲ್ಲಳು. ಮತ್ತು ಬೇರೆಯವರ ವಿಷಯದಲ್ಲೂ ಈ ಮಾತು ನಿಜವೆಂದು ಹೇಳುತ್ತಾಳೆ. ಇಂಥ ಕಡಿಮೆ ಕೂಲಿಯನ್ನು ತಂದುಕೊಡುವ ಕಠಿಣ, ಶ್ರಮದಾಯಕ, ಮತ್ತು ಅಪಾಯಕಾರಿಯಾದಂತಹ ಕೆಲಸ ಬಿಡಲು ಕಾರ್ಮಿಕರು ತುದಿಗಾಲಿನಲ್ಲಿ ನಿಂತಿದ್ದಾರೆ. ಆದರೆ ಈ ಕೆಲಸದ ಬದಲು ಇತರೆ ಯಾವುದೇ ಲಾಭ ತರುವ ಆರ್ಥಿಕ ಅವಕಾಶಗಳು ಬೇಕಾಗಿವೆ.

# ಆಹಾರಕ್ಕೆ ಬದಲು ತಂಬಾಕು ಆಯ್ಕೆ : ಭಾರತದ ಮುಂಬಾಯಿ ನಗರದ ಬೀದಿಮಕ್ಕಳಲ್ಲಿ ಉಳುವಿಗಾಗಿ ನಿತ್ಯ ಹೋರಾಟ

ಸಾಲೋಮಿ ಷಾ ಮತ್ತು ಶೈಲೇಶ್ ವೈಟೆ, ಸಲಹಾಕಾರರು

**ಸಂಪಾದಕೀಯ**

ಮುಂಬಾಯಿ ನಗರದ ಬೀದಿ ಮಕ್ಕಳ ಮೇಲೆ ನಡೆಸಿದ ಇತ್ತೀಚಿನ ಸಮೀಕ್ಷೆಯು ಮಕ್ಕಳ ಆರ್ಥಿಕ ಸ್ಥಿತಿಗಳು ಮತ್ತು ತಂಬಾಕು ಬಳಕೆಯ ಮೇಲೆ ಕೇಂದ್ರಿಕೃತವಾಗಿದೆ. ಜನಸಂಖ್ಯೆಯಲ್ಲೇ ಅತ್ಯಂತ ಹೆಚ್ಚು ಹಾನಿಗೊಳಗಾಗಬಹುದಾದ ವಲಯಗಳಲ್ಲೊಂದರಿಂದ, ಸಂಪನ್ಮೂಲಗಳಿಲ್ಲದ ಆದರೆ ಗಣನೀಯವಾಗಿ ತಂಬಾಕು ಬಳಸುವುದರಿಂದ ಬೀದಿಮಕ್ಕಳು ತಂಬಾಕಿನ ಬಳಕೆ ಮತ್ತು ಬಡತನಗಳ ಮಧ್ಯದ ಸಂಬಂಧಗಳನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗಿದೆ. ಆಶ್ರಯ ಡಾನ್ ಬಾಸ್ಕೋದ ಸಹಯೋಗದೊಂದಿಗೆ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಸಂಘಟನೆಗಳಲ್ಲಿ ಒಂದಾದ ಆಶ್ರಯ ಡಾನ್ ಬಾಸ್ಕೋ ಮುಂಬಾಯಿ ನಗರದ ಬೀದಿ ಮಕ್ಕಳೊಂದಿಗಿನ ಕೆಲಸದಲ್ಲಿ ಆಗ್ರಮಾನ್ಯವಾಗಿದೆ.

**ಅಧ್ಯಯನ ಹಿನ್ನಲೆ :**

**ಸಂಶೋದನೆ ಧ್ಯೇಯೋದ್ದೇಶಗಳು :**

ಬೀದಿ ಮಕ್ಕಳ ಆರ್ಥಿಕ ಸ್ಥಾನಮಾನ ಮತ್ತು ಯೋಗಕ್ಷೇಮದ ಮೇಲೆ ತಂಬಾಕು ಬಳಕೆಯ ಮಹತ್ತರ ಪರಿಣಾಮವನ್ನು ಪರೀಕ್ಷಿಸುವುದು ಸಂಶೋದನೆಯ ಸಮಗ್ರ ಉದ್ದೇಶವಾಗಿತ್ತು. ಬೀದಿ ಮಕ್ಕಳೊಂದಿಗೆ ಕೆಲಸ ಮಾಡುವ ಬೀದಿ ಶಿಕ್ಷಕರು ಮತ್ತು ಸಾಮಾಜಿಕ ಕಾರ್ಯಕರ್ತರೊಂದಿಗಿನ ಚರ್ಚೆಯ ಮೂಲಕವಾಗಿ ನಿರ್ದಿಷ್ಟವಾದ ಅಧ್ಯಯನದ ಉದ್ದೇಶಗಳು ಕ್ರಮವಾಗಿ ಹುಟ್ಟಿಕೊಂಡು ಬೆಳೆದವು. ನಿರ್ದಿಷ್ಟ ಸಂಶೋಧನಾ ಉದ್ದೇಶಗಳೆಂದರೆ :-

1. ಮುಂಬಾಯಿನ ಬೀದಿ ಮಕ್ಕಳಲ್ಲಿನ ತಂಬಾಕು ಬಳಕೆಯ ವ್ಯಾಪ್ತಿಯನ್ನು ಕೂಲಂಕುಶವಾಗಿ ಪರಿಶೋಧಿಸುವುದು.

2. ಮುಂಬಾಯಿನ ಬೀದಿ ಮಕ್ಕಳಲ್ಲಿನ ತಂಬಾಕು ಸಂಬಂಧಿ ಖರ್ಚುವೆಚ್ಚಗಳ ಮೌಲ್ಯ ಮಾಪನ ಮಾಡುವುದು (ಬೆಲೆ ನಿರ್ಧರಿಸುವುದು).

3. ಈ ಗುಂಪಿನ ತಂಬಾಕಿನ ಖರ್ಚುವೆಚ್ಚವನ್ನು ಮೂಲಭೂತ ಅಗತ್ಯಗಳಾದಂತಹ ಆಹಾರ ಮತ್ತು ಆರೋಗ್ಯದ ಮೇಲೆ ಮಾಡುವ ವೆಚ್ಚದೊಂದಿಗೆ ತುಲನೆ ಮಾಡುವುದು.

**ಕಾರ್ಯಕಾರಿ ವ್ಯಾಖ್ಯಾನಗಳು :**

ಅಗರ್‌ವಾಲ್ (1999) ಬೀದಿ ಮಕ್ಕಳ ಈ ಕೆಳಗಿನ ವ್ಯಾಖ್ಯಾನಗಳನ್ನು ಸೂಚಿಸಿದರು :

- ಬೀದಿಯಲ್ಲಿ, ಪಾಳು ಭೂಮಿಯಲ್ಲಿ ಅಥವಾ ಬಹಳಷ್ಟು ಸಮಯವನ್ನು ಸಾರ್ವಜನಿಕ ಸ್ಥಳದಲ್ಲಿದ್ದು ವಾಸಿಸುವುದು.
- ಕಡಿಮೆ ಆದಾಯದ ಕೀಳು ದರ್ಜೆಯ ರಸ್ತೆಬದಿಯ ಕೆಲಸ ಮಾಡುವ ಮಗು.
- ಹಾನಿಕಾರಕ ಸ್ಥಿತಿಗಳಿಗೆ ಮೈಯೊಡ್ಡಿ ಬೀದಿಯಲ್ಲಿ ವಾಸಿಸುವ ಮಗು.
- ಸ್ವಲ್ಪನೂ ಇಲ್ಲವೇ ಯಾವೊಬ್ಬ ಪೋಷಕರ ಮೇಲ್ವಿಚಾರಣೆಯಿಲ್ಲದ ಅಥವಾ ಸಾಮಾಜಿಕ ರಕ್ಷಣೆ ಇಲ್ಲದ ಮಗು.
- ನಿರಂತರ ಇಲ್ಲವೆ ಆಗಾಗ್ಗೆ ಇಲ್ಲವೆ ಯಾವುದೇ ಕುಟುಂಬದ ಸಂಪರ್ಕವೇ ಇಲ್ಲದ ಮಗು.
- ನಗರ ಜೀವನದ ಸ್ಥಿತಿಗತಿಗಳಿಗೆ ಮತ್ತು ನಗರೀಕರಣದ ಅಪಾಯಗಳಿಗೆ ಈಡಾಗುವ ಮಗು.

**ಮಾದರಿ:**

ಅಧ್ಯಯನದ ಸಮಯದಲ್ಲಿ, ಮುಂಬೈ ನಗರದ ರಸ್ತೆಯ ಇಕ್ಕೆಲಗಳಲ್ಲಿ ವಾಸಿಸುವ ಮಕ್ಕಳ ಸಂಖ್ಯೆಗಳ ನಂಬಲರ್ಹ ದತ್ತಾಂಶಗಳು ಲಭ್ಯವಿರಲಿಲ್ಲ. ಈ ಮಕ್ಕಳೊಂದಿಗೆ ನಿಯತವಾದ ಸಂಪರ್ಕವನ್ನು ಇಟ್ಟುಕೊಂಡಿದ್ದ ಕ್ಷೇತ್ರ ಕಾರ್ಯಕರ್ತರ ಅನುಭವವನ್ನು ಆಧರಿಸಿ ಆಶ್ರಯ ಡಾನ್ ಬಾಸ್ಕೋ ಮುಂಬಾಯಿ ನಗರದ ಬೀದಿ ಮಕ್ಕಳ ಕೆಲವು ಮೂಲಭೂತ ದಾಖಲೆಗಳನ್ನು ಸಂಗ್ರಹ ಮಾಡಿಕೊಂಡಿತ್ತು. ಈ ದಾಖಲೆಗಳು ಪ್ರತಿಯೊಂದು ಪ್ರದೇಶದಲ್ಲಿ ನಿರ್ದಿಷ್ಟ ಗುಂಪುಗಳಾಗಿ ವಾಸಿಸುತ್ತಿರುವ ಬೀದಿ ಮಕ್ಕಳ ಹೆಸರುಗಳು, ಪಂಗಡದ ಜಾಗ ಮತ್ತು ಪಂಗಡದ ಇತಿಹಾಸ ಮುಂತಾದ ದತ್ತಾಂಶ ಸಂಗ್ರಹಣೆಯನ್ನು ಹೊಂದಿದ್ದವು. ಮುಂಬಾಯಿ ನಗರದ ಬೇರೆ ಬೇರೆ ಸ್ಥಳದಲ್ಲಿ ವಾಸಿಸುವ ಮಕ್ಕಳ ಸಂಖ್ಯೆಯನ್ನು ತಿಳಿದುಕೊಳ್ಳಲು ಈ ದಾಖಲೆಗಳನ್ನು ಮುಂಬಾಯಿ ನಕ್ಷೆಯಾಗಿ ಉಪಯೋಗಿಸಲಾಗುತ್ತಿತ್ತು. ಯಾವುದೇ ಜಾಗವನ್ನು ಬತ್ತಿಗೊತ್ತುವ, ಇಲ್ಲವೆ ಅತಿಯಾದ ಪ್ರಾತಿನಿಧ್ಯವನ್ನು ಕೊಡುವಂತ ಜವಾಬ್ದಾರಿಯನು/ಕಾಳಜಿಯನ್ನು ತೆಗೆದುಕೊಂಡಿಲ್ಲ. ಪ್ರದೇಶವಾರು ನಕ್ಷೆ ತಂತ್ರಜ್ಞಾನತೆಯ ಮೂಲಕ ಪ್ರಾಸಂಗಿಕ ಮಾದರಿಯನ್ನು ಬಳಸಿಕೊಂಡು ನಗರದ ವಿಭಿನ್ನ ಸ್ಥಳಗಳಿಂದ 400 ಬೀದಿಮಕ್ಕಳ ಕರಡನ್ನು ತಯಾರಿಸಿಲಾಯಿತು.

ಪ್ರಾಸಂಗಿಕ ಮಾದರಿ ಎಂದರೆ ಸಂಶೋಧಕರನ್ನು ಭೇಟಿಯಾಗುವ ಮತ್ತು ಸಂದರ್ಶನಗಳಿಗೆ ಒಲವು ತೋರಿಸುವಂತೆ ಪ್ರತಿಪ್ರೇಕ್ಷಕರ ಒಂದು ಆಯ್ಕೆ ವಿಧಾನವಾಗಿದೆ. ತೇಲು ಸಮುದಾಯಗಳಾದಂತಹ (ಪ್ರತಿವಾದಿಗಳು) ಬೀದಿ ಮಕ್ಕಳ ಗಣತಿಗೆ ಇರುವ ಏಕಮಾತ್ರ ವಿಧಾನವೆಂದರೆ ಮಾದರಿ ವಿಧಾನ. ಈ ಬೀದಿ ಮಕ್ಕಳು ರೈಲು ನಿಲ್ದಾಣಗಳು, ಬೀದಿಗಳು, ದೇವಾಸ್ಥಾನದ ಹೊರಗಡೆ, ಮತ್ತು ಮುಂಬಾಯಿ ನಗರದ ವಿಭಿನ್ನ ವಲಯಗಳಲ್ಲಿನ ಇತರೆ ಪ್ರದೇಶಗಳಲ್ಲಿ ಕಂಡು ಬಂದರು.

ಪ್ರತಿ ಪ್ರೇಕ್ಷಕರು : ಜವಾಬುದಾರರು

ಈ ಅಧ್ಯಯನದಲ್ಲಿ ಮಕ್ಕಳನ್ನು ಒಳಸೇರಿಸಲು ಉಪಯೋಗಿಸಿದರೆ ಮಾನದಂಡಗಳು

ಅ) ಮಗುವು ಮುಂಬಯಿ ನಗರದ ಬೀದಿವಾಸಿಯಾಗಿರಬೇಕು.

ಆ) ಮಗುವು ತನ್ನ ಸ್ವಕುಟುಂಬದೊಂದಿಗೆ ವಾಸವಾಗಿರಕೂಡದು.

ಇ) ಮಗುವು ಸಂದರ್ಶನಕ್ಕೆ ಒಲವು ತೋರಿಸುವಂತದ್ದಾಗಿರಬೇಕು.

ಈ) ಮಗುವಿಗೆ 18 ವರ್ಷಗಳನ್ನು ಮೀರಿರಬಾರದು.

**ಮಾಹಿತಿ ಸಂಗ್ರಹ**

ಅಧ್ಯಯನದ ಮೂಲಭೂತ ಉದ್ದೇಶಗಳನ್ನು ಆಧರಿಸಿ ಒಂದು ಸಂದರ್ಶನ ಅನುಸೂಚಿಯನ್ನು ಸಿದ್ಧಪಡಿಸಲಾಯಿತು. ಅಂತಿಮ ಮಾದರಿಯನ್ನು ಕೈಗೊಳ್ಳುವ ಮುನ್ನ ಇದನ್ನು ಪೂರ್ವ ಪರೀಕ್ಷೆಗೆ ಒಳಪಡಿಸಿ ಪರಿಷ್ಕರಿಸಲಾಯಿತು.

ಒಂದು ಪ್ರಾಥಮಿಕ ಸಂದರ್ಶನ ಅನುಸೂಚಿಯ ಯೋಜನೆಯ ನಂತರ ಮಾಹಿತಿ ಸಂಗ್ರಹದಾರರಿಗೆ ತರಬೇತು ನೀಡಲಾಯಿತು. ತರಬೇತಿ ಪಡೆದ 8 ಜನ ದತ್ತ ಮಾಹಿತಿ ಸಂಗ್ರಹಣೆ ದಾರರಾದ ಹಿಂದಿ, ಮರಾಠಿ ಮತ್ತು ಆಂಗ್ಲ ಭಾಷೆಗಳಲ್ಲಿ ಪರಿಣಿತಿಯಿರುವ ವಾಕ್ಚಟುಗಳ ಸಹಾಯದಿಂದ 7-19 ಜುಲೈ 2000 ಈ ಅವಧಿಯಲ್ಲಿ ದತ್ತಾಂಶವನ್ನು ಸಂಗ್ರಹಿಸಲಾಯಿತು ನಂತರ ದತ್ತಾಂಶವನ್ನು ಪರಿಶೀಲಿಸಿ ಅಪೂರ್ಣ ಮಾಹಿತಿಯನ್ನು ತಿರಸ್ಕರಿಸಲಾಯಿತು. ಎಸ್.ಪಿ.ಎಸ್.ಎಸ್. ಸೂಕ್ಷ್ಮ ತಂತ್ರಾಂಶವನ್ನು ಉಪಯೋಗಿಸಿ ದತ್ತಾಂಶವನ್ನು ಸಂಸ್ಕರಿಸಲಾಯಿತು.

ಸಂದರ್ಶನವನ್ನು ಪೂರ್ಣಗೊಳಿಸಲು ವಿಭಿನ್ನ ಬಗೆಯ ಪ್ರಕಟಣೆಗಳಿಂದ ಪಡೆದ ದ್ವಿತೀಯ ದತ್ತಾಂಶವನ್ನು ಬಳಸಲಾಯಿತು.

**ಚರ್ಚೆ ಮತ್ತು ಫಲಿತಾಂಶಗಳು**

ಮಕ್ಕಳ ಆರ್ಥಿಕ ಸ್ಥಾನಮಾನ, ಆಹಾರದ ಬಳಕೆ, ತಂಬಾಕು ಉತ್ಪನಗಳ ಬಳಕೆ ಮತ್ತು ಖರ್ಚುಗಳು, ಆದರ ದುರುಪಯೋಗ, ಆರೋಗ್ಯ ರಕ್ಷಣೆಯ ಸನ್ನಿವೇಶದಡಿಯಲ್ಲಿ ಮುಂಬಾಯಿ ನಗರದ ಬೀದಿ ಮಕ್ಕಳ ಮೇಲಿನ ಪರಿಮಾಣಾತ್ಮಕ ಮಾಹಿತಿಯನ್ನು ಪಡೆಯಲು ಈ ಅಧ್ಯಯನಲ್ಲಿ ಪ್ರಯತ್ನಿಸಲಾಗಿದೆ.

ಮುಂಬಯಿ ನಗರದ ಬೀದಿ ಮಕ್ಕಳ ಪಾರ್ಶ್ವನೋಟ - 2002

**ಹಿನ್ನಲೆ ಮಾಹಿತಿ**

ಸಂದರ್ಶನ ಮಾಡಿದ ಬಿಟ್ಟ ಮಕ್ಕಳ ಸಂಖ್ಯೆ 400.

ಈ ಅಧ್ಯಯನಕ್ಕಾಗಿ ಬೀದಿ ಮಕ್ಕಳ ಸರಾಸರಿ ವಯಸ್ಸು 6-19ರ ವ್ಯಾಪ್ತಿಯೊಂದಿಗೆ 15 ವರ್ಷ ಎಂದು ನಿಗದಿಮಾಡಲಾಗಿತ್ತು. ಬಹುತೇಕ ಮಕ್ಕಳು 12-17 ವರ್ಷ ವಯಸ್ಸಿನವರಾಗಿದ್ದು ಆದರಲ್ಲಿ ಬಹಳಷ್ಟು

(98%) ಗಂಡು ಮಕ್ಕಳಿದ್ದರು. ಅರ್ಧದಷ್ಟು ಮಕ್ಕಳು (51.5%) ಅಕ್ಷರರಾಗಿದ್ದರು - ಅಂದರೆ ಬರೆಯಲು ಮತ್ತು ಓದಲು ಬಲ್ಲವರಾಗಿದ್ದರು.

## ಮುಂಬಾಯಿದಲ್ಲಿ ಕಳೆದ ವರ್ಷಗಳು ಮತ್ತು ವಾಸಸ್ಥಳ

ಈ ಅಧ್ಯಯನದ ಉದ್ದೇಶಕ್ಕಾಗಿ ಮುಂಬೈ ನಗರವನ್ನು ಗೊತ್ತು ಮಾಡಲಾಯಿತು. ಇದು ಕೇವಲ ಬೃಹತ್ ಮುಂಬೈ ಮುನ್ಸಿಪಾಲ ಕಾರ್ಪೋರೇಷನ್‌ನಲ್ಲಿನ ಪ್ರದೇಶಗಳನ್ನು ಮಾತ್ರ ಒಳಗೊಂಡಿರಲಿಲ್ಲ. ಆ ನಗರದ ಸುತ್ತಮುತ್ತ ಇರುವ ಅಭಿವೃದ್ಧಿ ಹೊಂದಿದ ಇತರೆ ಪ್ರದೇಶಗಳನ್ನೂ ಒಳಗೊಂಡಿತ್ತು. ಬಹುತೇಕ ಮಕ್ಕಳು ರೈಲು ನಿಲ್ದಾಣಗಳ ಹತ್ತಿರ ವಾಸವಾಗಿದ್ದರು. ಅದರಲ್ಲೂ ನಿರ್ದಿಷ್ಟವಾಗಿ ಬಹು ಸಂಖ್ಯೆಯ ಮಕ್ಕಳು ರೈಲ್ವೆ ಸಂಪರ್ಕಗಳಂತೆ ಸೇವೆ ಮಾಡುತ್ತಿದ್ದರು. ಈ ಪ್ರದೇಶಗಳು ಅತಿ ಸಂಭಾವನೀಯವಾಗಿ ವಲಸೆಗಾರರನ್ನು ಆಕರ್ಷಿಸುತ್ತವೆ. ವಿಶೇಷವಾಗಿ ಮುಂಬೈನಗರದ ಹೊರಗಡೆಯಿಂದ ಆರ್ಥಿಕ ಅವಕಾಶಗಳನ್ನು ಹುಡುಕಿಕೊಂಡು ಬರುವ ವಲಸೆ ಮಕ್ಕಳನ್ನು ಈ ನಗರ ಆಕರ್ಷಿಸುತ್ತದೆ. ಮುಂಬೈನಗರದಲ್ಲಿ ಈ ಬೀದಿ ಮಕ್ಕಳು ಕಳೆದ ವರ್ಷಗಳ ಸರಾಸರಿ ಸಂಖ್ಯೆ 4.6 ವರ್ಷಗಳು ಇದರ ವ್ಯಾಪ್ತಿ ಕೆಲವೇ ಕೆಲವು ದಿನಗಳ ಇಲ್ಲವೆ ತಿಂಗಳುಗಳಿಂದ ಹಿಡಿದು 18 ವರ್ಷಗಳವರೆಗೆ ಇದೆ.

## ಬೀದಿ ಮಕ್ಕಳ ಅರ್ಥನೋಟ


ಪ್ರತಿ ಪ್ರೇಕ್ಷಕರಲ್ಲಿ (ಪ್ರತಿ ಉತ್ತರ ನೀಡುವವರು ಅಥವಾ ಪ್ರತಿವಾದಿಗಳು) ಕಾಲುಭಾಗ ವಾದಿ ಉದ್ಯೋಗದಲ್ಲಿ ತೊಡಗಿದ್ದವರು ಅಂದರೆ ಮದುವೆಗಳಿಗೆ ವೇದಿಕೆ ನಿರ್ಮಿಸುವುದು, ಅಡಿಗೆ, ಔತಣಕೂಟಗಳಲ್ಲಿ ಸೇವೆ ಸಲ್ಲಿಸುವುದು ಮತ್ತು ಇತರೆ ಶುಭಕಾರ್ಯಗಳಾದ ಮದುವೆ ಮುಂತಾದವುಗಳ ಕಾರ್ಯಗಳನ್ನು ನಿರ್ವಹಿಸುವುದು. ಈ ಮಕ್ಕಳಲ್ಲಿ 5ಕ್ಕಿಂತ ಹೆಚ್ಚಿನ ಭಾಗ ಚಿಂದಿ ಬಟ್ಟೆ ಆರಿಸಿಕೊಂಡು ತಮ್ಮ ಸಂಪಾದನೆ ಮಾಡುತ್ತಿದ್ದರು. 13% ಗಿಂತ ಹೆಚ್ಚು ಬಾಷೆಯಲ್ಲಿ ತೊಡಗಿದ್ದರು ಮತ್ತು ಬಹುಪಾಲು 13% ರಷ್ಟು ಸಾಮಾನುಗಳನ್ನು ಹೊತ್ತು ಸಾಗುವ ಕೂಲಿಗಳಾಗಿದ್ದರು. ಒಬ್ಬ 18 ವರ್ಷದ ಹುಡುಗಿ ವೇಶ್ಯ ವೃತ್ತಿಯಲ್ಲಿ ತೊಡಗಿದ್ದಳು. ದಿನಕ್ಕೆ 250 ಅಥವಾ ಅದಕ್ಕಿಂತ ಹೆಚ್ಚು ಸಂಪಾದಿಸುತ್ತಿದ್ದಳು. ಚಿಕ್ಕ ಮಕ್ಕಳಲ್ಲಿ ಹೆಚ್ಚಿನವರು (6-12 ವರ್ಷಗಳ ವಯಸ್ಸಿನವರು) ನೈಪುಣ್ಯವಲ್ಲದ ಕೆಲಸಗಳಾದ ಭಿಕ್ಷಾಟನೆ, ಕಸ ಗುಡಿಸುವುದು ಮತ್ತು ಚಿಂದಿ ಬಟ್ಟೆ ಆರಿಸುವುದು, ಮುಂತಾದ ಕೆಲಸಗಳಲ್ಲಿ ತೊಡಗಿದ್ದರು. ದೊಡ್ಡ ಮಕ್ಕಳಲ್ಲಿ ಹೆಚ್ಚಿನವರು ನಿರ್ದಿಷ್ಟವಾದ ನೈಪುಣ್ಯದ ಇರುವ ಕೆಲಸಗಳಲ್ಲಿ (ವಾದಿ ಕೆಲಸಗಳಾದ ಸಾಮಾನು ಹೊತ್ತು ಸಾಗಿಸುವುದು, ಮತ್ತು ಸಣ್ಣಪುಟ್ಟ ಸಾಮಾನುಗಳನ್ನು ಮಾರಾಟ ಮಾಡುವುದು) ತೊಡಗಿದ್ದರು. ಕಸಬುಗಳಂತಹ ಚಿಂದಿ ಬಟ್ಟೆ ಆರಿಸುವುದು ಮತ್ತು ವಾದಿ ಕೆಲಸಗಳು ಸಮಯಾನುಸಾರ ಹಾಗೂ ವರ್ಗಹಿಸಲ್ಪಡುವಂತಾವಾಗಿದ್ದವು ಅಂದರೆ ಇವುಗಳ ಲಭ್ಯತೆಯ ಮೇರೆಗೆ ಮಕ್ಕಳು ಈ ಕೆಲಸಗಳನ್ನು ಅದಲು ಬದಲು ಮಾಡಿಕೊಳ್ಳುತ್ತಿದ್ದರು.

**ಕೋಷ್ಟಕ 1** - ಮುಂಬೈ ನಗರದ ಬೀದಿ ಮಕ್ಕಳ ಕಸುಬು

| ಕಸಬು ( ಉದ್ಯೋಗ) | ಶೇಕಡ |
|---|---|
| ವಾಡಿ ಕೆಲಸ ( ಮದುವೆ ಸಮಾರಂಭಗಳಲ್ಲಿನ ಕೆಲಸ) | 24.3 |
| ಚಿಂದಿ ಆರಿಸುವುದು | 22.5 |
| ತಿರುಪೆ ಎತ್ತುವುದು | 13.5 |
| ಹೊರೆಯಾಳು ( ಸರಕುಗಳನ್ನು ತುಂಬುವುದು ಮತ್ತು ಇಳಿಸುವುದು) | 12.5 |
| ಕಸ ಗುಡಿಸುವುದು | 10.5 |
| ಸಣ್ಣಪುಟ್ಟ ಸಾಮಾನುಗಳನ್ನು ಮಾರುವುದು | 11.9 |
| ಇತರೆ ( ಸಹಾಯಕರು, ವಿದ್ಯುತ್ ದುರಸ್ತಿಗಾರರು, ಬಡಗಿ, ಕೊಳಾಯಿಗಾರ, ಅಗಸ, ವಾಹನಗಳನ್ನು ನಿಲ್ಲಿಸುವುದು, ಮನೆಗೆಲಸ, ತಿರುಗು ವ್ಯಾಪಾರಿ, ನಿರ್ಮಾಣ, ಯಾಂತ್ರಿಕ, ವೇಶ್ಯಾವಾಟಿಕೆ, ಸಾಮಾನು ಅಂಗಡಿ, ಕಾರು ನಿಲ್ದಾಣ, ಚಿಪ್ಪಿಗ, ನಿರುದ್ಯೋಗಿಗಳು) | 7.4 |
| ಹೋಟೆಲ್ ಕೆಲಸ | 5.8 |
| ಬೂಟ್ ಪಾಲಿಶ್ | |
| ಜೇಬು ಕಳ್ಳತನ | 4.0 |
| ವರ್ಣ ಲೇಪನ | 0.3 |

ಈ ಅಧ್ಯಯನಕ್ಕಾಗಿ ಸಂದರ್ಶನ ಮಾಡಿದ ಬೀದಿ ಮಕ್ಕಳ ಸರಾಸರಿ ಆದಾಯ ದಿನಕ್ಕೆ 29/- ರೂ ಗಳಿರುವುದು ಕಂಡು ಬಂತು ಹಾಗೂ ಇದರ ವ್ಯಾಪ್ತಿ ಸೊನ್ನೆಯಿಂದ 500/- ರೂ. ಗಳಾಗಿತ್ತು.

ಪ್ರತಿ ದಿನ ಆದಾಯ ವರ್ಗದಿಂದ ಬೀದಿ ಮಕ್ಕಳ ಶೇಕಡವಾರು



**ಕೋಷ್ಟಕ 2**

ಮಕ್ಕಳು ಉಪಯೋಗಿಸುವ ತಂಬಾಕಿನ ವಿವಿಧ ಬಗೆಯ ಪ್ರತಿಶತ / ಶೇಕಡವಾರು

| **ಉಪಭೋಗಿಸಿದ ತಂಬಾಕು ಉತ್ಪನ್ನಗಳ ಬಗೆಗಳು / ನಮೂನೆಗಳು** | **ಶೇಕಡ** |
|---|---|
| ಗುಟ್ಕಾ | 46.8 |
| ಬೀಡಿ | 39.5 |
| ಸಿಗರೇಟ್ | 28.5 |
| ಸಾದಾ ತಂಬಾಕು | 14.0 |
| ಖೈನಿ | 6.8 |
| ಪಾನ್ | 5.8 |
| ಮಶೇರಿ | 4.5 |
| ಸಾದಾ ನಸ್ವಾರ್ | 1.3 |
| ಮಾವಾ | 1.0 |
| ಇತರೆ ಉತ್ಪನ್ನಗಳು | 0.3 |

ಒಂದು ಮಹತ್ತರವಾದ ಹೊರಬಿದ್ದ ಅಂಶವೆಂದರೆ ಬಹುತೇಕ ಅರ್ಧ (46.8%) ಮಕ್ಕಳು ಗುಟ್ಕಾ ಬಳಸಿದರೆ 39.5% ಬೀಡಿ ಪಾನ ಮಾಡುತ್ತಾರೆ. ಗುಟ್ಕಾ ಮತ್ತು ಬೀಡಿಗಳಿಗಿಂತ ಹೆಚ್ಚು ದುಬಾರಿಯಾದ ಸಿಗರೇಟ್‌ಗಳನ್ನು 28% ಪ್ರತಿ ಪ್ರೇಕ್ಷಕರು ಉಪಭೋಗಿಸುತ್ತಾರೆ / ಸೇದುತ್ತಾರೆ. (ಕೆಲವು ಮಕ್ಕಳು ತಂಬಾಕನ್ನು ಒಂದಕ್ಕಿಂತ ಹೆಚ್ಚಿನ ರೂಪದಲ್ಲಿ ತೆಗೆದುಕೊಳ್ಳುವುದರಿಂದ ಒಟ್ಟು ಶೇಕಡವಾರು 100 ಕ್ಕಿಂತ ಹೆಚ್ಚಿದೆ). ಮಕ್ಕಳು ತಿಳಿಸಿದ್ದೇನೆಂದರೆ ಅವರು ಆಗಾಗ್ಗೆ ಜನರು ಸೇದಿ ಎಸೆದ ಬೀಡಿ / ಸಿಗರೇಟ್ ತುಂಡುಗಳನ್ನು ಆರಿಸಿಕೊಂಡು ತಂಬಾಕು ಸೇವನೆ ಪ್ರಾರಂಭಿಸಿದರು, ಆನಂತರ ತಾವೇ ತಂಬಾಕು ಕೊಂಡುಕೊಳ್ಳಲು ಪ್ರಾರಂಭಿಸಿದರು.

**ಕೋಷ್ಟಕ 3 :**

ತಂಬಾಕು ಉತ್ಪನ್ನಗಳನ್ನು ಅನುಭೋಗಿಸಿದ ಪ್ರಮಾಯ ಮತ್ತು ಪ್ರತಿ ನಿತ್ಯದ ಖರ್ಚು ವೆಚ್ಚಗಳು

| ತಂಬಾಕು ಉತ್ಪನ್ನ | ಪ್ರತಿ ನಿತ್ಯ ಅನುಭೋಗಿಸಿದ ಪ್ರಮಾಣ ( ಬಳಕೆದಾರರ ಸರಾಸರಿ | ಪ್ರತಿನಿತ್ಯ ಖರ್ಚುವೆಚ್ಚಗಳು ರೂ.ಗಳಲ್ಲಿ( ಬಳಕೆದಾರರ ಸರಾಸರಿ | ತಿಂಗಳ ಖರ್ಚುವೆಚ್ಚಗಳು ರೂ.ಗಳಲ್ಲಿ ( ಬಳಕೆದಾರರಲ್ಲಿ ಸರಾಸರಿ |
|---|---|---|---|
| ಗುಟ್ಕಾ | 6 ಸಣ್ಣ ಪೊಟ್ಟಣಗಳು | 3.6 | 186.1 |
| ಬೀಡಿ | 13.5 ಬೀಡಿಗಳು | 3.6 | 109.8 |
| ಸಿಗರೇಟ್ | 4.1 ಸಿಗರೇಟ್‌ಗಳು | 5.7 | 173.9 |
| ಸಾದಾ ತಂಬಾಕು | 4.3 ಬಾರಿ ( ಸಮಯ) | 1.7 | 51.9 |
| ಖೈನಿ | 5.6 ಸಣ್ಣ ಪೊಟ್ಟಣಗಳು | 2.0 | 61.0 |
| ಪಾನ್ | 1.6 ಬಾರಿ ( ಸಮಯ) | 3.9 | 119.0 |
| ಮಶೇರಿ | 2.2 ಬಾರಿ ( ಸಮಯ) | 1.3 | 39.7 |
| ನಸ್ವಾರ್ | 1.8 ಬಾರಿ | 5.0 | 152.5 |
| ಮಾವ | 2.7 ಬಾರಿ | 6.0 | 183.0 |
| ಇತರೆ ಉತ್ಪನ್ನಗಳು | 4 ಬಾರಿ | 2.0 | 61.0 |

ತಂಬಾಕಿನ ದಿನನಿತ್ಯದ ಖರ್ಚುಗಳಲ್ಲಿ ಗುಟ್ಕಾ ಅತಿಹೆಚ್ಚಿನ ಸ್ಥಾನದಲ್ಲಿ ದಿನಕ್ಕೆ 6/- ರೂ. ಗಳಿಗಿಂತ ಹೆಚ್ಚುವೆಚ್ಚವನ್ನು ಇದರ ಮೇಲೆ ಮಾಡಲಾಗುತ್ತದೆ. ತಂಬಾಕಿನ ವೆಚ್ಚವನ್ನು ದಿನನಿತ್ಯದಗಳಿಗೆಯೊಂದಿಗೆ ತುಲನೆ ಮಾಡಿದಾಗ, ದಿನಕ್ಕೆ 20/- ರೂ. ಗಳಿಗಿಂತ ಕಡಿಮೆ ಸಂಪಾದಿಸುವ ಮಕ್ಕಳು ದಿನ ಒಂದಕ್ಕೆ 8.6 ರೂ.ಗಳನ್ನು ಬೀಡಿಯ ಮೇಲೆ ವ್ಯಯಿಸುವುದು ಕಂಡು ಬಂದಿತು. ದಿನ ಒಂದಕ್ಕೆ 60 ರೂ.ಗಳಿಗಿಂತಲೂ ಕಡಿಮೆ ಸಂಪಾದಿಸಿ ಮಾವವನ್ನು ಕೊಳ್ಳಲು ಪ್ರತಿದಿನ 8 ರೂ.ಗಳನ್ನು ವ್ಯಯಿಸುವ ಮಕ್ಕಳು ಸಹ ಕಂಡು ಬಂದರು. ಅನುಭೋಗಿಸುವ ತಂಬಾಕು ಉತ್ಪನ್ನಗಳ ಪರಿಮಾಣಗಳು ದಿನನಿತ್ಯದ ಆದಾಯದ ಮಟ್ಟವು 200 ರೂ.ಗಳನ್ನು ತಲುಪುವವರೆವಿಗೂ ಸ್ಥಿರವಾಗಿ ಹೆಚ್ಚಳವನ್ನು ಕಂಡಿತು. ಆ ನಂತರ ಅನುಭೋಗಿಸುವ ತಂಬಾಕು ಉತ್ಪನ್ನಗಳ ಪರಿಮಾಣಗಳಲ್ಲಿ ಇಳಿಕೆ ಕಂಡು ಬಂದಿತು. ಆದಾಯದ ಮಟ್ಟಗಳು ಹೆಚ್ಚಿದಂತೆ, ಬೀದಿ ಮಕ್ಕಳು ಜೂಜಾಡುವ ಸೂಳೆಗಾರಿಕೆ ಮಾಡುವ, ಸ್ನೇಹಿತರಿಂದ ಬೇರ್ಪಡುವ ಮುಂತಾದವುಗಳಲ್ಲಿ ತೊಡಗಿಸಿಕೊಳ್ಳುವ ಸಾಧ್ಯತೆ ಇರುತ್ತದೆ.

**ಕೋಷ್ಟಕ 4**

ಮಕ್ಕಳು ಅನುಭೋಗಿಸಿದ / ಉಪಯೋಗಿಸುವ ಮೊದಲ ದುರ್ವ್ಯಸನಿ ಪದಾರ್ಥ

| ವಿವಿಧ ಮಾದಕ ವಸ್ತುಗಳು | ಮೊದಲ ಬಾರಿಗೆ ಆ ಉತ್ಪನ್ನವನ್ನು ಉಪಯೋಗಿಸಿದ ಬೀದಿ ಮಕ್ಕಳ ಪ್ರತಿಶತ |
|---|---|
| ಗುಟ್ಕಾ | 28.3 |
| ಬೀಡಿ | 24.0 |
| ಸಾದಾ ತಂಬಾಕು | 9.3 |
| ದ್ರಾವಣ | 7.0 |
| ಸಿಗರೇಟ್ | 6.3 |
| ಭಂಗಿ / ಗಾಂಜಾ | 4.5 |
| ಪಾನ್ | 2.5 |
| ಖೈನಿ | 2.3 |
| ಮಶೇರಿ | 2.0 |
| ಮದ್ಯಸಾರ (ಆಲ್ಕೋಹಾಲ್) | 0.5 |
| ಇತರೆ | 0.5 |
| ನೈಟ್ರಾ ಝೀಪಮ್ | 0.3 |

ತಂಬಾಕು ಬಳಕೆ ಮತ್ತು ದುರುಪಯೋಗ ಪಡಿಸಿಕೊಳ್ಳುವ ಪದಾರ್ಥದ ಉತ್ಪನ್ನಗಳ ಮಾದರಿಗಳನ್ನು ತುಲನೆ ಮಾಡಿದಾಗ ಬಹಳಷ್ಟು ಮಕ್ಕಳು ತಂಬಾಕು ಉತ್ಪನ್ನಗಳಾದ ಪ್ರಮುಖವಾಗಿ ಗುಟ್ಕಾ, ಬೀಡಿ ಮತ್ತು ಸಾದಾ ತಂಬಾಕುಗಳೊಂದಿಗೆ ದುರಭ್ಯಾಸವನ್ನು ಪ್ರಾರಂಭ ಮಾಡಿರುವುದು ಸ್ಪಷ್ಟವಾಗಿದೆ. ದುಬಾರಿ ಬೆಲೆಗಳು ಮತ್ತು ಮಾರುಕಟ್ಟೆಯಲ್ಲಿ ಇತರೆ ಮಾದಕ ಪದಾರ್ಥಗಳ ಲಭ್ಯತೆಯ ಅಭಾವವು ಇದಕ್ಕೆ ಕಾರಣವಿರಬಹುದು.

ಮಕ್ಕಳು ತಂಬಾಕು ಅನುಭೋಗದಿಂದ / ಸೇವನೆಯಿಂದ ಪ್ರಾರಂಭಿಸಿ ನಂತರ ಇತರೆ ಮಾದಕ ಪದಾರ್ಥಗಳನ್ನು ಬಳಸಲು / ಉಪಯೋಗಿಸಲು ಪ್ರಾರಂಭಿಸುತ್ತಾರೆ.

ಕೋಷ್ಟಕ 5

ಮುಖ್ಯ ಆಹಾರ ಅನುಭೋಗ ಮಾದರಿಗಳು ಮತ್ತು ಆಹಾರದ ನಿತ್ಯ ವೆಚ್ಚಗಳು

| ದಿನದ ಸಮಯ | ಆಹಾರದ ಮೂಲಗಳು | ನಿತ್ಯ ವೆಚ್ಚಗಳು (ಆ ಭೋಜನಕ್ಕಾಗಿ ಪಾವತಿಸುವವರ ಸರಾಸರಿ ರೂಪಾಯಿಗಳಲ್ಲಿ) |
|---|---|---|
| ಬೆಳಿಗ್ಗೆ | ದಾನ (46.8%)<br>ಕೊಂಡದ್ದು (46%)<br>ಹೆಕ್ಕಿದ್ದು (4.8S)<br>ತಿನ್ನದಿರುವುದು (2.5%) | 6.1 |
| ಮಧ್ಯಾಹ್ನ | ದಾನ (57.3%)<br>ಕೊಂಡದ್ದು (37%)<br>ಸಂಗ್ರಹಿಸಿದ್ದು (3%)<br>ಹೆಕ್ಕಿದ್ದು (3%)<br>ತಿನ್ನದಿರುವುದು (2.8%) | 11.2 |
| ಸಾಯಂಕಾಲ | ದಾನ (9.3%)<br>ಕೊಂಡದ್ದು (20.8%)<br>ಹೆಕ್ಕಿದ್ದು (1.3%)<br>ತಿನ್ನದಿರುವುದು (68.3%) | 4.2 |
| ರಾತ್ರಿ | ದಾನ (58.8%)<br>ಕೊಂಡದ್ದು (33.3%)<br>ಹೆಕ್ಕಿದ್ದು (8.8%)<br>ತಿನ್ನದಿರುವುದು (4%) | 13.9 |

ಬೀದಿ ಮಕ್ಕಳು ಮೂರು ಪ್ರಮುಖ ಮೂಲಗಳ ಮುಂಖಾಂತರ ಆಹಾರ ಪಡೆಯುತ್ತಾರೆ/ ಗಳಿಸುತ್ತಾರೆ. ಧಾನ ಧರ್ಮ ಸಂಸ್ಥೆಗಳಿಂದ, ಹಾಗೂ ವ್ಯಕ್ತಿಗಳಿಂದ. ರಸ್ತೆಯಲ್ಲಿ ಬಿದ್ದ ವ್ಯರ್ಥ ಪದಾರ್ಥಗಳನ್ನು ಮತ್ತು ಕಸದ ತೊಟ್ಟಿಗಳಿಂದ ಆರಿಸಿಕೊಳ್ಳುತ್ತಾರೆ ಮತ್ತು ಕೊಂಡುಕೊಳ್ಳುತ್ತಾರೆ. ಬಹುತೇಕ ಮಕ್ಕಳು ಬೆಳಿಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ವೇಳೆಗಳಲ್ಲಿ ದಾನವಾಗಿ ಆಹಾರ ಸ್ವೀಕರಿಸುತ್ತಾರೆ ಆದರೆ ಅದೇ ವೇಳೆಗಳಲ್ಲಿ ಗಣನೀಯ ಪ್ರಮಾಣದ ಆಹಾರವನ್ನು ಕೊಂಡುಕೊಳ್ಳುತ್ತಾರೆ.

ಸಂಜೆಯ ಸಮಯದಲ್ಲಿ ಆಹಾರವನ್ನು ಕೊಂಡು ತಿನ್ನುವುದು ಸರ್ವಸಮಾನ್ಯವಾದ ಮಾರ್ಗವಾಗಿದೆ.

ಆಹಾರದ ಮೇಲೆ ವ್ಯಯಿಸುವ ಮತ್ತು ತಂಬಾಕಿನ ಮೇಲೆ ವ್ಯಯಿಸುವ ಮೊತ್ತಗಳನ್ನು ತುಲನೆ ಮಾಡಿದಾಗ ಗುಟ್ಕಾದ ಮೇಲೆ ವ್ಯಯಿಸುವ (6.1 ರೂ.ಗಳು) ಸರಾಸರಿ ಮೊತ್ತವು ಬೆಳಗಿನ ಊಟದ ಮೇಲೆ ವ್ಯಯಿಸುವ ಮೊತ್ತದಷ್ಟೇ ಇರುವುದು ಕಂಡು ಬರುತ್ತದೆ. ಗುಟ್ಕಾದ ಮೇಲೆ ವ್ಯಯಿಸುವ ಪ್ರಮಾಣವು ಸರಾಸರಿ ಪ್ರತಿದಿನ ಬೀದಿ ಮಕ್ಕಳು ಸಂಪಾದಿಸುವ 29 ರೂಪಾಯಿಗಳಲ್ಲಿ ಗಣನೀಯ ಪ್ರಮಾಣವನ್ನು (21%) ಸೂಚಿಸುತ್ತದೆ.

ಕೋಷ್ಟಕ 6

ನಿರ್ದಿಷ್ಟ ಆಹಾರ ಪದಾರ್ಥಗಳನ್ನು ಉಪಯೋಗಿಸಿದ ಸಮಯ ಮತ್ತು ತಿಂಗಳ ಸರಾಸರಿ ವೆಚ್ಚ

| ಆಹಾರದ ವಿವರಗಳು ಅಥವಾ ಆಹಾರ ಪದಾರ್ಥಗಳು | ಆಹಾರದ ಮೂಲ | ಒಂದು ತಿಂಗಳಲ್ಲಿನ ಅನುಭೋಗದ ಆವರ್ತ (ಪ್ರತಿ ಉತ್ಪನ್ನವನ್ನು ತಿನ್ನುವವರ ಸರಾಸರಿ | ತಿಂಗಳ ವೆಚ್ಚ ಪ್ರತಿ ಆಹಾರವನ್ನು ಖರೀದಿಸುವವರ ಸರಾಸರಿ . ರೂಪಾಯಿಗಳಲ್ಲಿ |
|---|---|---|---|
| ಹಣ್ಣುಗಳು | ದಾನ(28%)<br>ಕೊಂಡಿದ್ದು(36.8%)<br>ಹೆಚ್ಚಿದ್ದು(8.8%)<br>ತಿನ್ನದಿರುವುದು(33.8%) | 9.9 | 48.5 |
| ಹಾಲು | ದಾನ(12.8%)<br>ಕೊಂಡದ್ದು(20.5%)<br>ಆರಿಸಿಕೊಂಡಿದ್ದು(0.3%)<br>ಕುಡಿಯದಿರುವುದು(33.8%) | 10.8 | 61.9 |
| ಮೊಟ್ಟೆಗಳು | ದಾನ(23.8%)<br>ಖರೀದಿಸಿದ್ದು(38.8%)<br>ಆರಿಸಿಕೊಂಡಿದ್ದು(3%)<br>ತಿನ್ನದಿರುವುದು(65%) | 11 | 43.6 |
| ಮಾಂಸ(ಕುರಿ, ಕೋಳಿ, ದನದ) | ದಾನ(53.3%)<br>ಕೊಂಡಿದ್ದು(25%)<br>ಹೆಕ್ಕಿದ್ದು(3.8%)<br>ತಿನ್ನದಿರುವುದು(18%) | 12.3 | 137.4 |

ಮಾಂಸಗಳನ್ನು ಹೊರತು ಪಡಿಸಿ (ಕುರಿ, ಕೋಳಿ, ದನದ, ಮಾಂಸ), ಮಕ್ಕಳು ಬೇರೆ ಆಹಾರ ಪದಾರ್ಥಗಳನ್ನು ಉಚಿತವಾಗಿ ತೆಗೆದುಕೊಳ್ಳುವ ಬದಲು ಕೊಂಡುಕೊಳ್ಳಲು ಹೆಚ್ಚು ಇಚ್ಛಿಸುತ್ತಿದ್ದರು. ಬಹುಪಾಲು ಮಕ್ಕಳು ಮೊಟ್ಟೆಗಳನ್ನು ತಿನ್ನುವುದಿಲ್ಲ (65%) ಅಥವಾ ಹಣ್ಣುಗಳನ್ನು (73.5%), ಮತ್ತು ಮೂರನೆಯ ವರ್ಗದವರು ಹಾಲನ್ನು ಕುಡಿಯುವುದಿಲ್ಲ (33.8).

ಬಗೆ ಬಗೆಯ ಆಹಾರ ಪದಾರ್ಥಗಳ ಮೇಲಿನ ತಿಂಗಳ ವೆಚ್ಚವು ಒಂದು ತಿಂಗಳಿಗೆ ಮೊಟ್ಟೆಗಳಿಗೆ 43.6 ರೂಪಾಯಿಗಳಿಂದ ಮಾಂಸಕ್ಕೆ 137.4 ರೂ. ಗಳ ವ್ಯಾಪ್ತಿಯಲ್ಲಿತ್ತು. ಆದರೆ ಅಂಕಿ ಅಂಶಗಳಲ್ಲಿ ಬೃಹತ್ ಪ್ರಮಾಣದ ವ್ಯತ್ಯಾಸವಿತ್ತು.

ಆಹಾರದ ಮೇಲೆ ವ್ಯಯಿಸಿದ ಮೊತ್ತಗಳನ್ನು ತಂಬಾಕಿನ ಮೇಲೆ ವ್ಯಯಿಸಿದ ಮೊತ್ತಗಳಿಗೆ ಹೋಲಿಸಿದಾಗ ( ಕೋಷ್ಟಕ 3 ರಿಂದ) ಮಕ್ಕಳು ಪೋಷಕ ಆಹಾರಗಳಿಗಿಂತ ಹೆಚ್ಚು ತಂಬಾಕಿನ ಮೇಲೆ ವ್ಯಯಿಸುವುದು ಕಂಡು ಬರುತ್ತದೆ. ಮಕ್ಕಳು ಪ್ರತಿ ತಿಂಗಳು ಮಾಂಸಕ್ಕಿಂತ ಹೆಚ್ಚಾಗಿ ನಶ್ವಾರ್, ಮಾವ, ಸಿಗರೇಟ್‌ಗಳು, ಮತ್ತು ಗುಟ್ಕಾಗಳ

ಮೇಲೆ ವ್ಯಯಿಸುತ್ತಾರೆ. ಖರ್ಚು ಮಾಡುತ್ತಾರೆ. ಬಹುತೇಕ ಹಾಲಿನಷ್ಟೆ ಖೈನಿಗೂ; ಮಶೇರಿ ಹೊರತು ಪಡಿಸಿ ತಂಬಾಕಿನ ಎಲ್ಲ ಪ್ರಕರಣಗಳಿಗೆ ಹಣ್ಣು ಅಥವಾ ಮೊಟ್ಟೆಗಳಿಗಿಂತ ಹೆಚ್ಚು ಖರ್ಚುಮಾಡುತ್ತಾರೆ. ತಂಬಾಕಿನ ಖರ್ಚುವೆಚ್ಚಗಳಲ್ಲಿ ಇಳಿಮುಖ, ಅಂದರೆ ಈ ಬೀದಿ ಮಕ್ಕಳ ಆಹಾರ ಕ್ರಮದಲ್ಲಿ ಬೃಹತ್ ಪ್ರಮಾಣದ ಸುಧಾರಣೆಯೇ ಎಂದರ್ಥ ಎಂಬುದು ಸುಸ್ಪಷ್ಟ

## ಆರೋಗ್ಯದ ಪ್ರಮುಖ್ಯತೆ

ಈ ಬೀದಿ ಮಕ್ಕಳಲ್ಲಿ ಮೂರನೇ ಎರಡರಷ್ಟಕ್ಕೂ ಜಾಸ್ತಿ (70.8%) ತಿಳಿಸಿದ್ದೇನೆಂದರೆ ಅವರು 2001-2002ರ ವರ್ಷದಲ್ಲಿ ಖಾಯಿಲೆ ಬಿದ್ದರಂತೆ. ಅವರು ತಮ್ಮ ಚಿಕಿತ್ಸೆಗಾಗಿ ಸರಾಸರಿ 55 ರೂಪಾಯಿಗಳಂತೆ ಖರ್ಚು ಮಾಡಿದರಂತೆ. ಇದರ ವ್ಯಾಪ್ತಿ 0 ಯಿಂದ 700 ರೂಪಾಯಿಗಳು ಇತ್ತೆಂದು ತಿಳಿಸಿದರು. ಆರ್ಥಿಕ ಸಂಕಷ್ಟ ಸ್ಥಿತಿಗಳು ಮತ್ತು ವೈದ್ಯರ ಬಳಿ ಹೋಗಲು ಅವರಿಗಿರುವ ಭಯ ಅವರು ಚಿಕಿತ್ಸೆಗೆ ಒಳಗಾಗದಿದ್ದಕ್ಕೆ ಕಾರಣಗಳಾಗಿದ್ದವು.

ಈ ಮಕ್ಕಳು ಖಾಯಿಲೆ ಬಿದ್ದಾಗ ಅನುಭವಿಸುತ್ತಿದ್ದ ತೀರ ಸಾಮಾನ್ಯ ವ್ಯಾಧಿಗಳೆಂದರೆ ಶೀತ ಮತ್ತು ಜ್ವರ (33%) ಕೆಮ್ಮು (18%) ಮತ್ತು ನಿಶ್ಯಕ್ತತೆ ಮತ್ತು ತಲೆಸುತ್ತುವಿಕೆ (14%). 10% ಕ್ಕಿಂತ ಕಡಿಮೆ - ವಾಂತಿಯಿಂದ ನರಳುವ, ಅತಿಸಾರ, ಜಾಂಡಿಸ್, ಕ್ಷಯ ಮತ್ತು ಇತರ ತೊಂದರೆಗಳಾಗಿದ್ದವು. ಖಾಯಿಲೆಗಳಿಗೆ ಕಾರಣಗಳು ಪ್ರಾಯಶಃ ಅನಾರೋಗ್ಯಕರ ಬದುಕು ಮತ್ತು ಕಾರ್ಯವ್ಯಾಪ್ತಿಯ ಸ್ಥಿತಿಗತಿಗಳು, ಕಳಪೆ ಆಹಾರ ಕ್ರಮ ಮತ್ತು ಪದೇ ಪದೇ ಉಪಯೋಗಿಸುವ ತಂಬಾಕು ಮತ್ತು ಇತರೆ ಮಾದಕ ವಸ್ತುಗಳಿರಬಹುದು.

## ತಂಬಾಕು ಬಳಕೆಯ ದುಷ್ಪರಿಣಾಮಗಳು

ತಂಬಾಕು ಬಳಕೆಯಿಂದ ತಮ್ಮ ಆರೋಗ್ಯದ ಮೇಲೆ ಯಾವುದಾದರೂ ದುಷ್ಪರಿಣಾಮ ಉಂಟಾಗಿತ್ತು ಎಂದು ಪ್ರತಿಪ್ರೇಕ್ಷಕರನ್ನು ಪ್ರಶ್ನಿಸಲಾಯಿತು. ಈ ಕೆಳಕಂಡ ಕೋಷ್ಟಕದಲ್ಲಿ ತೋರಿಸಿರುವಂತೆ, ತಂಬಾಕು ಬಳಕೆಯಿಂದ ಅನೇಕ ಬಗೆಯ ಸಮಸ್ಯೆಗಳನ್ನು ಎದುರಿಸಿರುವುದಾಗಿ ಈ ಮಕ್ಕಳು ವರದಿ ನೀಡಿದರು. ಅವರು ತಿಳಿಸಿದ ತೀರ ಸಾಮಾನ್ಯ ಸಮಸ್ಯೆಗಳೆಂದರೆ (22%) ಕೆಮ್ಮು, ನಿಶ್ಯಕ್ತಿ (15%), ಬಾಯಿ ಹುಣ್ಣು (14%) ಮತ್ತು ಉಸಿರಾಟದ ತೊಂದರೆಗಳಾಗಿದ್ದವು (12%).

**ಕೋಷ್ಟಕ 7** : ತಂಬಾಕಿನ ದುಷ್ಪರಿಣಾಮಕ್ಕೆ ಒಳಗಾದ ಮಕ್ಕಳ ಪ್ರತಿಶತ ವರದಿ

| ವರದಿಸಿದ ಸಮಸ್ಯೆ | ಶೇಕಡ |
|---|---|
| ಕೆಮ್ಮು | 22 |
| ಬಾಯಿ ಹುಣ್ಣು | 14 |
| ಬಾಯಿ ತೆರೆಯಲು ಕಷ್ಟವಾಗುವುದು | 7 |
| ನಿಶ್ಯಕ್ತಿ | 15 |
| ತಲೆ ತಿರುಗುವಿಕೆ | 7 |
| ವಾಂತಿ | 8 |
| ಉಸಿರಾಟದ ತೊಂದರೆಗಳು | 12 |
| ಇತರೆ (ಹೊಟ್ಟೆನೋವು, ಎದೆನೋವು, ಕ್ಷಯ, ದಂತ ಸಮಸ್ಯೆಗಳು, ತಲೆನೋವು) | 5 |

**ಇತರೆ ಪದಾರ್ಥಗಳ ಮೇಲಿನ ತಿಂಗಳ ವೆಚ್ಚಗಳು**

ಇತರೆ ಖರ್ಚು ವೆಚ್ಚಗಳ ಬಗ್ಗೆ ವಿಚಾರಿಸಿದಾಗ, ಬಟ್ಟೆ (73%) ಮತ್ತು ಸಿನಿಮಾಗಳು (ಪ್ರತಿ ಪ್ರೇಕ್ಷಕರಲ್ಲಿ 85%) ಹಣವನ್ನು ಖರ್ಚು ಮಾಡುತ್ತಿದ್ದ ಸರ್ವ ಸಾಮಾನ್ಯ ಬಾಬ್ತುಗಳಾಗಿದ್ದವು. ಕೇವಲ 37% ಹಣ ಉಳಿತಾಯ ಮಾಡುವುದು, 37% ಜೂಜಿನ ಮೇಲೆ ವ್ಯಯಿಸುವುದು ಮತ್ತು ಕೇವಲ 2% (9 ಜವಾಬುದಾರರ) ಹಣವನ್ನು ವ್ಯಾಪಾರದಲ್ಲಿ ತೊಡಗಿಸುವುದು ತಿಳಿದು ಬಂದಿತು. ಆ ಪದಾರ್ಥಗಳ ಮೇಲೆ ಹಣ ಖರ್ಚು ಮಾಡುವವರಿಗೆ ತಿಂಗಳಿಗೆ ತಗುಲುವ ವೆಚ್ಚಗಳ ಸರಾಸರಿ ಮೊತ್ತಗಳು, ಬಟ್ಟೆಗೆ 105 ರೂ.ಗಳು ಮತ್ತು ಸಿನಿಮಾಕ್ಕೆ 161 ರೂ.ಗಳಿಂದ ಹಿಡಿದು ಕೆಲವು ವ್ಯಾಪಾರದಲ್ಲಿ ತೊಡಗಿಸಲು ಸರಾಸರಿ 522 ರೂ.ಗಳ ವ್ಯಾಪ್ತಿಯಲ್ಲಿರುತ್ತದೆ.

**ಕೋಷ್ಟಕ 8**

ತಂಬಾಕು ಮತ್ತು ಆಹಾರವನ್ನು ಬಿಟ್ಟು / ಹೊರತು ಪಡಿಸಿ ಇತರ ಪದಾರ್ಥಗಳ / ವಸ್ತುಗಳ ಮೇಲಿನ ತಿಂಗಳ ಸರಾಸರಿ ವೆಚ್ಚಗಳು.


| ಖರ್ಚು ವೆಚ್ಚದ ಕ್ಷೇತ್ರಗಳು (ಮತ್ತು ಆ ಖರ್ಚುವೆಚ್ಚಗಳನ್ನು ಮಾಡುವ ಪ್ರತಿಶತ ವರದಿ) | ಆ ವೆಚ್ಚಗಳನ್ನು ಮಾಡುವವರ ತಿಂಗಳ ಸರಾಸರಿ ಮೊತ್ತ ರೂ.ಗಳಲ್ಲಿ |
|---|---|
| ಸಿನಿಮಾ (84.8%) | 161 |
| ಬಟ್ಟೆ/ ವಸ್ತುಗಳು (73.3%) | 105 |
| ಉಳಿತಾಯ (73.3%) | 104 |
| ಜೂಜು (37.3%) | 104 |
| ಸಂತೋಷ ಕೂಟಗಳು (30.3%) | 160 |
| ಲೈಂಗಿಕ ಕಾರ್ಮಿಕರ ಭೇಟಿ (10%) | 229 |
| ಲಂಚ (4.5%) | 182 |
| ವ್ಯಾಪಾರದಲ್ಲಿ ತೊಡಗಿಸುವುದು (2.3%) | 522 |

ಪುನಃ ಈ ಅಂಕಿ ಅಂಶಗಳನ್ನು ತಂಬಾಕು ಖರೀದಿಗಳೊಂದಿಗೆ ತುಲನೆ ಮಾಡಿದಾಗ, ಮಕ್ಕಳು, ಪ್ರತಿ ತಿಂಗಳು ಬಟ್ಟೆಗಿಂತ ಗುಟ್ಕಾ, ಬೀಡಿ, ಸಿಗರೇಟ್, ಪಾನ್, ನಶ್ವಾರ್, ಮತ್ತು ಮಾವಗಳ ಮೇಲೆ ಹೆಚ್ಚು ವ್ಯಯ ಮಾಡುವುದು ಕಾಣ ಬರುತ್ತದೆ. ಬಹುಪಾಲು ಮಕ್ಕಳು ತಂಬಾಕು ಸೇವನೆಗೆ ತುತ್ತಾಗಿರುವುದರಿಂದ ಅವರಲ್ಲಿ ಬೆರಳೆಣಿಕೆಯಷ್ಟೇ ಹಣ ಉಳಿತಾಯ ಮಾಡುವುದು ಅಥವಾ ವ್ಯಾಪಾರದಲ್ಲಿ ತೊಡಗಿಸುವುದು. ತಂಬಾಕಿನಿಂದ ಉಳಿತಾಯ ಅಥವಾ ವ್ಯಾಪಾರದಡಿಗಿನ ಪರಿವರ್ತನೆ ಈ ಮಕ್ಕಳ ಭವಿಷ್ಯಗಳನ್ನು ನಿರ್ಮಾಣ ಮಾಡುವ ಭರವಸೆಯ ಮೇಲೆ ಮಹತ್ತರವಾದ ಪರಿಣಾಮವನ್ನುಂಟು ಮಾಡಬಲ್ಲದು.

**ತಂಬಾಕು ಮತ್ತು ಇತರೆ ಪದಾರ್ಥಗಳು ಮೇಲಿನ ತಿಂಗಳ ಸರಾಸರಿ ವೆಚ್ಚಗಳು :**

## ಪರಿಸಮಾಪ್ತಿ

ಈ ನಾಲ್ಕು ನೂರು ಮುಂಬೈನ ಬೀದಿ ಮಕ್ಕಳಿಗೆ ತಂಬಾಕು ಬಳಕೆಯ ಜೀವನದ ಒಂದು ಅಂಗವಾಗಿದೆ. ಸೇದಿ ಬಿಸಾಡಿದ ಮೋಟು/ತುಂಡು ಬೀಡಿ ಮತ್ತು ಸಿಗರೇಟ್‌ಗಳನ್ನು ಆಯ್ದುಕೊಂಡು ಈ ಮಕ್ಕಳು ತಂಬಾಕು ಸೇವನೆ ಪ್ರಾರಂಭಿಸಿ, ಬಹುಬೇಗನೆ ತಂಬಾಕು ಉತ್ಪನ್ನಗಳನ್ನು ಕೊಳ್ಳಲು ಮುಂದಾಗುತ್ತಾರೆ ಹಾಗೂ ತಮ್ಮ ಕಡಿಮೆ ಆದಾಯದ ಗುರುತರವಾದ ಮೊತ್ತವನ್ನುತಂಬಾಕಿನ ಮೇಲೆ ವ್ಯಯಿಸುತ್ತಾರೆ. ಈ ಮಕ್ಕಳು ಪ್ರತಿ ತಿಂಗಳು ಆಹಾರ ಮತ್ತು ವಿವಿಧ ಬಗೆಯ ಪೋಷಾಕಾಂಶ ಆಹಾರ ಪದಾರ್ಥದ ಮೇಲೆ ಬಹಳ ಕಡಿಮೆ ಖರ್ಚುಮಾಡಿದರೆ, ವಿವಿಧ ಬಗೆಯ ತಂಬಾಕು ಉತ್ಪನ್ನಗಳ ಮೇಲಿನ ವೆಚ್ಚವು ಸಾಪೇಕ್ಷವಾಗಿ ಹೆಚ್ಚಾಗಿರುತ್ತದೆ. ಮಕ್ಕಳು ತಂಬಾಕು ಬಳಕೆಯಿಂದ ಆರೋಗ್ಯದ ಮೇಲೆ ಉಂಟಾದ ದುಷ್ಪರಿಣಾಮಗಳ ಒಂದು ಸರಮಾಲೆಯ ಬಗ್ಗೆ ತಿಳಿಸಿದ್ದರು ಮತ್ತು ವೈದ್ಯರನ್ನು ಕಾಣಲು ಹೆಚ್ಚಿನ ಪ್ರಮಾಣದ ಹಣವನ್ನು ವ್ಯಯಿಸುತ್ತೇವೆಂದು ಹೇಳಿದರು. ಬೀದಿ ಮಕ್ಕಳು ಎದುರಿಸುವ ಸಮಸ್ಯೆಗಳಲ್ಲಿ ತಂಬಾಕು ಬಳಕೆಯ ದಿಟವಾಗಿ ಅತಿಮುಖ್ಯವಾದರಲ್ಲಿ ಆದರೆ ಅವರ ಸಮಗ್ರ ದುರ್ಗತಿಗೆ ದೇಣಿಗೆ ನೀಡುವ ಕಾರಣಂಶಗಳಲ್ಲಿ ಒಂದಾಗಿದೆ. ತಂಬಾಕು ಬಳಕೆಯು ದಿನ ನಿತ್ಯ ಈ ಮಕ್ಕಳ ವಿರಳ ಸಂಪನ್ಮೂಲಗಳನ್ನು ಕಸಿಯುತ್ತದೆ. ಅಷ್ಟೇ ಅಲ್ಲ ಅದು ಇನ್ನು ಹೆಚ್ಚಾಗಿ ಈ ಮಕ್ಕಳು ತಮ್ಮ ಭವಿಷ್ಯದಲ್ಲಿ ತೊಡಗಿಸಬಹುದಾದ ಸಾಮರ್ಥ್ಯವನ್ನು ಕುಂದುವಂತೆ ಮಾಡುತ್ತದೆ. ತಂಬಾಕು ಈ ಮಕ್ಕಳನ್ನು ಬಡತನದಲ್ಲಿಯೇ ಪೋಷಿಸಿಕೊಂಡು ಬರುವ ಜೀವಿಸಿದ ವೈಶಿಷ್ಟ್ಯಗಳಲ್ಲಿ ಮತ್ತೊಂದಾಗಿದೆ.



# ಮೂಲಭೂತ ಅವಶ್ಯಕತೆಗಳನ್ನು ಮೀರಿ ತಂಬಾಕಿಗೆ ಅರ್ಹ ಮಾನ್ಯತೆ ಕೊಡುವ ಭಾರತದ ಮುಂಬೈ ನಗರದ ಪರಸ್ಪಂದಿ ವಾಸಿಗರು

ಸಾಲೋಮಿ ಷಾ ಮತ್ತು ಶೈಲೇಶ್ ವೈತೆ, ಸಲಹಾಗಾರರು

**ಸಂಪಾದಕೀಯ**

ಈ ಕೆಳಗಿನ ಲೇಖನವು ಭಾರತದ ಮುಂಬೈ ನಗರದ ಪರಸ್ಪಂದಿ ವಾಸಿಗರ ಸಂಶೋಧನಾ ಸಮೀಕ್ಷೆಯಿಂದ ಪಡೆದ ಸತ್ಯಾಂಶಗಳನ್ನು ಮಂಡಿಸುತ್ತದೆ. ಬಡವರಲ್ಲಿಯೇ ಬಡವರಾದ ಈ ಜನರಿಗೆ ಸರಿಯಾದ ವಸತಿಯಿಲ್ಲ ಮತ್ತು ಆದಾಯದ ಮೂಲವೇ ಇಲ್ಲ, ಆದರೂ ತಂಬಾಕಿನ ಉತ್ಪನ್ನದ ಮೇಲೆ ತಮ್ಮ ಗಳಿಕೆಯ ಬೃಹತ್ ಪ್ರಮಾಣದ ಮೊತ್ತವನ್ನು ಖರ್ಚುಮಾಡುತ್ತಾರೆ. ಈ ಅಧ್ಯಯನವನ್ನು ಮುಂಬೈ ನಗರದ ದುರ್ಬಲ ಜನಾಂಗಗಳೊಂದಿಗೆ ಅನ್ಯೋನ್ಯವಾಗಿ ಕೆಲಸ ನಿರ್ವಹಿಸುವ ಆಶ್ರಯ ಡಾನ ಬಾಸ್ಕೋದ ಸಹಯೋಗದೊಂದಿಗೆ ಕೈಗೊಳ್ಳಲಾಗಿದೆ.

**ಅಧ್ಯಯನದ ಹಿನ್ನಲೆ**

**ಸಂಶೋಧನೆಯ ಧ್ಯೇಯೋದ್ದೇಶಗಳು**

ಭಾರತದ ಮುಂಬೈ ನಗರದ ಪರಸ್ಪಂದಿ ವಾಸಿಗಳ ಯೋಗಕ್ಷೇಮ ಮತ್ತು ಆರ್ಥಿಕ ಸ್ಥಾನ ಮಾನದ ಮೇಲೆ ತಂಬಾಕು ಬಳಕೆಯ ಮಹತ್ತರವಾದ ಪರಿಣಾಮದ ಬಗ್ಗೆ ಅರ್ಥ ಮಾಡಿಕೊಳ್ಳುವುದು ಈ ಅಧ್ಯಯನದ ಸಮಗ್ರ ಉದ್ದೇಶವಾಗಿತ್ತು. ಈ ಸಂಶೋಧನೆಯ ನಿರ್ದಿಷ್ಟ ಗುರಿಗಳನ್ನು ಸಾಮಾಜಿಕ ಕಾರ್ಯಕರ್ತರು ಮತ್ತು ಪರಸ್ಪಂದಿ ವಾಸಿಗಳೊಂದಿಗೆ ಕೆಲಸ ಮಾಡುವ ಬೀದಿ ಶಿಕ್ಷಕರೊಂದಿಗೆ ಚರ್ಚೆಗಳ ಮೂಲಕ ಅಂಗೀಕರಿಸಲಾಯಿತು.

**ನಿರ್ದಿಷ್ಟವಾದ ಸಂಶೋಧನ ಉದ್ದೇಶಗಳೆಂದರೆ :**

1. ಭಾರತದ ಮುಂಬೈ ನಗರದ ಪರಸ್ಪಂದಿ ವಾಸಿಗಳಲ್ಲಿನ ತಂಬಾಕು ಬಳಕೆಯ ವ್ಯಾಪ್ತಿಯನ್ನು ಕೂಲಂಕುಶವಾಗಿ ಪರಿಶೋಧಿಸುವುದು.

2. ಮುಂಬೈ ಪರಸ್ಪಂದಿ ವಾಸಿಗಳಲ್ಲಿನ ತಂಬಾಕು ಸಂಬಂಧಿ ವೆಚ್ಚಗಳನ್ನು ಮೌಲ್ಯ ಮಾಪನ ಮಾಡುವುದು. (ಬೆಲೆ ನಿರ್ಧರಿಸುವುದು).

3. ಈ ಗುಂಪಿನ ತಂಬಾಕಿನ ಖರ್ಚು ವೆಚ್ಚಗಳನ್ನು ಮೂಲಭೂತ ಅಗತ್ಯಗಳಾದಂತಹ ಆಹಾರ ಮತ್ತು ಆರೋಗ್ಯದ ಮೇಲೆ ಮಾಡುವ ವೆಚ್ಚದೊಂದಿಗೆ ತುಲನೆ ಮಾಡುವುದು.

## ಕಾರ್ಯಕಾರಿ ವ್ಯಾಖ್ಯಾನಗಳು

ಒಬ್ಬ ಪರಸ್ಪಂದಿ ವಾಸಿಗ ಎಂದರೆ ರಸ್ತೆ ಬದಿಯಲ್ಲಿ ಠಿಕಾಣಿ ಹೂಡಿರುವ ಕುಟುಂಬದ ಸದಸ್ಯರೊಂದಿಗೆ ವಾಸ ಮಾಡುವವನು. ಪರಸ್ಪಂದಿ ವಾಸಿಗನಿಗೆ ವಾಸಸ್ಥಳಕ್ಕೆ ಸಂಬಂಧ ಪಟ್ಟಂತೆ ಯಾವುದೇ ಕಾನೂನು ಬೆಂಬಲ ವಿರುವುದಿಲ್ಲ. ಸಾಮಾನ್ಯವಾಗಿ ಪರಸ್ಪಂದಿ ವಾಸಿಗ ಗೋಡೆಗಳಿಲ್ಲದ, ಕೆಲವೇ ಬಿದುರುಗಳ ಮೇಲೆ ಆಧಾರಭೂತವಾದ ಪ್ಲಾಸ್ಟಿಕ್ ಹಾಳೆಗಳ ಮೇಲ್ಛಾವಣಿಯನ್ನು ಹೊಂದಿರುವ ಕಚ್ಚಾ ಮನೆಯಲ್ಲಿ ವಾಸಮಾಡುತ್ತಾನೆ.

ಅವುಗಳು ಕಳಪೆ ಗುಣಮಟ್ಟದ ವಸ್ತುಗಳಾಗಿದ್ದು ಭಾರಿ ಮಳೆ ಅಥವಾ ಒಮ್ಮೆಲೆ ಬೀಸುವ ರಭಸದ ಗಾಳಿಯಿಂದ ಸುಲಭವಾಗಿ ಹಾಳಾಗಬಹುದಾದಂತಗಳಾಗಿರುತ್ತವೆ.

## ಮಾದರಿ

ಈ ಅಧ್ಯಯನದ ಗುಂಪು ಮುಂಬೈ ನಗರದ ವಾಡಾಲ ಪ್ರದೇಶದಲ್ಲಿ ವಾಸಿಸುವ ಪರಸ್ಪಂದಿ ವಾಸಿಗಳ ಕುಟುಂಬಗಳನ್ನು ಒಳಗೊಂಡಿದೆ. ವಾಡಾಲದ ರಸ್ತೆ ಬದಿಗಳಲ್ಲಿ ವಾಸಿಸುವ ಅಂದಾಜು 983 ಕುಟುಂಬಗಳಿಂದ ಆಶ್ರಯ ಡಾನ್ ಬಾಸ್ಕೋದ ಕಾರ್ಯಕರ್ತರಿಂದ ಸಂಗ್ರಹಿಸಿದ ಮಾಹಿತಿ ಪ್ರಕಾರ, ಒಟ್ಟು 400 ಜನರನ್ನು ಈ ಸಮೀಕ್ಷೆಗೆ ಆಯ್ದುಗೊಳ್ಳಲಾಯಿತು.

## ಮಾಹಿತಿ ಸಂಗ್ರಹಣೆ

ಈ ಅಧ್ಯಯನದ ಉದ್ದೇಶಗಳನ್ನು ಆಧಾರವಾಗಿಟ್ಟುಕೊಂಡು ಒಂದು ಸಂದರ್ಶನ ಕಾರ್ಯ ಸೂಚಿಯನ್ನು ಸಿದ್ಧಪಡಿಸಲಾಯಿತು. ನೈಜ್ಯವಾದ ಮಾಹಿತಿ ಸಂಗ್ರಹಣೆ ಮಾಡುವುದಕ್ಕಿಂತ ಮೊದಲು ಈ ಸಂದರ್ಶನ ಕಾರ್ಯಸೂಚಿಯನ್ನು ಪೂರ್ವ ಪರೀಕ್ಷೆಗೊಳಪಡಿಸಿ ಪರಿಷ್ಕರಿಸಲಾಯಿತು. ಹಿಂದಿ ಮತ್ತು ಮರಾಠಿ ಭಾಷೆಯಲ್ಲಿ ವಾಕ್ಚಾತುರ್ಯವುಳ್ಳ ಎಂಟು ಮಂದಿ ಮಾಹಿತಿ ಸಂಗ್ರಹಣೆ ತರಬೇತಿಯನ್ನು ಪಡೆದವರಿಂದ ಈ ಸಮೀಕ್ಷೆಯನ್ನು ನಡೆಸಲಾಯಿತು. ಈ ಸಂದರ್ಶನಗಳನ್ನು ಪ್ರತಿ ಜವಾಬುದಾರರ ಮನೆಯಲ್ಲಿ ನಡೆಸಿ ಮಾಹಿತಿಯನ್ನು ಸಂಗ್ರಹಿಸಲಾಯಿತು. ತದನಂತರ ದತ್ತಾಂಶವನ್ನು ಪರಿಶೀಲಿಸಿ ಅಪೂರ್ಣ ಮಾಹಿತಿಗಳನ್ನು ಕೈಬಿಡಲಾಯಿತು. ಎಸ್.ಪಿ.ಎಸ್.ಎಸ್. ಸೂಕ್ಷ್ಮ ತಂತ್ರಾಂಶವನ್ನು (ಸಾಫ್ಟ್‌ವೇರ್) ಉಪಯೋಗಿಸಿ ದತ್ತಾಂಶವನ್ನು ಸಂಸ್ಕರಿಸಲಾಯಿತು. ಈ ಅಧ್ಯಯನದಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಪೂರ್ಣಗೊಳಿಸಲು ಅಂತರ್ಜಾಲವು ಒಳಗೊಂಡಂತೆ ಅನೇಕ ಮೂಲಗಳಿಂದ ಪಡೆದ ದ್ವಿತೀಯ ದತ್ತಾಂಶವನ್ನು ಉಪಯೋಗಿಸಿಕೊಳ್ಳಲಾಯಿತು.

## ಚರ್ಚೆ ಮತ್ತು ಫಲಿತಾಂಶಗಳು

ಈ ಅಧ್ಯಯನದಲ್ಲಿ ಕಾರ್ಯ ನಿರ್ವಾಹಕ ಸನ್ನಿವೇಶ, ಆದಾಯದ ಮಟ್ಟ, ತಂಬಾಕು ಬಳಕೆ ಮತ್ತು ವೆಚ್ಚಗಳು ಹಾಗೂ ಮುಂಬೈ ನಗರದ ಬೀದಿ ವಾಸಿಗಳ ಆಹಾರ ಮತ್ತು ಇತರೆ ಪದಾರ್ಥಗಳ ಮೇಲಿನ ಖರ್ಚುವೆಚ್ಚಗಳ ಬಗೆಗೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಅಧ್ಯಯನವು ತಂಬಾಕು ಬಳಕೆಯಿಂದ ತಮ್ಮ ಆರೋಗ್ಯದ ಮೇಲೆ ಉಂಟಾದ ದುಷ್ಪರಿಣಾಮಗಳ ಬಗೆಗಿನ ಅವರ ಕಾಳಜಿ ಮತ್ತು ಕಳವಳ ಹಾಗೂ ಇತರೆ ಆರೋಗ್ಯ ಸಮಸ್ಯೆಗಳ ಅನುಭವವನ್ನು ಒಳಗೊಂಡಿದೆ.

## ಮುಂಬೈ ನಗರದ ಬೀದಿ ವಾಸಿಗಳ ಪಾರ್ಶ್ವನೋಟ 2002

### ಹಿನ್ನಲೆ ಮಾಹಿತಿ

400 ಪರಸ್ಪಂದಿ ವಾಸಿ ಸಂದರ್ಶಾನಾರ್ಥಿಗಳು ಬಹುಪಾಲು ಸರಾಸರಿ 33 ವರ್ಷ ವಯಸ್ಸಿನ ಪುರುಷರಾಗಿದ್ದರು (835). ಬಹುಪಾಲು (77%) ವಿವಾಹಿತರು, 11% ವಿದುರರು. 9% ಆಜನ್ಮ ಬ್ರಹ್ಮಚಾರಿಗಳು ಹಾಗೂ ವಿಚ್ಛೇದಿತರು ಅಥವಾ ಬೇರ್ಪಟ್ಟವರು ಬೆರಳಣಿಕೆಯಷ್ಟಿದ್ದರು.

ಈ ಮಾದರಿಯ ಅರ್ಧಕ್ಕಿಂತ ಹೆಚ್ಚು (53%) ಗ್ರಾಮೀಣ ಮಹಾರಾಷ್ಟ್ರದಿಂದ ವಲಸೆ ಬಂದವರಾಗಿದ್ದರು (ಮುಂಬೈಯನ್ನು ರಾಜಧಾನಿಯನ್ನು ಒಳಗೊಂಡ ರಾಜ್ಯ). ಉಳಿದವರು ಭಾರತದ ಇತರೆ ಭಾಗಗಳಿಂದ ಬಂದಿದ್ದರು.

ಜವಾಬುದಾರರಲ್ಲಿ ಬಹುತೇಕ (70%) ಹಿಂದುಗಳಾಗಿದ್ದರು, ನಂತರ ಮುಸ್ಲಿಮ್ಸ್ ( 19%) ಕ್ರೈಸ್ತರು (2.3%) ನವಬೌದ್ದರು (4.3%) ಮತ್ತು ಸಿಕ್ಕರು (0.5%) ಆಗಿದ್ದರು. ತಮ್ಮ ಜಾತಿಗಳಿಗೆ ಸಂಬಂಧ ಪಟ್ಟಂತೆ ಅವರಲ್ಲಿ ಅತಿಯಾದ ವಿಷಮಾಂಗಿಯತೆ (ಅನದೃಶ್ಯತೆ / ವಿವಿದ್ಯತೆ) ಇರುವುದು ಕಂಡು ಬಂದಿತು. ಅರ್ಧಕ್ಕಿಂತ ಹೆಚ್ಚು (53%) ಜವಾಬುದಾರರು ಅನಕ್ಷರಸ್ಥರಾಗಿದ್ದರು, 11% ಮೂಲಭೂತ ಸಾಕ್ಷರತೆಯನ್ನು ಹೊಂದಿದ್ದರು, 15% ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ್ದರು ಮತ್ತು 11% ಹಿರಿಯ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ್ದರು.

### ಪರಸ್ಪಂದಿ ವಾಸಿಗಳ ಆರ್ಥಿಕ ಪಾರ್ಶ್ವನೋಟ


ನಿರ್ಮಾಣ ಕಾರ್ಯ, ಸಣ್ಣ ಪುಟ್ಟ ವಸ್ತುಗಳನ್ನು ಮಾರುವುದು, ವಾದಿ ಕಾರ್ಯ (ಮದುವೆ ವೇದಿಕೆ ನಿರ್ಮಿಸುವುದು, ಮದುವೆ ಮತ್ತು ಇತರೆ ಸಭೆ ಸಮಾರಂಭಗಳಿಗೆ ಸಂಬಂಧ ಪಟ್ಟ ಕೆಲಸಗಳನ್ನು ನಿರ್ವಹಿಸುವುದು), ಮನೆಗೆಲಸ, ಚಿಂದಿ ಆರಿಸುವ ಕಾರ್ಯ (ಕಾರ್ಖಾನೆಯ ಬಳಕೆಗೆ ಚಿಂದಿ ಬಟ್ಟೆಗಳನ್ನು ಆರಿಸುವುದು) ಮುಂತಾದವುಗಳು ಅತಿ ಸಾಮಾನ್ಯವಾದ ಕಸುಬುಗಳಾಗಿದ್ದವು. ಬಹುತೇಕ ಎಲ್ಲರು ಅರೆಬರೆ ನೈಪುಣ್ಯತೆ ಇರುವ ಮತ್ತು ನೈಪುಣ್ಯತೆ ಇಲ್ಲಿನ ಕೆಲಸಗಳಲ್ಲಿ ತೊಡಗಿದ್ದರು.

ಅರ್ಧಕ್ಕಿಂತ ಹೆಚ್ಚು (56%) ಜವಾಬುದಾರರು ದಿನವೊಂದಕ್ಕೆ 50% ರೂ. ಗಳಿಗಿಂತ ಕಡಿಮೆ ಆದಾಯಗಳಿಸುತ್ತಿದ್ದರು. ಮತ್ತೊಂದು ಗುಂಪು 34% ದಿನಕ್ಕೆ 50-100 ರೂ.ಗಳನ್ನು ಮತ್ತು 7% ಹೆಚ್ಚಿನವರು 101-150 ರೂ.ಗಳನ್ನು ದಿನವೊಂದಕ್ಕೆ ಗಳಿಸುತ್ತಿದ್ದರು. ಕೇವಲ ನಾಲ್ಕು ಜವಾಬುದಾರರು ದಿನ ಒಂದಕ್ಕೆ 200/- ರೂ.ಗಳನ್ನು ಗಳಿಸುತ್ತೇವೆಂದು ವರದಿಸಿದರು.

**ಕೋಷ್ಟಕ 1 :  ಪರಸ್ಪಂದಿ ವಾಸಿಗರ ಕಸಬು**

| ಕಸಬು | ಶೇಕಡ |
|---|---|
| ನಿರ್ಮಾಣ ಕಾರ್ಮಿಕ | 18.8 |
| ಸಣ್ಣಪುಟ್ಟಸಾಮಾನುಗಳನ್ನುಮಾರುವುದು | 11.3 |
| ವಾಡಿ ಕಾರ್ಮಿಕ | 9.0 |
| ಗೃಹ ಕಾರ್ಮಿಕ | 7.8 |
| ಚಿಂದಿ ಕಾರ್ಮಿಕ | 7.0 |
| ಇತರೆ | 5.5 |
| ಕಿವಿ ಶುಚಿಗೊಳಿಸುವವ | 5.3 |
| ಗಿಡಮೂಲಿಕೆ ಮಾರುವವ | 4.3 |
| ಹೊರೆಯಾಳು | 4.3 |
| ವರ್ಣಲೇಪನ | 4.0 |
| ಸೇವೆ | 3.5 |
| ಕಾಗದ ಸಂಗ್ರಹಣೆ | 3.0 |
| ಕಾರ್ ಕ್ಲೀನರ್ / ಕಾಲೇಜು ಕಾರ್ಮಿಕ | 2.8 |
| ಕೂಲಿ | 2.8 |
| ಉಪಹಾರದ ಏರ್ಪಾಡು | 2.5 |
| ಚಾಲಕ | 2.5 |
| ಮೋಚಿ | 1.3 |
| ಮಿಶ್ರ ಮಾಂಗಿಯ (ಗೊಂಬೆಗಳನ್ನು ಮಾಡಿ ಮಾರಾಟಮಾಡುವುದು, ನೈಪುಣ್ಯದ ಕೆಲಸ, ಮೀನು ಮಾರಟ, ಕ್ಲೀನರ್, ವಿದ್ಯುಚ್ಛಕ್ತಿ ದುರಾಸ್ತಿಗಾರ, ಬೂಟಿಗೆ ಮೆರಗು ಕೊಡುವವ, ಕ್ಷೌರಿಕ) | 4.3 |

ದಿನನಿತ್ಯ ಆದಾಯದ ವರ್ಗದಲ್ಲಿ ಪರಸ್ಪರ ವಾಸಿಗಳ ಶೇಕಡವಾರು



## ತಂಬಾಕು ಬಳಕೆ

ಬಹುಸಂಖ್ಯಾ ಜವಾಬುದಾರರು (86%) ತಾವು ತಂಬಾಕು ಬಳಸುತ್ತಿರುವುದಾಗಿ ವರದಿ ನೀಡಿದರು. ಇಡೀ ಮಾದರಿಯಲ್ಲೇ 10% ಕಡಿಮೆಯವರು ತಂಬಾಕನ್ನಾಗಲೀ ಅಥವಾ ಇತರೆ ಮಾದಕ ವಸ್ತುಗಳನ್ನಾಗಲೀ ಸೇವಿಸುತ್ತಿಲ್ಲ.

ಕೋಷ್ಟಕ 2 ರಲ್ಲಿ ಕಾಣುವಂತೆ, ತಂಬಾಕಿನಲ್ಲೆ ಹೆಚ್ಚು ಜನಪ್ರಿಯ ಪ್ರಕಾರವೆಂದರೆ ಕಚ್ಚಾ ರೂಪದಲ್ಲಿರುವ ಸಾದಾ ತಂಬಾಕು. ಇದನ್ನು ಅರ್ಧ ಸಂದರ್ಶನಾರ್ಥಿಗಳು ಬಳಸುತ್ತಾರೆ. ಜನರು ತಂಬಾಕನ್ನು ದಿನಕ್ಕೆ ಸರಾಸರಿ 5 ಬಾರಿಗಿಂತ ಹೆಚ್ಚು ಬಳಸುತ್ತಿದ್ದರು. ಜೊತೆಗೆ 30% ಕ್ಕಿಂತ ಹೆಚ್ಚು ಬೀಡಿ ಸೇದುತ್ತಿದ್ದರು (ದಿನಕ್ಕೆ ಸರಾಸರಿ 11.5 ಬೀಡಿಗಳು), 24% ಪಾನ್ (ದಿನಕ್ಕೆ ಸರಾಸರಿ 39 ಬಾರಿ), 20% ಗುಟ್ಕಾ (ದಿನಕ್ಕೆ ಸರಾಸರಿ 7.5 ಚೀಲಗಳು ) ಮತ್ತು 10% ಮಶೇರಿ (ದಿನಕ್ಕೆ ಸರಾಸರಿ 1.5 ಬಾರಿ) ಉಪಯೋಗಿಸುತ್ತಿದ್ದರು.

ಕೇವಲ 8% ಸಿಗರೇಟ್ ಸೇವನೆ ಮಾಡುತ್ತಿದ್ದರು (ದಿನಕ್ಕೆ ಸರಾಸರಿ 4.9 ಸಿಗರೇಟ್‌ಗಳು), ಇವರು ಸೇವಿಸಿದ ಸಿಗರೇಟುಗಳು ಅತಿ ವ್ಯಾಪಕವಾಗಿ ಪ್ರಚಾರ ಮಾಡಿದಂತಹ ಕೆಲವು ಸಿಗರೇಟುಗಳಾಗಿದ್ದವು. 0.5% ಮತ್ತು 3% ನಷ್ಟು ತಂಬಾಕಿನ ಇತರೆ ಪ್ರಕಾರಗಳನ್ನು ಬಳಸಿದ್ದು ತಿಳಿದು ಬಂತು. (ಮಾವ, ಖೈನಿ ಮತ್ತು ನಶ್ವಾರ್ ಸಮೇತ).

**ಕೋಷ್ಟಕ 2** : ಜನರು ಉಪಯೋಗಿಸುವ ವಿಭಿನ್ನ ಬಗೆಯ ತಂಬಾಕು ಉತ್ಪನ್ನಗಳ ಶೇಕಡವಾರು

| ತಂಬಾಕು ಉತ್ಪನ್ನ | ಪ್ರತಿ ಉತ್ಪನ್ನವನ್ನು ಉಪಯೋಗಿಸು | ನಿತ್ಯ ಉಪಯೋಗಿಸುವ ಪ್ರಮಾಣ (ಬಳಕೆದಾರರ ಸರಾಸರಿ) | ತಿಂಗಳ ವೆಚ್ಚ ರೂ. ಗಳಲ್ಲಿ (ಬಳಕೆದಾರರ ಸರಾಸರಿ) |
|---|---|---|---|
| ಸಾದಾ ತಂಬಾಕು | 49.3 | 5.3 ಬಾರಿ / ಸಮಯ | 51.9 |
| ಗುಟ್ಕಾ | 20.0 | 7.5 ಸಣ್ಣಪೊಟ್ಟಣಗಳು | 210.5 |
| ಬೀಡಿ | 30.3 | 11.5 ಬೀಡಿಗಳು | 91.5 |
| ಸಿಗರೇಟುಗಳು8.0 | 4.9 | ಸಿಗರೇಟುಗಳು | 241.0 |
| ಮಾವ | 3.0 | 3.0 ಬಾರಿ / ಸಮಯ | 88.5 |
| ಪಾನ್ | 24.0 | 3.9 ಬಾರಿ | 198.3 |
| ಖೈನಿ | 2.3 | 1.7 ಪೊಟ್ಟಣಗಳು | 58.0 |
| ಮಶೇರಿ | 10.3 | 1.5 ಬಾರಿ | 18.3 |
| ನಶ್ವಾರ್ 0.5 | 4.0 ಬಾರಿ / ಸಲ | 61.0 | |
| ಇತರೆ | 0.5 | 7.0 ಬಾರಿ | 61.0 |

ಪ್ರತಿಯೊಂದು ಬಗೆಯ ತಂಬಾಕನ್ನು ಬಳಸುತ್ತಿದ್ದವರಿಗೆ ಪ್ರತಿ ಬಾರಿಗೂ ತಿಂಗಳ ಸರಾಸರಿ ವೆಚ್ಚಗಳು ಮಶೇರಿಗೆ 18.3 ರೂ. ಗಳ ಕಡಿಮೆ ಪ್ರಮಾಣದಿಂದ ಹಿಡಿದು ತಿಂಗಳಿಗೆ ಸಿಗರೇಟುಗಳಿಗೆ ಅತ್ಯಂತ ಹೆಚ್ಚಿನ ಪ್ರಮಾಣವಾದ 241 ರೂ. ಗಳ ವರೆಗಿನ ವ್ಯಾಪ್ತಿಯಲ್ಲಿತ್ತು.

ಪ್ರತಿ ತಿಂಗಳಿಗೆ ಗುಟ್ಕಾ ಸರಾಸರಿ 210 ರೂ ಗಳಿಗಿಂತ ಹೆಚ್ಚು ಮತ್ತು ಪಾನ್‌ಗೆ 198 ರೂಗಳನ್ನು ವ್ಯಯಿಸುತ್ತೇವೆಂದು ಜವಾಬುದಾರರು / ಪ್ರತಿವಾದಿಗಳು ತಿಳಿಸಿದರು. ಅರ್ಧಕ್ಕಿಂತ ಹೆಚ್ಚು ಜವಾಬುದಾರರು ದಿನಕ್ಕೆ 50/- ರೂಗಳಿಗೆ ಕಡಿಮೆ ದುಡಿಯುವ / ಸಂಪಾದಿಸುವ ಅಥವಾ ತಿಂಗಳಿಗೆ 153 ರೂಗಳ ನಷ್ಟ ಸಂಪಾದಿಸುತ್ತಿದ್ದು ತಂಬಾಕಿನ ಮೇಲೆ ದೊಡ್ಡ ಪ್ರಮಾಣದ ಮೊತ್ತವನ್ನು ಖರ್ಚು ಮಾಡುತ್ತಾರೆ.

ಮುಖ್ಯ ಆಧಾರದ ಅನುಭೋಗ ಮಾದರಿಗಳು ಮತ್ತು ಆಧಾರದ ದಿನನಿತ್ಯದ ವೆಚ್ಚಗಳು.

**ಕೋಷ್ಟಕ 3** : ಮುಖ್ಯ ಆಹಾರ ಅನುಭೋಗ ಮಾದರಿಗಳು ಮತ್ತು ಆಹಾರದ ದಿನ ನಿತ್ಯದ ವೆಚ್ಚಗಳು.

| ಆಹಾರ ಉತ್ಪನ್ನ | ಆಹಾರದ ಮೂಲಗಳು | ತಿಂಗಳಲ್ಲಿ ಉಪಯೋಗಿಸಿದ ಪ್ರಮಾಣ ಪ್ರತಿ ಪದಾರ್ಥಗಳನ್ನು ಉಪಯೋಗಿಸುವರ ಸರಾಸರಿ | ತಿಂಗಳ ವೆಚ್ಚಗಳು ಪ್ರತಿ ಪದಾರ್ಥವನ್ನು ಉಪಯೋಗಿಸುವರ ಸರಾಸರಿ ರೂ, ಗಳಲ್ಲಿ |
|---|---|---|---|
| ಹಣ್ಣುಗಳು (80.5%) | ದಾನ (7.3%)<br>ಕೊಂಡದ್ದು (73%)<br>ಹೆಕ್ಕಿದ್ದು (0.3%) | 4.5 ಸಲ | 55.1 |
| ಹಾಲು (94.3%) | ದಾನ (1%)<br>ಕೊಂಡದ್ದು (93.3%) | 27.6 ಸಲ | 130.2 |
| ಮೊಟ್ಟೆಗಳು | ದಾನ (82%)<br>ಕೊಂಡದ್ದು (79.3%) | 7.7 ಮೊಟ್ಟೆಗಳು | 36.9 |
| ಮಾಂಸ / ಮೀನು / ಕುರಿಮಾಂಸ | ದಾನ (1.8%)<br>ಕೊಂಡದ್ದು (91%)<br>ಹೆಕ್ಕಿದ್ದು (0.3%) | 5.8 ಸಲ | 170.5 |

ಒಂದು ಬಹು ಸಂಖ್ಯೆಯ ಜನರು (80% ಹೆಚ್ಚು) ಕೋಷ್ಟಕದಲ್ಲಿ ತಿಳಿಸಿರುವ ಎಲ್ಲ ಆಹಾರ ಉತ್ಪನ್ನಗಳನ್ನು ಉಪಯೋಗಿಸುತ್ತಿತ್ತು, ಅಂದರೆ ಫಲಗಳು, ಹಾಲು, ಮೊಟ್ಟೆಗಳು ಮತ್ತು ಮಾಂಸ / ಮೀನು / ಕುರಿಮಾಂಸ. ಇತರೆ ಉತ್ಪನ್ನಗಳಿಗಿಂತ ಹಾಲನ್ನು ಬಹಳ ಆಡಿಗಡಿಗೆ ಉಪಯೋಗಿಸಲಾಗುತ್ತಿತ್ತು. ಹಣ್ಣುಗಳು ಮತ್ತು ಮೊಟ್ಟೆಗಳಿಗಿಂತ ಹಾಲು, ಮಾಂಸ / ಮೀನು / ಕುರಿಮಾಂಸ ಇವುಗಳಿಗೆ ಹೆಚ್ಚು ಖರ್ಚು ಮಾಡಲಾಗುತ್ತಿತ್ತು.

ಆಹಾರದ ಮೇಲಿನ ತಿಂಗಳ ಖರ್ಚುಗಳನ್ನು ತಂಬಾಕಿಗೆ ಹೋಲಿಸಿದಾಗ, ಪಾನ್, ಗುಟ್ಕಾ ಮತ್ತು ಸಿಗರೇಟ್‌ಗಳ ಮೇಲೆ ಹೆಚ್ಚು ವ್ಯಯಿಸುವುದು, ಮತ್ತು ಮೊಟ್ಟೆಗಳಿಂದ ಮಶೇರಿ ಒಂದನ್ನು ಬಿಟ್ಟು ಉಳಿದ ಎಲ್ಲ ಬಗೆಯ ತಂಬಾಕು ಉತ್ಪನ್ನಗಳ ಮೇಲೆ ಹೆಚ್ಚು ವ್ಯಯಿಸುವುದು ನಮಗೆ ಕಂಡು ಬರುತ್ತದೆ. ಬಹುತೇಕ ಪರಸ್ಪಂದಿ ವಾಸಿಗರ ವರದಿಯಂತೆ ಅವರು ಆಹಾರವನ್ನು ಆರಿಸಿಕೊಳ್ಳುವುದಕ್ಕಿಂತ ಅಥವಾ ದಾನ ಪಡೆಯುವುದಕ್ಕಿಂತ ಹೆಚ್ಚು ಕೊಳ್ಳುವುದರ ಮೂಲಕ ಪಡೆಯುತ್ತಾರೆ ಎಂಬುದು ತಿಳಿದಿರುವ ಸಮಗತಿಯಷ್ಟೆ. ಇವು ಪರಸ್ಪಂದಿ ವಾಸಿಗಳಲ್ಲಿ ಸರಾಸರಿ ಇದ್ದಿದ್ದರೆ (ಆ ಆಹಾರಗಳನ್ನು ನಿಜವಾದ ಸೇವಿಸುವವರು ಅಂತ ಅಲ್ಲ). ಸಾಪೇಕ್ಷವಾಗಿ ತಂಬಾಕಿನ ಹೆಚ್ಚಿನ ಅಂಕಿ ಅಂಶಗಳು ಇನ್ನು ಹೆಚ್ಚು ಗಾಬರಿಗೊಳಿಸುವುದಕ್ಕಿಂತ ಈ ಅಂಕಿ ಅಂಶಗಳು ಕಡಿಮೆ ಇರುತ್ತಿದ್ದವು.

## ಆರೋಗ್ಯದ ಪ್ರಾಮುಖ್ಯತೆ

ಜವಾಬುದಾರರಲ್ಲಿ ಬಹುತೇಕ ಸಂಖ್ಯೆಯ ಜನರು (70%) ಕಳೆದ ವರ್ಷ ಖಾಯಿಲೆ ಬಿದ್ದಿದ್ದರು. ನೆಗಡಿ ಮತ್ತು ಜ್ವರ (44%), ಅದನ್ನನುಸರಿಸಿ ಕೆಮ್ಮು (10%), ಇತರ ಅನಾರೋಗ್ಯಗಳು, ನಿಶ್ಯಕ್ತಿ ಮತ್ತು ಜಾಂಡೀಸ್ ಮುಂತಾದವುಗಳು ತೀರ ಕಾಯಿಲೆಗಳಾಗಿದ್ದವು.

ಖಾಯಿಲೆಯಾದವರಲ್ಲಿ ಬಹಳಷ್ಟು ಜನರು (65.5%) ಖಾಸಗಿ ಆಸ್ಪತ್ರೆ ಮತ್ತು/ ಇಲ್ಲವೆ ವೈದ್ಯರ ಹತ್ತಿರ ಚಿಕಿತ್ಸೆ ತೆಗೆದುಕೊಂಡರು. ಇತರರು ಔಷಧಿ ಮಾರುವವರ, ಗೃಹ ಪರಿಹಾರಗಳು, ವೈದ್ಯಕೀಯ ಗಿಡಮೂಲಿಕೆ ಮಾರುವವರ ಮತ್ತು NGO ಗಳ ಹತ್ತಿರ ಔಷಧಿಗಳನ್ನು ಪಡೆದರು. ಚಿಕಿತ್ಸೆಯ ವೆಚ್ಚ 0 ಯಿಂದ 40,000/- ರೂಗಳ ವ್ಯಾಪ್ತಿಯವರೆಗೆ ತಲುಪಿತು. ಹಣದ ಅಭಾವದಿಂದ, ವೈದ್ಯರಬಳಿ ಹೋಗಲು ಭಯ ಇರುವುದರಿಂದ, ಚಿಕಿತ್ಸೆಗೆ ಸಮಯವಿಲ್ಲದ್ದರಿಂದ ಮತ್ತು ಇತರೆ ಕಾರಣಗಳಿಗಾಗಿ ಹದಿನೆಂಟು ಜನರು ಯಾವುದೇ ಚಿಕಿತ್ಸೆ ತೆಗೆದುಕೊಳ್ಳಲಿಲ್ಲ.

## ತಂಬಾಕು ಬಳಕೆಯ ದುಷ್ಪಾರಿಣಾಮಗಳು

ತಂಬಾಕನ್ನು ಉಪಯೋಗಿಸಿದ ಅನೇಕ ಜನರು ತಂಬಾಕು ಬಳಕೆಯಿಂದ ತಮ್ಮ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಉಂಟಾದವು ಎಂದು ತಿಳಿಸಿದರು. ಅವರಲ್ಲಿ 61 ಜನ ಕೆಮ್ಮಿನಿಂದ, 36 ಜನ ಬಾಯಿ ಹುಣ್ಣಿನಿಂದ, 9 ಜನ ಬಾಯಿ ತೆರೆಯಲು ಕಷ್ಟವಾಗುವ ಸಮಸ್ಯೆಯಿಂದ, 36 ಜನ ಅಶಕ್ತತೆಯಿಂದ, 30 ಜನ ತಲೆ ತಿರುಗುವಿಕೆಯಿಂದ, 8 ಜನ ವಾಂತಿಯಿಂದ, 19 ಜನ ಉಸಿರಾಟದ ತೊಂದರೆಯಿಂದ, ದಂತ ಸಮಸ್ಯೆಯಿಂದ, ತಲೆ ಶೂಲೆ ಮತ್ತು ಹೊಟ್ಟೆನೋವು ಮುಂತಾದವುಗಳಿಂದ ನರಳುತ್ತಿದ್ದರೆಂದು ತಿಳಿದು ಬಂದಿತು.


**ಕೋಷ್ಟಕ 4** : ತಂಬಾಕು ಬಳಕೆಯಿಂದ ವಿಭಿನ್ನವಾದ ಅನಾರೋಗ್ಯ ಲಕ್ಷಣಗಳಿಂದ ಬಳಲಿದ ಪರಸ್ಪಂದಿ ವಾಸಿಗಳು ಶೇಕಡವಾರುಗಳಲ್ಲಿ

| ವರದಿಮಾಡಿದ / ತಿಳಿಸಿದ ಸಮಸ್ಯೆ | ಶೇಕಡ |
|---|---|
| ಕೆಮ್ಮು | 15 |
| ಬಾಯಿ ಹುಣ್ಣು | 09 |
| ಮಾಯಿ ತೆರೆಯುವಲ್ಲಿ ಸಮಸ್ಯೆ | 02 |
| ಅಶಕ್ಯತೆ / ನಿಶ್ಶಕ್ತಿ | 10 |
| ತಲೆ ಸುತ್ತುವಿಕೆ | 08 |
| ವಾಂತಿ | 02 |
| ಉಸಿರಾಟದ ತೊಂದರೆಗಳು | 05 |
| ಇತರೆ ( ಹೊಟ್ಟೆನೋವು, ಎದೆನೋವು, ಕ್ಷಯ, ದಂತ ಸಮಸ್ಯೆಗಳು, ತಲೆಶೂಲೆ) | 02 |

**ಇತರೆ ಪದಾರ್ಥಗಳ ತಿಂಗಳ ವೆಚ್ಚಗಳು**

ಸರಾಸರಿ ಒಬ್ಬ ಗಂಡಾಳು ಮತ್ತು ಕೊನೆಪಕ್ಷ 5-14 ವಯಸ್ಸು ಮಗುವನ್ನು ಹೊಂದಿರುವ ನಾಲ್ಕು ಕುಟುಂಬಗಳ ಸದಸ್ಯರು ಒಟ್ಟಿಗೆ ವಾಸವಾಗಿದ್ದರು. ಬಹುಪಾಲು ಪುರುಷರು ತಂಬಾಕು ಬಳಸುತ್ತಿದ್ದರೆ ಬಹುಪಾಲು ಮಹಿಳೆಯರು ಉಪಯೋಗಿಸುತ್ತಿರಲಿಲ್ಲ. ಮಕ್ಕಳಲ್ಲಿ ಅನೇಕರು ಶಾಲೆಗೆ ಹೋಗುತ್ತಿದ್ದರು. ಸೊನ್ನೆಯಿಂದ 5,000 ರೂ.ಗಳ ವರೆಗಿನ ವ್ಯಾಪ್ತಿಯೊಂದಿಗೆ ಮಕ್ಕಳ ಶಿಕ್ಷಣದ ಮೇಲೆ ಈ ಕುಟುಂಬಗಳು ಪ್ರತಿ ತಿಂಗಳು ಸುಮಾರು 160 ರೂ.ಗಳನ್ನು ಖರ್ಚು ಮಾಡುತ್ತಿದ್ದವು. ಪ್ರತಿ ಕುಟುಂಬದ ತಿಂಗಳ ಸರಾಸರಿ ವೆಚ್ಚ ಆಹಾರಕ್ಕೆ 1,334 ರೂ.ಗಳು, ಮನೆ ದುರಸ್ತಿ ಮತ್ತು ಬಾಡಿಗೆಗೆ 76 ರೂ.ಗಳು ಮತ್ತು ಉಳಿತಾಯಕ್ಕೆ 96 ರೂ.ಗಳಾಗಿದ್ದವು. ಪಾನ್, ಗುಟ್ಕಾ ಮತ್ತು ಸಿಗರೇಟ್‌ಗಳು ಮುಂತಾದ ಉತ್ಪನ್ನಗಳಿಗೆ ಹಣ ವ್ಯಯಿಸುವುದರಿಂದ ಪ್ರತ್ಯೇಕ ಆಹಾರ ಪದಾರ್ಥಗಳ ಮತ್ತು ಇತರೆ ಅವಶ್ಯಕತೆಗಳ ವೆಚ್ಚಗಳಲ್ಲಿ ಕಡಿತ ಉಂಟಾಗುತ್ತದೆ.

**ತಂಬಾಕು ಮತ್ತು ಇತರೆ ಪದಾರ್ಥಗಳ ತಿಂಗಳ ಸರಾಸರಿ ವೆಚ್ಚ**



**ಪರಿಸಮಾಪ್ತಿ**

ತಮ್ಮ ಆದಾಯಗಳು ಕಡಿಮೆ ಇದ್ದಾಗ್ಯು ಸಹ ಈ ಪರಸ್ಪಂದಿ ವಾಸಿಗಳು ಪ್ರತಿದಿನ ತಮ್ಮ ಹಣದ ಬಹುಭಾಗವನ್ನು ತಂಬಾಕಿನ ವಿಭಿನ್ನ ಉತ್ಪನ್ನಗಳ ಮೇಲೆ ಖರ್ಚು ಮಾಡುತ್ತಾರೆ ಮತ್ತು ಸಾಪೇಕ್ಷವಾಗಿ ಪೋಷಕ ಆಹಾರಗಳು ತಮ್ಮ ಮಕ್ಕಳ ಶಿಕ್ಷಣ, ಬಾಡಿಗೆ, ತಮ್ಮ ಸರಳ ಗುಡಿಸಲುಗಳ ದುರಸ್ತಿ ಮತ್ತು ಉಳಿತಾಯಗಳು ಇವುಗಳ ಮೇಲೆ ಏನನ್ನು ಖರ್ಚು ಮಾಡುವುದಿಲ್ಲ, ಅತಿ ಕೆಟ್ಟ ಪ್ರಮಾಣದಲ್ಲಿ ತಮ್ಮ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಿರುವ ಬಡವರಲ್ಲಿಯೇ ಬಡವರಾದಂತವರಿಗೆ ತಂಬಾಕು ವೆಚ್ಚಗಳು ಇವರನ್ನು ಇನ್ನು ನಿರ್ಗತಿಕರನ್ನಾಗಿಸಿ ಇವರ ಅತ್ಯಗತ್ಯವಾದ ಸಂಪನ್ಮೂಲಗಳನ್ನು ಕಬಳಿಸುತ್ತಿರುವುದು ಒಂದು ದುರಂತದ ಸಂಗತಿಯಾಗಿದೆ. ಇಲ್ಲದಿದ್ದರೆ ಈ ಪದಾರ್ಥಗಳು ಇವರ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಲು ಇವರಿಗೆ ಸಹಾಯ ಮಾಡಬಹುದಾಗಿರುತ್ತಿದ್ದವು.

ಇತರೆ ನಗರಗಳಲ್ಲಿನವರಂತೆ, ಮುಂಬೈನಗರದ ಪರಸ್ಪಂದಿ ವಾಸಿಗರ ಬದುಕು ಸ್ಪಷ್ಟವಾಗಿಯೇ ದುಸ್ತರವಾದುದ್ದಾಗಿದೆ. ಜನರು ಅಲ್ಪಸ್ವಲ್ಪ ಹಣಗಳಿಸಲು ವಿಭಿನ್ನ ಮಾರ್ಗಗಳನ್ನು ಕಂಡುಕೊಳ್ಳುತ್ತಾರೆ, ಆದರೆ ತಮ್ಮ ಸ್ಥಿತಿಗತಿಗಳನ್ನು ಸಾಕಷ್ಟು ಮಟ್ಟದಲ್ಲಿ ಸುಧಾರಿಸಿಕೊಂಡು ಹೆಚ್ಚು ಸ್ಥಿರವಾದ ಬದುಕಿನೆಡೆಗೆ ಸಾಗಲು ಅಸಮರ್ಥರಾಗಿದ್ದಾರೆ. ತಂಬಾಕು ಬಳಕೆಯು ಇವರ ಯಾತನೆಗೆ ಮೂಲ ಕಾರಣವಲ್ಲವಾದರೂ, ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಮೂಲಕ ಮತ್ತು ಇದನ್ನು ಕೊಳ್ಳಲು ಹಣವನ್ನು ವ್ಯರ್ಥಮಾಡುವ ಮೂಲಕ (ಹೆಚ್ಚು ಈ ಮೂಲಕದಿಂದ) ತನ್ನದೇ ಆದ ನಿರ್ದಿಷ್ಟ ದೇಣಿಗೆಗಳನ್ನು ನೀಡುತ್ತಾ ಈ ಜನರನ್ನು ಕಷ್ಟ ಕಾರ್ಪಣ್ಯದ ವಿಷ ವರ್ತುಲದಲ್ಲಿ ಪೋಷಿಸಿಕೊಂಡು ಹೋಗುತ್ತಾ ಇದೆ.

# ತಂಬಾಕು ಪಾಶದಲ್ಲಿ ಸಿಲುಕಿಕೊಂಡ ರಟ್ಟೆ ಹಳ್ಳಿಯಲ್ಲಿನ ತಂಬಾಕು ವೆಚ್ಚಗಳು, ಕರ್ನಾಟಕ, ಭಾರತ

ಕೆ. ವಿ. ಸುವರ್ಣ ಮತ್ತು ನವೀನ್ ಥಾಮಸ್

## ಸಾರಾಂಶ

ರಟ್ಟೆ ಹಳ್ಳಿಯು ಕರ್ನಾಟಕ ರಾಜ್ಯದ 1032 ಜನಸಂಖ್ಯೆ ಇರುವ ಒಂದು ಹಳ್ಳಿ. ಇಲ್ಲಿನ ರೈತರು ಸಣ್ಣ ಹಿಡುವಳಿದಾರರು. ಆದ್ದರಿಂದ ಇವರು ಕುತ್ತಟ್ಟವನ್ನು ಕಟ್ಟಿ ತಂಬಾಕು ಕೃಷಿ ಮಾಡಲು ಅಸಮರ್ಥರಾದ್ದರಿಂದ ಅಲ್ಲಿ ತಂಬಾಕನ್ನು ಬೆಳೆಯುವುದಿಲ್ಲ. ಈ ಹಳ್ಳಿಯ ಬಹಳಷ್ಟು ಜನರು ಅನಕ್ಷರಸ್ಥರು ಮತ್ತು 21 ಬಾಲ ಜೀತ ಕಾರ್ಮಿಕರು ಕೂಡ ಈ ಹಳ್ಳಿಯಲ್ಲಿದ್ದರೆಂದು ವರದಿ ಕೊಡ ಇದೆ.

ಅನೇಕ ಬಗೆಯ ವ್ಯಾಪಾರ ಚಿಹ್ನೆಗಳಿರುವ ಹೊಗೆ ಸೊಪ್ಪನ್ನು / ತಂಬಾಕನ್ನು ಇಲ್ಲಿ ಮಾರಲಾಗುತ್ತದೆ. ಅದರಲ್ಲಿ ಜಗಿಯುವ ತಂಬಾಕು (ಸ್ವಾದ ಮತ್ತು ಸ್ವಾದರಹಿತ) ಬೀಡಿಗಳು ಮತ್ತು ಸಿಗರೇಟ್‌ಗಳು. ಇಲ್ಲಿ ಗುಟ್ಕಾ ಒಂದಕ್ಕೆ 1.5 ರೂ ಮತ್ತು ಒಂದು ಕಟ್ಟು ಬೀಡಿಗೆ 3.5 ರೂಗಳಂತೆ ದೊರೆಯುತ್ತವೆ. ಹೆಚ್ಚು ಜಾಹೀರಾತುಗೊಂಡ ಸಿಗರೇಟ್ ಬ್ರಾಂಡ್‌ಗಳು (ಬ್ರಿಸ್ಟಾಲ್ ಮತ್ತು ವಿಲ್ಸ್) ದೊರೆಯುತ್ತವೆ. ಆದರೆ 1.5 ರೂಗೆ ಒಂದರಂತೆ ಬಿಡಿಯಾಗಿ ಮಾರಾಟವಾಗುತ್ತದೆ.

ತಮ್ಮ ಒಂದು ದಿನದ ತಂಬಾಕು ಮಾರಾಟದ ಬಗ್ಗೆ ನಾವು ಎರಡು ಅಂಗಡಿ ಮಾಲೀಕರನ್ನು ಕೇಳಿದೆವು. ದಿನದ ಒಟ್ಟು ತಂಬಾಕು ಮಾರಾಟದ ಸರಾಸರಿ 259 ರೂಗಳಿದ್ದರೆ ಅದೇ ಮತ್ತೊಂದರಲ್ಲಿ 320 ರೂಗಳ ದರದಲಿತ್ತು. ಅಂದರೆ ದಿನಕ್ಕೆ ಒಂದು ಅಂಗಡಿಯಲ್ಲಿ ಸರಾಸರಿ 290 ರೂಗಳ ಮಾರಾಟವಾಗುತ್ತದೆ. ಒಟ್ಟು ಆ ಹಳ್ಳಿಯಲ್ಲಿ ದಿನವೊಂದಕ್ಕೆ (ಅಲ್ಲಿ 10 ತಂಬಾಕು ಮಾರಾಟ ಅಂಗಡಿಗಳಿದ್ದು ಅಂದಾಜು 2,900ರೂಗಳ ತಂಬಾಕು ಮಾರಾಟವಾಗುತ್ತದೆ). ಒಟ್ಟು ಆ ಹಳ್ಳಿಯಲ್ಲಿ 160 ಕುಟುಂಬಗಳಿದ್ದು ದಿನಕ್ಕೆ ಪ್ರತಿಯೊಂದು ಕುಟುಂಬವು ಸರಾಸರಿ 181 ರೂಗಳ ಅಥವಾ ತಿಂಗಳೊಂದಕ್ಕೆ ಸುಮಾರು 550 ರೂಗಳನ್ನು ತಂಬಾಕೊಂದರ ಮೇಲೆ ಖರ್ಚುಮಾಡುತ್ತದೆ. ದಿನವೊಂದಕ್ಕೆ ಸರಾಸರಿ 30 ರೂಗಳನ್ನು ದುಡಿಯುವ ಬಹುತೇಕ ದಿನ ಕೂಲಿ ಕಾರ್ಮಿಕರು ಇರುವ ಆ ಹಳ್ಳಿಯಲ್ಲಿ ತಂಬಾಕು ಪ್ರಮುಖ ಖರ್ಚುದಾರಿಯಾಗಿದೆ. ಒಬ್ಬ ದಿನಗೂಲಿ ಕಾರ್ಮಿಕನ ಒಂದು ದಿನದ ಆದಾಯದ ಅರ್ಧಕ್ಕಿಂತ ಹೆಚ್ಚು ತನ್ನ ಕುಟುಂಬದ ಖರ್ಚಿನಲ್ಲಿ ತಂಬಾಕಿಗೆ ವ್ಯಯವಾಗುತ್ತದೆ.

## ವ್ಯಸನದ ಮೌಲ್ಯ / ಗೀಳಿನ ಬೆಲೆ

ದೇವೇಂದ್ರಪ್ಪ ತನ್ನ ಸ್ನೇಹಿತರು ಗುಟ್ಕಾ ತಿನ್ನಲು ಪ್ರರೇಪಿಸಿದ ದಿನಗಳನ್ನು ನೆನೆದು ಅತೀವವಾಗಿ ವ್ಯಥೆ ಪಡುತ್ತಾನೆ. 21 ವರ್ಷದ ದೇವೇಂದ್ರಪ್ಪ ದ್ವಿತೀಯ ವರ್ಷದ ಬಿ.ಎ. ವ್ಯಾಸಂಗ ಮಾಡುತ್ತಿದ್ದಾನೆ. ಅವನಿಗೆ ಯಾವುದೇ ಆದಾಯವಿಲ್ಲ. ತನ್ನ ಗುಟ್ಕಾ ದುರ್ವ್ಯಸನವನ್ನು ತೀರಿಸಿಕೊಳ್ಳಲು ಆತ ತನ್ನ ಕಾಲೇಜಿನ ಖರ್ಚು ಕಾಲೇಜ್ ಶುಲ್ಕ, ಪುಸ್ತಕಗಳು, ಪ್ರಯಾಣ ದರ ಮುಂತಾದುವುಗಳಿಗೆಂದು ನೀಡಿದ ಹಣವನ್ನೇ ಗುಟ್ಕಾ ಕೊಳ್ಳಲು ಬಳಸುತ್ತಾನೆ. ಸುಮಾರು 10-12 ರೂಗಳ ಖರ್ಚು ತಗಲುದ 10 ಪ್ಯಾಕೇಟ್ ಗುಟ್ಕಾವನ್ನು ಆತ ಪ್ರತಿನಿತ್ಯ ಸೇವಿಸುತ್ತಾನೆ. ದೇವೇಂದ್ರಪ್ಪ ಹೇಳಿದರು ತಂಬಾಕು ಸೇವನೆ ತುಂಬಾ ದ್ರವ್ಯ ಹಾನಿಯಾದ್ದರಿಂದ ಇತರರು ಕೂಡ ಇದರಿಂದ ದೂರ ಇರಬೇಕೆಂದು ಸಲಹೆ ನೀಡಲು ಇಷ್ಟ ಪಡುತ್ತಾರೆ. (ಅತಿ ದುಬಾರಿ ಎಂಬುದನ್ನು ತಿಳಿಸಿದೆ.)